ಸಗರನಾಡಿನ ಗ್ರಾಮದೇವತೆಗಳು

(ಶಿಲ್ಪಕಲಾ ಅಕಾಡೆಮಿಯ ೨೦೧೬-೧೭ನೇ ಸಾಲಿನ
ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯ
ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು
ಶ್ರೀ ಚಂದ್ರಪ್ಪ ಬಿ.ಕೆ. ಗೋಗಿ

ಮಾರ್ಗದರ್ಶಕರು
ಪ್ರೊ. ಎಸ್. ಸಿ. ಪಾಟೀಲ
ವಿಶ್ರಾಂತ ವಿಶೇಷಾಧಿಕಾರಿಗಳು,
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ : ಬೆಂಗಳೂರು



ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಮೇಲ್ಮನೆ, ಚಾಲುಕ್ಯ ವಿಭಾಗ
ಜೆ.ಸಿ. ರಸ್ತೆ, ಬೆಂಗಳೂರು

೨೦೧೬-೧೭

ಸಗರನಾಡಿನ ಗ್ರಾಮ ದೇವತೆಗಳು

(ಶಿಲ್ಪಕಲಾ ಅಕಾಡೆಮಿಯ ೨೦೧೮-೧೯ನೇ ಸಾಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಶ್ರೀ. ಚಂದ್ರಪ್ಪ ಬಿ.ಕೆ. ಗೋಗಿ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ವಿಶ್ರಾಂತ ವಿಶೇಷಾಧಿಕಾರಿಗಳು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,

ಪ್ರಾದೇಶಿಕ ಕಛೇರಿ : ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 02

೨೦೧೮-೧೯

ಪ್ರಮಾಣ ಪತ್ರ

ಚಂದ್ರಪ್ಪ ಬಿ. ಕೆ. ಗೋಗಿ ಎಂಬ ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶ್ರಾಂತ ವಿಶೇಷಾಧಿಕಾರಿಯವರಾದ **ಪ್ರೊ. ಎಸ್.ಸಿ.ಪಾಟೀಲ**ರವರ ಮಾರ್ಗದರ್ಶನದಲ್ಲಿ **"ಸಗರನಾಡಿನ ಗ್ರಾಮದೇವತೆಗಳು"** ಎಂಬ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಇದು ನನ್ನ ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಇನ್ನತರ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ವಂದನೆಗಳೊಂದಿಗೆ

ಸಂಶೋಧನಾ ವಿದ್ಯಾರ್ಥಿ

ದಿನಾಂಕ : 14.03.2018

ಸ್ಥಳ : ಬೆಂಗಳೂರು

(ಚಂದ್ರಪ್ಪ ಬಿ. ಕೆ. ಗೋಗಿ)

ಪ್ರೊ. ಎಸ್. ಸಿ. ಪಾಟೀಲ
ವಿಶ್ರಾಂತ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಮೊ. +91 94485 63687

9, "ತಾಯಿನೆರಳು" ತುಂಗಭದ್ರಾ ಕಾಲೋನಿ,
2ನೇ ಕ್ರಾಸ್, ಹಳಿಯಾಳ ರಸ್ತೆ, ಶ್ರೀನಗರ ವೃತ್ತ,
ಧಾರವಾಡ – 580 001
ಇಮೇಲ್: *scpatil.art@gmail.com*

ಇವರಿಗೆ,

ದಿನಾಂಕ : 28.02.2018

ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು

ಮಾನ್ಯರೆ,

ದೃಢೀಕರಣ ಪತ್ರ

ನನ್ನ ಮಾರ್ಗದರ್ಶನದಲ್ಲಿ **ಶ್ರೀ ಚಂದ್ರಪ್ಪ ಬಿ. ಕೆ. ಗೋಗಿ** ಅವರು **ಸಗರನಾಡಿನ ಗ್ರಾಮದೇವತೆಗಳು** ಎಂಬ ವಿಷಯ ಕುರಿತು ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸಿದ್ದು, ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸುತ್ತಿದ್ದಾರೆ. ಅವರಿಗೆ ಫೆಲೋಶಿಪ್ ನಿಯಮಾನುಸಾರ ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತೇನೆ.

ಪ್ರಕಟಣೆಯ ಹಂತದಲ್ಲಿ ಮತ್ತೊಮ್ಮೆ ಪರಿಷ್ಕರಿಸಿ ಪ್ರಸ್ತುತ ಪ್ರಬಂಧವನ್ನು ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ

28/2/18
(ಪ್ರೊ. ಎಸ್. ಸಿ. ಪಾಟೀಲ)

ಕೃತಜ್ಞತೆಗಳು

ನಾನು ಸಂಶೋಧನೆ ಕೈಗೊಂಡ ಸಂದರ್ಭದಲ್ಲಿ ಮಾರ್ಗದರ್ಶಕರಾಗಿ ಒಪ್ಪಿ, ವಿಸ್ತಾರವಾಗಿ, ಆಳವಾಗಿ, ಆತ್ಮೀಯವಾಗಿ ವಿಷಯಗಳನ್ನು ಚರ್ಚಿಸಿ, ತಿದ್ದಿ ನನಗೆ ಒಂದು ರೂಪ ಕೊಟ್ಟ ಕರ್ನಾಟಕ ಖ್ಯಾತ ಕಲಾವಿದರು, ಸಂಶೋಧಕರು, ತಜ್ಞರು ಹಾಗೂ ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಪ್ರೊ. ಎಸ್. ಸಿ. ಪಾಟಿಲ್ ಸರ್‌ರವರಿಗೆ ಅಪಾರವಾದ ಕೃತಜ್ಞತೆಗಳು ಹಾಗೆ ಈ ಸಂಶೋಧನೆಯನ್ನು ಕೈಗೊಂಡು ಪೂರ್ಣವಾಗುವುದಕ್ಕೆ ಪ್ರತಿ ಹಂತದಲ್ಲಿ ಸಹಾಯ ಮಾಡಿದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿರುವ ಸನ್ಮಾನ್ಯ ಶ್ರೀ ಸುರೇಂದ್ರ .ಕೆ ವಿಶ್ವಕರ್ಮ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಸಂಶೋಧನದ ಆಯ್ಕೆ ಸಮಿತಿಯ ಹಿಂದಿನ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ ಮತ್ತು ಪ್ರಸ್ತುತ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಇಂದ್ರಮ್ಮನವರು ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸರ್ವಸದಸ್ಯರನ್ನು ಈ ಸಮಯದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ನನ್ನ ಅಧ್ಯಯನಕ್ಕೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿದ ಪೂಜ್ಯ ತಾಯಿಯವರಾದ ಶ್ರೀಮತಿ ಭಿಮವ್ವ ಬಸಪ್ಪ ಸೀತ್ನಿ ಅಚಿಕಡಿಯವರಿಗೂ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹಾಗೆಯೇ ನನ್ನ ಪ್ರೀತಿಯ ತಮ್ಮನಾದ ಶ್ರೀ ಅಂಬರೀಶ್ ಅಚಿಕಡಿ ಮತ್ತು ಶರಣಬಸವ ತಂದೆ ಹನಮಂತ ಇವರನ್ನು ನೆನೆಯುತ್ತಾ; ನನ್ನ ಸಂಶೋಧನೆಯ ಸಮಯದಲ್ಲಿ ನಗುಮುಖದಿಂದ ನನಗೆ ಸ್ಫೂರ್ತಿಯಾದ ನನ್ನ ಧರ್ಮ ಪತ್ನಿ ಶ್ರೀಮತಿ ಶೃತಿ (ಯಲ್ಲಮ್ಮ) ಚಂದ್ರಪ್ಪ ಬಿ.ಕೆ ಅವರನ್ನು ಹಾಗೂ ನನ್ನ ಸಂಶೋಧನೆಗೆ ಸಹಕಾರ ನೀಡಿದ ಡಾ. ಬಸವರಾಜ ಕಲೆಗಾರ ಅವರನ್ನು ಸದಾ ಸ್ಮರಿಸುತ್ತೇನೆ.

ಕ್ಷೇತ್ರಕಾರ್ಯದಲ್ಲಿ ಸಹಾಯ ಮಾಡಿ ಗ್ರಾಮ ದೇವತಗಳ ಮತ್ತು ಶಿಲ್ಪಗಳ ಛಾಯಚಿತ್ರ ಹಾಗೂ ವಿಡಿಯೋಗ್ರಾಫಿ ಮಾಡಿಕೊಟ್ಟ ಪ್ರೀತಿಯ ಗೆಳೆಯನಾದ ಶ್ರೀ ನರಸಪ್ಪ ಬೈಲಪತ್ತಾರ್ ಮತ್ತು ಪ್ರೀತಿಯ ಅಳಿಯನಾದ ಶ್ರೀ ಬಸವರಾಜ ಎಸ್. ಚಟ್ನಳ್ಳಿ ಮುಖ್ಯೋಪಾಧ್ಯಾಯರು, ಹಾಗೂ ದೈಹೀಕ ಶಿಕ್ಷಕರು ಸರಕಾರಿ ಪ್ರೌಢಶಾಲೆ ಗುಂಡುಗುರ್ತಿ; ಹಾಗೂ ಸಗರನಾಡಿನ ಸಮಸ್ತ ಗ್ರಾಮಸ್ತರಿಗೆ ಪ್ರತಕ್ಷವಾಗಿ, ಪರೋಕ್ಷವಾಗಿ ನನ್ನ ಸಂಶೋಧನಾ ಕಾರ್ಯಯಕ್ಕೆ ಸಹಕರಿಸಿದ ಎಲ್ಲ ಹಿರಿಯರಿಗೂ, ಕಿರಿಯರಿಗೂ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಮಹಾಪ್ರಬಂಧವನ್ನು ಸಕಾಲಕ್ಕೆ ಡಿ.ಟಿ.ಪಿ ಮಾಡಿಕೊಟ್ಟ ಶ್ರೀ ಶಶಿಕುಮಾರ್ ಡಿ. ಸುರಪೂರ ಅವರಿಗೂ ಹಾಗೂ ಪ್ರಬಂಧಕ್ಕೆ ಮುಖಪುಟ ಮತ್ತು ಒಳಪುಟ ವಿನ್ಯಾಸ ರಚಿಸಿಕೊಟ್ಟ ಶ್ರೀ ಯುವರಾಜ ಆರ್. ಎಸ್., ಧಾರವಾಡ ಅವರಿಗೂ ಸಹ ನನ್ನ ಕೃತಜ್ಞತೆಗಳು.

ಸಂಶೋಧಕರು

ಶ್ರೀ ಚಂದ್ರಪ್ಪ ಬಿ ಕಟ್ಟಿಮನಿ (ಅಚಿಕಡಿ)

ಗೋಗಿ (ಕೆ) ತಾ। ಶಹಾಪೂರ ಜಿ। ಯಾದಗಿರಿ

ಮೊ. +91 99454 48569

ಪರಿವಿಡಿ

ಅಧ್ಯಾಯ : ಒಂದು ೦೧–೦೮

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ : ಎರಡು ೦೯–೪೯

ಸಗರನಾಡಿನ ಐತಿಹಾಸಿಕ ಹಿನ್ನೆಲೆ ಮತ್ತು ಗ್ರಾಮದೇವತೆಗಳು

ಅಧ್ಯಾಯ : ಮೂರು ೫೦–೬೫

ಶಿಲಾಮಾಧ್ಯಮದ ಗ್ರಾಮದೇವತಾ ಶಿಲ್ಪಗಳು

ಅಧ್ಯಾಯ : ನಾಲ್ಕು ೬೬–೧೦೦

ಮರಮಾಧ್ಯಮದ ಗ್ರಾಮದೇವತಾ ಶಿಲ್ಪಗಳು

ಅಧ್ಯಾಯ : ಐದು ೧೦೧–೧೦೮

ಲೋಹಮಾಧ್ಯಮದ ಗ್ರಾಮದೇವತಾ ಶಿಲ್ಪಗಳು

ಅಧ್ಯಾಯ : ಆರು ೧೦೯–೧೧೦

ಸಂಕೀರ್ಣ ಮಾಧ್ಯಮದ ಗ್ರಾಮದೇವತಾ ಶಿಲ್ಪಗಳು

ಅಧ್ಯಾಯ : ಏಳು ೧೧೧–೧೧೮

ಸಗರನಾಡಿನ ಪ್ರಮುಖ ಗ್ರಾಮೀಣ ಶಿಲ್ಪಕಲಾವಿದರು

ಅಧ್ಯಾಯ : ಎಂಟು ೧೧೯–೧೨೪

ಸಮಾರೋಪ

ಅನುಬಂಧಗಳು **೧೨೫–೧೬೪**

- ಪರಾಮರ್ಶನ ಗ್ರಂಥಗಳು
- ಗ್ರಾಮದೇವತೆಗಳ ಸಂಕ್ಷಿಪ್ತ ಸೂಚಿ
- ಮಾಹಿತಿ ನೀಡಿದ ವಕ್ತೃಗಳು
- ಪತ್ರಿಕೆ ವರದಿಗಳು

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕಾವೇರಿಯಿಂದ ಗೋದಾವರಿಯವರೆಗೆ, ಗೋದಾವರಿಯಿಂದ ಗೋಗಿಯವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಕನ್ಯಾಕುಮಾರಿಯಿಂದ ಕನ್ಯೆಕೋಳುರವರಿಗೆ ವಿಸ್ತಾರವಾಗಿ ಹರಡಿದ ಈ ನಾಡು ಎಂದು ಹೆಮ್ಮೆಯ ಚಕ್ರವರ್ತಿ ನೃಪತುಂಗನ ಕಾಲದಿಂದಲೂ ಈ ಮಾತು ಬಳಕೆಯಲ್ಲಿದೆ. ಆದರೆ, ಇತ್ತೀಚೆಗೆ ಕಲಬುರಗಿಯ ಶ್ರೀ ಜಿ.ಪಿ. ಜೋಶಿಯವರು ಕನ್ನಡ ನಾಡು ಬಂಗಾಳದವರೆಗೆ ಹಬ್ಬಿತ್ತು ಎಂದಿದ್ದಾರೆ. ಕನ್ನಡ ನಾಡಿನ ಸೀಮಾ (ಗಡಿ) ರೇಖಾ ವಿಶಾಲ ಹಾಗೂ ಹಲವು ವೈಶಿಷ್ಟ್ಯತೆಗಳಿಂದ ಸುಸಂಪನ್ನವಾದ ನಾಡಾಗಿದೆ, ಇದು ಶೂರರ ಜನಿಸಿದ ನಾಡು, ತ್ಯಾಗಿಗಳ ಬೀಡು ಎಂಬುದಕ್ಕೆ ಎರಡು ಮಾತಿಲ್ಲ, ಕವಿಯ, ಕಲಾವಿದನ, ಸಂಶೋಧಕನ, ಆಧ್ಯಾತ್ಮ ಜೀವಿಗಳ ಕಣ್ಣಿಗೆ ಸತ್ಯ ಶಿವ, ಸೌಂದರ್ಯ ರೂಪದಿಂದ ಕಂಡಿದೆ, ಇಂಥ ಸುಸಂಸ್ಕೃತ ನಾಡಿನ ಗಂಡು ಮೆಟ್ಟಿದ ಸ್ಥಳವೇ ಸಗರನಾಡು.

ಸಗರನಾಡು ಎಂಬ ಹೆಸರು ಬಳಕೆಗೆ ಬಂದದ್ದು ಇತಿಹಾಸ ಕಾಲದಿಂದ ಸಗರ ಚಕ್ರವರ್ತಿ ಹೆಸರಿನಿಂದಲೇ ಪ್ರಸಿದ್ಧವಾದ ಯಾದಗಿರ ಜಿಲ್ಲೆಯ ಸುರಪುರ ಶಹಾಪೂರ ಮತ್ತು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕ ಈ ಮೂರು ತಾಲೂಕುಗಳನ್ನೊಳಗೊಂಡ

ಮತ್ತು ಭೀಮಾ, ಕೃಷ್ಣಾ ನದಿಗಳ ನಡುವಿನ ನಾಡಿಗೆ ಸಗರನಾಡು ಎಂದು ಕರೆಯುತ್ತಾರೆ. ಸಗರನಾಡಿನ ಪೂರ್ವಕ್ಕೆ ಎಡದೊರೆ ಎರಡು ಸಾಸಿರ, ಪಶ್ಚಿಮಕ್ಕೆ ತರ್ದವಾಡಿ ಸಾಸಿರ ಮತ್ತು ಉತ್ತರಕ್ಕೆ ಅಲಂದ ಸಾಸಿರ, ದಕ್ಷಿಣಕ್ಕೆ ಕರಡುಕಲ್ಲು ಮುನ್ನೂರನ್ನು ಹೊಂದಿತ್ತು.[೧]

ದ್ರಾವಿಡ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿರುವ ಪ್ರಾಗೈತಿಹಾಸಿಕ ಕುರುಹುಗಳು ಪ್ರಾಚೀನ ಅವಶೇಷಗಳು ಶಹಾಪೂರ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಸಿಗುತ್ತದೆ. ಸಗರನಾಡಿನ ಗ್ರಾಮ ದೇವತೆಯ ಶಿಲ್ಪಗಳು ಇಲ್ಲಿಯ ಜನರ ನಂಬಿಕೆ, ಶ್ರದ್ಧೆ, ಭಕ್ತಿ ನಂಬಿಕೆಯಿಂದ ಕೂಡಿದೆ. ಸಗರನಾಡಿನ ಜನರು ಗಂಗ, ಕದಂಬ ಮುಂತಾದವರ ಕಾಲದಿಂದಲೂ ಸಂಸ್ಕೃತಿ ಸಂಪತ್ತಿಗೆ ಕೊರತೆ ಇರಲಿಲ್ಲ ಎನ್ನುವುದಕ್ಕೆ ಇಂದು ಸಿಗುವ ದೇಗುಲ ದೇವತೆಗಳೆ ಶಿಲ್ಪಗಳೆ ಸಾಕ್ಷಿಯಾಗಿವೆ, ಸಗರಪುರ, ಸಗರನಗರವಾಗಿ ಅಭಿವೃದ್ಧಿ ಹೊಂದಿದೆ. ಸಗರನಾಡಿನ ಜನರಲ್ಲಿ ನಂಬಿಕೆ, ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿ, ಕ್ರಿಡೆ ಆಚಾರ, ವಿಚಾರ ನಂಬಿಕೆಗಳು ಮತ್ತು ಆಧ್ಯಾತ್ಮದ ಆಗರವಾಗಿದೆ. ಸಗರನಾಡಿನ ಈ ಪ್ರದೇಶದಲ್ಲಿ ವೀರಶೈವರು, ಬ್ರಾಹ್ಮಣರು, ವಿಶ್ವಕರ್ಮ, ಜೈನ ಹಾಗೂ ಬೌದ್ಧ ಮತ್ತು ಮುಸ್ಲಿಂ ಇನ್ನಿತರ ಜನಾಂಗದವರು ಬಾಳಿಬೆಳಗಿದ ನಾಡು ಇದಾಗಿದೆ. ಇಲ್ಲಿ ದೇವಾ ದೇವತೆಗೆ ಜನ ನಂಬಿಕೆ ಶ್ರದ್ಧೆ ಭಕ್ತಿ ಅಪಾರವಾದದ್ದು.[೨]

ಶಹಾಪೂರ ತಾಲೂಕ ಗ್ರಾಮಗಳು : ಗೋಗಿ, ಬೂದನೂರು, ವನದುರ್ಗ, ಮುಡಬೂಳ, ಕನ್ಯಾಕೋಳುರು, ರಸ್ತಾಪೂರು, ಸಗರ, ಹತ್ತಿಗೂಡುರು, ಕೋಳ್ಳುರು (ಎಂ.) ದೋರನಹಳ್ಳಿ, ಖಾನಾಪೂರು, ಗೊಂದೇನೂರು, ಚಂದಾಪೂರು, ಭೀಮರಾಯನಗುಡಿ, ವಡಗೇರಾ, ಹಾಲಗೇರಾ, ತುಮಕೂರು, ಹಯ್ಯಾಳ, ನಾಯ್ಕಲ್, ಮದ್ರಿಕಿ, ಹೊಸಕೇರಾ, ಐಕೂರು, ಬೆಂಡೆ ಬೆಂಬಳಿ, ಶಹಾಪೂರ, ಸಗರ, ಹಳಿಸಗರ, ಶಿರವಾಳ, ಅಣಬಿ ಹೀಗೆ ಇನ್ನೂ ಹಲವು ಸ್ಥಳಗಳು ಅಧ್ಯಯನ ವ್ಯಾಪ್ತಿಯನ್ನು ಒಳಗೊಂಡಿವೆ.

ಸುರಪುರ ತಾಲೂಕ ಗ್ರಾಮಗಳು : ಶ್ರೀನಿವಾಸಪುರ (ದೇವತಕಲ್), ನಗನೂರು, ಏವುರು, ಅಗ್ನಿ ಮುದನೂರು, ಕೆಂಬಾವಿ, ಕರಡಕಲ್, ಮಂಗಳೂರು, ದೇವರಗೋನಾಲ್, ವಾಗಣಗೇರಾ, ತಳವಾರಗೇರಾ, ತಿಂಥಣಿ, ಕಕ್ಕೇರಾ, ಬೂದಿಹಾಳ, ಕುಂಬಾರಪೇಟೆ, ಗೆದಲಮರಿ,

---

೦೧. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ-೦೧

೦೨. ಅದೇ., ಪುಟ-೨

ದೇವರಗಡ್ಡಿ, ಹೆಮ್ಮಡಗಿ, ಗುಂಡಲಗೇರಾ, ತಿಪ್ಪನಟಗಿ, ಗುಳಬಾಳ, ಯಾಳಗಿ, ಐನಾಪೂರು, ಮಲ್ಲಾಬಾದ, ಬೈಚಬಾಳ, ರಾಜನಕೋಳ್ಳುರೂ, ಹನಮಸಾಗರ, ನಾರಾಯಣಪೂರು, ವಜ್ಜಲ, ಕರ್ನಾಳ, ಹೆಗ್ಗನದೊಡ್ಡಿ, ಮಾಳಗಿ.

ಜೇವರ್ಗಿ ತಾಲೂಕು ಗ್ರಾಮಗಳು : ಶಿವಪೂರು, ಕಾಚಾಪೂರು, ಯಡ್ರಾಮಿ, ಯಳವಾರ, ಬಿಳವಾರ, ಜಮಖಂಡಿ, ಗಂವ್ಹಾರ, ಆಂದೋಲಾ, ಕಡಕೋಳ, ಮಳ್ಳಿ, ಕೊಂಡಗೂಳಿ, ನಂದಿಹಳ್ಳಿ, ಯಲಗೋಡ, ಕುಳಗೇರಾ, ವರವಿ, ವಸ್ತಾರಿ, ಅಲ್ಲಾಪೂರ, ಕೆಲ್ಲೂರು, ಇಜೇರಿ, ಮಲಕೊಡ, ಸಾತಖೇಡ, ಹೀಗೆ ಹತ್ತಾರು ಗ್ರಾಮಗಳು ಸಗರನಾಡಿಗೆ ಸಂಬಂಧಿಸಿದ್ದೆಂದು ಸಂಶೋಧಕರು ಅಭಿಪ್ರಾಯವಾಗಿದೆ. ಅಧ್ಯಯನದ ಅವಶ್ಯಕತೆಯು ಬಹಳಷ್ಟಿದೆ.

ಐತಿಹಾಸಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವ ಗುಲಬರ್ಗಾ ಜಿಲ್ಲೆಯ ತನ್ನ ಗರ್ಭದಲ್ಲಿ ಅಪಾರವಾದ ಶಿಲ್ಪ ಕಲಾ ಸಂಪತ್ತನ್ನು ಸಹ ಹೊಂದಿದೆ, ಗುಲಬರ್ಗಾ ಜಿಲ್ಲೆಯನ್ನು ೩೦–೧೨–೨೦೦೯ರಲ್ಲಿ ವಿಭಜನೆಯಾಗಿ ನೂತನವಾಗಿ ಯಾದಗಿರ ಜಿಲ್ಲೆಯ ಉಗಮವಾಯಿತು. ನಮ್ಮ ಸಗರನಾಡು ಎರಡು ಜಿಲ್ಲೆಗೆ ಹಂಚಿಕೊಂಡಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಜೇವರ್ಗಿ ತಾಲೂಕಿನ ಹಲವಾರು ಗ್ರಾಮಗಳು ಸಗರನಾಡಿನ ಪ್ರದೇಶಕ್ಕೆ ಮತ್ತು ನೂತನ ಯಾದಗಿರಿ ಜಿಲ್ಲೆಗೆ ಒಳಪಟ್ಟಿದೆ.

ಶಹಾಪೂರ ತಾಲೂಕು, ಸುರಪುರ, ಯಾದಗಿರಿ ಒಂದು ವಿಧಾನ ಸಭಾ ಕ್ಷೇತ್ರ ಗುರಮಿಟಕಲ್ ಹೀಗೆ ಈ ಜಿಲ್ಲೆಗೆ ಪ್ರದೇಶ ತಾಲೂಕುವಾರು ಹಂಚಿಕೆಯಾದವು. ಆದರೆ ಸಗರನಾಡಿನ ಪ್ರದೇಶವು ಶಹಾಪೂರ, ಸುರಪುರ ಮತ್ತು ಜೇವರ್ಗಿ ತಾಲೂಕಿನ ಕೆಲವು ಬಿಜಾಪೂರ ಜಿಲ್ಲೆಯ ಸಿಂದಗಿ, ತಾಲೂಕಿನ ಕೆಲವು ಗ್ರಾಮಗಳ ಬರುವ ಮತ್ತು ಮುದ್ದೆಬಿಹಾಳ ತಾಲೂಕಿನ ಕೆಲವು ಗ್ರಾಮಗಳು ಸಗರನಾಡಿನ ಪ್ರಾದೇಶಿಕ ಕ್ಷೇತ್ರಕ್ಕೆ ಸಂಬಂಧಿಸಿವೆಂದು ಇತಿಹಾಸ ಸಂಶೋಧಕರಾದ ಶ್ರೀ ಡಾ॥ ಅಬ್ದುಲಕರಿಂ ಸ್'ರ ಅಧ್ಯಯನದಿಂದ ತಿಳಿಯುತ್ತದೆ.

ಒಂದು ಗ್ರಾಮದೇವತೆಗೆ ಸಂಬಂಧಿಸಿದ ಐತಿಹ್ಯ, ದಂತಕಥೆ, ಹಾಡು, ಜಾತ್ರೆಯ ವಿಚಾರ ವಿವರ ಪುರಾಣಕ್ಕೆ ಸಂಬಂಧಿಸಿದ ಕಥೆ, ಆಯಾ ಜನಾಂಗಕ್ಕೆ ಹಲವಾರು ಕಾರ್ಯವಿಧಿ–

ವಿಧಾನಗಳು ಹಲವು, ಸಮಸ್ಯೆಗಳು, ಇವುಗಳಿಗೆ ಸರಿಯಾಗಿ ಉತ್ತರಗಳನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುವುದು, ಒಂದು ಗ್ರಾಮ ದೇವತೆಯ ಸಮಗ್ರ ಅಧ್ಯಯನ ಮಾಡುವುದರಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನದ ರೀತಿ ಅವರ ನಂಬಿಕೆ, ಸಂಪ್ರದಾಯ, ಚಿಂತನ ಶಕ್ತಿಯ ವಿಧಾನಗಳನ್ನು ಅನಾವರಣಗೊಳುತ್ತಾ ಹೋಗುತ್ತದೆ. ಜೊತೆಗೆ ಅಲ್ಲಿ ಅವರ ಸಹಬಾಳ್ವೆ, ಮುಗ್ಧ ವ್ಯಕ್ತಿತ್ವದ ಹಿಂದೆ ಇರುವ ಬೇಧಭಾವ ಮತ್ತು ಜ್ಞಾನದ ವಿವಿಧ ಅಂಗಗಳು ಇನ್ನಿತರ ಶಿಸ್ತುಗಳು ಈ ಬಗೆಯ ಅಧ್ಯಯನದಿಂದ ನಾವು ತಿಳಿಯಲು ಉಪಯೋಗವಾಗುತ್ತದೆ.

ನಮ್ಮ ಸಗರನಾಡು ಗ್ರಾಮ ದೇವತೆಗಳು ಶಿಲ್ಪವು ನಮ್ಮ ಸಮಾಜವು ಇಂದು ಬದಲಾವಣೆಯಾಗುತ್ತಿದೆ. ನಮ್ಮ ಜಿಲ್ಲೆಯ ಆಧುನಿಕ ಯುಗವು ಬಂದು ಮಾನವನ ವೈಜ್ಞಾನಿಕ, ಕೈಗಾರಿಕೆ, ಕಂಪ್ಯೂಟರ, ತಂತ್ರಜ್ಞಾನ, ನಾಗರೀಕರಣದ ಅಭಿವೃದ್ಧಿಯಿಂದ ಹೊಸ ಬಗೆಯ ವಿಚಾರ-ಆಲೋಚನೆಗಳಿಂದ ವಿಶ್ವದ ನಾನಾ ಭಾಗದ ನಾನಾ ಬಗೆಯ ರೀತಿ-ನೀತಿ, ಸಂಸ್ಕೃತಿ-ಭಾಷೆ, ನಡೆ-ನುಡಿ, ಉಡುಗೆ-ತೊಡಿಗೆ ಇತರ ವಿಚಾರವನ್ನು ಅರಿತು ತನ್ನ ಜೀವನದಲ್ಲಿ ತೊಡಗಿಸಿಕೊಂಡು ಬದುಕು ರೂಪಿಸಿಕೊಳ್ಳುತ್ತಿದ್ದಾರೆ.

ನಮ್ಮ ಜಿಲ್ಲೆಯ ಸಗರನಾಡು ಶಿಲ್ಪ ಕಲಾ ಮತ್ತು ಜನಪದ ಸಂಸ್ಕೃತಿಯ ಮೂಲ ಸ್ವರೂಪವೂ ಬದಲಾವಣೆಗೆ ಒಳಗಾಗುತ್ತಿದೆ. ಹಿಂದಿನಿಂದ ಬೆಳೆದುಬಂದ ಜನಪದ ಹಾಡು ಕಥೆ, ಒಗಟುಗಳು, ಗಾದೆ ಮಾತುಗಳು ಇವುಗಳ ಜೊತೆಗೆ ನಮ್ಮ ಗ್ರಾಮದೇವತೆಗಳು ಅವುಗಳಿಗೆ ಸಂಬಂಧಿಸಿದ ಐತಿಹಾಸಿಕ, ಪುರಾಣ, ಆಚರಣೆಗಳೂ ಒಂದು ವರ್ಷಕ್ಕೂ ಮತ್ತೊಂದು ವರ್ಷಕ್ಕೂ ಕಡಿಮೆಯಾಗುತ್ತಾ ಕಣ್ಮರೆಯಾಗುತ್ತ ಬರುತ್ತಿವೆ. ಇಲ್ಲವೆಂದರೆ ರೂಪಾಂತರವಾಗುತ್ತದೆ. ಆದ್ದರಿಂದ ಹಿಂದಿನ ಕಾಲದ ಕಾಲಘಟದಲ್ಲಿ ಬಳಕೆಯಾಗುತ್ತಿದ್ದ ಆಚರಣೆಗಳು ಮೂಲ ಸ್ವರೂಪವನ್ನು ಸಂಗ್ರಹಿಸಿ ಅವುಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸುವುದು ಅರ್ಥಪೂರ್ಣವಾಗಿದೆ.

ಸಗರನಾಡಿನ ಗ್ರಾಮ ದೇವತೆಗಳು ಗ್ರಾಮೀಣ ಜನರ ಜೀವನದ ಮಾನಸಿಕ ದೃಢತೆಗೆ ಅಗತ್ಯವಾಗಿರುವವುಯೆಂದು ಹೇಳಬಹುದು, ಗ್ರಾಮ ದೇವತೆಯಲ್ಲದ ಅವರ ತಮ್ಮ ಹಳ್ಳಿಯ ಯಾವುದೇ ಪ್ರಮುಖ ಕಾರ್ಯವನ್ನು ಆರಂಭಿಸುವುದಿಲ್ಲ. ತಮ್ಮ ದಿನದ

ಆರಂಭದಿಂದ ಸಂಜೆಯವೆಗಿನ ದುಡಿಮೆಯಲ್ಲಿ ಇನ್ನಿತರ ಸಮಯದಲ್ಲಿ ಈ ದೇವತೆಯ ದೇವರ ಆಸರೆ ಅವರಿಗೆ ಬೇಕೆ ಬೇಕು, ಅವರ ಎಲ್ಲಾ ರೀತಿಯ ಯೋಚನೆಯ ಭಾವನೆಗಳೂ, ಚಿಂತನೆಗಳೂ ಕ್ರಿಯೆ ಪ್ರಕ್ರಿಯೆಗಳೂ ವಿವಿಧ ರೀತಿಯ ಆಚರಣೆಗಳು ಆಣೆ, ಪ್ರಮಾಣ, ಅಪ್ಪಣೆಗಳು, ದೇವತೆಯ ಎದುರೆ (ಸಾಕ್ಷಿಯಲ್ಲಿ) ಮುಂದುವರೆಯುತ್ತದೆ.

ಗ್ರಾಮದೇವತೆಗೆ ಸಂಬಂಧಿಸಿದಂತೆ ಒಂದೊಂದು ಜವಾಬ್ದಾರಿಗಳನ್ನು ಊರಿನ ಎಲ್ಲಾ ಜಾತಿಯ ಜನಕ್ಕೂ ಹಂಚಿಕೆಯಾಗಿರುತ್ತವೆ. ಜವಾಬ್ದಾರಿಗಳನ್ನು ಸಂಬಂಧಪಟ್ಟವರು ವಂಶಪರಂಪರೆಯಾಗಿ ನಿರ್ವಹಿಸುತ್ತಾ, ಬೆಳಸಿಕೊಂಡು ಬಂದಿರುತ್ತಾರೆ. ಒಟ್ಟು ಗ್ರಾಮದ ಐಕ್ಯತೆ, ಅಭಿವೃದ್ಧಿ, ಸುಮಧುರ ಸಾಮರಸ್ಯ ಜೀವನದ ಜೀವಾಳ ಗ್ರಾಮದೇವತೆಯ ಶಕ್ತಿಯೇ ಆಗಿರುತ್ತದೆ. ಆದುದರಿಂದ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಗ್ರಾಮ ವ್ಯಕ್ತಿಗಳ ಮತ್ತು ಗ್ರಾಮ ಜನಾಂಗೀಯ ಸಮೂಹದ ಸಾಂಸ್ಕೃತಿ ಮಾನಸಿಕ ನಿಯಂತ್ರಣ ಆ ದೇವತೆಯದೇ ಪ್ರಮುಖವಾದ ಪಾತ್ರವಾಗಿರುತ್ತದೆ.

ಪ್ರಸಿದ್ಧಿ ಹೊಂದಿದ ಸಗರನಾಡು ಗುಹೆಗಳ ಬೀಡು, ದೇಗುಲಗಳ ನಾಡು, ಹಲವು ಶಿಲ್ಪ ದೇವಾಲಯಗಳನ್ನು ಹೊಂದಿದ ಬಿಡು, ಹಲವು ಕೋಟೆ ವನದುರ್ಗ ಅರಸರ ಕೋಟೆ ಹೊಸಕೇರ ಬೇಟೆಗಾರ ಮಹಲ್ ಮತ್ತು ಏವುರು ದೇವಾಲಯ ಶಿರವಾಳ ದೇವಾಲಯ ಶಹಾಪೂರ ಕೋಟೆ ಪ್ರಸಿದ್ಧಿ ಹೊಂದಿದ ೨೫೬೦ ವರ್ಷ ಹೊಂದಿದ ಬುದ್ಧ ಮಲಗಿದ ಬೆಟ್ಟ ಹೀಗೆ ಹೇಳುತ್ತಾ ಸಾಗಿದರೆ ಶಬ್ದಗಳೆ ಸಾಲುತ್ತಿಲ್ಲ ಸಗರನಾಡಿನ ಗ್ರಾಮದೇವತೆಗಳ ಬಗ್ಗೆ ಸಾಕಷ್ಟು ಮಾಹಿತಿಗಳು ನಮ್ಮ ಪ್ರದೇಶದ ದೇವತೆ ಕಣಿ ಇದೆ ಎಂದು ಹೇಳಬಹುದು.

ಈಗಿರುವ ಈ ಜಿಲ್ಲೆಯ ಗ್ರಾಮೀಣ ಜನರ ಜೀವನದಲ್ಲಿ ಹಿಂದಿನ ಕಾಲದಿಂದಲೂ ಹಾಸುಹೊಕ್ಕಾಗಿ ಬೆಳೆದ ಬಂದಿರುವ ಗ್ರಾಮ ದೇವತೆಗಳು ಜನಪದರ ಬದುಕಿನಲ್ಲಿ ಬೆರೆತು ಹೋಗಿವೆ, ಆದ್ದರಿಂದ ನಮ್ಮ ಜಿಲ್ಲೆಯ ಜನಪದ ಸಂಸ್ಕೃತಿ, ಅವರ ಸಾಮಾಜಿಕ ಸ್ಥಿತಿಗತಿಗಳು, ಅಲ್ಲಿಯ ಅರ್ಥವ್ಯವಸ್ಥೆ ಆಚಾರ-ವಿಚಾರಗಳನ್ನು ತಿಳಿಯಬೇಕಾದರೆ ಅದರ ಕುರಿತು ಅಧ್ಯಯನ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಬಂಧವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಪ್ರತಿಯೊಂದು ಸ್ಥಳವು ತನ್ನದೇ ಆದ ವಿಶೇಷತೆಯನ್ನು ಹೊಂದಿರುತ್ತದೆ. ಉದಾ: ಆ ಸ್ಥಳದ ಗ್ರಾಮದ ದೇವತೆಯಿಂದಾಗಲಿ, ಊರಿನ ಜನರಿಂದಾಗಲಿ, ಅವರ ಆಚಾರ-ವಿಚಾರ, ಸಂಸ್ಕೃತಿ ಇತ್ಯಾದಿ ಹೀಗೆ ಪ್ರಮುಖ ಅಂಶಗಳ ಮೇರೆಗೆ ಆ ಸ್ಥಳವು ಪ್ರಸಿದ್ಧಿಯಾಗಿರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಸಗರನಾಡಿನ ಗ್ರಾಮದೇವತೆಗಳ ಐತಿಹಾಸಿಕ ಹಿನ್ನೆಲೆಯೊಂದಿಗೆ ಅವುಗಳನ್ನು ಕಲಾತ್ಮಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಮುಖ ಉದ್ದೇಶವನ್ನು ಹೊಂದಲಾಗಿದೆ.

ಸಗರನಾಡಿನ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮದೇ ಆದ ಆಚರಣೆ, ನಂಬಿಕೆಗಳ ಮೂಲಕ ಒಂದು ಮೂರ್ತಿಯನ್ನು ನಿರ್ಮಿಸಿ, ತಮ್ಮ ಗ್ರಾಮದ ರಕ್ಷಣೆಯ ಹಾಗೂ ತಮ್ಮ ರಕ್ಷಣೆಯ, ಬೆಳವಣಿಗೆಯ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಿರುವ ಗ್ರಾಮದೇವತೆಗಳನ್ನು ಇಲ್ಲಿಯವರೆಗೂ ಅಲ್ಲಲ್ಲಿ ಬಿಡಿ ಬಿಡಿ ಲೇಖನಗಳ ಮೂಲಕ ಬೆಳಕಿಗೆ ಬಂದಿರಬಹುದು. ಪ್ರಸ್ತುತ ಪ್ರಬಂಧದಲ್ಲಿ ಆ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಸಗರನಾಡಿನ ಪ್ರಮುಖ ಗ್ರಾಮದೇವತೆಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಿ ಅದರ ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ದೇವರ ಮೂರ್ತಿಗಳಲ್ಲಿ ಸಾಮಾನ್ಯವಾಗಿ ಭಕ್ತರು ತಮ್ಮ ಭಾವನೆಗೆ ತಕ್ಕಂತೆ ಶಿಲಾ, ಮರ, ಲೋಹ ಹಾಗೂ ಸಂಕೀರ್ಣ ಮಾಧ್ಯಮಗಳಲ್ಲಿ ಉತ್ತಮ ಕಲಾವಿದರುಗಳಿಂದ ರಚಿಸಿ ಅವುಗಳನ್ನು ಮೂರ್ತಿ ಪೂಜೆ ಮಾಡುತ್ತಾರೆ. ಹೀಗೆ ಪ್ರಸ್ತುತ ಅಧ್ಯಯನವು ಸಗರನಾಡಿನ ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖವಾಗಿ ಕಂಡುಬಂದ ಶಿಲಾ, ಮರ, ಲೋಹ ಹಾಗೂ ಸಂಕೀರ್ಣ ಮಾಧ್ಯಮಗಳ ಗ್ರಾಮದೇವತೆಗಳನ್ನು ವ್ಯವಸ್ಥಿತವಾಗಿ ವಿಂಗಡಿಸಿಕೊಂಡು ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಯಾವುದೇ ಒಂದು ಕಲೆ ಅರಳಲು ಆ ಕಲೆಯ ಮೂಲ ರೂವಾರಿ ಕಲಾವಿದ. ಹೀಗೆ ಸಗರನಾಡಿನ ಗ್ರಾಮೀಣ ಪ್ರದೇಶದ ಪ್ರಮುಖ ಕಲಾವಿದರುಗಳನ್ನು ಪಟ್ಟಿಮಾಡಿ ಅವರಲ್ಲಿಯೂ ಶಿಲಾ ಮಾಧ್ಯಮದ ಕಲಾವಿದರು, ಮರ ಮಾಧ್ಯಮದ ಕಲಾವಿದರು,

ಲೋಹ ಮಾಧ್ಯಮದ ಕಲಾವಿದರು ಹಾಗೂ ಸಂಕೀರ್ಣ ಮಾಧ್ಯಮದ ಕಲಾವಿದರುಗಳೆಂದು ವಿಂಗಡಿಸಿಕೊಂಡು ಅವರ ಜೀವನ ಸಾಧನೆಗಳ ಮತ್ತು ಪ್ರಸ್ತುತ ಸ್ಥಿತಿಗತಿಗಳ ಕುರಿತು ಸ್ಥೂಲವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಯನದ ಅನುಕೂಲತೆಗಾಗಿ ಈ ಕೆಳಗಿನಂತೆ ಅಧ್ಯಾಯಗಳನ್ನು ವಿಂಗಡಿಸಿಕೊಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಪ್ರಮುಖ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತ, ಅಧ್ಯಯನ ರೂಪಿಸಲು ಅದರದೇ ಆದ ಸ್ವರೂಪ ಮತ್ತು ವ್ಯಾಪ್ತಿಯನ್ನು ಚರ್ಚಿಸಲಾಗಿದೆ. ಅಲ್ಲದೆ ಪ್ರಸ್ತುತ ಪ್ರಬಂಧಕ್ಕೆ ಗಟ್ಟಿಯಾದ ಪೀಠಿಕೆಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಗರನಾಡಿನ ಐತಿಹಾಸಿಕ ಹಿನ್ನೆಲೆಯ ಕುರಿತಾಗಿದ್ದು, ಇಲ್ಲಿ ವೈಭವಿತ ಸಗರನಾಡಿನ ಸಾಂಸ್ಕೃತಿಕ ಪರಿಸರ, ಇತಿಹಾಸ, ರಾಜಕೀಯ, ಭೌಗೋಳಿಕ ಮುಂತಾದ ಪ್ರಮುಖ ಅಂಶಗಳೊಂದಿಗೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಗ್ರಾಮದೇವತೆಗಳ ಆಚಾರ–ವಿಚಾರ ಮತ್ತು ಸಂಸ್ಕೃತಿಯನ್ನು ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಗರನಾಡಿನ ಶಿಲಾ ಮಾಧ್ಯಮದಲ್ಲಿ ರಚನೆಗೊಂಡಿರುವ ಗ್ರಾಮದೇವತೆಗಳ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಅವುಗಳ ವಸ್ತುವಿಷಯ, ಆಚಾರ–ವಿಚಾರ, ದೇವಿಯ ಪ್ರಮುಖ ವಿಶೇಷತೆಗಳನ್ನು ಸಂಗ್ರಹಿಸಿ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮರ (ಕಟ್ಟಿಗೆ) ಮಾಧ್ಯಮದಲ್ಲಿ ರೂಪುಗೊಂಡಿರುವ ಗ್ರಾಮದೇವತೆಗಳ ಶಿಲ್ಪಗಳ ಕುರಿತು ಅಧ್ಯಯನ ಮಾಡಲಾಗಿದ್ದು, ಇಲ್ಲಿ ಅವುಗಳಿಗೆ ಬಳಸಿರುವ ಕಟ್ಟಿಗೆ, ಅವುಗಳ ಅಳತೆ, ಆಕಾರ, ವರ್ಣಗಾರಿಕೆ ಹೀಗೆ ಪ್ರಮುಖ ಅಂಶಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಲೋಹ ಮಾಧ್ಯಮದಲ್ಲಿ ನಿರ್ಮಾಣವಾದ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಇಲ್ಲಿಯೂ ಅವುಗಳು ರಚನೆಯಾದ ಲೋಹದ ವಿವರಗಳೊಂದಿಗೆ, ಅವುಗಳ ರಚನೆಯ ತಂತ್ರ, ಶೈಲಿ ಹಾಗೂ ವರ್ಣಗಾರಿಕೆಯ ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಶಿಲಾ, ಮರ ಹಾಗೂ ಲೋಹ ಈ ಮೂರು ಮಾಧ್ಯಮಗಳನ್ನು ಹೊರತುಪಡಿಸಿ ಮಿಶ್ರಮಾಧ್ಯಮ ಅಥವಾ ಸಂಕೀರ್ಣ ಮಾಧ್ಯಮಗಳಲ್ಲಿ ರಚನೆಯಾದ ಗ್ರಾಮದೇವತೆಗಳ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸಗರನಾಡಿನ ಗ್ರಾಮೀಣ ಪರಿಸರದ ಪ್ರಮುಖ ಕಲಾವಿದರುಗಳನ್ನು ಗುರುತಿಸಿ, ಅವರ ಜೀವನದ ಪ್ರಮುಖ ಘಟನೆಯನ್ನು ಸ್ಥೂಲವಾಗಿ ಇಲ್ಲಿ ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದ ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಆರು ಅಧ್ಯಾಯಗಳ ಅಧ್ಯಯನದಿಂದ ಕಂಡುಬಂದ ಪ್ರಮುಖ ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಪ್ರಬಂಧವು ವಿಶೇಷವಾಗಿ ಸಗರನಾಡನ್ನು ಅಂದರೆ ಶಹಾಪೂರ, ಸುರಪುರ ಹಾಗೂ ಜೇವರ್ಗಿ ತಾಲೂಕುಗಳನ್ನು ವ್ಯಾಪ್ತಿಯನ್ನಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಭಾಗದ ಗ್ರಾಮದೇವತೆಗಳ ಆಚರಣೆ, ಪದ್ಧತಿ, ವಿಧಾನ, ಸಂಸ್ಕೃತಿ ಹೀಗೆ ಹತ್ತು ಹಲವು ವಿಷಯಗಳನ್ನಾಧರಿಸಿ ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಾಯ : ಎರಡು

ಸಗರನಾಡಿನ ಐತಿಹಾಸಿಕ ಹಿನ್ನೆಲೆ ಮತ್ತು ಗ್ರಾಮದೇವತೆಗಳು

ಅಧ್ಯಾಯ : ಎರಡು

ಸಗರನಾಡಿನ ಐತಿಹಾಸಿಕ ಹಿನ್ನೆಲೆ ಮತ್ತು ಗ್ರಾಮದೇವತೆಗಳು

ಗ್ರಾಮ ದೇವತೆಗಳನ್ನು ಸಂಪೂರ್ಣವಾಗಿ ತಿಳಿಯಲು ಗ್ರಾಮೀಣರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಪೌರಾಣಿಕ, ಐತಿಹಾಸಿಕ, ಜನಪದದ ಹಿನ್ನೆಲೆಯ ಆಧಾರವಾಗಿರುವ ಕಥೆಗಳೇ ಸಾಕ್ಷಿ, ಕಲ್ಲು ಕಟ್ಟಿಗೆ ಮೂರ್ತಿ ಶಿಲ್ಪಗಳು ಗ್ರಾಮ ದೇವತೆಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಗಳು ಐತಿಹಾಸಿಕವಾಗಿ ಶಿಲಾಶಾಸನಗಳಲ್ಲಿ ಸಾಹಿತ್ಯ ಕೃತಿಯಲ್ಲಿ ಉಲ್ಲೇಖಗೊಂಡಿರುವ ರೂಪದಲ್ಲಿ ದೊರೆಯುವುದು ತುಂಬಾ ವಿರಳವೆಂದೇ ಹೇಳಬಹುದು. ಆದ್ದರಿಂದ ಜನಪದ ಪೌರಾಣಿಕ ಪ್ರಪಂಚದಲ್ಲಿ ಗ್ರಾಮ ದೇವತೆಗಳ ಮೂಲ ವ್ಯಕ್ತಿತ್ವದಲ್ಲಿ ಪ್ರಕಟಗೊಂಡ ತನ್ನೆಲ್ಲಾ ಮುಖಗಳನ್ನು ನೋಡಬಹುದು, "ಪೌರಾಣಿಕ ಕಥೆಯ ನಂಬಿಕೆಯ ಫಲ ನಂಬಿಕೆಗಳು ಅನುಭವದ ಪರಿಣಾಮ" ಎಂಬ ಹೇಳಿಕೆಯನ್ನು ಗಮನಿಸಿದರೆ ನಮ್ಮ ಜನಪದರು ಗ್ರಾಮ ದೇವತೆಗಳ ಮೂಲಕ ತಮ್ಮ ಲೋಕವನ್ನು ವಿಸ್ತರಿಸುವ ಪ್ರಯತ್ನ ಮಾಡಿರುವುದಕ್ಕೆ ಸೂಕ್ತವಾಗಿರುವ ಸಾಕ್ಷಿ ಮತ್ತು ಆಧಾರಗಳು ದೊರೆಯುತ್ತವೆ.

ಪ್ರಚಲಿತವಾಗಿರುವ ಆಚರಣೆಗಳನ್ನು ಅವುಗಳ ಪ್ರಾಚೀನತೆಯನ್ನು ಸಾಮಾಜಿಕವಾಗಿ ಗಟ್ಟಿಗೊಳಿಸಿಕೊಂಡು ಉಳಿಸಿಕೊಳ್ಳಲು ಈ ಪೌರಾಣಿಕ ಜನಪದಗಳು, ಪ್ರಮುಖ ಸಾಧನೆಗಳಾಗಿ ಕಾರ್ಯವನ್ನು ಮಾಡುತ್ತವೆ. ಪೌರಾಣಿಕತೆಯು ಹಿಂದೆ ನಡೆದ ದೇವಾನು ದೇವತೆಗಳು ಹುಟ್ಟಿಬಂದ ವಿವರವನ್ನು ತಿಳಿಸುತ್ತದೆ ಎಂಬ ಮಾತು ಉತ್ಪ್ರೇಕ್ಷೆಯಾಗಿರುವುದಲ್ಲ. ಆದ್ದರಿಂದ

ಗ್ರಾಮೀಣ ಜನಸಮುದಾಯದ ಕಲ್ಪನೆಯ ಸ್ವರೂಪವನ್ನು ತಿಳಿಯುವುದಕ್ಕೆ ಪ್ರಮುಖ ಮಾರ್ಗಗಳಾಗಿವೆ, ಜನಪದರ ಪೌರಾಣಿಕ ಕಥೆಗಳು ಕಟ್ಟು ಕತೆಯಾದರೂ ಅವು ಸಗರನಾಡಿನ ಬಹು ಸಂಖ್ಯಾತ ಜನರ ಬದುಕಿಗೆ ಹಿಡಿದಿರುವ ಕೈ ಗನ್ನಡಿಯಾಗಿದೆ.

ಈ ಪೌರಾಣಿಕ ಕಥೆಯನ್ನು ಅನಕ್ಷರಸ್ತರು ಹೇಳಿದ ಕಥೆಯಾದರು, ಅತ್ಯಂತ ಸೃಜನಾತ್ಮಕವಾಗಿ ಚಿತ್ರಿಸಿರುವ ಸಾಂಸ್ಕೃತಿಕ ಶಕ್ತಿಯಾಗಿದೆ, ಪೌರಾಣಿಕ ಕಥೆಯನ್ನು ಖಚಿತವಾಗಿ ಪರಿಪೂರ್ಣ ಸತ್ವಕ್ಕೆ ಅನ್ವಯ ಮಾಡಬಹುದು, ಗ್ರಾಮದ ಮೂಲ ಸಂಪ್ರದಾಯಗಳು ಪದ್ಧತಿಗಳು ಪ್ರಮುಖ ಸಿದ್ಧಾಂತಗಳು ಧಾರ್ಮಿಕ ವಿಚಾರಗಳು, ಈ ಬಗೆಯ ಮೂಲ ಪರಿಕಲ್ಪನೆಯ ಗ್ರಾಮ ದೇವತೆಗಳ ಹುಟ್ಟಿನ ಸ್ವರೂಪವನ್ನು ಪುರಾಣದ ರೀತಿಯಲ್ಲಿ ಹೇಳುವ ಕಥೆಯ ಸಂಗತಿಗಳನ್ನು ಪೌರಾಣಿಕ ಕಥೆ, ಈ ಪೌರಾಣಿಕ ಕಥೆ ಆದಿ ಮಾನವ ನಿಸರ್ಗ ನಿಯಮವನ್ನು ಸಂಪೂರ್ಣವಾಗಿ ತಿಳಿದು ಅದಕ್ಕೆ ಗೌರವ ನೀಡಲು ಮಾಡಿದ ಪ್ರಯತ್ನ, ಸೂರ್ಯ, ಚಂದ್ರ, ಆಕಾಶ, ಮಳೆ, ಮರಣದ ನಂತರದ ಜೀವನವೇ ಪೌರಾಣಿಕ ಕಥೆಯಾಗಿ ಜನಿಸಿರುವುದಕ್ಕೆ ಸತ್ಯದ ಪ್ರೇರಣೆಗಳು, ಈ ಕಥೆಗಳಲ್ಲಿ ಮನುಷ್ಯನ ಅದ್ಭುತ ಸಾಮರ್ಥ್ಯವನ್ನು ಮೀರಿದ ಶಕ್ತಿಯ ಚಟುವಟಿಕೆಗಳು ಕಂಡು ಬರುತ್ತವೆ.

ನಾವು ನೋಡುವ ನಿಜ ಜೀವನದಲ್ಲಿ ಮಾಡಲು ಸಾಧ್ಯವಾಗದಿರುವುದನ್ನು ಸಾಧಿಸಿ ತೋರಿಸುತ್ತಾನೆ, ಪೌರಾಣಿಕ ಕಥೆಯನ್ನು ಪ್ರಮುಖ ಸಂಗತಿಗಳು ದೇವತೆಗಳ ಜನನ ಶಕ್ತಿಯ ಸುತ್ತ ಹೆಣೆಯಲ್ಪಟ್ಟಿದೆ. ಅವನ ಭಯದ ಕನಸುಗಳು ಈ ಪೌರಾಣಿಕ ಕಥೆಯಲ್ಲಿ ನಿಜರೂಪವನ್ನು ಕಾಣುತ್ತೇವೆ. ನಮ್ಮಲ್ಲಿನ ಪೌರಾಣಿಕ ಕಥೆಯ ಪ್ರಮುಖ ಅಂಶಗಳು ಸ್ಥಳೀಯ ಊರು, ಭಾಷೆಯ ಜನರಿಂದ ನಿರ್ಮಾಣವಾಗಿರುತ್ತದೆ, ಹಿಂದಿನ ಪೂರ್ವಿಕರು ತಾವು ಕಂಡ ಗಿಡ, ಮರ, ಕಲ್ಲು, ಬೆಳಕು, ನೀಡುವ ಸೂರ್ಯ, ಚಂದ್ರ, ಅನ್ನ ನೀಡುವ ಅಕ್ಕಿ, ಬೇಳೆ, ನೀರು ಇತ್ಯಾದಿಗಳಲ್ಲಿ ಜೀವನ ಚೈತನ್ಯವನ್ನು ಕಂಡು ಅವುಗಳಿಂದ ಇವನ ಜೀವನಕ್ಕೆ ತುಂಬಾ ಅನುಕೂಲವಾಗಿರುವುದರಿಂದ ಆರಾಧಿಸುವುದಕ್ಕೆ ತೊಡಗಿದ, ಆದ್ದರಿಂದ ಹೆಚ್ಚಿನ ಗ್ರಾಮ ದೇವತೆಗಳು ದೇವಾಲಯದ ಗರ್ಭಗುಡಿಯಲ್ಲಿ ಇರುವ ಕೆತ್ತನೆಯ ಮೂರ್ತಿಗಳಲ್ಲ, ಹುತ್ತಗಳು, ವೃಕ್ಷಗಳು (ಬೇವಿನ ಮರ, ಅರಳಿಮರ, ಬನ್ನಿಮರ) ಶಿಲೆ, ಕೆರೆಯ ಏರಿ, ಮುರಿದ ಮಂಟಪ ಸಮಾಧಿಗಳಾಗಿವೆ. ಇವುಗಳಿಗೆ ಪೂರ್ವಿಕರು ತಮ್ಮ

ಕಲ್ಪನಾ ಶಕ್ತಿಯಿಂದ ಕಥೆಗಳನ್ನು ನಿರ್ಮಿಸಿದ್ದಾರೆ, ಇವು ಅವರ ಆಲೋಚನಾ ಶಕ್ತಿಯ ಬೆಳವಣಿಗೆಯನ್ನು ಸೂಚಿಸುವ ಶಕ್ತಿಯೆಂದು ಹೇಳಬಹುದು, ಈ ರೀತಿಯಿಂದ ಜನನಗೊಂಡ ಪೌರಾಣಿಕ ಕಥೆಗಳು ಸಾಮಾಜಿಕ ಪುರಾಣಗಳಾಗಿ ರೂಪಾಂತರಗೊಂಡು ಸಮಾಜದ ಬದ್ಧತೆಯನ್ನು ನೀತಿಯನ್ನು ಕಾಪಾಡಿಕೊಳ್ಳುತ್ತ ಸಹ ಬಾಳ್ವೆಯನ್ನು ಗ್ರಾಮಗಳು ಮಾಡುವಂತೆ ಸಾಧನೆಗಳಾಗಿವೆ ನಿರ್ಧಿಷ್ಟವಾಗಿರುವ ಗ್ರಾಮದೇವತೆ ಊರಿನಲ್ಲಿ ಇಲ್ಲವಾಗಿದ್ದರೆ ಅದಕ್ಕೆ ಸಂಬಂಧಿಸಿದ ಪೌರಾಣಿಕತೆ ಸೃಷ್ಟಿಯಾಗುವುದಕ್ಕೆ ಬರುವುದಿಲ್ಲ.

ಅದೇ ರೀತಿ, ಒಂದು ಮರದ ಮುಂದಿನ ಕಲ್ಲು ಶಿಲೆಯೋ ಹುತ್ತುವೋ ವೃಕ್ಷದ ಬುಡವೋ, ಇಲ್ಲದಿದ್ದರೆ ದೇವತೆಯ ಕಲ್ಪನೆ ಉಗಮವಾಗಿ ವಿಕಾಸ ಹೊಂದುವುದಕ್ಕೆ ಬರುವುದಿಲ್ಲ, ಆದ್ದರಿಂದ ದೇವಿಯು ಜನಿಸಿ ಬೆಳೆಯುವುದಕ್ಕೆ ಒಂದು ವಸ್ತು ಮೊದಲು ಸ್ಥಾಪನೆ ಆಗಬೇಕು, ಅಂತಹ ದೇವತೆಗೆ ಒಂದು ಪೌರಾಣಿಕ ಪರಂಪರೆಯು ಸಿಗುತ್ತವೆ. ಆ ದೇವಿಯ ಗುಣ ಸ್ವಭಾವಗಳು ಅವಳ ಶಕ್ತಿ ಸಹಾಯವನ್ನು ಚಿತ್ರಿಸುತ್ತಾ ಕಥೆಯನ್ನು ಹೇಳುವುದಕ್ಕೆ ಬರುತ್ತವೆ.

ಗ್ರಾಮದೇವತೆಗಳಿಗೆ ಸಂಬಂಧಿಸಿದ ಪೌರಾಣಿಕ ಕತೆಯು ಅವಳು ನೆಲೆಸಿರುವ ಸ್ಥಳ ಮಾರಮ್ಮನ ಪೌರಾಣಿಕ ಕಥೆಗಳು ಆಹಾರ ಪದ್ಧತಿಗಳು ಮಹಿಳೆ ಪುರುಷರ ಅನುಬಂಧದ ಪೌರಾಣಿಕ ಕಥೆಗಳು ಅಕ್ಕ–ತಂಗಿಯರ ಸಂತಾನದ ಪೌರಾಣಿಕ ಕಥೆಗಳು ಶೌರ್ಯ ತ್ಯಾಗ ಪ್ರದರ್ಶನದ ನಿರೂಪಣೆಯ ಇತ್ಯಾದಿ ಪೌರಾಣಿಕ ಕಥೆಗಳು ಮೂಲ ಸ್ವರೂಪಗಳಾಗಿವೆ.

ಸಗರನಾಡಿನ ಗ್ರಾಮ ದೇವತೆಗಳು ನೆಲೆಗೊಂಡ ಪೌರಾಣಿಕ ಕಥೆಗಳು

ಒಂದು ಗ್ರಾಮ ದೇವತೆ ಆ ಗ್ರಾಮದ ಹೆಸರಿನೊಂದಿಗೆ ಜನಿಸಿ ಗ್ರಾಮಗಳಲ್ಲಿ ನೆಲೆಸುವ ವಿಧಾನವೇ ಬಹಳ ಕುತೂಹಲಕಾರಿಯಾಗಿದೆ, ಈ ದೇವತೆಗಳು ಹಿಂದಿನ ಸ್ಥಿತಿ ಆ ಗ್ರಾಮದ ಜನರ ಸಂಕಷ್ಟದ ಕಾಲವಿರಬಹುದು. ಇಲ್ಲವೆ ಅವರು ದೇವತೆಯ ಗುಣಗಳನ್ನು ಉಪೇಕ್ಷೆ ಮಾಡಿರುವ ಸಮಯವಿರಬಹುದು ಅಥವಾ ದೈವತ್ವದ ಅಗತ್ಯವಿಲ್ಲದೆ ಗ್ರಾಮದಲ್ಲಿ ಶಾಂತಿ ರೋಗದ ನಿವಾರಣೆ ಗ್ರಾಮದ ಸಮೃದ್ಧಿ ಸಾಧ್ಯವಿಲ್ಲವೆಂದು ಸಂದರ್ಭದಲ್ಲಿ ಗ್ರಾಮ ದೇವತೆಯ ಗ್ರಾಮದಲ್ಲಿ ಪ್ರವೇಶ ಪಡೆಯುತ್ತದೆ. ಅದು ಆ ಊರಿನ ಕೆಲವು ಜನರಿಗೆ

ಕನಸಿನಲ್ಲಿ ಪ್ರಾಣಿಯ ರೂಪದಲ್ಲಿ ಕಂಡು ತನ್ನ ಭಕ್ತರಿಗೆ ನೆರವಾಗುವ ಬಯಕೆಯನ್ನು ಸ್ಪಷ್ಟಪಡಿಸಿ ತನ್ನ ಆರಾಧನೆಯನ್ನು ಮಾಡಬೇಕೆಂದೂ ಕೇಳಿಕೊಳ್ಳುತ್ತದೆ, ಇಲ್ಲದಿದ್ದರೆ ಗ್ರಾಮಕ್ಕೆ ಕೆಟ್ಟ ಕಾಲ ತಪ್ಪಿದ್ದಲ್ಲವೆಂದು ಎಚ್ಚರಿಕೆಯ ಗಂಟೆಯನ್ನು ನೀಡಿ ಆಶ್ಚರ್ಯವಾದ ಸಂಗತಿಯನ್ನು ಸೃಷ್ಟಿಸಿ ತಿಳುವಳಿಕೆ ನೀಡುತ್ತದೆ. ಇದಕ್ಕೆ ಉದ್ದರಾದ ಗ್ರಾಮದವರು ತಮ್ಮ ಗ್ರಾಮದಲ್ಲಿ ದೇವತೆಯನ್ನು ಪ್ರತಿಷ್ಠಾಪನೆ ಮಾಡುತ್ತಾರೆ, ಈ ಸಂಬಂಧದಲ್ಲಿ ಕೆಲವು ಪೌರಾಣಿಕ ಕಥೆಗಳನ್ನು ಈ ಪ್ರಬಂಧದಲ್ಲಿ ಅವಲೋಕಿಸಲು ಪ್ರಯತ್ನಿಸಿದ್ದೇನೆ.

೨.೧. ಸಗರ ನಾಡಿನ ಗ್ರಾಮ ದೇವತೆಗಳು ನೆಲೆಗೊಂಡ ಐತಿಹಾಸಿಕ ಹಿನ್ನಲೆ

ಕರ್ನಾಟಕದ ಐತಿಹಾಸಿಕ ಕ್ಷೇತ್ರಗಳಲ್ಲಿ ಯಾದಗಿರಿ ಜಿಲ್ಲೆ ಮತ್ತು ಕಲಬುರಗಿ ಜಿಲ್ಲಾ ಕೇಂದ್ರವೂ ಅತ್ಯಂತ ಪ್ರಮುಖವಾದುದ್ದಾಗಿದೆ. ಇಲ್ಲಿಯ ಐತಿಹಾಸಿಕ ಹಿನ್ನೆಲೆಯನ್ನು ನಾವು ಗಮನಿಸಿದರೆ ಜಿಲ್ಲೆಯ ಶಹಾಪೂರು ತಾಲೂಕು, ಸುರಪೂರು ತಾಲೂಕ ಮತ್ತು ಜೇವರ್ಗಿ ತಾಲೂಕುಗಳೊಂಡು ಐತಿಹಾಸಿಕ ಮಹತ್ವವು ತಿಳಿಯುತ್ತದೆ. ನವ ಶಿಲಾಯುಗದಿಂದಲ್ಲೂ ಶಿಲಾ ಸಮಾಧಿಗಳು ದೊರೆತಿವೆ. ಗೋಗಿ, ಏವುರು, ಮುದನೂರು, ಹೊಸಗೇರಿ, ವನದುರ್ಗ, ಸುರಪೂರು ತಾಲೂಕಿನಲ್ಲಿ ವಾಗಂಗೇರಿ ಹೀಗೆ ಹಲವಾರು ಗ್ರಾಮಗಳಲ್ಲಿ ದೊರೆತ ಅಶೋಕನ ಶಿಲಾ ಶಾಸನಗಳಿಂದ ಈ ಪ್ರದೇಶವು ಮೌರ್ಯ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿಯುತ್ತೇವೆ.

ನಂತರ ಚಂದ್ರಮೌಳಿಯ ಉತ್ಖನದಿಂದ ದೊರೆತ ಶಾಸನಗಳಿಂದ ಸುಮಾರು ೧೮೦೦ ವರ್ಷಗಳ ಹಿಂದೆ ಶಾತವಾಹನರು ನಂತರ ಬಂದ ಬನವಾಸಿ ಕದಂಬರು ಇಲ್ಲಿ. ಇಲ್ಲಿ ರಾಜ್ಯ ಆಳಿದ್ದಾರೆಂದು ಶಾಸನಗಳಿಂದ ತಿಳಿಯಬಹುದು. ಮುಂದೆ ಬಾದಾಮಿ ಚಾಳುಕ್ಯರಿಗೂ, ರಾಷ್ಟ್ರಕೂಟರಿಗೂ ಸೇರಿ ಆಳ್ವಿಕೆ ನಡೆಸಿದ್ದಾರೆಂದು ತಿಳಿಯುತ್ತದೆ.

೧೧ನೇ ಶತಮಾನದಲ್ಲಿ ಮತ್ತೆ ಚಾಳುಕ್ಯರ ಕೈವಶವಾಗಿ ೧೧ನೇಯ ಶತಮಾನದ ಸುಮಾರಿಗೆ ಹೊಯ್ಸಳರು ಆಳ್ವಿಕೆಗೆ ಒಳಪಟ್ಟು ರಾಜ್ಯಭಾರ ನಡೆಯುತ್ತಿರುವ ಕಾಲದಲ್ಲಿ ೧೪-೧೫ನೇ ಶತಮಾನದಲ್ಲಿ ಪ್ರಬಲವಾಗಿ ಬೆಳೆದ ವಿಜಯನಗರ ಸಾಮ್ರಾಜ್ಯ ಸೇರಿ ಅಲ್ಲಿಯೇ ಆಳ್ವಿಕೆ ಮಾಡುತ್ತಿದ್ದ ಪಾಳೆಗಾರರು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ

ಆಳ್ವಿಕೆಯನ್ನು ಮಾಡತೊಡಗಿದ್ದರು, ಇವರಲ್ಲಿ ಮುಖ್ಯರಾದವರು ಸುರಪುರದ ವೆಂಕಟಪ್ಪ ನಾಯಕ ಪ್ರಮುಖ್ಯರು. ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಗೊಂಡ ನಂತರ ದುರ್ಗದ ಪಾಳೆಯಗಾರರು ಸ್ವಾತಂತ್ರರಾಗಿ ಆಳ್ವಿಕೆ ಮಾಡತೊಡಗಿದರು, ಮುಂದೆ ಹೈದರಾಲಿಯೊಂದಿಗೆ ಹೋರಾಟ ನಡೆದು ಕ್ರಿ.ಶ. ೧೭೭೯ರಲ್ಲಿ ಪಾಳೆಗಾರರ ಪತನಗೊಂಡು ಹೈದರ ಆಳ್ವಿಕೆಗೆ ಸೇರಿತು ನಂತರ ಟಿಪ್ಪುವನ್ನು ಬ್ರಿಟಿಷರು ಸೋಲಿಸಿ ಮೈಸೂರು ಅರಸರಾದ ಒಡೆಯರಿಗೆ ಸೇರಿತು, ಮೈಸೂರು ಸಂಸ್ಥಾನವು ಬ್ರಿಟಿಷ ಕಮೀಷನ್ನರ ಹಿಡಿತದಲ್ಲಿ ಆಡಳಿತ ನಡೆಯುತ್ತಿತ್ತು.

ಧರ್ಮ ಸಮನ್ವಯ ಮತ್ತು ತೀರ್ಥ ಕ್ಷೇತ್ರಗಳು

೦೧. ಸಗರನಾಡು

ಸಗರನಾಡಿನಲ್ಲಿ ಧರ್ಮ ಸಮನ್ವಯ ತೀರ್ಥ ಕ್ಷೇತ್ರಗಳಿಗೆ ಕೊರತೆಯಿಲ್ಲ. ದೇವತಾ ಕ್ಷೇತ್ರ ಪರ್ಯಟನೆ ಜೊತೆಗೆ ತೀರ್ಥಸ್ನಾನ ಹಾಗೂ ತೀರ್ಥ ಉಪಾಸನೆ ದಾನಗಳಂತಹ ಆಚರಣೆಗಳಿಂದ ಮನದ ಮೈಲಿಗೆ ಕಳೆದು ಪರಿಶುದ್ಧರಾಗುವ ನಂಬುಗೆ ತೀರ್ಥ ಕ್ಷೇತ್ರಗಳು ಮಹತ್ವವನ್ನು ಹೆಚ್ಚಿಸಲು ಕಾರಣಗಳಾಗಿವೆ. ಇಲ್ಲಿನ ಶಾಸನಗಳಲ್ಲಿ ಉಕ್ತವಾದ ಮುಖ್ಯ ತೀರ್ಥಗಳ ಹೆಸರು ಇಂತಿವೆ: ದಕ್ಷಿಣ ವಾರಣಾಸಿ, ಮುದನೂರಿನ ರಾಮೇಶ್ವರ, ಲಕ್ಷ್ಮಣೇಶ್ವರ ತೀರ್ಥಗಳು ತ್ರಿಭುವನ ಮಲ್ಲದೇವರು ಗೋದಾವರಿ ತೀರದ ಕೋಟ ತೀರ್ಥದಲ್ಲಿ ತುಲಾ ಪುರುಷಂ ದ್ಯಾನಗಳನ್ನು ಮಾಡುವುದು.[೧]

ಹುಣಸಿಹಡಗಿ ಶಾ.ಸಂಖ್ಯೆ – ೧೯೪ : ಚಂದ್ರದೇವಿಯ ತಡಿ ಬಹುಃಶ ಸನ್ನತಿಯ ಚಂದ್ರಲಾಂಬಾ ದೇವತೆ ನೆಲೆಗೊಂಡ ಭೀಮಾತೀರ, (ಕುಳಿಗೇರಿ, ಶಾ. ೧೧೦೫) ಶ್ರೀ ಸ್ವಯಂಭು ಸೋಮೇಶ್ವರ ದೇವರ ಸಂಬಂಧದ ಪಡುವಣ ಶ್ರೀಗಂಗೆ ತೀರ್ಥ (ದಿಗ್ಗಾವಿ ಶಾ. ೧೧೦೮) ಸಂಗಮದ ಹಡುವಣ ಅವಶವಾಡಿಯ ಪೂರ್ವ ಮಾನ್ಯದ ಪ್ರಭುತ್ವ (ಎಮ್ಮಡಗಿ, ೧೧೮೪) ಇದರ ಮೇಲಿನ ಅಲ್ಲಲ್ಲಿ ಹರಿಯುವ, ತೊರೆ ಹಳ್ಳಿಗಳ, ನದಿಗಳ ಪರಿಚಯದ ಜೊತೆಗೆ ಅವುಗಳ ಧಾರ್ಮಿಕ, ಪೌರಾಣಿಕ, ಐತಿಹಾಸಿಕ ಮಹತ್ವವೂ ಸಹ ನಮಗೆ ಗೊತ್ತಾಗುತ್ತದೆ.

---

೦೧. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ–೮೮

೦೨. ತಿಂಥಣಿಯ ಶ್ರೀ ಮೌನೇಶ್ವರರು, ಸುರಪುರ ತಾಲೂಕು, ಯಾದಗಿರಿ ಜಿಲ್ಲೆ

ಶಿಷ್ಟ ಕವಿಗಳಿಗಿಂತ ಉಪೇಕ್ಷಿತರಾಗಿ, ಜನಪದ ಕವಿಗಳಿಂದ ನಿತ್ಯ ಹೊಗಳಿಸಿ ಕೊಳ್ಳುವವರ ಸಾಲಿನಲ್ಲಿ ಶ್ರೀ ಮೌನೇಶ್ವರರು ನಿಲ್ಲುತ್ತಾರೆ.

> ***"ಹುಟ್ಟಿದು ಗೋನಾಳ, ಕುರುಹು, ತೋರಿದ್ದು***
> ***ವರವಿ, ಮೆರೆಯುವದು ಅಂಗನ ಬಂಡಿ***
> ***ಸ್ಥಿರವಾದುದು ತಿಂಥಣಿ"*** ೨




ಶ್ರೀ ಮೌನೇಶ್ವರ ಕುರಿತಾದ ಜನಜನಿತವಾದ ಜನವಾಣಿ ಇದಾಗಿದೆ, ಇದನ್ನು ಜನಪದ ಸುಭಾಷಿತವೆಂದೇ ಹೇಳಬಹುದು. ಸುರಪುರ ಪಟ್ಟಣದ ವಾಯುವ್ಯ ದಿಕ್ಕಿನಲ್ಲಿ ಸುಮಾರು ೧೦ ಕಿ.ಮೀ. ಅಂತರದಲ್ಲಿ (ದೇವರ ಗೋನಾಲ) ಎಂಬ ಚಿಕ್ಕ ಗ್ರಾಮದ ಆರಾಧ್ಯ ದೈವ ಆದಿಲಿಂಗೇಶ್ವರನ ವರಪ್ರಸಾದ-ದಿಂದ ವಿಶ್ವಕರ್ಮ ದಂಪತಿಗಳಾದ ಹಾವಪ್ಪ-ಹಾವಮ್ಮನವರ ಪುಣ್ಯೋದು-ದರದಲ್ಲಿ ಶ್ರೀ ಮೋನಪ್ಪಯ್ಯನವರ ಜನನವಾಯಿತು. ಇವರು ಬಾಲ್ಯತನವನ್ನು ಗೋನಾಲದಲ್ಲಿಯೇ ಕಳೆದಿರಬೇಕು. ಚಿಕ್ಕವನಿದ್ದಾಗ, ಗಾಣಿಗರ ಪರಪ್ಪಶೆಟ್ಟಿಯ ಮನೆಯಲ್ಲಿ

೦೨. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ-೮೮

ಗಾಣ ಹೊಡೆಯುತ್ತಿದ್ದನೆಂಬ ಪ್ರತೀತಿ ಇಂದಿಗೂ ಆ ಗ್ರಾಮದಲ್ಲಿ ಪರಪ್ಪ ಶೆಟ್ಟಿಯ ಮನೆಯಂಗಳದಲ್ಲಿ ಕಲ್ಲಿನ ಗಾಣವೊಂದು ಪೂಜೆಗೊಳ್ಳುತ್ತದೆಂದು ಪ್ರತೀತಿ ಇದೆ.

ಶ್ರೀ ಮೋನಪ್ಪಯ್ಯನ ಸ್ಥಳವೆಂದು ಪಾಳುಬಿದ್ದ ಮನೆ, ಆ ಮನೆಯ ಸದ್ಭಕ್ತ ದಂಪತಿಗಳ ಆರಾಧ್ಯ ದೈವ ಆದಿಲಿಂಗೇಶ್ವರ ದೇವಾಲಯ ಇಂದಿಗೂ "ಆದಿಲಿಂಗೇಶ್ವರ ಗುಡಿ" ಎಂದು ಕರೆಸಿಕೊಳ್ಳುತ್ತಲಿದೆ, ಕಾರಣಿಕ ಪುರುಷನಾಗಿ ಜನಿಸಿದ ಶ್ರೀ ಮೋನಪ್ಪಯ್ಯನವರಿಗೆ ತಮ್ಮ ಬಾಲ್ಯದಲ್ಲಿಯೇ ಕಲ್ಯಾಣ ನಾಡಿನ ವಚನಕಾರರ ಪ್ರಭಾವಳಿಯ ಹಿನ್ನೆಲೆಯು, ಓದಿಗಿಂತ ಸಜ್ಜನ ಸತ್ಸಂಗ ಹಾಗೂ ದೇಶ ಸಮಾಚಾರಗಳ ಕಡೆಗೆ ಒಲವು ಮೂಡಿ ಮಹಾಸಂತನಾಗಿದ್ದಾನೆ. ಇವರ ಕಾಲ ನಿರ್ಣಯ ಕುರಿತು ಇನ್ನೂ ಒಮ್ಮತವಿಲ್ಲ.

"ಏಳುನೂರ ಎಪ್ಪತ್ತೇಳುವರೆ ವರುಷದ
ಊಳಿಗದ ದಿನವೂ ಮುಗಿಯಿತು ಮರ್ತ್ಯಕ
ತಾಳ ಪ್ರಯಾಣ ತಪ್ಪಿ ಉದ್ದ ರಕ್ತ ಹರಿಯುವಂತೆ
ಕಾಲಜ್ಞಾನ ಒದಗಿತು."[೩] – ಹೀಗಿರುವಾಗ ತಾವು ೭೭೭-೧೧ ವರ್ಷ



೦೩. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ-೪೯

ಭೂಮಿಗೆ ಬಂದು ಸೇವೆ ಸಲ್ಲಿಸಿ, ದಿನ ಮುಗಿಯಿತೆಂದು ಹೇಳಿದ್ದರಿಂದ ಅವರು ಅಷ್ಟು ವರ್ಷ ಜೀವಿಸಿರಬಹುದು ಎಂಬ ಊಹೆ ಮಾಡಿರುವುದಾದರೂ ಇದು ವಾಸ್ತವದ ಮಾತಲ್ಲ, ಆದರೆ ಇನ್ನೊಂದು ವಚನದಲ್ಲಿ

"ಕೂಗಿನ ಮಾರಯ್ಯನ ಆಗಮದ ಮಗನಾನು।

ಯೋಗಿ ಜೋಗಿಯ ಮಗನಲ್ಲ ಧರ್ಮದ

ಆಗಮವುಳ್ಳವರ ಮಗನಯ್ಯ ಬಸವಣ್ಣ ॥[೧೪] - ಹೀಗೆ ನುಡಿದ ನುಡಿ ಮುತ್ತು ನೋಡಿದಾಗ, ಇವರು ೧೨ನೇ ಶತಮಾನದವರೆಂದು ಭಾವಿಸಲಾಗುತ್ತದೆ.

ಹಿರೇ ಅಂಕುಶಖಾನ ಸತ್ತಂದಿನ ಮಾತು।

ಎಮ್ಮೆಯೂ ಬಸವಣ್ಣನಾ ತಮ್ಮ ಬಸವಣ್ಣ

ಇಮ್ಮುಡಿ ಡಂಗುರ ಸಾರಬೇಕೆಂದು

ಚನ್ನಬಸವಣ್ಣ ಬಂದೀನಿ ಕಾಣಿರೋ ಬಸವಣ್ಣ ॥[೧೫] - ಈ ವಚನದಲ್ಲಿ ಉಲ್ಲೇಖಿತಗೊಂಡ 'ಎಮ್ಮೆಯ ಬಸವಣ್ಣನ ಕುರಿತಾದ ಶಾಸನವೊಂದು ದೊರತಿದೆ, ಡಾ. ಎಂ.ಎಂ. ಕಲಬುರ್ಗಿಯವರು 'ಶಾಸನಗಳಲ್ಲಿ ಶಿವಶರಣರು, ಎಂಬ ತಮ್ಮ ಗ್ರಂಥದಲ್ಲಿ



೧೪. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ-೭೯

೧೫. ಅದೇ.

ಉಲ್ಲೇಖಿಸಿದ್ದಾರೆ. ಈ ಶಾಸನದ ಕಾಲ ಕ್ರಿ.ಶ. ೧೫೪೩ ಇದೊಂದು ತಾಮ್ರ ಶಾಸನ, ವಿಜಯನಗರದ ಸದಾಶಿವರಾಯನ ಆಳ್ವಿಕೆಯಲ್ಲಿ ಬಾಳಿದ ಎಮ್ಮೆ ಬಸವ, ಹಂಪಿಯ ನೆರೆಯ ಬಂಬುನಾಥ ದೇವರ ಭಕ್ತ ಹುಯ್ಯೋ ಡಂಗುರ ಹಾಕರೋ ಮುಂಡಿಗೆಯು ಕಣಯೂ ಕೇಳಿರೋ ಎಚ್ಚರಿಕೆ ಮುಂತಾದ ವಚನಗಳನ್ನು ರಚಿಸಿದ್ದಾರೆ. ಇಂದು ತಿಂಥಣಿಯು ಮುಮುಕುಗಳಿಗೆ ಪವಿತ್ರ ಹಾಗೂ ಜಾಗೃತ ಸ್ಥಾನವಾಗಿದೆ.

ಪ್ರತಿ ವರ್ಷವೂ ಮಾಘ ಶುಕ್ಲ ಪಕ್ಷದಲ್ಲಿ ದಶಮಿಯಿಂದ ಪೌರ್ಣಿಮೆಯವರಿಗೆ ಮಹೋತ್ಸವ ಜರುಗುತ್ತದೆ. ವಿಶೇಷವಾಗಿ ವೈದಿಕ, ವಿಶ್ವಕರ್ಮ, ವೀರಶೈವ, ಇಸ್ಲಾಂ ಹಾಗೂ ಇನ್ನಿತರ ಸಮಾಜದ ಸದ್ಭಕ್ತರೆಲ್ಲರೂ ಒಂದಾಗಿ, ಸಂತೋಷದಿಂದ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ನದಿಯ ದಡದಲ್ಲಿರುವ ದೇವಾಲಯದ ಬಳಿಯಲ್ಲಿಯೇ ರೂಪಗೊಂಡ ಶ್ರೀ ಮೋನಪ್ಪಯ್ಯನವರು ಇದ್ದಾರೆ ಈ ಮಂದಿರವು ವಿಶಾಲವಾದ ಬಯಲುನ್ನು ಹೊಂದಿದೆ, ಹುಣ್ಣಿಮೆಯ ತಿಂಗಳಿನ ಮುಂಬೆಳಗಿನಲ್ಲಿ ಅಂಗಳದ ತುಂಬೆಲ್ಲಾ ಸ್ವರ್ಗಸದೃಶವಾದ ಜಾತ್ರೆ ನೆರೆಯುತ್ತದೆ ಭಕ್ತ ಕೋಟಿ ಒಕ್ಕೊರಲಿನಿಂದ ಬಂದು ಮಂತ್ರವನ್ನು ಉದ್ಧರಿಸುತ್ತಾರೆ.

ಓಂ ಏಕಲಾಕ ಐಂಸಿ ಹಜಾರ ಪಾಂಚೋಪೀರ

ಪೈಗಂಬರ ಮೌನಧೀನ ।

ಜತಾ ಪೈಗಂಬರ ಮೌನಧೀನ

ಕಾಶೀಪತಿ ಗಂಗಾಧರ ಹರಹರ ಮಹದೇವ ॥ [೬] – ಎಂಬ ಘೋಷಣೆಯ ಭಾಷೆ, ಹಿಂದಿರುವ ಭಾವನೆಗಳನ್ನು ಅರಿತುಕೊಳ್ಳುವುದು ಅವಶ್ಯ, ಹಿಂದೂ–ಮುಸ್ಲಿಂ ಜನಾಂಗದ ಸಾಮರಸ್ಯದ ದ್ಯೋತಕವಾಗಿ ಈ ಸಂದೇಶ ಮೂಡಿ ಬಂದಿದೆ ಎಂದು ಕ್ರಿ.ಶ. ೧೬ನೆ ಶತಮಾನದ ಕೊನೆಯಲ್ಲಿ ಆಳಿದ ಬಿಜಾಪೂರದ ಎರಡನೇಯ ಇಬ್ರಾಹಿಂ ಆದಿಲ್ ಷಾಹಿಗೆ ತನ್ನ ಮಹಿಮೆಯನ್ನು ತೋರಿ, ಆತನಿಂದ ಈ ಬಿರುದು ಪಡೆದು ಹೊಗಳಿಕೆಯ ಘೋಷಣೆಯಾಗಿದೆ ಎಂದು ಪ್ರತೀತ, ಪಾಂಚ್ ಪೈಗಂಬರಾದ (೧) ಆದಮ ಪೈಗಂಬರ (೨) ಇಬ್ರಾಹಿಂ ಪೈಗಂಬರ (೩) ಮೂಸಾ ಪೈಗಂಬರ (೪) ಇಸಾ ಪೈಗಂಬರ (೫) ಮೌನೇಶ್ವರರೇ ಪಾಂಚವ (ಐದನೇ) ಪೈಗಂಬರ ಸಮಾನರೆಂಬ ಅರ್ಥವನ್ನು ಧ್ವನಿಸುತ್ತದೆ.

---

೦೬. ಡಾ. ಅಬ್ದುಲ್ ಕರೀಮ್ ರಾ.ಗಂ. ಕನ್ನೆಕೊಳ್ಳೂರು (ಸಂ.) : ಸಗರನಾಡು ಸಂಸ್ಕೃತಿ ಸಮೀಕ್ಷೆ, ಪುಟ–೯೦



ತಿಂಥಣಿಯ ಶ್ರೀ ಕ್ಷೇತ್ರದಲ್ಲಿ ಸ್ಥಳ ಪುರಾಣಗಳಿವೆ. ಮಂದಿರದ ಎಡಭಾಗದಲ್ಲಿ ಗಂಗಯ್ಯನ ಗದ್ದುಗೆ ಇದೆ. ಈತನು ಶ್ರೀ ಮೋನಪ್ಪಯ್ಯನವರ ಪರಮ ಶಿಷ್ಯ, ಈ ಶಿಷ್ಯನಿಗೆ ಅಂಗೈಯಲ್ಲಿ ಕೈಲಾಸ ತೋರಿಸಿದವನೆಂದು ಅವರು ಕುಳಿತ ಕಟ್ಟಿಗೆ "ಕಟ್ಟೆಗೆ ಕೈಲಾಸ ಕಟ್ಟೆ, ಎಂದೇ ಕರೆಯುತ್ತಾರೆ. ಮೋನಪ್ಪಯ್ಯನ ಗುಡಿಯ ಸಮೀಪ ಈಶಾನ್ಯ ದಿಕ್ಕಿನಲ್ಲಿ ಕೋಣನ ಗವಿಯೊಂದನ್ನು ತೋರಿಸುತ್ತಾರೆ. ಅದರ ಹಿಂಬದಿಯಲ್ಲಿದ್ದ ಗುಡ್ಡದ ನೆತ್ತಿಯ ಮೇಲೆ ಇಂದಿಗೂ ಮುತ್ತುಗಳೂ ಲಭ್ಯವಿವೆ, ಇವು ನೈಸರ್ಗಿಕವಾದವುಗಳಲ್ಲ ಬೇರೆಡೆಯಿಂದ ಆಮದ ಮಾಡಲ್ಪಟ್ಟವುಗಳು ಬಹುಶಃ ಕುಶಲ ಕಲೆಗಾರಿಕೆಯ ಉತ್ಪಾದನಾ ಕೇಂದ್ರ ಆದಾಗಿರಬೇಕು, ಜೊತೆಗೆ ಅಲ್ಲಿ ಸುಟ್ಟ ಕಬ್ಬಿಣದ ಕಿಟ್ಟ ದೊರೆಯುವುದರಿಂದ, ಕಮ್ಮಾರಿಕೆಯ ಕೆಲಸವು ನಡೆದಿರಬೇಕು ಆಂದಿನ ಒಕ್ಕಲುತನದ ಉಪಕರಣ ಹಾಗೂ ಯುದ್ಧದ ಸಾಮಗ್ರಿಗಳನ್ನು ಉತ್ಪಾದಿಸುವ ಸ್ಥಳ ಆಗಿರಬಹುದು.

೦೩. ಕೊಡೇಕಲ್ ಬಸವಣ್ಣ

ಸುರಪುರ ತಾಲೂಕಿನ ಕೊಡೇಕಲ್ ಗ್ರಾಮದಲ್ಲಿ ನೆಲೆನಿಂತ ವೀರಶೈವ ಶರಣ ನೀತಿ, ಜಾತಿ ಮತಗಳನ್ನು ಮೀರಿ ನಿಂತ, ಧೀಮಂತ ಸಂತನಿದ್ದಾನೆ ಕೊಡೇಕಲ್‌ನಲ್ಲಿ

ಈತನ ಸಮಾಧಿಯಿದೆ. ಈತನ ಸಮಾಧಿಯೇ ಇಂದು ಮಠವಾಗಿದೆ. ಹಿಂದು-ಮುಸ್ಲಿಂ ಎರಡೂ ಧರ್ಮದ ಜನತೆಗೆ ಈ ಸ್ಥಾನ ಪ್ರಿಯವಾದುದಾಗಿದೆ. ಧರ್ಮ ಸಮನ್ವಯ ಇಲ್ಲಿ ಸಾಕಾರಗೊಂಡಿದೆ. ಮುಸ್ಲಿಮರು ಈತನಿಗೆ ಮಹಮ್ಮೀಸದಾನರ ಎನ್ನುತ್ತಾರೆ, ಈತನ ಸಮಾಧಿ ಮುಸ್ಲಿಮರ ಘೋರಿಯಂತಿದ್ದು, ಗರ್ಭಗುಡಿಯಲ್ಲಿ ಖುರಾನ್ ಹಾಗೂ ಕಾಲಜ್ಞಾನ ವಚನ ಗ್ರಂಥದ ಕಟ್ಟುಗಳಿವೆ, ಕೊಡೇಕಲ್ ಮಠವು ಭಾವೈಕ್ಯತೆಯ ಜೀವಂತ ಸ್ಮಾರಕವಾಗಿದೆ.

೨.೨. ಊರಿನ ದೇವತೆಗಳು

ಸಗರನಾಡಿನ ಗ್ರಾಮದ ದೇವತೆಗಳು ಪ್ರತಿಯೊಂದು ಊರಲ್ಲಿಯ ಒಂದೊಂದು ದೇವತೆಗಳಿವೆ, ಮನುಷ್ಯನ ಭಾವನೆಗಳು ಅವನ ಭಯದ ಅನಿಸಿಕೆಗಳ ಅಭಿವ್ಯಕ್ತಪಡಿಸಲು ಸಲುವಾಗಿ ಹುಟ್ಟಿಕೊಂಡಿತ್ತು ಎಂದು ಹೇಳಲಾಗಿದೆ. ಅದೇ ರೀತಿ ಭಾಷೆಯು ಮಾನವನ ಬೌದ್ಧಿಕ ಚಿಂತನೆ ಹೆಚ್ಚಾದಂತೆಲ್ಲಾ ಅಭಿವ್ಯಕ್ತಿ ವಲಯವೂ ಸಹ ವಿಸ್ತಾರಗೊಳ್ಳುತ್ತಾ ಬಂದಿದೆ. ಧ್ವನಿಗಳು ಪರದಗಳಾಗಿ, ಪದಗಳು ಗುಚ್ಚಗಳಾಗಿ ಮಾತುಗಳ ಬಳಕೆ ಅರಿವಿಲ್ಲದೆ ಒಂದು ಭಾಷೆಯ ನಿಯಮಕ್ಕೆ ಒಳಪಟ್ಟಿರುತ್ತದೆ.

ಮಾನವ ತಾನು ಕಂಡುಕೊಂಡ ಮರ, ಗಿಡ, ಬಳ್ಳಿ, ಹೂ, ಹಣ್ಣು, ಬೀಜ, ಬೆಟ್ಟ, ಗುಡ್ಡಾ, ಕಾಡು, ನದಿ ಇವಕ್ಕೆಲ್ಲಾ ಒಂದೊಂದು ಗುರುತು ಕೊಟ್ಟು ಕಾಲಾವಧಿಯಲ್ಲಿ ಭಾಷೆಯು ವಾಕ್ಯದ ಹಂತಕ್ಕೆ ಬಂದಿದೆ, ಅಂದರೆ ತನ್ನ ಬದುಕಿನ ಅನಿವಾರ್ಯ ಪರಿಸರದಲ್ಲಿ ತನಗೆ ಸಂಬಂಧಿಸಿದೆಲ್ಲವೂ ಭಾಷೆಯ ಕಕ್ಷೆಯೊಳಗೆ ಸ್ಥಾನ ಪಡೆಯುತ್ತಾನೆ ಮತ್ತು ನಡೆಯುತ್ತಾನೆ, ಭಾಷೆಯು ಜನಿಸುವುದು ಮನುಷ್ಯನ ಅಭಿವ್ಯಕ್ತಿಯ ಒತ್ತಡದಿಂದಲೆ ಆ ಅಭಿವ್ಯಕ್ತಿ ಮುಖ್ಯವಾಗಿ ಆಯಾ ಸ್ಥಳೀಯ ಪ್ರದೇಶದ ಸಾಂಸ್ಕೃತಿಕ ಸಂವೇದನೆಗಳನ್ನು ರೂಪಿಸುವಂತದ್ದೇ ಆಗಿರುತ್ತದೆ, ತಾನು ಕರೆದ ಎಲ್ಲಾ ಬಗೆಯ ಹೆಸರುಗಳ ಅರ್ಥಗಳನ್ನು ಸ್ಪಷ್ಟಪಡಿಸಿಕೊಳ್ಳುವ ಒತ್ತಡದಿಂದ ಭಾಷೆಯಲ್ಲಿ ಸರಾಗ ವ್ಯಾಕ್ಯ ವ್ಯವಸ್ಥೆ ಸಾಧ್ಯವಾಗಿದೆ. ನಾಮ ನಿರ್ದೇಶನದ ಉದ್ದೇಶ ವ್ಯಕ್ತಿಯನ್ನು ಸ್ಥಳವನ್ನು ಸಮೂಹದಲ್ಲಿ ಗುರುತಿಸಿಕೊಳ್ಳುವುದಾಗಿರುತ್ತದೆ, ಗ್ರಾಮ ದೇವತೆಗಳಿಗೆ ಇಡುವ ಹೆಸರುಗಳು ಕೇವಲ ಭಾಷಿಕ ರಚನೆಗಳಾಗಿರುವುದಿಲ್ಲ, ಹೆಸರಿನಲ್ಲಿ ಸಾಂಸ್ಕೃತಿಕ ನಂಬಿಕೆ ಸಂಪ್ರದಾಯದ ಅಂಶವು ಮಿಲಿನವಾಗಿರುತ್ತದೆ, ನಾಮಕರಣಗೊಂಡ ವ್ಯಕ್ತಿ ದೇವರು,

ಸ್ಥಳ ಮತ್ತು ವಸ್ತುವಿನ ವೈಶಿಷ್ಟ್ಯತೆ ಮೊದಲಾದ ಅಂಶಗಳನ್ನು ಹೆಸರು ತನ್ನೊಳಗೆ ಗರ್ಭೀಕರಿಸಿಕೊಂಡಿರುತ್ತದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಈ ಸಗರನಾಡ ಗ್ರಾಮದೇವತೆಯು ಪ್ರಕೃತಿ ಪರಿಸರದ ವೈಶಿಷ್ಟ್ಯತೆಗಳನ್ನು ಆಚರಿಸಿ ಹೆಸರುಗಳನ್ನು ಹೆಚ್ಚಾಗಿ ಗುರುತಿಸಲಾಗುವುದು, ಕುಲ ಕಸಬು, ಜಾತಿ–ಮತ, ಧರ್ಮ ಸಂಪ್ರದಾಯ, ಆಚರಣೆ, ನಂಬಿಕೆಗಳ ಪ್ರಭಾವ ಗ್ರಾಮ ದೇವತೆಗಳ ಮೇಲೆ ಕಾಣಿಸಿಕೊಂಡರೆ ಪ್ರಕೃತಿ ಪರಿಸರ, ಬೆಟ್ಟಗುಡ್ಡ, ಕೆರೆ ಕಟ್ಟೆ, ದಾರಿ, ಕೇರಿ, ಹೊಲ ಕಲ್ಲು ಗದ್ದೆ ತೋಟ, ಹೊಳೆ, ನದಿ, ಗಿಡ, ಮರ, ಕಾಲುವೆಗಳು ಹೆಸರುಗಳು ಪ್ರಭಾವ ಊರಿನ ನಾಮಗಳ ಮೇಲೆ ಕಾಣಿಸಿಕೊಳ್ಳುತ್ತದೆ.

ಗ್ರಾಮ ದೇವತೆಗಳ ಶಿಲ್ಪಗಳ ಹೆಸರು ಕಾಲಾಂತರದಲ್ಲಿ ಕೆಲವು ಕಾರಣಗಳಿಂದಾಗಿ ಬದಲಾವಣೆ ಪಡೆಯುವ ಸಾಧ್ಯತೆಗಳಿವೆ (ಉದಾ:– ಮಾರಮ್ಮ, ಕಟ್ಟಿಣೆ ಮಾತಿನ, ಮಾರಿಕಾಂಬ ದೇವಿ, ದುರ್ಗಮ್ಮ, ದುರ್ಗಾಂಬಿಕೆ ದೇವಿ, ಕಾಳಮ್ಮ, ಕಟ್ಟಿಗೆ ಮೂರ್ತಿ ಕಾಲ ಬದಲಾದಂತೆ ಈಗ ಕಲ್ಲಿನ ಮೂರ್ತಿಯಾಗಿದೆ, ಕಾಳಿಕಾದೇವಿ, ಎಲ್ಲಮ್ಮ ಎಲ್ಲಾಂಬಿಕೆದೇವಿ, ಬನ್ನಮ್ಮ, ಬನಶಂಕರಿದೇವಿ, ಚೌಡಮ್ಮ, ಚೌಡೇಶ್ವರಿ ದೇವಿ, ದಾನಮ್ಮ, ಧಾನೇಶ್ವರಿ ದೇವಿ ಇಗೆ ಊರು ಕೇರಿಗಳ ಹೆಸರುಗಳೂ ಸಹ ಬದಲಾವಣೆ ಹೊಂದುತ್ತವೆ (ಉದಾ: ವಿರಾಟನಾಳ– ಸಿಂಗನಹಳ್ಳಿ, ಮದರಕಿ–ಮದ್ರಿಕಿ, ಗುಲಬರ್ಗಾ–ಕಲಬುರಗಿ, ಯಾತಗಿರಿ–ಯಾದಗಿರಿ, ಸೋರಾಪುರ–ಸುರಪುರ). ಆದರೆ ನದಿ, ಪರ್ವತ, ಹಳ್ಳ, ಕೊಳ್ಳ, ಕಣಿವೆ, ಬೆಟ್ಟಗುಡ್ಡ ಮುಂತಾದವುಗಳು ಹೆಸರುಗಳು ಸಾಮಾನ್ಯವಾಗಿ ಬದಲಾವಣೆ ಹೊಂದಲಾರದೆಂದು ಹೇಳಬಹುದು. ಸಮಾಜ ರಚನೆ ಮತ್ತು ಸಮಾಜ ವ್ಯವಸ್ಥೆಯ ವಿವಿಧ ಆಯಾಮಗಳನ್ನು ತಿಳಿಯಲು ಗ್ರಾಮದೇವತೆಗಳು ಮತ್ತು ಊರಿನ ಹೆಸರುಗಳು ಪೂರಕ ಪರಿಕರಗಳೆಂದು ಪರಿಗಣಿಸಲಾಗುತ್ತದೆ.

ಹಳ್ಳಿ ಅಥವಾ ಗ್ರಾಮದ ಎಲ್ಲಾ ಕೆಳವರ್ಗದ ಅಪೌರಾಣಿಕ ದೇವತೆಗಳೆಲ್ಲವು ಗ್ರಾಮ ದೇವತೆಗಳು ಗ್ರಾಮ ದೇವತೆಯೇ ಆದರೂ ಅದು, ತನ್ನದೇ ವೈಶಿಷ್ಟ್ಯವನ್ನು ಹೊಂದಿರುವ ಊರಿನ ದೇವತೆ ಊರಿನ ಎಲ್ಲಾ ಕೆಳವರ್ಗದ ಗ್ರಾಮ್ಯಿ ದೇವತೆಗಳು, ಊರಿನ ಎಲ್ಲಾ ಜಾತಿ ವರ್ಗಗಳ ಜನರೂ ಸೇರಿ ಅಥವಾ ಇಡೀ ಊರಿಗೆ ಊರೇ ಜನರು ಸೇರಿ ದೇವತೆಯ ಉತ್ಸವ, ಇಲ್ಲವೆ ಜಾತ್ರೆಯಲ್ಲಿ ಒಂದಾಗಿ ಒಂದೇ ರೀತಿಯಲ್ಲಿ

ಭಾಗಿಯಾಗುವುದೋ ಅದು ಆ ಊರಿನ ಗ್ರಾಮ ದೇವತೆ ಎನ್ನುತ್ತಾರೆ. ಏಕೆಂದರೆ ಯಾವುದೇ ಊರಿಗೆ ಇರುವುದು ಒಂದೇ ಒಂದು ಗ್ರಾಮದೇವತೆ ಕೆಲವು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಕೆರಿಗೊಂದು, ಓಣಿಗೊಂದು, ಜಾತಿಗೊಂದು ಕುಲಕ್ಕೆ ಒಂದು ದೇವತೆಗಳಿವೆ. ಆದರೆ ಆ ದೇವತೆಗಳು ಗ್ರಾಮ ದೇವತೆಯಾಗುವುದಿಲ್ಲ ಅವು ಅವರ ಕೇರಿಗೆ ಅಥವಾ ಅವರ ಓಣಿಗೆ ಮತ್ತು ಅವರ ಜಾತಿಗೆ ಸೀಮಿತವಾಗಿರುತ್ತವೆ.

ಆ ದೇವತೆಗಳಿಗೆ ಗ್ರಾಮ ದೇವತೆಯಿಂದು ಕರೆಯುವದಿಲ್ಲ ಕೆಲವು ಗ್ರಾಮಗಳಲ್ಲಿ ಗೋಗಿ (ಕೆ), ಗೋಗಿ (ಪಿ) ಗ್ರಾಮದಲ್ಲಿ ಎರಡೂ ಊರಿಗೆ ಒಂದೇ ಒಂದು ಗ್ರಾಮ ದೇವತೆ ಅದು ಮರೆಮ್ಮದೇವಿ ಈ ದೇವಿ ಜಾತ್ರೆ, ಉತ್ಸವದಲ್ಲಿ ಎರಡೂರು ಜನ ಎಲ್ಲಾ ಜಾತಿ ಜನಾಂಗದವರು ಸೇರಿ ತಮ್ಮ ಭಕ್ತಿ ಸೇವೆ ಸಲ್ಲಿಸುತ್ತಾರೆ. ಪ್ರತಿವರ್ಷ ತಪ್ಪದೇ ಆಚರಣೆ ಮಾಡುತ್ತಾರೆ. ಇದಕ್ಕೆ ಗ್ರಾಮ ದೇವತೆ ಎನ್ನುತ್ತಾರೆ. ಇದೇ ಊರಲ್ಲಿ ಕೆಲವು ದೇವತೆಗಳಿವೆ ಒಂದೊಂದು ದೇವತೆ ಒಂದೊಂದು ಜಾತಿಗೆ ಸೀಮಿತವಾಗಿವೆ, ಒಂದೊಂದು ಓಣಿಗೆ ಸೀಮಿತವಾಗಿವೆ.

ಉದಾ:- ಹುಲಿಗೆಮ್ಮ ದೇವಿ ಈ ದೇವಿ ಉತ್ಸವ ಕೇವಲ ಆ ಜನಾಂಗ ಜನರು ಮಾತ್ರ ಸೇರುತ್ತಾರೆ ಬೇರೆ ಕುಲದವರು ಬೇರೆ ಜಾತಿ ಜನಾಂಗದವರು ಇಲ್ಲಿ ಭಾಗವಹಿಸುವುದಿಲ್ಲ. ಅದು ನಮ್ಮ ದೇವರು ಅಲ್ಲ ಆದ ಕಬ್ಬಲಿಗರು ದೇವರು ಮತ್ತು ತಳವಾರ ಜನಾಂಗ ದೇವರು ಎಂದು ಕರೆಯುತ್ತಾರೆ. ಇನ್ನೊಂದು ದೇವತೆ ಗೋಗಿಯಲ್ಲಿ ಮಾದರ ಜನಾಂಗದ ಓಣಿಯಲ್ಲಿ ಪ್ರತಿವರ್ಷ ದೇವಿ ಉತ್ಸವ ಮಾಡುತ್ತಾರೆ. ಆದರೆ ಅಲ್ಲಿ ಕೇವಲ ಮಾದಿಗರು ಮಾತ್ರ ಆ ದೇವಿಗೆ ಪೂಜೆ ಸಲ್ಲಿಸುತ್ತಾರೆ. ಊರಿನ ಬೇರೆ ಜಾತಿ ಜನಾಂಗದವರು ಅಲ್ಲಿ ಹೋಗುವುದಿಲ್ಲ ಅದು ಅವರ ಜನಾಂಗದ ದೇವರು ಎಂದು ಜನರು ಗುರುತಿಸಿದ್ದಾರೆ. ಇದೇ ಗೋಗಿ (ಪೆಠ) ಗ್ರಾಮದಲ್ಲಿ ಚೌಡಮ್ಮ ದೇವಿ, ಬನಶಂಕರಿ ದೇವಿ ಉತ್ಸವ ಮಾಡುತ್ತಾರೆ. ಈ ದೇವಿ ಭಕ್ತರು ಕೆಲವರ ಸ್ವಾಕಳಿ ಸಮಾಜದ ಜನಾಂಗದವರು ಮಾತ್ರ ದೇವಿ ಭಕ್ತರಾಗಿದ್ದಾರೆ ಬೇರೆ ಜನಾಂಗದವರು ಅಷ್ಟೇನು ಮಹತ್ವ ಕೊಡುವುದಿಲ್ಲ, ಆದರೆ ಗ್ರಾಮ ದೇವತೆ ಎಲ್ಲಾ ಜಾತಿ ಜನಾಂಗದವರು ಊರಿಗೆ ಊರೇ ಸೇರಿ ಮಾಡುವ ದೇವಿ ಕಾರ್ಯವೇ ಉತ್ಸವವೇ ಅದೇ ಗ್ರಾಮ ದೇವತೆ ಎಂದು ಹೇಳಬಹುದು. ಸಗರ ನಾಡಿನ

ಗ್ರಾಮ ದೇವತೆಗಳು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಅನೂಸರಿಸಿ ಕೆಲವರು ಆ ದೇವಿ ಶಾಪಕ್ಕೆ ಗುರಿಯಾಗಿದ್ದಾರೆಂದು ನಮ್ಮ ಕ್ಷೇತ್ರಕಾರ್ಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಗ್ರಾಮ ದೇವತೆಗಳಿಗೆ ಶಾಸ್ತ್ರೋಕ್ತ ದೇವತೆಗಳಿಗಿರುವಷ್ಟು ಮಡಿ ಮೈಲಿಗೆ ಇರುವುದಿಲ್ಲ, ಮತ್ತೆ ಕೆಲವು ದೇವತೆಗಳಿಗೆ ಮನುಷ್ಯನ ಮಾಧ್ಯಮಗಳು ಇವೆ. ತಮ್ಮ ಮಾಧ್ಯಮಗಳ ಮೂಲಕ ಈ ಕಲ್ಲು ದೇವತೆಗಳು ಗ್ರಾಮಸ್ಥರ ಪ್ರಶ್ನೆಗೆ ಉತ್ತರ ಕೊಡುತ್ತವೆ, ಸಂದೇಹ ನಿವಾರಿಸುತ್ತದೆ. ಪರಿಹಾರ ಸೂಚಿಸುತ್ತವೆ.

೨.೩. ಸಗರನಾಡಿನ ವೃಕ್ಷದ ದೇವತೆಗಳು



ಯಾದಗಿರಿ ಜಿಲ್ಲೆಯ ಸಗರನಾಡಿನ ವೃಕ್ಷದ ದೇವತೆಗಳ ಶಿಲ್ಪ ಜನಪದ ಶಿಲ್ಪಗಳು ಬಹಳ ದೈವ ನಿಷ್ಠರು, ತಮ್ಮ ಗ್ರಾಮ ದೇವರುಗಳನ್ನು ಕೇಳದೆ ಯಾವ ಕೆಲಸಕ್ಕೂ ಅವರು ಕೈ ಹಾಕುವುದಿಲ್ಲ. ತಮ್ಮ ಮಕ್ಕಳು ಮರಿಗಳು, ಬೆಳೆ, ಮಳೆ, ಸುಖ-ದುಃಖಗಳಿಗೆ ದೈವದ ಪ್ರೇರಣೆ ಇಲ್ಲದಿದ್ದರೆ ಸುಖವಾಗಿ ಸುಗಮವಾಗಿ ನಡೆಯುವುದಿಲ್ಲ ಎಂದು ಬಲವಾಗಿ ನಂಬಿದವರು. ಜನಪದ ವ್ಯವಸಾಯವನ್ನು ತಮ್ಮ ಜೀವನ ಎಂದು ನಂಬಿರುವುದರಿಂದ ಪ್ರಕೃತಿಯಲ್ಲಿ ಕಂಡು ಬರುವ ಹೊಲ, ಗದ್ದೆ, ಮರ, ಗಿಡ, ಕಟ್ಟೆ, ಕಲ್ಲು, ಹುತ್ತು ಇತರೆ ಎಲ್ಲದರಲ್ಲೂ ದೈವತ್ವದ ಗುಣವನ್ನು ಗುರುತಿಸಿ ಪೂಜಿಸುವರು, ಉದಾಃ- ಬನ್ನಿ ಮರದಲ್ಲಿ ಶನಿದೇವರು, ಬನ್ನಿ ಮಹಾಕಾಳಮ್ಮ ಇರುವುಳೆಂದು

ಪೂಜಿಸುವುದು, ಬೇವಿನ ಮರದಲ್ಲಿ ಮಾರಮ್ಮ ದುರ್ಗಿ ಇರುವಳೆಂದು ಪೂಜಿಸುವರು. ಮನುಷ್ಯರು ನಿಸರ್ಗದ ಒಂದು ಅಂಗ ಅದನ್ನುಳಿದು ಅವನು ಬದುಕುವಂತೆಯೇ ಇಲ್ಲ. ತನ್ನ ಪ್ರತಿಯೊಂದು ವ್ಯವಹಾರವೂ ನಿಸರ್ಗದ ವ್ಯಾಪಾರಗಳೊಂದಿಗೆ ನೇರವಾದ ಸಂಬಂಧ ಹೊಂದಿರುವನೆಂದು ಅವರ ನಂಬಿಕೆ, ನೈಸರ್ಗಿಕ ಹಾನಿಗಳಿಗೆಲ್ಲ ತನ್ನ ಪಾಪಕರ್ಮಗಳೇ ಕಾರಣವೆಂದು ಅಭ್ಯೋದಯಕ್ಕೆ ಅದೃಷ್ಟವೇ ಸೇತುವೆ ಎಂದೂ, ಅವರು ನಂಬುತ್ತಾರೆ. ಕಣ್ಣಿಗೆ ಕಾಣದ ವಿಧಿ ನೈಸರ್ಗಿಕ ವ್ಯಾಪಾರ ಮೂಲಕ ತಮ್ಮ ಅದೃಷ್ಟವನ್ನು ನಿಯಂತ್ರಿಸುತ್ತದೆಂದು ಅವರು ಭಾವಿಸುತ್ತಾರೆ ಅದಕ್ಕೆ ತುಳಸಿ ಗಿಡವನ್ನು ಸುತ್ತುವರಿದರೆ ಆರೋಗ್ಯ ಭಾಗ್ಯ ಲಭಿಸುತ್ತವೆಂದು ಹಿರಿಯರು ಹೇಳುತ್ತಾರೆ ಹೂಗಳು ಪವಿತ್ರತೆಯ ಹಾಗೂ ಸೌಂದರ್ಯದ ಸಂಕೇತಗಳು ಆದ್ದರಿಂದ ಅದನ್ನು ಪೊರಕೆಯಿಂದ ಗುಡಿಸಬಾರದು, ಕಾಲಿನಿಂದ ಮುಟ್ಟುಬಾರದು ಎಂದು ಪೂಜಾರಿಗಳು ಹೇಳುತ್ತಾರೆ ಅದರಂತೆ ನಿಸರ್ಗದ ಒಂದು ಪ್ರಮುಖ ಅಂಗವಾಗಿರುವ ಗಿಡ ಮರಗಳಲ್ಲಿ ಅವುಗಳಲ್ಲಿರುವ ಔಷಧಿ ಗುಣಗಳಿಂದ ದೈವತ್ವದ ಶಕ್ತಿಯನ್ನು ಮನಗಂಡು ತಮ್ಮ ಗ್ರಾಮದೇವಿಯನ್ನು ಪುರದ ಬುಡದಲ್ಲಿ ಸ್ಥಾಪಿಸಿ, ಪೂಜಿಸುವರು ಈ ಗ್ರಾಮ ದೇವತೆಗಳ ಗುಡಿಯು ಸಾಮಾನ್ಯವಾಗಿದೆ, ಊರಿನ ಗುಡಿಯ ಹತ್ತಿರ ಕಟ್ಟಿರುತ್ತಾರೆ, ಇವುಗಳಿಗೆ ಇತರ ದೇವಾಲಯಗಳಲ್ಲಿರುವಂತೆ ಪಾಳಿ, ಗರ್ಭಗುಡಿ ಇರಬೇಕೆಂದು ಯಾವ ನಿಯಮವೂ ಇಲ್ಲ.

ಗ್ರಾಮದೇವಿ ಮೂರ್ತಿಯು ಸರಳ, ಸ್ತ್ರೀ ರೂಪದ ಆಕೃತಿಯಿರಬೇಕೆಂಬ ಯಾವ ನಿಯಮವೂ ಇಲ್ಲ. ಅದೆಷ್ಟೋ ಗುಡಿಗಳಲ್ಲಿ ಯಾವ ಆಕೃತಿಯೂ ಇಲ್ಲದೆ ಅಥವಾ ಇರದೇ ಒಂದು ಕರಿಕಲ್ಲು ಮತ್ತು ಒಂದರ ಮೇಲೊಂದು ಸೇರಿಸಿದ್ದ ಕೆಲವು ಗುಂಡುಕಲ್ಲುಗಳು ಮಾತ್ರ ಇರಬಹುದು, ಕೆಲವೊಮ್ಮೆ ನೆಲದ ಮೇಲೆ ನೆಟ್ಟ ಒಂದು ತ್ರಿಶೂಲ ಅಥವಾ ಕಟ್ಟಿಗೆ ಗ್ರಾಮದೇವತೆಯೆನಿಸಿಕೊಳ್ಳುವುದು. ಕೆಲವು ಗ್ರಾಮ ದೇವತೆಗಳು ಒಂದು ಹುತ್ತ ಅಥವಾ ಮಣ್ಣಿನ ಗದ್ದುಗೆ ಕಲ್ಲಿನ ಮಂಚದ ರೂಪದಲ್ಲಿರಬಹುದು, ಗ್ರಾಮದೇವತೆಗಳಿಗೆ ನಿಯಮಿತವಾಗಿರುವ ಗುಡಿ ಗೋಪುರಗಳಿರಬೇಕೆಂಬ ಕಟ್ಟಳೆಯು ಇಲ್ಲ, ಚನ್ನಾಗಿ ನೆರಳು ಕೊಡುವ ಒಂದೆರಡು ಬೇವಿನಮರ, ಬನ್ನಿಮರಗಳ ಬುಡಕ್ಕೆ ಕುಂಕುಮವಿಟ್ಟು ದೇವತೆಯೆಂದು ಪೂಜಿಸುವರು, ಮತ್ತೆ ಕೆಲವು ಕಡೆ ಪವಿತ್ರವಾದ ಮರಗಳಡಿಯಲ್ಲಿ ಅಮ್ಮನವರ ಕಲ್ಲುಗಳು ಇರುವುದು ಇದೆ. ಕೆಲವೊಮ್ಮೆ ಗ್ರಾಮ ದೇವತೆಗಳು ಗುಡಿಯನ್ನು ಸೂಚಿಸುವುದಕ್ಕೋಸ್ಕರ

ಅಲ್ಲೆ ಹತ್ತಿರದಲ್ಲಿರುವ ಮರವೊಂದು ಮೇಲೆ ಕೆಂಪು ಅಥವಾ ಕೇಸರಿ, ಹಸಿರುವ ಬಣ್ಣದ ಸೀರಿಯನು ಸುತ್ತುತ್ತಾರೆ.

ಸಗರನಾಡಿನ ಶಹಾಪೂರ, ಸುರಪೂರ ಮತ್ತು ಜೇವರ್ಗಿ ತಾಲೂಕಿನಲ್ಲಿ ಕೆಲವು ಕಂಡು ಬರುವ ಮರದ ಬುಡದಲ್ಲಿರುವ ಕಲ್ಲು ದೇವತೆಗಳನ್ನು ಅಧ್ಯಯನ ಮಾಡುವುದಕ್ಕೆ ಅನುಕೂಲ-ವಾಗಲೆಂದು ವೃಕ್ಷದ ದೇವತೆಗಳೆಂದು ವಿಂಗಡಿಸಿಕೊಂಡು ಹಾಗೆ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯಂತೆ ಬನ್ನಿಮಹಾಕಾಳಮ್ಮ, ಬೇವಿನಾಳಮ್ಮ ಇತರೆ ಗ್ರಾಮ ದೇವತೆಗಳನ್ನು ಅವು ಸ್ಥಾಪಿತವಾಗಿರುವ ಮರದ ಪರಿಸರದ ಆಧಾರದ ಮೇಲೆ ಅವುಗಳ ಮೂಲಕ ಗಮನಿಸಿ ಸಂಶೋಧಿಸಲಾಗಿದೆ.

ಉದಾ: ಸುರಪುರ ತಾಲೂಕಿನ ನಗನೂರು ಗ್ರಾಮದಲ್ಲಿ ಚೌಡಮ್ಮ ದೇವಿ ಗುಡಿಯ ಪಕ್ಕದಲ್ಲಿ ಹೊಲದಲ್ಲಿರುವ ಚೌಡಮ್ಮ ದೇವಿ ಪಕ್ಕದಲ್ಲಿ ಒಂದು ಬೇವಿನಮರ ಮತ್ತು ಅರಳಿಗಿಡ ಇವು ಎರಡು ಗಿಡಗಳಿಗೆ ಶಾಸ್ತ್ರೋಕವಾಗಿ ಪುರೋಹಿತರ ಬಂದು ಎರಡಕೂ ಲಗ್ನ ಮಾಡಿದ್ದಾರೆ. ಇದು ಹಿನ್ನಲೆ ಇವುಗಳಿಗೆ ಮದುವೆ ಮಾಡಿಸಿದರೆ ಸರ್ವ ಪಾಪವೂ ನಾಶವಾಗುತ್ತದೆಂದು ಇತಿಹಾಸ ತಜ್ಞರು ಹೇಳುತ್ತಾರೆ ಮತ್ತು ಬುದ್ಧಿ ಶಕ್ತಿ ಹೆಚ್ಚಾಗುತ್ತದೆ. ಕೆಲವೊಂದು ಕೆಲಸಗಳು ಆಗದೆ ಇದ್ದರೆ ಈ ಎರಡೂ ಗಿಡಗಳನ್ನು ಐದು ಸುತ್ತು ಸುತ್ತಿದ್ದರೆ ಆ ಕೆಲಸಗಳನ್ನು ಬೇಗನೆ ಆಗುತ್ತದೆಂದು ಹಿರಿಯರು ಹೇಳುತ್ತಾರೆ. ಬೇವಿನ ಗಿಡ ಮತ್ತು ಅರಳಿಗಿಡ ಕೂಡಿದ್ದ ಬಹಳ ವಿರಳ ಇದು ಪುಣ್ಯ ಪುರುಷರ ನೆಲ ಈ ಮಣ್ಣಲ್ಲಿ ಎರಡು ಕೂಡಿವೆ. ಪವಿತ್ರ ಸ್ಥಳವಾಗುತ್ತದೆಂದು ಪಂಡಿತರು ಹೇಳುತ್ತಾರೆ ಇಲ್ಲಿ ಈ ಗಿಡದ ಬಡ್ಡಿಗೆ ಕೆಂಪು ಬಟ್ಟೆ ಸುತ್ತಿದ್ದಾರೆ ಅದಕ್ಕೆ ಪ್ರತಿ ಅಮವಾಸೆ ಮತ್ತು ಹುಣ್ಣಿಮೆ ದಿನ ದೂಪ, ದೀಪ ಹಚ್ಚಿ ಕೈ ಮುಗಿಯುತ್ತಾರೆ.

೨.೩.೧. ಶಹಾಪೂರ ತಾಲೂಕಿನ ಗ್ರಾಮದೇವತೆಗಳು

೦೧. ಕೊಳ್ಳೂರು (ಎಮ್) ಗ್ರಾಮ ದೇವತೆಯಾದ ಶ್ರೀ ದ್ಯಾವಮ್ಮ ದೇವಿ, ಶಾಹಪೂರ ತಾಲೂಕು

ಶಹಾಪೂರ ತಾಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೩೦ ಕಿ.ಮಿ ದೂರದಲ್ಲಿ ಹತ್ತಿಗೂಡೂರು ದಾಬಾ ಕ್ರಾಸ್ ಮಾರ್ಗವಾಗಿ, ಸಾವೂರು, ಬೀರನೂರದಿಂದ,

ಕೊಳ್ಳೂರು(ಎಮ್), ಗ್ರಾಮ ಇದ್ದು ದೇವದುರ್ಗಾ ರಾಯಚೂರು ಮತ್ತು ಕಲಬುರಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಈ ಗ್ರಾಮವು ಅತ್ಯಂತ ಪ್ರಸಿದ್ಧ ಹೊಂದಿದ ಗ್ರಾಮವಾಗಿದೆ. ಈ ಕೊಳ್ಳೂರು ಎಮ್. ಒಂದು ಮೂಲೆಯಲ್ಲಿ ಇರುವ ಗ್ರಾಮ. ಆದರೆ ಈ ಗ್ರಾಮವು ವಿಶ್ವವಿಖ್ಯಾತಿ ಹೊಂದಿದ ಗ್ರಾಮವಾಗಿದೆ.



ಈ ಗ್ರಾಮದಲ್ಲಿ ಕೊಹಿನೂರು ವಜ್ರ ಸಿಕ್ಕಿರುವುದು ಇಡೀ ದೇಶದಲ್ಲೆ ಹೆಸರು ಪಡೆದ ಗ್ರಾಮವಾಗಿದೆ. ಈ ಊರಿನ ವಜ್ರವು ಈಗ ಇಂಗ್ಲೆಂಡಿನ ಅರಮನೆಯಲ್ಲಿದೆ.ಕೊಯಿನೂರು ವಜ್ರ ಈ ಗ್ರಾಮದಲ್ಲೆ ಸಿಕ್ಕಿರುವುದು ಮತ್ತು ಇಲ್ಲಿ ಇನ್ನೂ ವಜ್ರ ಸಿಗುವ ನಿರೀಕ್ಷೆ ಇದೆ. ಈ ಊರಿನ ಗ್ರಾಮ ದೇವತೆಯಾದ ಶ್ರೀ ದ್ಯಾವಮ್ಮ ದೇವಿ ಹೆಸರು ಯಾವ ಪುರಾಣದಲ್ಲಿಯೂ ಬರುವುದಿಲ್ಲ. ಹೀಗಾಗಿ ಈ ದೇವತೆ ಅಚ್ಚ ಜಾನಪದ ದೇವತೆ, ಶಕ್ತಿಯ ಅವತಾರವಾದ, ಈ ದೇವತೆ ಬಹಳ ಕಡೆ ಊರ ದೇವತೆಯೆನಿಸಿದ್ದಾಳೆ. ಮಳೆ ಬರದಿದ್ದರೆ, ಊರಿನ ದನಕರುಗಳಿಗೆ ಬೆಳೆಗಳಿಗೆ ರೋಗ ರುಜಿನಗಳು ಬಂದರೆ, ಮೈಲಿ, ಕಾಲರಾ, ಪ್ಲೇಗು ಮುಂತಾದ ರೋಗಗಳು ಊರನ್ನು ಆವರಿಸಿದರೆ ಆಗ ಈ ದೇವತೆ ಕೋಪಗೊಂಡಿರ-ಬಹುದೆಂದು ತಿಳಿದು, ವಾರ ಮಾಡುವುದು ದೀಪ ಹಾಕುವುದು, ಮುಂತಾದ ಸಂಪ್ರಾದಾಯಗಳನ್ನು ಮಾಡುತ್ತಾರೆ.

ಆ ದೇವತೆ ಶಾಂತಿಗಾಗಿ ಏನೆಲ್ಲ ವ್ರತ ನಿಯಮಗಳನ್ನು ಪಾಲಿಸುತ್ತಾರೆ. ಬಿತ್ತುವಾಗ

ಈ ದೇವತೆಗೆ ಉಡಿ ತುಂಬಿಯೇ ಮುಂದಿನ ಕೆಲಸ ಪ್ರಾರಂಭ ಮಾಡುತ್ತಾರೆ. ಜಾತ್ರೆಯಲ್ಲಿ ಕೋಣ, ಕುರಿ, ಕೋಳಿಗಳನ್ನು ಕೊಟ್ಟು ದೇವಿಯನ್ನು ಶಾಂತವಾಗುವಂತೆ ಜನ ದೇವತೆಗೆ ಬೇಡಿಕೊಳ್ಳುತ್ತಾರೆ. ಪೂಜೆ ನೈವೆದ್ಯ ಮುಂತಾದ ಸಂಪ್ರದಾಯಗಳನ್ನು ಭಕ್ತರು ದೇವಿಗೆ ಬೇಡಿಕೊಳ್ಳುತ್ತಾರೆ. ಆಗ ದೇವಿ ಶಾಂತಳಾದ ಮೇಲೆ ಮಳೆ, ಬೆಳೆ ರೈತರಿಗೆ ಆದಾಯ ಬಂದ ಮೇಲೆ ದೇವಿಗೆ, ಜಾತ್ರಿ-ಉತ್ಸವ, ಸಂಪ್ರದಾಯ, ಹಾಡುವುದು ಕುಣಿಯುವುದು ಸಗರನಾಡಿನ ಜನ ತಮ್ಮದೇ ಆದ ಜಾನಪದ ಶೈಲಿಯಲ್ಲಿ ಹಾಡನ್ನು ವರ್ಣಿಸಿ ಹಾಡಿ ತೃಪ್ತಿಪಡುತ್ತಾರೆ.



ಶ್ರೀ ದ್ಯಾವಮ್ಮ ದೇವಿ ಮೂರ್ತಿ-ಯು ಕಟ್ಟಿಗೆಯಿಂದ ಶಿಲ್ಪಿ ಕೈಯಿಂದ ಕೆತ್ತನೆ ಮಾಡಿದ್ದಾನೆ. ದೇವಿಯು ಸಿಂಹದ ಮೇಲೆ ಕುಳಿತಿರುವ ಕೈಯಲ್ಲಿ ಖಡ್ಗ ಹಿಡಿದು ಕುಳಿತಿರುವ ದೇವಿಯು ಹಿಂದುಗಡೆ ನಾಗರಹಾವು (ಆದಿಶೇಷ) ಇದನ್ನು ಕಟ್ಟಿಯಲ್ಲಿ ಕೆತ್ತನೆ ಮಾಡಿದ್ದಾರೆ. ದೇವಿ ಹಿಂದುಗಡೆ ಪ್ರಭಾವಳಿ ಇದನ್ನು ಕಟ್ಟಿಯಲ್ಲಿ ಬಹಳ ಸುಂದರವಾಗಿ ಕಾಣುವಂತೆ ಕಲಾವಿದನು ರಚನೆ ಮಾಡಿದ್ದಾನೆ. ಸಿಂಹದ ಮೇಲೆ ಕುಳಿತು ದೇವಿ ರಾಕ್ಷಸನ ಸಂಹಾರ ಮಾಡಿದಾಗೆ ಕಾಣುತ್ತಾಳೆ. ಎಲ್ಲಾವು ಕಟ್ಟಿಗೆಯ ಶಿಲ್ಪಿಯ ಅತ್ಯಂತ ಸುಂದರವಾಗಿ ಕಾಣುವಂತೆ ದೇವಿ ಎಂಟು ಕೈಗಳಿಂದ ಅವತಾರವೆತ್ತ ದೇವಿ ಒಂದು ಕೈಯಲ್ಲಿ ಖಡ್ಗ ಆ ಖಡ್ಗಕ್ಕೆ ಹಸಿರು ಬಳೆಗಳು ಹಾಕಿದ್ದಾರೆ ಇನ್ನೊಂದು ಕೈಯಲ್ಲಿ ತ್ರಿಶೂಲ ಮತ್ತೊಂದು ಕೈಯಲ್ಲಿ ಭರ್ಚಿ ಇಗೇ ಒಂದೊಂದು ಕೈಯಲ್ಲಿ ಒಂದು ಆಯುದ ಇಡಿದುಕೊಂಡು ಕುಳಿತಿರುವದೇವಿ ಸಿಂಹದ ಮೇಲೆ ಕುಳಿತು ಭಕ್ತರಿಗೆ ಆಶೀರ್ವಾದ ಮಾಡುತ್ತಾಳೆ ದೇವಿ ಹಿಂದುಗಡೆ ತಲೆಯ ಮೇಲೆ ಬಟ್ಟೆಯಿಂದ ಮಾಡಿದ ಕೋಡೆ ಇದೆ. ಆ ಕೋಡೆಗೆ ಬಣ್ಣ ಬಣ್ಣದ ಜೂಲಿ ಹಚ್ಚಿದ್ದು ಸಿಂಪಗೇರ ಕಲಾವಿದನ ಕಲೆಯನ್ನು ನೋಡುವಂತದು.

ದೇವಿ ಹಿಂದುಗಡೆ ೫ ಅಡಿ ಎತ್ತರದ ನಾಗರಹಾವು (ಆದಿಶೇಷ) ಹೆಡೆ ಎತ್ತಿ ನಿಂತಿರುವ ದೃಶ್ಯ ಕಾಣಬಹುದು ಅದು ಕಟ್ಟಿಗೆಯಲ್ಲಿ ರಚನೆಮಾಡಿದ್ದಾರೆ.

ದೇವಿ ಹಿಂದುಗಡೆ ಕಟ್ಟಿಗೆಯಿಂದ ಮಾಡಿದ ಪ್ರಭಾವಳಿ ಇದು ಕೂಡ ದೇವಿಗೆ ತಕ್ಕಂತೆ ಸುಂದರವಾಗಿ ಹೊಯ್ಸಳ ಶೈಲಿಯಿಂದ ಕೂಡಿದೆ ಪ್ರಭಾವಳಿ ಮೇಲೆ ಕೀರ್ತಿ ಮುಖ ಇದೆ. ಇದು ನೋಡುಗರಿಗೆ ಭಯ ಭಕ್ತಿ ಶ್ರದ್ಧೆ ನಂಬಿಕೆ ಮೂಡುತ್ತದೆ. ದೇವಿಯು ಪೂರ್ವ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದಾಳೆ. ದೇವಿಯ ಗುಡಿಯು ಹಳೆಯದಾಗಿದೆ ಗುಡಿಯ ಸುತ್ತಾ ಜಾಗದ ಕೊರತೆ ಇದೆ. ದೇವಿ ಗುಡಿಯ ಮುಂದೆ ಆಮೆ ಇದೆ. ಈ ಆಮೆಯನ್ನು ಖ್ಯಾತ ಶಿಲ್ಪ ಕಲಾವಿದರಾದ ಶ್ರೀಸುರೇಂದ್ರ ಕೆ. ವಿಶ್ವಕರ್ಮ ಸರ್ ಕೆತ್ತನೆ ಮಾಡಿದ್ದಾರೆ. ನೋಡಿದರೆ ಆಮೆ ಈಗ ಮುಂದೆ ಹೋಗುತ್ತಿದೆ ಎಂದು ಕಾಣುತ್ತಿದೆ ಆಮೆ ತಲೆ ಎತ್ತಿ ಮುಂದೆ ಸಾಗುವ ಛಲನ ಭಾವನೆ ಕಾಣುತ್ತದೆ. ಶಿಲ್ಪಿಯ ತನ್ನ ಕೈ ಚಳಕದಿಂದ ಆಕರ್ಷಿಸುವಂತೆ ರಚನೆ ಮಾಡಿದ್ದಾರೆ. ಈ ಆಮೆಯನ್ನು ನೋಡಿದರೆ ಎಂತಹವರಿಗೂ ಭಕ್ತಿ ಮೂಡುತ್ತದೆ.



ಈ ಆಮೆಯ ೧ ಅಡಿ ಉದ್ದ ½ ಅಡಿ ಎತ್ತರ ಕಲ್ಲಿನಲ್ಲಿ ಕೆತ್ತನೆ ಮಾಡಿದ್ದಾರೆ. ಈ ಆಮೆಗೆ ಭಕ್ತರು ಮೊದಲು ನಮಸ್ಕಾರ ಮಾಡಿ ನಂತರ ದೇವಿಗೆ ಕೈಮುಗಿದು ಬೇಡಿಕೊಳ್ಳುತ್ತಾರೆ. ಗುಡಿಯ ಮುಂದೆ ಬಂದು ೩ಅಡಿಎತ್ತರದ ಕಲ್ಲು ನಡ ಹಾಕಿದ್ದಾರೆ.

ಭಕ್ತರು ಆ ಕಲ್ಲಿಗೆ ಹಾಲು, ಎಣ್ಣೆ, ಸಕ್ಕರೆ, ಹಾಕುತ್ತಾರೆ. ಈ ಕಲ್ಲಿಗೆ ಮಾಲಗಂಭ ಎನ್ನುತ್ತಾರೆ. ಈ ಮಾಲಗಂಭ ಪ್ರತಿಯೊಂದು ಗುಡಿಯ ಮುಂದೆ ಇರುತ್ತದೆ. ದೇವಿಯ ಗುಡಿಯ ಎದುರು ಬಡೇಗರ ಅಡಿಕಟ್ಟೆ ಇದೆ. ಈ ಅಡಿ ಕಟ್ಟೆಯಲ್ಲಿ ಬಡೆಗೇರ ತಮ್ಮ ಕಲಾವೃತ್ತಿಯನ್ನು ಮಾಡುತ್ತಾರೆ. ಈ ಗುಡಿಯ ಎದುರಿಗೆ ಒಂದು ಬನ್ನಿಗಿಡ ಇದೆ. ಈ ಗಿಡಕ್ಕೆ ಭಕ್ತರು ಪೂಜೆ ಮಾಡುತ್ತಾರೆ. ದೇವಿ ಗುಡಿಯ ಹಿಂದುಗಡೆ ಏಳು ಮಕ್ಕಳ ತಾಯಮ್ಮ ಗುಡಿ ಇತ್ತು ಎಂದು ಶಿಕ್ಷಕರು ಹೇಳಿದ್ದಾರೆ. ಶಿಕ್ಷಕರಾದ ಶ್ರೀ ದೇವಿಂದ್ರಪ್ಪ ವಿಶ್ವಕರ್ಮ ಪೂರ್ಣ ಊರಿನ ಮಾಹಿತಿ ಸವಿ ವಿಸ್ತರವಾಗಿ ಹೇಳಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ಊರಿನ ಇತಿಹಾಸ ಹೇಳುವವರು ಹಳ್ಳಿಯಲ್ಲಿ ಬಹಳ ಕಡಿಮೆ. ನನ್ನ ಪುಣ್ಯ ಶ್ರೀ ದೇವಿಂದ್ರಪ್ಪ ತಂದೆ ಕಾಳಪ್ಪ, ವಿಶ್ವಕರ್ಮ ಶಿಕ್ಷಕರು ರಜೆಯ ಮೇಲೆ ಊರಿಗೆ ಬಂದಿದ್ದರು. ಆ ಸಮಯ ನಾನು ಆ ಊರಿಗೆ ಹೋಗಿ ಸರ್ ಭೇಟಿಯಾಗಿ ಶಿಲ್ಪದ ವಿವರ ಆಚರಣೆ ವಿವರ ಎಲ್ಲಾ ಮಾಹಿತಿಯನ್ನು ತಮ್ಮ ಬಾಲ್ಯ ಜೀವನದ ನೆನಪುಗಳನ್ನು ಸುಮಾರು ೨ ಗಂಟೆಗಳ ಕಾಲ ನನ್ನೊಂದಿಗೆ ಹಂಚಿಕೊಂಡಿದ್ದಾರೆ.

ಶ್ರೀ ದ್ಯಾವಮ್ಮ ದೇವಿ ಆಚರಣೆ : ಶ್ರೀ ದ್ಯಾವಮ್ಮ ದೇವಿ ಆಚರಣೆಯನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಹಾಗೂ ೫ ವರ್ಷಕ್ಕೊಮ್ಮೆ ದೇವಿ ಉತ್ಸವ ನಡೆಯುತ್ತದೆ. ದೇವಿ ಉತ್ಸವು ಪಲ್ಲಕ್ಕಿಯನ್ನು ಸಮೀಪದ ಕೃಷ್ಣ ನದಿಗೆ ಹೋಗಿ ಗಂಗಾಸ್ನಾನ ಮಾಡಿ ಡೊಳ್ಳು ಹಲಗೆ ಬಾಜಿ ಭಜಂತ್ರಿಯೊಂಗೆ ಹಿರಿಯರು ಪೂಜಾರಿಗಳು ಯುವಕರು ಭಕ್ತರು ಸೇರಿ ದೇವಿ ಉತ್ಸವ ಅತಿ ವಿಜೃಂಬಣೆಯಿಂದ ಆಚರಣೆ ಮಾಡುತ್ತಾರೆ. ದೇವಿ ಅರ್ಚಕರು ಪದ್ದತಿಯಂತೆ ಪಲ್ಲಕ್ಕಿಗೆ ಪೂಜೆ ಸಲ್ಲಿಸಿ ಮೆರವಣಿಗೆಯಲ್ಲಿ ಬಂದು ಗುಡಿಯ ಹತ್ತಿರ ದೇವಿ ಕಟ್ಟಿ ಇದೆ. ಈ ಕಟ್ಟಿಯಲ್ಲಿ ಪಲ್ಲಕ್ಕಿ ಇಟ್ಟು ದೇವಿ ಕೂಡಿಸುತ್ತಾರೆ. ಊರಿನ ಎಲ್ಲಾ ಜನಾಂಗದವರು ಬಂದು ದೇವಿಗೆ ಭಕ್ತಿಯಿಂದ ಬೇಡಿಕೊಂಡು ತಮ್ಮ ಇಷ್ಟದ ಆಸೆ ಇಡೇರಿಸು ತಾಯಿ ಎಂದು ಬೇಡಿಕೊಳ್ಳುತ್ತಾರೆ. ಈ ಊರಿನ ಗ್ರಾಮ ದೇವತೆಯಾದ ಶ್ರೀದ್ಯಾವಮ್ಮ ದೇವಿ ಉತ್ಸವವು ಜನ ಸಾಗರವೇ ಸೇರುತ್ತಾರೆ. ದೇವಿ ಕಟ್ಟೆ ಎದುರು ಮುಸ್ಲಿಂ ದೇವರಾದ ಮೊಹರಂ ದೇವರು ಕುಡುತ್ತವೆ. ಇಲ್ಲಿ ಹಿಂದು ಮುಸ್ಲಿಂ (ಅಲ್ಲಾಯಿ ದೇವರು) ಎಲ್ಲಾರು ಒಂದೇ ಎಂದು ಮುಸ್ಲಿಂರ ಕ್ಕಿಂತ ಹೆಚ್ಚಾಗಿ ಹಿಂದೂಗಳೆ ಜಾಸ್ತಿ ಭಕ್ತರು ಇರುತ್ತಾರೆ. ಎಲ್ಲಾರು ಭಕ್ತಿ ಶ್ರದ್ದೆಯಿಂದ ಮೊಹರಂ ಆಚರಣೆ ಮಾಡುತ್ತಾರೆ.

೦೨. ಶ್ರೀ ಆಂಜನೇಯ ಸ್ವಾಮಿ, ಕೊಳ್ಳೂರು ಗ್ರಾಮ

ಇದೇ ಗ್ರಾಮದಲ್ಲಿ ಭವ್ಯವಾಗಿ ನಿರ್ಮಿಸಿದ ಆಂಜನೇಯ ಸ್ವಾಮಿ ಗುಡಿಯ ಬಹಳ ಸುಂದರವಾಗಿ ಗೋಪುರ ಗುಡಿಯ ಒಳ ಅಂಕಣ ಒಳ ಅಂಕಣದಲ್ಲಿ ೪ ಕಟ್ಟಿಗೆ ಕಂಬಗಳು ಆ ಕಂಬಕ್ಕೆ ಕಾಯಿ ಗಡಿಗೆ ಹೂ ನಕ್ಷಾ ಚಿತ್ರ ಬಹಳ ಸುಂದರವಾಗಿ ಶಿಲ್ಪಿಯ ನೋಡಗರಿಗೆ ದೃಷ್ಟಿ ತಾಕುವಂತೆ ರಚನೆ ಮಾಡಿದ್ದಾನೆ. ಶ್ರೀ ಮಾರುತ್ತೇಶ್ವರ ಗುಡಿಯ ಕಲ್ಲುಗಳಿಂದ ಕಟ್ಟಿದ್ದು ಮೂರ್ತಿ ಕಲ್ಲಿನಲ್ಲಿ ಕೆತ್ತನೆ ಮಾಡಿದ್ದಾರೆ. ಗುಡಿಯು ೫ ಅಡಿಎತ್ತರ ಒಳ ಅಂಕಣ ಬಹಳ ವಿಶಾಲವಾಗಿದೆ. ಗುಡಿಯ ಎದುರಿಗೆ ೧೦ ಅಡಿ ಎತ್ತರ ೧ ಮಾಲ ಗಂಭವಿದೆ. ಆ ಕಂಬದಲ್ಲಿ ಭಕ್ತರ ದೀಪ ಹಚ್ಚುತ್ತಾರೆ. ಶ್ರೀ ಆಂಜನೇಯ ಮೂರ್ತಿ ಸುಂದರವಾಗಿ ಕೆತ್ತನೆ ಮಾಡಿದ್ದಾನೆ. ಆ ಮೂರ್ತಿಗೆ ಬಣ್ಣದಿಂದ ಆಕರ್ಷಕವಾಗುವಂತೆ ಬಣ್ಣ ಲೇಪನೆ ಮಾಡಿದ್ದಾರೆ. ಈ ಮೂರ್ತಿ ಎದುರಿಗೆ ಆಧಿಶೇಷನ ಮೂರ್ತಿಗಳಿವೆ. ಬಲಗಡೆ ಗಂಡು ಗಲಿಗಳ ಎತ್ತುವ ಭಾರದ ಸಂಗ್ರಾಮ ಕಲ್ಲು ಇವೆ. ಗೋಲಾಕಾರದ ಕಲ್ಲು ಯುವಕರು ತಮ್ಮ ಶಕ್ತಿ ಸಾಮರ್ಥ್ಯ ತೋರಿಸಲು ಈ ಕಲ್ಲುಗಳು ಎತ್ತಿ ತೋರಿಸುತ್ತಾರೆ.

೦೩. ಶ್ರೀ ಮೈಲಾರಲಿಂಗೇಶ್ವರ, ಕೊಳ್ಳೂರು ಗ್ರಾಮ



ಕೊಳ್ಳೂರು ಗ್ರಾಮದಲ್ಲಿ ಶ್ರೀಮೈಲಾರ ಲಿಂಗೇಶ್ವರ ದೇವರ ಜಾತ್ರೆಯ ಪ್ರತಿ ವರ್ಷ ವಿಜಯದಶಮಿ ದಿನ ಸರಪುಳಿ ಅರಿಯುವುದು ಕಾರ್ಯ ನಡೆಯುತ್ತದೆ. ಈ ಊರಲ್ಲಿ ವಿಶೇಷವಾಗಿದೆ. ನಮ್ಮ ಸಗರ ನಾಡಿನ ಪರಂಪರೆಯಲ್ಲಿ ಈ ಊರ ಒಂದು ಯಾದಗೀರ ಜಿಲ್ಲೆ ಮೈಲಾಪೂರ ಶ್ರೀ ಮೈಲಾರಲಿಂಗೇಶ್ವರ ಜಾತ್ರೆ ಬಹಳ ವಿಜ್ರಮಣೆಯಿಂದ ಆಗುವುದು. ನಾವು ಕಣ್ಣಾರೆ ಕಂಡಿದ್ದೇವೆ ಅಲ್ಲಿ ಭಂಡಾರ ಬಂಡಿಯೆ ತುಂಬಿಕೊಂಡು ಬಂದಿರುತ್ತಾರೆ. ಪಲ್ಲಕ್ಕಿ

ಬರುತ್ತಿದಂತೆ ಭಂಡಾರ ಇಡೀ ಪಲ್ಲಕ್ಕಿ ಹಾಗೂ ಪಲ್ಲಕ್ಕಿ ಹೊತ್ತ ಭಕ್ತರು ಕೂಡ ಮೈ ತುಂಬಾ, ಮುಖದ ತುಂಬಾ ಭಂಡಾರ ಬಿದ್ದಿರುತ್ತದೆ.



ಅದೇ ರೀತಿಯಾಗಿ ಇಲ್ಲಿ ಶ್ರೀ ಮೈಲಾರಲಿಂಗೇಶ್ವರ ಪದ್ದತಿಯಂತೆ ಭಂಡಾರ ಉಗ್ಗುವುದು, ಹಚ್ಚುವುದು, ಸರಪುಳಿ ಅರಿಯುವುದು. ಇಲ್ಲಿಯ ಭಕ್ತರು ಕುತೂಹಲ ಮೂಡಿಸುತ್ತದೆ. ಶ್ರೀಆಂಜನೇಯ ಗುಡಿಯ ಮುಂದೆ ಸರಪುಳಿ ಹರಿಯುವ ಪದ್ದತಿ ಇದೆ. ಪೂಜಾರಿ ಬಂದು ಕಾಯಿ ಕರಪೂರ ಬೆಳಗಿ ಕಂಬಕ್ಕೆ ಕಟ್ಟಿರುವ ದಪ್ಪನ ಕಬ್ಬಿಣದ ಸರಪೂಳಿ ಅದಕ್ಕೆ ಭಂಡಾರ ಅಚ್ಚಿ ಜೈ ಮೈಲಾರಲಿಂಗೇಶ್ವರ ಎಂದು ಜೇಗ್ಗಿದ್ದರೆ ಒಂದೇ ಒಂದು ಜಟ್ಟಿಗೆ ಆ ದಪ್ಪನ ಸರಪೂಳಿ ಅರಿಯುತ್ತದೆ. ಸರಪುಳಿ ಅರಿದ ತಕ್ಷಣವೆ ಭಕ್ತ ಸಮೂಹ ಜೈಕಾರ ಮುಗಿಲು ಮುಟ್ಟುವಂತೆ ಹೇಳುತ್ತಾರೆ ಮತ್ತು ಕೂಗುತ್ತಾರೆ ನಂತರ ಮೈಲಾರಲಿಂಗೇಶ್ವರ ಗುಡಿಯಲ್ಲಿ ಮೈಲಾರಲಿಂಗೇಶ್ವರ ಮೂಲ ಅರ್ಚಕರು ಪದ್ದತಿಯಂತೆ ಪೂಜೆ ಸಲ್ಲಿಸುತ್ತಾರೆ.

೦೩. ಶಹಾಪೂರ ನಗರದ ದ್ಯಾವಮ್ಮ ದೇವಿ

ಶಹಾಪೂರು ಹಳೆ ಬಸ್ ನಿಲ್ದಾಣದ ಎದುರಿಗೆ ಸಿ.ಪಿ.ಎಸ್. ಶಾಲಾ ಮೈದಾನವಿದ್ದು

ನೈರುತ್ಯ ದಿಕ್ಕಿಗೆ ಹೋದರೆ ಅಲ್ಲೆ ದೊಡ್ಡ ಆಲದಮರ, ಬೇವಿನ ಮರ, ಅರಳಿ ಮರ, ಇವುಗಳ ನೆರಳಲ್ಲಿ ತಂಪಾದ ಸ್ಥಳದಲ್ಲಿ ಶ್ರೀದ್ಯಾವಮ್ಮ ದೇವಿ ದೇವಸ್ಥಾನವಿದೆ. ಈ ಗುಡಿಯು ಉತ್ತರ ದಿಕ್ಕಿಗೆ ಮುಖವಾಗಿದ್ದು ಇದು ಬಹಳ ಹಳೆ ಗುಡಿ, ಮಣ್ಣು ಕಲ್ಲುಗಳಿಂದ ಕಟ್ಟಿದ ಗುಡಿ ಈಗ ಗುಡಿಯ ಹೊರ ಅಂಕಣ ೪ ಕಾಲಂದಿಂದ ಸಿಮೆಂಟ್ ಮತ್ತು ಕಬ್ಬಿಣದಿಂದ ಕಂಬಗಳನ್ನು ಮಾಡಿ ಹೊರ ಅಂಕಣ ೩೦ x ೪೦ ಅಡಿ ವಿಶಾಲವಾಗಿರುವ ಸ್ಥಳದಲ್ಲಿ ಗುಡಿಯ ಭಕ್ತರು ಮತ್ತು ಸಮಿತಿಯವರು ಶ್ರೀದ್ಯಾವಮ್ಮ ದೇವಿಯ ಎಡೆಗಡೆ ದೊಡ್ಡ ಅರಳಿಗಿಡ ಇದ್ದು ಈ ಗಿಡ ಪಕ್ಕದಲ್ಲಿ ನವವಿಗ್ರಹಗಳನ್ನು ಸ್ಥಾಪಿಸಿದ್ದಾರೆ. ಈ ಗಿಡಕ್ಕೆ ಭಕ್ತರು ತಮ್ಮ ಇಷ್ಟದ ಆಸೆ ಈಡೇರಲೆಂದು ಕೆಂಪು ಸೀರೆ, ಬಿಳಿದಾರ, ಕೆಂಪು ಕುಪ್ಪಸ, ತೆಂಗಿನಕಾಯಿ ನಿಂಬೆಕಾಯಿ, ಇಗೇ ಅವರ ಅವರ ಭಕ್ತಿಯಂತೆ ಗಿಡಕ್ಕೆ ಕಟ್ಟಿದ್ದಾರೆ. ಹೊರ ಅಂಕಣದಲ್ಲಿ ಹಳೆ ದೇವಿಯ ಕಟ್ಟಿಗಿಯ ಮೂರ್ತಿಗಳಿವೆ ಭಕ್ತರು ಹೂವಿನ ಹಾರ, ಕುಂಕಮ ಚಂದ್ರ ಭಂಡಾರ, ಹಚ್ಚಿ ಅಮವಾಸೆ, ಹುಣ್ಣಿಮೆ ಶುಕ್ರವಾರ ಮಂಗಳವಾರ, ಕಾಯಿ ಕರಪೂರು ಧೂಪ, ದೀಪ ಹಚ್ಚುತ್ತಾರೆ.

೦೪. ಶ್ರೀಕಾಳಿಕಾದೇವಿ, ಶಹಾಪೂರ ನಗರ




ಶಹಾಪೂರು ಹಳೆ ಬಸ್ಸ ನಿಲ್ದಾಣದಿಂದ ಗಾಂಧಿಜಿ ಚೌಕ್ ಮಾರ್ಗವಾಗಿ ಪಶ್ಚಿಮ ದಿಕ್ಕಿಗೆ ಹೋದರೆ ಶ್ರೀ ಶಿವದೇವಾಲಯ ಹಾಗೂ ಶ್ರೀ ಚರಬಸವೇಶ್ವರ ಪ್ರಾಥಮಿಕಶಾಲೆ ಎದುರಿಗೆ ಶ್ರೀ ಕಾಳಿಕಾದೇವಿ ಸುಂದರ ವಾಸ್ತುಶಿಲ್ಪದ ಗುಡಿಯು ಕಾಣುತ್ತದೆ. ಈ ಗುಡಿಯು

ಉತ್ತರ ದಿಕ್ಕಿಗೆ ಮುಖ್ಯ ದ್ವಾರ ಬಾಗಿಲು ಇದ್ದು ಗುಡಿಯ ಒಳ ಅಂಕಣ ಬಹಳ ವಿಶಾಲವಾದ ನಾಲ್ಕು ಕಂಬಗಳಿಂದ ಚತ್ತ ಗುಡಿಯು ಗುಡಿಯ ಗೋಪುರವು ಸುರವಾಗಿದೆ. ಗುಡಿಯ ಮೆಲ್ಭಾಗದಲ್ಲಿ ಎರಡೂ ಮೂಲೆಗೆ ಸಿಂಹವು ಮೂರ್ತಿಯು ಸಿಮೆಂಟಿನಿಂದ ನೋಡಗರಿಗೆ ಆ ಸಿಂಹವು ಚಲನವಲನ ಭಾವನೆಯಿಂದ ಕೂಡಿದೆ ಸಿಂಹವು ಬಾಯಿ ತೇಗೆದ ಆಕಾರ ಹೊಂದಿದೆ. ಶ್ರೀಕಾಳಿಕಾದೇವಿ ಗುಡಿಗೆ ಭಕ್ತರು ಪ್ರದಕ್ಷಿಣೆ ಹಾಕಲು ಸುತ್ತಾಮುತ್ತ ಸ್ಥಳವಿಲ್ಲ. ಆದರೆ ಭಕ್ತರ ಒಳಗಡೆ ಗರ್ಭ ಗುಡಿಯಲ್ಲಿ ಪ್ರದಕ್ಷಿಣ ಹಾಕುತ್ತಾರೆ ಭವ್ಯವಾದ ಈ ಗುಡಿಯು ಇಡೀ ಶಹಾಪೂರು ತಾಲೂಕಿನ ವಿಶ್ವಕರ್ಮ ಜನಾಂಗದವರು ದೇವಿಗೆ ನಮಿಸುತ್ತಾರೆ. ದೇವಿ ಗುಡಿಯ ಎಡೆಗಡೆ ವಿಶಾಲವಾದ ಸ್ಥಳವಿದೆ ಈ ಸ್ಥಳದಲ್ಲಿ ಪ್ರತಿ ವರ್ಷ ಪುರಾಣ ಪ್ರವಚನೆ ಕಾರ್ಯಕ್ರಮ ನಡೆಯುತ್ತವೆ.

೦೫. ಸೀಮಿ ಮರೆಮ್ಮದೇವಿ, ಗುಂಡಹಳ್ಳಿ

ಶಹಾಪೂರ ತಾಲೂಕಿನಿಂದ ಪೂರ್ವ ದಿಕ್ಕಿಗೆ ದೋರನಹಳ್ಳಿ ಮಾರ್ಗವಾಗಿ ಯಾದಗಿರಿಗೆ ಹೋಗುವ ಮುಖ್ಯ ರಸ್ತೆ ಹೊಂದಿಕೊಂಡಿರುವ ಸೀಮಿ ಮರೆಮ್ಮದೇವಿ ದೇವಸ್ಥಾನ ಬರುತ್ತದೆ. ಇದು ೨೦ ಕಿ.ಮಿ. ದೂರದಲ್ಲಿದೆ, ಗುಂಡಹಳ್ಳಿ ತಾಂಡದ ಪೂಜಾರಿಯಾದ ಶ್ರೀ ಸುಭಾಸ ರಾಠೋಡ ಮತ್ತು ಭೋಜರಾಜ ಟಿ. ರಾಠೋಡ ಇವರ ಹೇಳಿಕೆಯ ಪ್ರಕಾರ ಮತ್ತು ಭಕ್ತರ ಹೇಳಿಕೆಯಂತೆ ಇಲ್ಲಿ ಬರೆಯಲಾಗಿದೆ.





ಸೀಮಿ ಮರೆಮ್ಮದೇವಿ ಹಿನ್ನಲೆ : ಸುಮಾರು ೧೯೬೯, ೧೯೭೦ರಲ್ಲಿ ದೋರನಹಳ್ಳಿ ಗ್ರಾಮದಿಂದ ಪಂಚಳದವರು ದೇವಿ ಮೂರ್ತಿ ಮಾಡಿ ಕೈ ಬಂಡಿಯಲ್ಲಿ ಸಣ್ಣ ಗೊಂಬೆ ಮಾಡಿ ಆ ಕಟ್ಟಿಗಿಂಯ ಗೊಂಬೆಯನ್ನು ದೋರನಹಳ್ಳಿ ಜನರು ಮರೆಮ್ಮ ದೇವಿಯಿಂದು ಭಕ್ತಿ ಭಾವದಿಂದ ಪೂಜೆ ಮಾಡಿ ಪದ್ಧತಿಯಂತೆ ಊರಿನ ಎಲ್ಲಾ ಜನರು ಸೇರಿ ಪಂಚಾಳದವರು ಮತ್ತು ಊರಿನ ಮಾಲಿಗೌಡ, ಪೋಲಿಸ್‌ಗೌಡ, ತಳವಾರ, ವಾಲಿಕಾರ, ಎಸಿ, ಎಸ್.ಟಿ., ಹಲಿಗಿ, ಡೊಳ್ಳು ಬಾಜಿ ಜೊತೆ ಮರೆಮ್ಮ ಗುಡಿಯಿಂದ ಮುಖ್ಯ ರಸ್ತೆಗೆ ತಂದು ದೋರನಹಳ್ಳಿ ಸೀಮಿ ದಾಟ್ಟಿಸಿ ಬಿಟ್ಟಿದು ಇದು ಗುಂಡಹಳ್ಳಿ ತಾಂಡ ಸೀಮಿಗೆ ಹೊಂದಿಕೊಂಡಿರುತ್ತಾರೆ.

ಆಗಿನ ಕಾಲಕ್ಕೆ ದೇವತೆಯನ್ನು ಮುಟ್ಟಿ ಯಾರು ಮುಂದೆ ತರುತ್ತಿರಲಿಲ್ಲ. ಆಗ ಭೋಜರಾ ರಾಠೋಡ ಇವರ ಹೊಲದಲ್ಲಿ ಮಾವಿನ ಗಿಡದಲ್ಲಿ ಬಿಟ್ಟು ದೋರನಹಳ್ಳಿ ಗ್ರಾಮದ ಹೋದರು ಗುಂಡಹಳ್ಳಿ ತಾಂಡ ಶ್ರೀ ಬೋಜರಾಜ ಟಿ. ರಾಠೋಡ ಇವರು ಮತ್ತು ತಂದೆ-ತಾಯಿ, ಅಣ್ಣ ತಮ್ಮಂದಿರು ಕೂಡಿಕೊಂಡು ಮಾತ್ನಾಡಿ ಆ ಕೈ ಬಂಡಿಯ ಸಣ್ಣ ಮೂರ್ತಿಯನ್ನು ರಸ್ತೆಯ ಪಕ್ಕದಲ್ಲಿ ತಂದು ಅಲ್ಲಿ ಸಣ್ಣ ಕಲ್ಲಿನ ಬಂಡೆಯಿಂದ ಗುಡಿ ಕಟ್ಟಿಸಿದ್ದನೆಂದು ಸ್ವಂತ ಬೋಜರಾಜ ಟಿ. ರಾಠೋಡ್ ಹೇಳಿದ್ದಾರೆ. ಆಗ ದೇವಿಗೆ ಅಮವಾಸೆಗೆ ಕಾಯಿ, ಉದಬತ್ತಿ, ಹೊಳಗಿ ಅನ್ನ ತಂದು ನೈವೆದ್ಯ ಮಾಡುತ್ತಿದ್ದು ಆಗ ಇಷ್ಟಕಾರರು ಅದ್ಭುತ ಮೂರ್ತಿ ಇರಲಿಲ್ಲ ಎಂದು ಬೋಜರಾಜ ಹೇಳುತ್ತಾರೆ. ನಂತರದ ವರ್ಷಗಳು ಹೊದಂತೆ ಜನರು ಭಕ್ತರು ಹೊಲಗಳಿಗೆ ಬರುವ ರೈತರು ತಮ್ಮ ಹೊಲದಲ್ಲಿ ದವಸ ಧಾನ್ಯ ಹೆಚ್ಚು ರಾಶಿ ಆಗಲೆಂದು ಬೇಡಿಕೊಳ್ಳುತ್ತಿದ್ದರು ಮತ್ತು ರೈತರು ತಮ್ಮ ದನಕರು ಕಳೆದರೆ ದೇವಿಗೆ ಬಂದು ಬೇಡಿಕೊಂಡು ಹೋಗುತ್ತಿದ್ದರು ನಮ್ಮ ದನ ಕಳೆದಿದೆ. ದೇವಿ ನನ್ನ

ಆಕಳು ನನಗೆ ಸಿಕ್ಕರೆ ನಾನು ನಿನಗೆ ೫ ಕಾಯಿ ಕೊಡುತ್ತೇನೆ ಎಂದು ರೈತರು ತಮ್ಮ ಕಷ್ಟಗಳನ್ನು ಸೀಮಿ ಮರೆಮ್ಮ ದೇವಿಯಲ್ಲಿ ಬೇಡಿಕೊಳ್ಳುತ್ತಿದ್ದರು ಮತ್ತು ಶಾಲೆ ಕಲಿತ ನಿರುದ್ಯೋಗಿ ಯುವಕರು ಸೀಮಿ ಮರೆಮ್ಮದೇವಿಗೆ ಬಂದು ೧ ವರ್ಷದಲ್ಲಿ ನನಗೆ ನೌಕರಿ ಸಿಕ್ಕರೆ, ನಾನು ೧ ತಿಂಗಳ ಪಗಾರ (ವೇತನ) ಗುಡಿಯ ಅಭಿವೃದ್ಧಿಗಾಗಿ ಕೊಡುತ್ತೇನೆಂದು ಬೇಡಿಕೊಳ್ಳುತ್ತಿದ್ದರೆಂದು ಹೇಳುತ್ತಾರೆ. ಹಾಗೆ ಗುತ್ತೆದಾರ ತಮ್ಮ ಕೆಲಸ ಬಿಲ್ ಆಗದಿದ್ದರೆ ಈ ಸೀಮಿ ಮರೆಮ್ಮದೇವಿಗೆ ಬಂದು ಬೇಡಿಕೊಂಡು ದೇವಿಯನ್ನು ನೆನೆಸಿದರೆ ಆ ಗುತ್ತೆದಾರನ ೨, ೩ ವರ್ಷಗಳ ಕಾಲ ಕೆಲಸ ಬಿಲ್ ಆಗದೇ ಇರುವ ಬಿಲ್ ದೇವಿಗೆ ಬೇಡಿಕೊಂಡರೆ ಆ ಬಿಲ್ ಆಗುತ್ತಿತ್ತೆಂದು ದೇವಿಯ ಭಕ್ತನಾದ ಶ್ರೀ ಭೋಜರಾಜ ಟಿ. ರಾಠೋಡ ಹೇಳುತ್ತಾರೆ.



ಗುಂಡಹಳ್ಳಿ ತಾಂಡದ ನಿವಾಸಿಯಾದ ಶ್ರೀ ಘನಪ್ಪ ರಾಠೋಡ ಇವನಿಗೆ ಶ್ರೀ ಸೀಮಿ ಮರೆಮ್ಮ ದೇವಿಗೆ ಭಕ್ತಿಯಿಂದ ಬೇಡಿಕೊಂಡು ನನಗೆ ಮಕ್ಕಳ ಫಲ ಕೊಟ್ಟರೆ ನಾನು ನಿನ್ನ ಗುಡಿ ಕಟ್ಟುತ್ತೆನೆಂದು ಬೇಡಿಕೊಂಡನೆಂದು ಇಲ್ಲಿಯ ಭಕ್ತರು ಹೇಳಿದ್ದಾರೆ, ದೇವಿ ಕೃಪೆಯಿಂದ ಆ ಭಕ್ತನಿಗೆ ಒಂದು ವರ್ಷದಲ್ಲಿಯೇ ಒಂದು ಗಂಡು ಮಗುವನ್ನು ಪಡೆದನು ಆಗ ದೇವಿ ಶಕ್ತಿ ಇನ್ನೂ ಹೆಚ್ಚುತ್ತಾ ಮಕ್ಕಳಾದ ಕಾರಣ ಗುಡಿಯನ್ನು ಭಕ್ತಿಯಿಂದ ಕಲ್ಲಿನಿಂದ ಕಟ್ಟೆ ಸುಂದರವಾಗಿ ಕಾಣುವಂತೆ ಸುಣ್ಣ ಬಣ್ಣದಿಂದ ನೋಡಗರಿಗೆ ಭಕ್ತಿ ಹೆಚ್ಚುವಂತೆ ಮಾಡಿದನು. ಆಗ ಜನರು ಒಬ್ಬರಂತೆ ಮತ್ತೊಬ್ಬರು ಹೀಗೆ ಜನರು ದೇವಿ ಕೃಪೆ ಪಾರ್ಥರಾಗಿ ಜನರ ಇಷ್ಟದಂತೆ ಇಡೇರಿದ ಕಾರಣ ಈ ಸೀಮಿ ಮರೆಮ್ಮದೇವಿ ದೇವಸ್ಥಾನ ನೋಡುವಂತೆ ಸುಂದರವಾಗಿ ಕಾಣುತ್ತದೆ. ನಂತರ ಯಾದಗಿರಿಯ ಲಾಡ್ಜ ಮಾಲಿಕನು ಬಂದು ಈ ದೇವಿಗೆ ತನ್ನ ಕಷ್ಟವನ್ನು ತಾಯಿ ಮುಂದೆ ಹೇಳಿ ೧ ತೆಂಗಿನಕಾಯಿ ಕಟ್ಟಿ ಹೋದನು ನನ್ನ ಮನದ ಆಶೆ ಈಡೇರಿದರೆ ನಾನು ಈ ಗುಡಿ ಜನರು ನಿಂತು

ನೋಡುವಂತೆ ಕಟ್ಟುತ್ತೇನೆಂದು ಆ ಲಾಡ್ಜ ಮಾಲಿಕನ್ನು ಬೇಡಿಕೊಂಡು ಆ ದೇವಿ ಮಹಿಮಾ ಆ ಲಾಡ್ಜ ಮಾಲಿಕ ಬೇಡಿಕೊಂಡ ಆಸೆಯನ್ನು ಇಡೇರಿತೆಂದು ಸ್ವಂತ ಆ ಲಾಡ್ಜ ಮಾಲಿಕನು ೨೦೧೦ರಲ್ಲಿ ಬಲು ಸುಂದರವಾಗಿ ಮಾರಬಲ್ ಕಲ್ಲಿನಿಂದ ನೆಲ ಹಾಸಿಗೆ ಮತ್ತು ಗೋಡೆಗೆ ಮುಂದಿನ ಗೋಡೆಗೆ ಒಳ ಅಂಕಣಕೆ ಗುಡಿ ಸುತ್ತ ಸುಂದರವಾಗಿ ಕಟ್ಟಿದ್ದಾನೆ ಜನರು ನೋಡಿ ದೇವಿ ಶಕ್ತಿ ದೊಡ್ಡದು ಎಂದು ಹೋಗುವಾಗ, ಬರುವಾಗ ಜನರು ಬಸ್‌ನಲ್ಲಿ ಕಾರನಲ್ಲಿ ಲಾರಿಯಲ್ಲಿ ಇತರ ವಾಹನದವರು ಕೈ ಮುಗಿದು ಬೇಡಿಕೊಳ್ಳುತ್ತಾರೆ.

ಸೀಮಿ ಮರೆಮ್ಮದೇವಿ ಪದ್ಧತಿ : ಈ ಸೀಮಿ ಮರೆಮ್ಮದೇವಿಯ ಒಂದು ಪದ್ಧತಿ ಇದೆ. ಇಲ್ಲಿ ಭಕ್ತರು ತಮ್ಮ ಇಷ್ಟದಂತೆ ಕುರಿ ಬಲಿ ಕೊಡುತ್ತಾರೆ ಮತ್ತು ಕೆಲವರು ಹೋಳಗಿ, ತುಪ್ಪ, ಹಾಲು, ಅನ್ನ, ಕಾಯಿ ಕರಪೂರ ಕೊಡುತ್ತಾರೆ. ಆದರೆ ಇಲ್ಲಿಂದು ಒಂದು ಚೂರು ಮನೆಗೆ ತೆಗೆದುಕೊಂಡು ಹೋಗುವಂತೆ ಇಲ್ಲ, ಈ ದೇವಿ ಮಹಿಮಾ ದೊಡ್ಡದು. ಎಷ್ಟೆ ದೊಡ್ಡ ಪ್ರಮಾಣದಲ್ಲಿ ಕುರಿ ೨, ೪, ೫ ಹೀಗೆ ಬಲಿ ಕೊಟ್ಟರು ಆ ಬಲಿಕೊಟ್ಟ ಮಾಂಸವು ಇಲ್ಲಿ ಆ ಭಕ್ತರು ಊಟ ಮಾಡಬೇಕ ಸಾರ್ವಜನಿಕರಿಗೆ ಕರೆದು ಊಣಿಸಬೇಕು ಯಾವುದೇ ಕಾರಣಕ್ಕೂ ಮನೆಗೆ ತೆಗೆದುಕೊಂಡು ಹೋಗುವಂತೆ ಇಲ್ಲ. ತೆಂಗಿನ ಕಾಯಿ ಆಗಲಿ ಇಲ್ಲಿ ಆಧಾರ ಇಲ್ಲಿ ಅನ್ನ ಸಾಕು, ಇತರೆ ಯಾವುದೇ ವಸ್ತುವನ್ನು ತೆಗೆದುಕೊಂಡು ಹೋಗುವಂತೆ ಇಲ್ಲ. ಈ ದೇವಿಶಕ್ತಿ ದೊಡ್ಡದೆಂದು ಜನರು ಅಂದುಕೊಂಡಿದ್ದಾರೆ.

ದೇವಿವಾರ : ಪ್ರತಿ ಮಂಗಳವಾರ ಮತ್ತು ರವಿವಾರ ಮಾತ್ರ ಇಲ್ಲಿ ಭಕ್ತರು ತಮ್ಮ ಇಷ್ಟದಂತೆ ಕುರಿ (ಒತು) (ಮೇಕೆ) ದೇವಿಗೆ ಅರ್ಪಿಸುತ್ತಾರೆ. ಇಲ್ಲಿ ಸುಂದರ ಬಯಲು ವಿಶಾಲವಾದ ಸ್ಥಳವಿದ್ದ ನೀರಿನ ಅನೂಕುಲವಿದೆ, ಕಿರಣಾ ಅಂಗಡಿ ಅನುಕೂಲವಿದೆ ಸಾರ್ವಜನಿಕರಿಗೆ ಯಾವುದೇ ಇಲ್ಲ ಅನ್ನುವಂತೆ ಇಲ್ಲ. ಎಲ್ಲಾ ರೀತಿಯ ಅನುಕೂಲವಿದೆ ಸಾರ್ವಜನಿಕರು ಬಂದು ದೇವಿಯ ದರ್ಶನ ಪಡೆಯಬಹುದು ಸದಾ ಕಾಲ ದೇವಿ ದರ್ಶನ ಪಡೆಯಬಹುದು.

ದೇವಸ್ಥಾನದ ವಿನ್ಯಾಸ : ಶ್ರೀ ಸೀಮಿ ಮರೆಮ್ಮದೇವಿ ಗುಡಿಯ ವಿನ್ಯಾಸದ ವಿವರ, ಗುಡಿಯ ಪೂರ್ವ ದಿಕ್ಕಿಗೆ ಮುಖ ಮಾಡಿದೆ. ಪೂರ್ವ ದಿಕ್ಕಿಗೆ ದೇವಿ ಮುಖ ಮಾಡಿ ಕುಳಿತಿದ್ದಾರೆ ಗುಡಿಯ ೨೦ x ೨೦ ಅಗಲ ಸುಂದರ ಗ್ರಾಮೀಣ ಶೈಲಿಯಲ್ಲಿ ಕಟ್ಟಿದ್ದಾರೆ.

ಗುಡಿಯ ಮೇಲೆ ಬಂಗಾರ ಕಳಸವಿದೆ ಗುಡಿಯ ಮೇಲೆ ಗೋಪುರವಿದೆ ಗುಡಿಯ ಸುತ್ತ ಕಂಪೌಂಡ ಇದೆ. ಗುಡಿಯ ಸುತ್ತಲು ಗೋಡೆಗೆ ಸುಣ್ಣ ಬಣ್ಣ ಮಾಡಿದೆ. ಗೋಡೆಗೆ ಸೀಮಿ ಮರೆಮ್ಮದೇವಿ ಹುಲಿ ಮೇಲೆ ಕುಳಿತು ರಾಕ್ಷಸರ ಸೌಂಹಾರ ಮಾಡುವ ಆಯಿಲ್ ಪೇಂಟಿನಿಂದ ಸುಂದರವಾಗಿ ಚಿತ್ರ ಬಿಡಿಸಿದ್ದಾರೆ. ಚಿತ್ರಕಲಾಕಾರ ಶ್ರೀ ವಿಜಯ ವರ್ಮ, ಶಹಾಪೂರ ಬಹಳ ಸುಂದರವಾಗಿ ಭಕ್ತಿ ಭಾವ ಮುಡುವಂತೆ ದೇವಿ ಚಿತ್ರ ರಚಿಸಿದ್ದಾರೆ.

ಗುಡಿಯ ಬಲಗಡೆ ಕುಡಿಯುವ ನೀರಿನ ಕೈ ಪಂಪು ಇದೆ. ಗುಡಿಯ ಮುಂದೆ ದೀಪ ಕಂಭವಿದೆ. ಕಲ್ಲಿನಲ್ಲಿ ಕೆತ್ತನೆ ಮಾಡಿದ ಸುಮಾರು ೨೦ ಅಡಿ ಎತ್ತರದಲ್ಲಿದೆ. ಗುಡಿಯ ಮುಂದು ೨ ಆದರ ಅಗ್ನಿ ಕುಂಡಗಳಿವೆ, ಭಕ್ತರಿಗೆ ಕಾಯಿ ಹೊಡೆಯುವ ಸ್ಥಳವಿದೆ. ಗುಡಿಯ ಮುಂದೆ ಭಕ್ತರು ಹೋಳಿಗೆ ಮಾಡಲು ತೊಗರಿ ಬೆಳೆ, ಕಡಲೆ ಬೆಳೆ, ರೂಬ್ಬಲು ರುಬ್ಬೂವ ಕಲ್ಲು ಇದೆ. ಗುಡಿಯ ಬಲಗಡೆ ಆಕ್ಕೆ ದ್ಯಾವಮ್ಮದೇವಿ ಸಣ್ಣ ಗುಡಿಯಿದೆ. ಆ ಗುಡಿಗೆ ಭಕ್ತರು ಬೇಡಿಕೊಳ್ಳುತ್ತಾರೆ. ಗುಡಿಯ ಬಲಗಡೆ ಈಗ ಈ ವರ್ಷ ನಾಗದೇವಿ ೨ ಮೂರ್ತಿಗಳನ್ನು ಕಲ್ಲಿನಲ್ಲಿ ಕೆತ್ತನೆ ಮಾಡಿದ ಒಂದು ಕಟ್ಟೆ ಇದೆ. ಕಟ್ಟೆಯ ಮೇಲೆ ಆ ನಾಗದೇವಿಯ ಮೂರ್ತಿಯನ್ನಿಟ್ಟಿದ್ದಾರೆ. ಅಲ್ಲಿಯ ಜನರು ಬಂದು ಕೈ ಮುಗಿಯುತ್ತಾರೆ. ಗುಡಿಯ ಮುಂದೆ ೨ ಸುಂದರವಾದ ೧ ಬೇವಿನ ಮರ, ೧ ಆಲದ ಮರವಿದೆ ಗುಡಿಯ ಮುಂದುಗಡೆ ಸುಮಾರು ೫೦೦ ಮೀಟರ ಗೋಲಾಕಾರದ ರೋಡಿನ ೨ ಬದಿಗೆ ನಿಲಿಗಿರಿ ಗಿಡ ಇದ್ದು ಬಹಳ ತಂಪು ಇದೆ. ಬೇಸಿಗೆಯಲ್ಲಿ ಬಹಳ ತಂಪು ಆನಂದ ಅನಿಸುತ್ತದೆ. ಈಗ ಗುಡಿಯ ಮುಂದೆ ಕಿರಣ ಅಂಗಡಿ, ಹೋಟಲ ಇದೆ, ಗುಡಿಯಿಂದ ೧ ಕಿ.ಮೀ. ದೂರದಲ್ಲಿ ಇಬ್ರಹಿಂಪೂರ ಕ್ರಾಸ ಬಸ್ ನಿಲ್ದಾಣ ಬರುತ್ತದೆ.

ದೇವಿ ಮೂರ್ತಿ : ಶ್ರೀ ಸೀಮಿ ಮರೆಮ್ಮದೇವಿಯ ಕಟ್ಟಿಗೆಯ ಮೂರ್ತಿಯು ಸುಮಾರು ೪ ಅಡಿ ಎತ್ತರದಲ್ಲಿ ಕುಳಿತಿರುವ ಮೂರ್ತಿ ಇದೆ. ದೇವಿ ಎಡಗಡೆ ತಳಪಟರಾಯ ೧ ಗಂಡು ದೇವರ ಮೂರ್ತಿ ಇದೆ. ೨ ೧/೨ ಅಡಿ ಎತ್ತರವಿದೆ, ಆ ಮೂರ್ತಿ ಸುಂದರವಾಗಿ ಕಣ್ಣು ಮೂಗು, ಉಬ್ಬು ಕೈ ಕಾಲು ಎಲ್ಲಾ ಸುಂದರವಾಗಿ ಶಿಲ್ಪಿಯ ಕೆತ್ತನೆ ಮಾಡಿದ್ದಾನೆ. ಅದೇ ರೀತಿಯಾಗಿ ಸೀಮಿ ಮರೆಮ್ಮ ದೇವಿ ಮೂರ್ತಿ ಕಟ್ಟಿಗೆಯಲ್ಲಿ ಶಿಲ್ಪಿಯು ಸುಂದರ ಕಣ್ಣು, ಮೂಗು, ಬಾಯಿ ಕಿವಿ, ಕೈ, ಕಾಲು ದೇಹ ಎಲ್ಲವು ದೇವಿಯ ಆಕಾರ ನೋಡುಗರಿಗೆ ಭಯವಾಗುತ್ತದೆ. ಕೆಂಪು ಸೀರಿ, ಕೆಂಪು ಕುಪ್ಪಸ ಕೈಯಲ್ಲಿ ಭರ್ಚಿ,

ಕೈಯಲ್ಲಿ ಕೈ ತುಂಬಾ ಹಸಿರು ಬಳೆ ಕೊರಳಲ್ಲಿ ಹೂವಿನ ಹಾರ, ಮೂಗುತಿ, ಕೋರಳಲಿ ತಾಳಿ, ಶಿಲ್ಪಿಯ ತನ್ನ ಕೈ ಚಳಕದಿಂದ ದೇವಿ ಮೂರ್ತಿಯನ್ನು ಬಹಳ ಸುಂದರವಾಗಿ ಕೆತ್ತನೆ ಮಾಡಿದ್ದಾನೆ. ದೇವಿ ಮುಂದೆ ೧ ತುಂಬಿದ ಕಂಚಿನ ಕೊಡ ೨ ಕಂಚಿನ ಸಮೆ ಕಂಚಿನ ಗಂಟೆಗಳು ಗುಡಿಯ ಮುಂದೆ ೨ ದೊಡ್ಡ ಕಂಚಿನ ಗಂಟೆ ಇದೆ. ಗುಡಿಯ ಒಳಗಡೆ ಗೋಡೆಗೆ ದೇವಿ ಭಾವ ಚಿತ್ರ ಛಾಯಾ ಚಿತ್ರ ಹಾಕಿದ್ದಾರೆ ಮತ್ತು ಘತ್ತರಗಿ ಭಾಗಮ್ಮನ ಭಾವಚಿತ್ರ ಈ ದೇವಿ ಗರ್ಭ ಗುಡಿಯಲ್ಲಿದೆ. ಆಗೇ ಹುಲಿಯ ಮೇಲೆ ಕುಳಿತಿರುವ ಸುಂದರವಾದ ದೇವಿ ಭಾವ ಚಿತ್ರವಿದೆ ಒಂದು ೬ ಅಡಿ ಎತ್ತರದ ತ್ರಿಶೂಲವಿದೆ. ಈ ಮೂರ್ತಿಯನ್ನು ದೋರನಹಳ್ಳಿ ಗ್ರಾಮದ ಶಿಲ್ಪಿಗಳು ರಚನೆ ಮಾಡಿದ್ದಾರೆ. ದೋರನಹಳ್ಳಿ ಗ್ರಾಮದ ಶಿಲ್ಪಿಯು ಈ ಸೀಮೆ ಮರೆಮ್ಮ ದೇವಿಯ ಮೂರ್ತಿಯನ್ನು ಪದ್ದತಿಯಂತೆ ಸಂಪ್ರಾದಾಯಿಕವಾಗಿ ಕೆತ್ತನೆ ಮಾಡಿದ್ದಾನೆ. ಶಿಲ್ಪಿಯ ಕೈಚಳಕದಿಂದ ಸುಂದರ ಗ್ರಾಮೀಣ ಮಹಿಳೆಯಂತೆ ಕಾಣುವ ದೇವತೆಯನ್ನು ರಚಿಸಿದ್ದಾನೆ.

೦೬. ಶ್ರೀ ಲಕ್ಷ್ಮೀ ದೇವಿ ಮತ್ತು ಗೋಗಿ ಮಾರೆಮ್ಮ ದೇವಿ

ಇದೇ ಗೋಗಿ ಗ್ರಾಮದ ಶಹಾಪೂರನಿಂದ ಸಿಂದಗಿಗೆ ಹೋಗುವ ಮುಖ್ಯ ರಸ್ತೆಗೆ ಪೆಟ್ರೋಲ್ ಬಂಕ್ ಹತ್ತಿರ ಶ್ರೀ ಪರತಪ್ಪಗೌಡ ಮಾಲಿ ಪಾಟೀಲ ಹೊಲದಲ್ಲಿ ಎರಡು ದೇವತೆಯ ಸಣ್ಣ ಸಣ್ಣ ಗುಡಿ ಇದ್ದು ಈ ಗುಡಿಯನ್ನ ವಡ್ಡರ ಜನಾಂಗದವರು ಪೂಜಿಸುತ್ತಾರೆ. ಇದೇ ಅರ್ಚಕರು ಈ ವಡ್ಡರ ಜನಾಂಗದವರೆ ಮೂಲ ಕಾರಣ.





ಶ್ರೀ ಲಕ್ಷ್ಮೀದೇವಿ ಮತ್ತು ಮಾರೆಮ್ಮದೇವಿ ಹಿನ್ನಲೆ :

ಕೆಂಬಾವಿ ಗ್ರಾಮದ ಕೂಲಿ ಮಾಡುವ ಜನಾಂಗದವರಾಗಿ ವಡ್ಡರ ತಮ್ಮ ಕುದುರೆ ಮೇಲೆ ತಮ್ಮ ಮೂಲ ಕಸುಬು ಕಲ್ಲು ಕಟೆಯುವುದು, ಒಳ್ಳಾ ಮಾಡುವುದು ಬಿಸ ಕಲ್ಲು, ರುಬ್ಬುವ ಕಲ್ಲು, ಬೆಳೆ ಬೀಸುವ ಕಲ್ಲು, ಹುರಣ ರುಬ್ಬುವ ಕಲ್ಲು ಹೀಗೆ ವಿವಿಧ ಬಗೆಯ ಕಲ್ಲುಗಳನ್ನು ಕಟೆದು ಜೀವನ ಸಾಗಿಸುತ್ತಿರುವ ವಡ್ಡರ ಜನರು ತಮ್ಮ ಜೀವನ ಸಂಸಾರ ನಡೆಸುತ್ತಿದ್ದರೆಂದು ಈ ಪ್ರಸ್ತುತ ಶ್ರೀ ಹಣಮಂತ ಪೂಜಾರಿ ಹೇಳಿದ್ದಾರೆ. ಈ ಜನಾಂಗದವರು ತಮ್ಮ ಕಸುಬನ್ನು ಊರುರೂ ತಿರುಗಾಡುತ್ತಾ ತಮ್ಮ ಜೀವನ ನಡೆಸುತ್ತಿದ್ದರು, ಆಗ ಗೋಗಿ ಗ್ರಾಮ ದೊಡ್ಡ ಗ್ರಾಮವಾಗಿತ್ತು. ಇಲ್ಲಿ ಮುತ್ತಿನ ವ್ಯಾಪಾರ, ಬಟ್ಟೆ ವ್ಯಾಪಾರ, ಕುದುರೆ ವ್ಯಾಪಾರ, ಎತ್ತುಗಳು ವ್ಯಾಪಾರ, ಬೆಳ್ಳಿ ಬಂಗಾರ, ವಜ್ರದ ವ್ಯಾಪಾರ ಹೀಗೆ ದೊಡ್ಡ ದೊಡ್ಡ ವ್ಯಾಪಾರ ಮಾಡುತ್ತಿದ್ದರು. ಈ ಗ್ರಾಮಕ್ಕೆ ಕೆಂಬಾವಿ ಗ್ರಾಮದಿಂದ ತಮ್ಮ ಕುದುರೆ ಮೇಲೆ ಬಂದುಹೆಂಡತಿ ಮಕ್ಕಳು ಮತ್ತು ಕುಟುಂಬ ಸಮೇತವಾಗಿ ಗೋಗಿ ಗ್ರಾಮಕ್ಕೆ ಬಂದು ಮಾಲಿಗೌಡರ ಹೊಲದಲ್ಲಿ ತಮ್ಮ ಗುಡಾರ ಹಾಕಿ ಆ ಗುಡಾರದಲ್ಲಿ ತಮ್ಮ ಸಂಸಾರದ ವಸ್ತುಗಳನ್ನು ಇಟ್ಟಿದರು.

ಕೆಂಬಾವಿಯಿಂದ ಬರುವಾಗ ಈ ಕುಟುಂಬದವರು ತಮ್ಮ ಮನೆ ದೇವರಾದ ಶ್ರೀ ಲಕ್ಷ್ಮೀ ದೇವಿ ಮತ್ತು ಮಾರೆಮ್ಮದೇವಿ ಇಬ್ಬರ ದೇವತೆಯ ಒಂದೊಂದು ಸಣ್ಣ ಕಲ್ಲುಗಳ ಮೂರ್ತಿಯನ್ನು ತಮ್ಮ ಜೊತೆ ತೆಗೆದುಕೊಂಡು ಬಂದಿದ್ದು, ಆ ೨ ಸಣ್ಣ ಕಲ್ಲುಗಳ ಮೂರ್ತಿಗೆ ಆ ಜನಾಂಗದ ಕುಟುಂಬ ಅಮವಾಸ್ಯೆ, ಹುಣ್ಣಿಮೆಗೆ ತಮ್ಮ ಭಕ್ತಿ ಭಾವ ಅರ್ಪಿಸುತ್ತಾರೆ. ದೇವತೆಗಳಿಗೆ ನಂಬುಗೆಯ ಭಕ್ತರಾಗಿ ಸೇವೆ ಸಲ್ಲಿಸುತ್ತಿದ್ದರು. ಒಂದು ದಿನ

ಈ ಕುಟುಂಬದವರು ಬಡತನದ ಬವಣೆಯಿಂದ ಗೋಗಿಯಿಂದ ಶಹಾಪೂರ ಹೋಗಿ ತಮ್ಮ ಕೂಲ ಕಸಬು ಮಾಡುತ್ತಿದ್ದರು. ವಾರಕ್ಕೆ ಒಂದು ದಿನ ಗೋಗಿ (ಕೆ) ಗ್ರಾಮಕ್ಕೆ ತಮ್ಮ ಗುಡಾರ (ಜೋಪಡಿ)ಗೆ ಬಂದು ತಮ್ಮ ಕುಟುಂಬಕ್ಕೆ ಮತ್ತು ತಮ್ಮ ಮನೆತನದ ದೇವತೆಯಾದ ಶ್ರೀ ಲಕ್ಷ್ಮೀ ದೇವಿ ಮತ್ತು ಮಾರೆಮ್ಮ ದೇವಿಗೆ ಪೂಜೆ ಸಲ್ಲಿಸಿದರು.

ಒಂದು ದಿನ ಈ ಕುಟುಂಬದವರು ತಮ್ಮ ಕುಟುಂಬ ಸಮೇತರಾಗಿ ಶಿರವಾಳ ಗ್ರಾಮಕ್ಕೆ ಹೋಗಿ ಅಲ್ಲಿ ತಮ್ಮ ಕಸುಬು ಕೆಲಸ ಮಾಡಲು ಹೋದರು ಹೋಗುವಾಗ ಈ ಎರಡೂ ದೇವತೆಯ ಸಣ್ಣ ಸಣ್ಣ ಕಲ್ಲಿನ ಮೂರ್ತಿಗಳು ಇಲ್ಲಿಯೇ ಬಿಟ್ಟು ಹೋದರು, ಆಗ ಹೊಲದ ಈ ಮಾಲಿಗೌಡರ ಹೊಲದಲ್ಲಿ ಈ ಮೂರ್ತಿ ಬಿಟ್ಟಿರುವುದನ್ನು ಕಂಡು ಮಾಲಿಗೌಡರು ಈ ಎರಡೂ ಮೂರ್ತಿಗಳನ್ನು ಮತ್ತು ಅವರ ಜೋಪಡಿ (ಗುಡಾರ) ತೇರುವುಗೊಳಿಸಿದನ್ನು, ಆಗ ಶ್ರೀ ಲಕ್ಷ್ಮೀ ಮತ್ತು ಮಾರೆಮ್ಮದೇವಿ ಶಕ್ತಿಯಿಂದ ಮಾಲಿಗೌಡನ ಕಣ್ಣುಗಳನ್ನು ಕಳೆದುಕೊಂಡನು ಎಂದು ಈ ಪೂಜಾರಿ ಹೇಳುತ್ತಾರೆ. ಕಣ್ಣು ಕೆಳೆದುಕೊಂಡ ಮಾಲಿಗೌಡರು ಹಲವಾರು ದೇವರಲ್ಲಿ ಬೇಡಿಕೊಂಡರು. ತನ್ನ ಕಣ್ಣುಗಳು ಬರಲಿಲ್ಲ. ಆದರೆ ಒಬ್ಬ ಪೂಜಾರಿ ನಿನ್ನ ಹೊಲದಲ್ಲಿ ಇದ್ದು ಸಣ್ಣ ಸಣ್ಣ ಗುಡಿಯಲ್ಲಿ ದೇವತೆಗಳು ಇದ್ದವು. ಅವುಗಳನ್ನು ನೀನು ನಾಶ ಮಾಡಿದ ಆ ದೇವತೆಯ ಶಾಪದಿಂದ ನಿನ್ನ ಕಣ್ಣುಗಳು ಹೋಗಿವೆಯೆಂದು ದೇವರು ಹೇಳುವ ಹೇಳಿಕೆಯಲ್ಲಿ ಪೂಜಾರಿ ಆ ಗೌಡನಿಗೆ ಹೇಳುತ್ತಾನೆ. ಆಗ ಆ ಗೌಡರು ಪುನಃ ಬಂದು ಈ ಎರಡು ದೇವತೆಗೆ ತಪ್ಪಾಯಿತು, ದೇವಿ ನಾನು ತಿಳಿಯಲಾರದೆ ತಪ್ಪು ಮಾಡಿದ್ದೇನೆ, ಕ್ಷಮಿಸು ನಾನು ಎರಡು ಗುಡಿ ಕಟ್ಟಿ ಕೊಡುತ್ತೆನೆಂದು ಕೈ ಮುಗಿದು ಬೇಡಿಕೊಂಡು ಕಾಯಿ ಕರ್ಪೂರ ಹಚ್ಚಿ ಬೇಡಿಕೊಂಡನು ಆಗ ದೇವತೆಯ ಶಕ್ತಿಯಿಂದ ಪುನಃ ಈ ಗೌಡನಿಗೆ ಕಣ್ಣುಗಳು ಬಂದವು ಎಂದು ಈ ಪೂಜಾರಿ ಈ ದೇವತೆಗಳ ಹಿಂದಿನ ಕಥೆ ಹೇಳಿದರು.

ದೀಪ ಹಾಕುವ ಪದ್ಧತಿಗಳು : ಪ್ರತಿ ವರ್ಷ ಮಹಾಲಯ ಅಮವಾಸ್ಯೆ ಆದ ಮರುದಿನ ಈ ಗುಡಿಗೆ ಅರ್ಚಕರು ಬಂದು ಗುಡಿ ತೊಳೆದು ದೇವಿ ಮೂರ್ತಿ ತೊಳೆದು, ಸುಣ್ಣ ಬಣ್ಣ ಮಾಡಿ, ಹೂ-ಅಲಂಕಾರ, ಕುಂಬಳ ಕಾಯಿ ಮತ್ತು ದೂಪ ದೀಪ ಹಚ್ಚಿ ಹೊಳಿಗೆ, ತುಪ್ಪಾ, ಅನ್ನ ಸಾರು ನೈವೇದ್ಯ ಮಾಡಿ ದೇವತೆಗಳಿಗೆ ಪೂಜೆ ಮಾಡುತ್ತಾರೆ.

ಪೂಜೆ ಮಾಡಿದ ಮೇಲೆ ದೀಪ ಹಾಕುತ್ತಾರೆ, ಈ ದೀಪವು ೯ ದಿನಗಳ ಕಾಲ ಸತತವಾಗಿ ದೀಪ ಹಗಲು ರಾತ್ರಿ ಪ್ರತಿದಿನ ಒಂದೊಂದು ದಿನವು ನೈವೇದ್ಯದ ಪ್ರಕಾರ ದೇವತೆಗೆ ನೈವೆದ್ಯ ಅರ್ಪಿಸುತ್ತಾರೆ. ಕೊನೆಯ ದಿನ ಖಂಡೆ ಪೂಜೆ ದಿನ ದೀಪ ಇಳಿಸುವ ವಾಡಿಕೆ ಕೊನೆಯ ದಿನ ಅನ್ನಾ ಪ್ರಸಾದ ಮಾಡಿ ಗುಡಿಗೆ ಬಂದ ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡುತ್ತಾರೆ. ದೀಪ ಇಳಿಸುವಾಗ ಪದ್ಧತಿಯಂತೆ ಕುಂಬಳ ಕಾಯಿ ಒಡೆದು ಕುಂಕುಮ, ಬಂಡಾರ, ಕಾಯಿ ಕರ್ಪೂರ ಹಚ್ಚಿ ದೇವತೆಯಲ್ಲಿ ಬೇಡಿಕೊಳ್ಳುತ್ತಾರೆ. ದೇವಿ ನಮಗೆ ಆರೋಗ್ಯ ಭಾಗ್ಯ ಕೊಡು ತಾಯಿ ಮತ್ತು ಈ ವರ್ಷ ಮಳೆ ಬೆಳೆ ಅನುಕೂಲ ಮಾಡಿಕೊಡು ತಾಯಿ ಎಂದು ಬೇಡಿಕೊಳ್ಳುತ್ತಾರೆ. ಈ ರೀತಿಯಾಗಿ ಈ ದೇವತೆಯ ಪದ್ಧತಿಯನ್ನು ಆಚರಣೆ ಮಾಡುತ್ತಾ ಬಂದಿದ್ದಾರೆ. ಕೆಂಬಾವಿ ಹಣಮಂತ್ರಾಯ ಕುಟುಂಬದವರು ಮತ್ತು ಮಾಲಿಗೌಡರು ಶ್ರೀ ಪರತಪ್ಪಗೌಡ ಮಾಲಿ ಪಾಟೀಲ ಗೋಗಿ ಪರಮ ಭಕ್ತನಾಗಿದ್ದಾರೆ.

ಶ್ರೀ ಲಕ್ಷ್ಮೀ ದೇವಿ ಮತ್ತು ಶ್ರೀ ಮಾರಮ್ಮದೇವಿ ವೈಶಿಷ್ಟ್ಯತೆಗಳು : ಈ ಇಬ್ಬರು ದೇವತೆಗಳು ಅಕ್ಕ ಪಕ್ಕದಲೇ ಕುಳಿತಿದ್ದಾರೆ. ಆದರೆ ಶ್ರೀ ಲಕ್ಷ್ಮೀ ದೇವಿಗೆ ಹರಕೆಗಳು ಬೇರೆಯಾಗಿವೆ. ಈ ದೇವಿಗೆ ಕುರಿ, ಕೋಳಿ, ಬ್ಯಾಟಿ ಮಾಂಸ ಆಹಾರ ನಡೆಯುವುದಿಲ್ಲ, ಬರಿ, ಸಿಹಿ ಪದಾರ್ಥಗಳು ನಡೆಯುತ್ತದೆ, ಹೋಳಿಗೆ, ಹುಗ್ಗಿ ಚಜ್ಜಕದ ಹೋಳಿಗೆ, ತುಪ್ಪ, ಸಜ್ಜಕದ ಹುಂಡಿ, ತೋಗರಿ ಬ್ಯಾಳದ ಹೋಳಿಗೆ, ಕಡಲೆ ಬೆಳೆಯ ಹೋಳಿಗೆ, ಹೆಸರು ಹೋಳಿಗೆ, ಸಿಹಿ ಪದಾರ್ಥ ನೈವೇದ್ಯವನ್ನು ಮತ್ತು ಅನ್ನ ಸಾರು ಶ್ರೀ ಲಕ್ಷ್ಮೀ ದೇವಿಗೆ ನಡೆಯುತ್ತದೆ.

ಮಾರೆಮ್ಮ ದೇವಿ : ಈ ದೇವಿಗೆ ಮಾಂಸದ ಕುರಿ, ಕೋಳಿ ಬ್ಯಾಟಿ ಮತ್ತು ಸಿಹಿ ಪದಾರ್ಥ ಎರಡು ನಡೆಯುತ್ತಿವೆ. ಈ ದೇವಿಗೆ ಭಕ್ತರು ಬ್ಯಾಟಿ ಮಾಡುತ್ತಾರೆ ದೇವತೆಗೆ ಭಕ್ತಿಯಿಂದ ನಮಿಸುತ್ತಾರೆ.

ಶ್ರೀ ಲಕ್ಷ್ಮೀದೇವಿ ಮತ್ತು ಮಾರಮ್ಮದೇವಿ ಗುಡಿಯ ವಿನ್ಯಾಸ : ಈ ಇಬ್ಬರ ಗುಡಿಯು ಸಣ್ಣ ಸಣ್ಣ ಗುಡಿಗಳಾಗಿವೆ, ೧೦ ಅಡಿ ಎತ್ತರವಾಗಿದ್ದು ಪೂರ್ವ ದಿಕ್ಕಿಗೆ ಮುಖ್ಯ ಬಾಗಿಲುಗಳಿವೆ. ಇಬ್ಬರ ನಡುವೆ ೨ ಅಡಿ ಅಂತರವಿದೆ ಗುಡಿಯ ಸಣ್ಣ ಸಣ್ಣ ಗೋಪುರವಿದೆ. ಗುಡಿಯು ಚೌಕಾಕಾರದಲ್ಲಿದ್ದು ೨ ಅಡಿ ಎತ್ತರ ಕಟ್ಟೆ ಇದೆ. ೪೦ ಅಡಿ ಉದ್ದದ ಒಳ

ಅಂಕಣವಿದೆ ಈಗ ಭಕ್ತರ ಈ ಎರಡು ಗುಡಿಯ ಮೇಲ್ಭಾಗ ಚತ್ತೆ ಹಾಕಿದ್ದಾರೆ. ಗುಡಿಯ ಮುಂದೆ ೨ ಮಾಲ ಗಂಭವಿದೆ. ಗುಡಿ ಸುತ್ತುವಾಗಲು ಸ್ಥಳವಿದೆ. ವಿಶಾಲವಾದ ಸ್ಥಳವಿದೆ. ಗೋಗಿ ಊರಿನಿಂದ ಸುಮಾರು ೧ ಕಿ.ಮೀ. ದೂರದಲ್ಲಿ ಈ ದೇವತೆಯ ಗುಡಿ ಇದೆ. ಎರಡು ಗುಡಿಯಲ್ಲಿ ಎರಡೂ ಕಲ್ಲಿನ ಮೂರ್ತಿ ಇದೆ. ಹೊಯ್ಸಳ ಶೈಲಿಯ ಮೂರ್ತಿಗಳಾಗಿವೆ. ಈ ಮೂರ್ತಿ ೨ ಅಡಿ ಎತ್ತರವಿದೆ. ಒಂದು ಗುಡಿಯಲ್ಲಿ ಅಂದರೆ ಶ್ರೀ ಲಕ್ಷ್ಮೀ ಗುಡಿಯ ಒಳಗಡೆ ಗರ್ಭ ಗುಡಿಯಲ್ಲಿ ಹುತ್ತು ಬೆಳೆಯುತ್ತಿದೆ. ಇದು ಭಕ್ತರಿಗೆ ಬಹಳ ಸಂತೋಷದ ಸಮೃದ್ಧಿ ಎಂದು ಹೇಳುತ್ತಾರೆ. ಈ ದೇವತೆ ಗುಡಿಯ ಮುಂದೆ ಕರ್ನಾಟಕ ಗೃಹ ಮಂಡಳಿ ನಗರಾಭಿವೃದ್ಧಿ ಪ್ಲಾಟ್‌ಗಳಿವೆ, ಈಗ ಈ ಗುಡಿಯು ಅಭಿವೃದ್ಧಿ ಹೊಂದುತ್ತಿರುವಂತೆ ಕಾಣುತ್ತಿದೆ.

೦೭. ಹುಲಿಗಮ್ಮ ದೇವಿ



ಶಹಾಪೂರ ತಾಲೂಕಿನ ಪಶ್ಚಿಮ ದಿಕ್ಕಿಗೆ ೧೨ ಕಿ.ಮೀ. ದೂರದಲ್ಲಿ ಬರುವ ಗೋಗಿ (ಕೆ) ಗ್ರಾಮದಿಂದ ಆಧಿ ಶಕ್ತಿ ಗಾಳಿ ಮರೆಮ್ಮದೇವಿ ಗುಡಿ ಮುಂದೆ ಸಾಗುತ್ತ ನಡೆದರೆ ದರ್ಗ ರಸ್ತೆ ಪಕ್ಕದ ಶ್ರೀ ಮಡಿವಾಳಪ್ಪ ಮಾವಿನ ಮರದ ಇವರ ಮನೆಯ ಮುಂದೆ ಈ ದೇವಿ ಗುಡಿ ಇದೆ. ಈ ಹಿಂದೆ ಈ ದೇವಿ ಜಗಲಿ ಕಟ್ಟೆಯನ್ನು ಶ್ರೀ ಮಡಿವಾಳಪ್ಪ ಮಾವಿನ ಮರದ ಅವರ ಮನೆಯಲ್ಲಿತ್ತೆಂದು ನಂತರ ಸಮಾಜದವರು ಕೂಡಿಕೊಂಡು ಮಾತ್ನಾಡಿ, ಮನೆಯಲ್ಲಿ ದೇವಿಯ ಗುಡಿ ಜಗಲಿ ಇರುವುದು, ಸರಿಯಲ್ಲ, ಮನೆಯಲ್ಲಿ ಮೈಲಿಗೆ, ಮುಡಿಚಟ್ಟು ಆ ಮನೆಯ ಹೆರಿಗೆಯಾದರೆ ದೇವಿಯ ಮೇಲೆ ನೆರಳು ಬೀಳುತ್ತದೆಂದು ಸಮಾಜದವರು ಮಾತ್ನಾಡಿ ಶ್ರೀ ಮಡಿವಾಳಪ್ಪ ಮಾವಿನ ಮರದ ಮನೆ ಮುಂದೆ ಬಯಲು ಜಾಗದಲ್ಲಿ ೨೦೦೮ರಲ್ಲಿ ಗುಡಿಕಟ್ಟಲು ಪ್ರಾರಂಭಿಸಿದರೆಂದು ಶ್ರೀ ಮಲ್ಲಪ್ಪ ಮಾವಿನ ಮರದ ಹೇಳಿದ್ದಾರೆ.

ಹುಲಿಗಮ್ಮ ದೇವಿ ಮೂರ್ತಿ : ಈ ಹುಲಿಗೆಮ್ಮ ದೇವಿ ಮೂರ್ತಿಯನ್ನು ೧/೨ ಕೆ.ಜಿ. ತೂಕದ ಬೆಳ್ಳಿಯಿಂದ ಮಾಡಿದ್ದಾರೆ, ಸುಂದರವಾಗಿ ಭಕ್ತಿಯ ಭಾವ ಮೂಡುವಂತೆ ಕಾಣುತ್ತದೆ. ದೇವಿ ಪಕ್ಕದಲ್ಲಿ ತುಂಬಿದ ಕೊಡ (ಸ್ಟೀಲ್) ಮತ್ತು ಸ್ಟೀಲ್ ಚರಿಗೆ ಇಟ್ಟಿರುತ್ತಾರೆ. ಚರಿಗೆ ಮೇಲೆ ತೆಂಗಿನ ಕಾಯಿ, ಅದರ ಮೇಲೆ ಹಸಿರು ಬಣ್ಣದ ಕುಪ್ಪಸ, ಪಕ್ಕದಲ್ಲಿ ನಿಂಬೆ ಹಣ್ಣು, ಬಾಳೆ ಹಣ್ಣು ಚಂಡೂ ಹೂ, ಹೀಗೆ ಪೂಜೆ ಸಾಮಗ್ರಿಗಳನ್ನು ಇಟ್ಟಿರುತ್ತಾರೆ. ಪ್ರತಿದಿನ ದೇವಿಯ ಅರ್ಚನೆ ಮಾಡುತ್ತಾರೆ. ಅರ್ಚಕಿಯಾಗಿ ಶ್ರೀಮತಿ ಕಲಾವತಿ ಗಂ. ನಾಗರಾಜ ಮಾವಿನ ಮರದ ಪ್ರಸ್ತುತವಾಗಿ ನಡೆಸುತ್ತಿದ್ದಾರೆ.

ಹುಲಿಗೆಮ್ಮ ದೇವಿ ಹಿನ್ನಲೆ : ಹುಲಿಗೆಮ್ಮ ದೇವಿ ಸುಮಾರು ೩, ೪ ತಲೆ ಮಾರಿನಿಂದ ಬಂದುದೆಂದು ಭಕ್ತರು ಹೇಳುತ್ತಾರೆ, ಮೊದಲು ಈ ಊರಲ್ಲಿ ಶ್ರೀಯಂಕಪ್ಪ ಪೂಜಾರಿ ಈ ದೇವಿ ಪರಮ ಭಕ್ತನಾಗಿದ್ದ ಪ್ರತಿ ವರ್ಷ ತಪ್ಪದೇ ಕಾಲುನಡೆಗೆಯಿಂದ ಒಂದು ಸಣ್ಣದ ಬಿಂದಿಗೆ (ಕೊಡ) ಒಂದು ಕಂಬಳಿ ತೆಗೆದುಕೊಂಡು ಹೋಗಿ ಭೀಮ ನದಿಗೆ ಶಿರವಾಳ ಹತ್ತಿರ ಅಣಬಿ, ಗಂಗಾ ಸ್ನಾನ ಮಾಡಿ ಬಿಂದಿಗೆ (ಕೊಡದಲಿ) ನೀರು ತುಂಬಿಕೊಂಡು ಬರೆಗಾಲಲ್ಲಿ ದೇವಿ ಮೂಲ ಗದ್ದುಗೆ ಆ ನೀರು ತಂದು ಸಿಂಪರಣೆ ಮಾಡಿ ಭಕ್ತಿಯಿಂದ ಊರಿಗೆ ಎಲ್ಲ ಜನರಿಗೆ ಮಳೆ, ಬೆಳೆ ಸಂಪತ್ತು ಕೊಡಲೆಂದು ಬೇಡಿಕೊಳ್ಳುತ್ತಿನೆಂದು ಭಕ್ತರು ಹೇಳುತ್ತಾರೆ. ಹುಲಿಗೆಮ್ಮ ದೇವಿ ಮೂಲ ಸ್ಥಳ ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಮುನಿರಾಬಾದ (ಹುಲಿಗಿ) ಮೂಲ ಸ್ಥಳವಾಗಿದೆ. ಹುಬ್ಬಳಿ, ಗದಗ, ಗಂಗಾವತಿ, ಕುಷ್ಟಗಿ, ಯಲಬುರ್ಗಾ ಮುಂತಾದ ತಾಲೂಕು ಹಳ್ಳಿಗಳಲ್ಲಿ ಕೆಲವು ಸ್ಥಳಗಳಿಗೆ ಹುಲಿಗೆಮ್ಮ ದೇವಿ ಗುಡಿಯನ್ನು ಕಾಣಬಹುದು. ಆದರೆ ಸಗರನಾಡಿನ ಗೋಗಿ (ಕೆ) ಗ್ರಾಮದ ಗಂಗಮತ ಕಬ್ಬಲಿಗ ಸಮಾಜದವರು ಈ ದೇವಿಯ ಭಕ್ತರು ಹೆಚ್ಚು ಹೆಚ್ಚಾಗಿ ನಾವು ನೋಡುತ್ತೇವೆ. ಅದರಲ್ಲಿ ನಮ್ಮ ಭಾಗದ ಹುಲಿಗೆಮ್ಮ ದೇವಸ್ಥಾನ ಈಗ ಉದಯವಾಗುತ್ತಿದೆ. ಹುಲಿಗೆಮ್ಮ ದೇವಿಯ ಮೇಲೆ ಭಕ್ತರ ಜನಪದ ಹಾಡುಗಳು:-

ಏಳೇಳು ಹುಲಿಗೆಮ್ಮ ಎಷ್ಟೊತ್ತು ಮಲಗೀದಿ

ಬಾಳಿದಂಡಿಗಿ ಬಿಸಿಲಾಗಿ।

ಗುಡಿ ಮುಂದ ಸಾಲು ಜೋಗ್ತಾರು ಹಸಿದಾರೊ ॥ – ಇದು ನಮ್ಮ ಸಗರನಾಡಿನ


ದೇವತೆಯ ಇವರೊಬ್ಬರು ಪ್ರತಿ ವರ್ಷ ನವರಾತ್ರಿಗೆ ದೀಪೋತ್ಸವ, ಶಿವರಾತ್ರಿಗೆ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಗೋಗಿಯಲ್ಲಿ ಗಂಗಾಮತ (ಕಬ್ಬಲಿಗ) ಭಕ್ತರ ಪಲ್ಲಕ್ಕಿ ಗೋಗಿಯಿಂದ ಭೀಮ ನದಿಗೆ ಹಸರಗುಂಡಿಗೆ ನದಿಯಲ್ಲಿ ಗಂಗಾ ಸ್ನಾನ ಮಾಡಿ ಮೆರವಣಿಗೆ ಮನ್ಮಾಥ ಪಲ್ಲಕ್ಕಿಯನ್ನು ಗೋಗಿ (ಕೆ) ಗ್ರಾಮಕ್ಕೆ ತಂದು ಕಟ್ಟೆ ಮೇಲೆ ಕೂಡಿಸಿ ಗಂಗಾಮತ ಜನರ ಎಲ್ಲ ಮಹಿಳೆಯರು ಕಳಸದೊಂದಿಗೆ ಪಲ್ಲಕ್ಕಿಯ ಮುಂದೆ ಸಾಗಿ ಹಳೆ ಬಸ್ಸ ನಿಲ್ದಾಣ ಮತ್ತು ಅಂಜನೆಯ ಗುಡಿ ಊರಿನ ಅಗಸಿಯ ಮಾರ್ಗವಾಗಿ ಮೂಲಗುಡಿಗೆ ಬಂದು ಸೇರುತ್ತಾರೆ. ಆಂಜನೇಯ ಸ್ವಾಮಿ ದೇವಸ್ಥಾನ ಮಾರ್ಗವಾಗಿ ಬಂದು ಮೂಲ ಗುಡಿಗೆ ಬಂದು ಗುಡಿಯ ಅಂಕಣದಲ್ಲಿ ಪಲ್ಲಕ್ಕಿ ಕೂಡಿಸುತ್ತಾರೆ. ಭಕ್ತರು ಹೊಳಿಗೆ ಮಾಡಿ ಜೋಗತಿಯರನ್ನು ಕರೆದು, ಪಡ್ಸಲಗಿಗೆ (ಹಡ್ಲಗಿ ತುಂಬಿಸಿ) ಎಡೆ ಮಾಡಿ ಊಟ ಮಾಡಿಸಿ ಕಳಿಸುತ್ತಾರೆ. ಈ ಸಂಪ್ರದಾಯಗಳನ್ನು ಎಲ್ಲಮ್ಮನ ಜೋಗತಿ-ಯರಲ್ಲಿಯೂ ಕಾಣುತ್ತೇವೆ. ಆದ್ದರಿಂದ ಈಕೆ ಎಲ್ಲಮ್ಮನ ಇನ್ನೊಂದು ರೂಪವಾಗಿರ-ಬಹುದೆಂದು ಸಂಶಯ ಮೂಡುತ್ತದೆ. ಈ ದೇವತೆ ಕೊಪ್ಪಳ ಜಿಲ್ಲೆಯಲ್ಲಿ ಪ್ರಸಿದ್ಧ ಹೊಂದಿದ ದೇವತೆ ಹುಲಿಗೆಮ್ಮ ದೇವಿಯ ರೈತರು ತಮ್ಮ ಹೊಲ ಗದ್ದೆಗಳಲ್ಲಿ ರಾಶಿ ಮಾಡುವಾಗ ಕಣದಲ್ಲಿ ಪೂಜೆ ಮಾಡುತ್ತಾರೆ. ಜೋಳ, ತೊಗರಿ, ಶೆಂಗಾ, ಹೆಸರು, ಸೂರ್ಯಕಾಂತಿ, ಸಜ್ಜೆ ಮುಂತಾದ ಧವಸ ಧಾನ್ಯಗಳು ಚೀಲ ತುಂಬುವಾಗ ಈ ದೇವಿಯನ್ನು ನೆನೆಯುತ್ತಾರೆ. ಹುಲಿಗೆಮ್ಮವ್ವ ಎಂದು ಚೀಲ ತುಂಬುತ್ತಾರೆ, ಅಂದರೆ ರೈತರ ಮನದಲ್ಲಿ ಹುಲಿಗೆಮ್ಮ ದೇವಿನ ನೆನೆದರೆ ರಾಶಿ, ಚೀಲ ಹೆಚ್ಚು ಹೆಚ್ಚುಗೆ ರಾಶಿ ಹೊಂದುತ್ತವೆಂದು ಹೇಳುತ್ತಾರೆ.

೧೮. ಶ್ರೀ ಕರೆಮ್ಮ ದೇವಿ

ಶಹಾಪೂರ ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೦ ಕಿ.ಮೀ. ದೂರದಲ್ಲಿ ಚಾಮನಾಳ ಕ್ರಾಸ್‌ದಿಂದ ಭೂವಿ ಕಾಡಮಗೇರ ಮಾರ್ಗದಿಂದ ಬೂದೂನೂರು ೧ ಕಿ.ಮೀ. ದೂರದಲ್ಲಿ ಒಂದು ದೊಡ್ಡ ಕ್ಯಾನಲ ಬರುತ್ತದೆ. ಕ್ಯಾನಲ್ ಸುಮಾರು ೬೦ ಅಡಿ ಆಳದ ತೇಗ್ಗಿನ ಕಾಲುವೆ ಮಾರ್ಗವಾಗಿ ಹೋದರೆ ೫೦ ಎಕರೆ ವಿಶಾಲವಾದ ಮತ್ತು ಪ್ರಶಾಂತವಾದ ನೂರಾರು ಗಿಡಗ ಮಧ್ಯ ಶ್ರೀ ಶಕ್ತಿ ದೇವತೆ ಮತ್ತು ಬೂದನೂರು ಗ್ರಾಮದ ಗ್ರಾಮ ದೇವತೆ ಗುಡಿ ಇದೆ ಈ ಗುಡಿಯ ಸುಮಾರು ೫೦ ವರ್ಷಗಳ ಹಳೆದಾಗಿದೆ.



ಶ್ರೀ ಕರೆಮ್ಮದೇವಿ ಗುಡಿ : ಈ ದೇವಿ ಗುಡಿಯು ೪ ಗಿಡಗಳ ಬಡ್ಡೆಯಲ್ಲಿ ದೇವಿ ಆಕಾರದ ಕಲ್ಲನ್ನು ಇಟ್ಟಿದ್ದಾರೆ ಆ ಕಲ್ಲಿಗೆ ಜನರು ಎಣ್ಣಿ ಹಾಕಿ, ಅಗರ ಬತ್ತಿ, ಹಚ್ಚಿ ಆ ನಾಲ್ಕು ಗಿಡಗಳಿಗೆ ಕೆಂಪು ಬಣ್ಣದ ಸೀರಿಸುತ್ತಿದ್ದಾರೆ, ಈ ದೇವಿ ಮೂರ್ತಿಯು ಯಾವ ಶಿಲ್ಪಿ ಕಟ್ಟಿದ ಮೂರ್ತಿಯಲ್ಲ ಸಾಮಾನ್ಯ ಕಲ್ಲು ಇದೆ, ಆ ಕಲ್ಲಿನಲ್ಲಿ ಅದ್ಭುತ ಶಕ್ತಿ ದೇವತೆ ಇದ್ದಾಳೆ.



ದೇವಿ ಗಿಡ ವಿವರ : (೧) ಬೇವಿನ ಗಿಡ, (೨) ತುಗಲಿ ಗಿಡ (೩) ತೊಟ್ಟಿಲ ಗಿಡ (೪) ಆಲದ ಮರ ಈ ರೀತಿಯಾಗಿ ನಾಲ್ಕು ಮರಗಳು ಒಂದರ ಪಕ್ಕದಲ್ಲೊಂದು

ಒಟ್ಟಿಗೆ ಬೆಳೆದು ದೊಡ್ಡ ಆಲದ ಮರದ ನೆರಳಿಗೆ ಭಕ್ತರು ತಮ್ಮ ಇಷ್ಟದ ಆಸೆ ಇಡೇರಿಸಲೆಂದು ದೇವತೆಯಲ್ಲಿ ಶುದ್ಧ ಮನದಿಂದ ಬೇಡಿಕೊಂಡು ಒಂದೊಂದು ತೆಂಗಿನ ಕಾಯಿ ಕೆಂಪು ಬಟ್ಟೆಯಲ್ಲಿ ಕೆಲವರು ಹಸಿರುವ ಬಣ್ಣದ ಬಟ್ಟೆಯಲ್ಲಿ ತೆಂಗಿನಕಾಯಿ ಕಟ್ಟಿದ್ದಾರೆ. ಸುಮಾರು ೧೦೦ ತೆಂಗಿನ ಕಾಯಿ ಕಟ್ಟಿದನು ನಾವು ನೋಡಬಹುದು, ಮತ್ತೆ ಕೆಲವರು ಬೆಳ್ಳಿ ಬಂಗಾರದ ತೊಟ್ಟಿಲು ಕಟ್ಟಿದ್ದಾರೆ, ಇನ್ನೂ ಕೆಲವರು ಹಸಿರು ಬಣ್ಣದ ಬಳೆಗಳು ಗಿಡದ ಕೊಲ್ಲೆಗೆ ಹಾಕಿದ್ದಾರೆ.



ಶ್ರೀ ಕರೆಮ್ಮದೇವಿ ಪಲ್ಲಕ್ಕಿ : ಶ್ರೀ ಕರೆಮ್ಮದೇವಿ ಪಲ್ಲಕ್ಕಿಯು ಮೂದನೂರು ಗ್ರಾಮದ ಶ್ರೀ ಮಲ್ಲಯ್ಯನ ಗುಡಿಯಲ್ಲಿ ಪಲ್ಲಕ್ಕಿ ಇಡುತ್ತಾರೆ. ಈ ಪಲ್ಲಕ್ಕಿ ದೇವಿ ಕಾರ್ಯ ಮಾಡಲು ಫಿಕ್ಸ್ ಮಾಡಿದರೆಅವರಿಗೆ ಪೂಜೆಯೊಂದಿಗೆ ಶುಕ್ರವಾರ ಮುಂಜಾನೆ ಪಲ್ಲಕ್ಕಿಯನ್ನು ತೆಗೆದುಕೊಂಡು ಊರ ಹತ್ತಿರವಿರುವ ದೊಡ್ಡ ಬಾವಿಗೆ ಗಂಗಾ ಸ್ಥಳಕ್ಕೆ ಹೋಗಿ ಪಲ್ಲಕ್ಕಿಯಲ್ಲಿರುವ ಕರೆಮ್ಮದೇವಿ ಮೂರ್ತಿಯನ್ನು ನೀರಿನಿಂದ ತೊಳೆದು ತುಂಬಿದ ಕೋಡ ಕುಂಭಾ, ಕಳಸ ಬಾಜಿ ಭಜಂತ್ರಿಯೊಂದಿಗೆ ಗಂಗಾ ಸ್ಥಳದಿಂದ ಪೂಜೆ ಮುಗಿಸಿಕೊಂಡು ಶ್ರೀ ಆಂಜನೆಯ ದೇವಸ್ಥಾನಕ್ಕೆ ಬರುತ್ತಾರೆ.

ಆಂಜನೇಯ ದೇವರ ಗುಡಿಯ ಒಳ ಅಂಕಣದಲ್ಲಿ ಪಲ್ಲಕ್ಕಿಟ್ಟು ಅಲ್ಲಿಯು ಊರಿನ ಜನರು ಭಕ್ತರು ಕಾಯಿ, ಕರ್ಪೂರ, ಸಕ್ಕರೆ, ಅಗರಬತ್ತಿ, ನೈವೇಧ್ಯ ನೀಡಿ, ದೇವತೆಯಲ್ಲಿ ಕೈ ಮುಗಿದು ಬೇಡಿಕೊಳ್ಳುತ್ತಾರೆ. ತಮ್ಮಗೆ ಸುಖಃ ಶಾಂತಿ ನೆಮ್ಮದಿ ಸಮೃದ್ಧಿ ಹಣ ಅಂತಸ್ತು ಶ್ರೀಮಂತಿಕೆ ಕೊಡು ಎಂದು ದೇವಿಯಲ್ಲಿ ಬೇಡಿಕೊಳ್ಳುತ್ತಾರೆ. ನಂತರ ಈ ಪಲ್ಲಕ್ಕಿಯನ್ನು ನೇರವಾಗಿ ೨ ಕಿ.ಮೀ. ದೂರದಲ್ಲಿರುವ ಶ್ರೀ ಕರೆಮ್ಮ ದೇವತೆಯ ಗುಡಿಗೆ ಡೊಳ್ಳು, ಹಲಗೆ ಕೊಂಬು, ಭಾಜಿ ಭಜಂತ್ರಿ ಅಕರಿಯೊಂದಿಗೆ ಬರುತ್ತಾರೆ. ಇಲ್ಲಿಗೆ ಬಂದ ನಂತರ ದೇವಿ ಗುಡಿಯ ಸುತ್ತಲೂ ಐದು ಪ್ರದಕ್ಷಣೆ ಹಾಕುತ್ತಾರೆ.

ನಂತರ ಗುಡಿಯ ಗೋಡೆಯ ಪಕ್ಕದಲ್ಲಿ ಒಂದು ಕಟ್ಟೆ ಇದೆ, ಈ ಕಟ್ಟೆಯಲ್ಲಿ ಈ ಪಲ್ಲಕ್ಕಿಯನ್ನು ಇಡುತ್ತಾರೆ. ಪಲ್ಲಕ್ಕಿ ಗುಡಿಯ ಕಟ್ಟೆಯಲ್ಲಿ ಕುಳಿತ ಕೂಡಲೆ ಭಕ್ತರು ಹರಕೆಯನ್ನು ಸುಮಾರು ೨೦, ೩೦ ಕುರಿ (ಓತು), ಕೋಣದ ಹರಕೆಯ ಬೇಟೆಯ ಎಲ್ಲವನ್ನು ದೇವಿಯ ಮುಂದೆ ಬಲಿಕೊಡುತ್ತಾರೆ. ಬಲಿಕೊಟ್ಟಂತಹ ಕುರಿ, ಕೋಣದ ತಲೆಗಳು ದೇವಿ ಗುಡಿಯ ಮುಂದೆ ಸಾಲಗಿ ಇಡುತ್ತಾರೆ. ಇಟ್ಟು ಆ ಕೋಣ, ಕುರಿ ಮರಿಗಳಿಗೆ ಹಣೆಗೆ ಬಂಡಾರ, ಕುಂಕುಮ್ಮ ಹಚ್ಚುತ್ತಾರೆ. ಇಡೀ ರಾತ್ರಿ ಬೆಳಗಾನ ದೇವಿಯ ಗುಡಿಯ ಮುಂದೆ ಈ ಪ್ರಾಣಿಗಳ ಮಾಂಸವನ್ನು ಅಡಿಗೆ ಮಾಡಿ ಎಲ್ಲರೂ ಎಲ್ಲಾ ಜಾತಿ ಜನಾಂಗದವರು ಒಟ್ಟಿಗೆ ಕೂಡಿ ಇಲ್ಲಿ ಪದ್ಧತಿಯಂತೆ ಆ ಮಾಂಸ ಇದಕ್ಕೇ ಸರಗ ಎನ್ನುತ್ತಾರೆ. ಸರಗ ಹೊಡೆದ ಮೇಲೆ ಮಾಹಾತಂಗಿ ಮಕ್ಕಳಿಗೆ ಸಾಮೂಹಿಕವಾಗಿ ಪ್ರಸಾದ ತೆಗೆದುಕೊಳ್ಳುತ್ತಾರೆ. ನಂತರ ಎಲ್ಲಾ ಭಕ್ತರು ಎಲ್ಲಾರು ಪದ್ಧತಿಯಂತೆ ಗುಡಿಯ ಮುಂದೆ ಸಾಲಾಗಿ ಕುಳಿತುಕೊಂಡು ದೇವಿ ಪ್ರಸಾದ ತೆಗೆದುಕೊಳ್ಳುತ್ತಾರೆ.

ಮಾರನೆ ದಿನ ಪಲ್ಲಕ್ಕಿಯನ್ನು ಮತ್ತು ಕುರಿ, ಕೋಣದ ತಲೆಯನ್ನು ಪದ್ಧತಿಯಂತೆ ಪ್ರತಿಯೊಂದು ಕುರಿ ಮತ್ತು ಕೋಣದ ಮೇಲೆ ದೀಪ ಇಡುತ್ತಾರೆ. ಇಟ್ಟನಿಂದ ಮಾಡಿದ ಪಣತಿ ಇದರೊಳಗೆ ಎಣಿ ಹಾಕಿ ದೀಪ ಹಚ್ಚಿರುತ್ತಾರೆ. ಈ ದೀಪವನ್ನು ಪ್ರತಿಯೊಂದು ಕೋಣ, ಕುರಿಗಳ ತಲೆ ಮೇಲೆ ಇಟ್ಟು ಪಲ್ಲಕ್ಕಿಯ ಹಿಂದುಗಡೆ ಬಾಜಿ ಭಜಂತ್ರಿ ಹಲಗೆ ಡೊಳ್ಳುನೊಂದಿಗೆ ಮೆರವಣಿಗೆ ಮುಖಾಂತರ ಗುಡಿಯಿಂದ ಊರಿನ ಕಡೆಗೆ ಬರುತ್ತಾರೆ. ಊರಲ್ಲಿರುವ ಶ್ರೀ ಮರೆಮ್ಮ ದೇವಿ ಆವರಣದಲ್ಲಿ ಕುರಿ, ತಲೆಗಳು ಕೋಣದ ತಲೆಗಳು ಎಲ್ಲವು ಸಾಮೂಹಿಕವಾಗಿ ಊಳುತ್ತಾರೆ. ನಂತರ ಪಲ್ಲಕ್ಕಿಯನ್ನು ಪುನಃ ಶ್ರೀ ಮಲ್ಲಯ್ಯನ ಗುಡಿಗೆ ತೆಗೆದುಕೊಂಡ ಹೋಗಿ ಆ ಗುಡಿಯ ಒಂದು ಮೂಲೆಯ ಮೇಲೆ ಭಾಗದಲ್ಲಿ ಹಗ್ಗದಿಂದ ಕಟ್ಟುತ್ತರೆ, ಎಲ್ಲಾ ಭಕ್ತರು ಜೈಕಾರ ಚಪ್ಪಾಳೆ ಹಾಕುತ್ತ ಕೈ ಮುಗಿದು ಬೇಡಿಕೊಳ್ಳುತ್ತಾರೆ. ಈ ದೇವರ ಗುಡಿಯು ದಕ್ಷಿಣ ದಿಕ್ಕಿಗೆ ಮುಖ್ಯ ಬಾಗಿಲು ಇದ್ದು ದೇವಿಯು ದಕ್ಷಿಣ ದಿಕ್ಕಿಗೆ ಮುಖ ಮಾಡಿಕುಳುತ್ತಿದ್ದಾಳೆ. ಭರ್ಗ ಗುಡಿಯೋಳಗೆ ೨ ತರಹ ಗ್ರೀಲ್ ಹಾಕಿದ್ದಾರೆ. ದೇವಿಗೆ ಸದಾ ದೀಪ ಹಚ್ಚಿರುತ್ತಾರೆ. ೨೪ ಗಂಟೆಗಳ ಕಾಲ ದೀಪ ಇರುತ್ತದೆ. ಈ ಗುಡಿಯ ೧೫ x ೨೦ ಅಡಿ ಅಗಲದ ಗುಡಿ ಇದೆ. ಗುಡಿ ಹಿಂದುಗಡೆ ೩ ಅಡಿ ಎತ್ತರದ ೨೦ x ೧೦ ಅಡಿ ಅಗಲದ ಕಟ್ಟೇ ಇದೆ. ಈ ಗುಡಿಯ ಸುತ್ತಾ ಗಿಡಗಳು ಗುಂಪುಗಳಿವೆ.

ತಂಪಾದ ವಿಶಾಲವಾದ ಪ್ರಶಾಂತವಾದ ಸ್ಥಳವಿದೆ. ಈ ಗುಡಿಯ ಮುಂದೆ ಮಹಾ ತಂಗಿ ಮಕ್ಕಳ ಸಣ್ಣ ಸಣ್ಣ ಕಲ್ಲಿನ ದೇವರುಗಳಿವೆ. ಈ ಗುಡಿಯ ಎಡಗಡೆ ಪಾಲಕಮ್ಮ ದೇವಿ ಬಯಲು ಕಟ್ಟೆ ಇದೆ. ಸಣ್ಣ ಸಣ್ಣ ಕಲ್ಲು ದೇವರುಗಳಿವೆ. ಅದರ ಎದುರುಗಡೆ ಒಂದು ಉತ್ತು ಇದೆ. ಹುತ್ತಿನ ಮೇಲೆ ಒಂದು ಗಿಡ ಇದೆ ಈ ಗಿಡಕ್ಕೆ ಭಕ್ತರು ಸೀರಿ ಸುತ್ತಿದ್ದಾರೆ ಮತ್ತು ಹರಕೆ ದಾರ ಕಟ್ಟಿದ್ದಾರೆ.

ಈ ದೇವಿ ಗುಡಿಯ ಮುಂದೆ ಓಮಾ ಸುಡಲು ಓಮಾ ಕಟ್ಟಿ ಇದೆ ಅದರ ಮುಂದೆ ಅನ್ನದ ಕಟ್ಟೆ ಇದೆ ಗುಡಿಯ ಬಲಗಡೆ ಒಂದು ರೂಮ್ (ಕೋಣೆ) ಇದೆ. ದೇವತೆಗೆ ಸಂಬಂಧಿಸಿದ ವಸ್ತುಗಳನ್ನು ಈ ಕೋಣೆಯಲ್ಲಿ ಇಡುತ್ತಾರೆ. ಈ ಗುಡಿಯ ಹಿಂದುಗಡೆ ಸಾರ್ವಜನಿಕರಿಗೆ ಕುಡಿಯಲು ನೀರಿನ ಟ್ಯಾಂಕ್ ಇದೆ. ಈ ನೀರಿನ ಟ್ಯಾಂಕನ್ನು ಇದೆ ಊರಿನ ಭಕ್ತನಾದ ಶ್ರೀ ಶಂಕರ ಸಿಂಘೇ ತಾಲೂಕ ಪಂಚಾಯತ ಸದಸ್ಯರು ಸಾರ್ವಜನಿಕರಿಗೆ ನೀರಿನ ಅನುಕೂಲ ಮಾಡಿದ್ದಾರೆಂದು ಶ್ರೀ ಭೀಮಣ್ಣ ಪೂಜಾರಿ ಹೇಳಿದ್ದಾರೆ. ಒಂದು ಕೋಣೆ ಕಟ್ಟಿಸಿದ್ದಾರೆ. ಅವರ ಸೇವೆ ಬಹಳ ದೊಡ್ಡದೆಂದು ಹೇಳಿದ್ದಾರೆ. ಗುಡಿಯ ಇನ್ನೊಂದು ಮೂಲೆಗೆ ಒಂದು ಕರಿ ಕಲ್ಲಿನ ಗುಂಡು ಇದೆ. ಇದು ಯುವಕರು ತಮ್ಮ ಸಾಮರ್ಥ್ಯ ಶಕ್ತಿ ಪ್ರದರ್ಶನಕ್ಕಾಗಿ ಎತ್ತಲು ಪ್ರಯತ್ನ ಮಾಡುತ್ತಾರೆ. ಈ ದೇವಿ ಗುಡಿಯ ಪಕ್ಕದಲ್ಲಿ ಡಾಂಬರ ಹಾಕಿದ ರಸ್ತೆ ಇದೆ. ಈ ರಸ್ತೆ ನಗನೂರ ಗ್ರಾಮಕ್ಕೆ ಹೋಗುತ್ತದೆ. ಈ ದೇವಿ ಭಕ್ತರು ನಗನೂರು, ಕಾಡಮಗೇರ, ಚಾಮನಾಳ, ಕಕ್ಕಸಗೇರ, ಗೌಡಗೇರಿ, ಕೆಂಬಾವಿ ಸುತ್ತ ಮುತ್ತಲಿನ ಗ್ರಾಮಸ್ಥರು ದೇವಿ ಕಾರ್ಯಕ್ಕೆ ಬರುತ್ತಾರೆ.

ದೇವಿ ಹಿನ್ನಲೆ : ಶ್ರೀ ಕರೆಮ್ಮ ದೇವಿ ಹಿನ್ನಲೆ ಶ್ರೀ ಭೀಮಣ್ಣ ಪೂಜಾರಿ ಹೇಳಿದ ಪ್ರಕಾರ ಊರು ಹುಟ್ಟಿನಿಂದೆ ಈ ದೇವಿ ಹುಟ್ಟಿದ್ದಾಳೆಂದು ನಮ್ಮ ಮುತ್ತ್ಯಾನವರು ಹೇಳಿದ್ದಾರೆ. ಆದರೆ ಇದರ ದಾಖಲಾತಿಗಳು ಇರುವುದಿಲ್ಲ, ಹಿರಿಯರ ನಂಬಿಕೆಯಂತೆ ನಾವು ಮುಂದುವರಿಸಿಕೊಂಡು ಈ ಪದ್ಧತಿ ಆಚರಣೆ ಅಮವಾಸ್ಯೆ, ಹುಣ್ಣಿಮೆ, ಶುಕ್ರವಾರ ಇದೆ. ನಾವು ದೇವಿಯ ಗುಡಿಗೆ ಬಂದು ಬೇಡಿಕೊಳ್ಳುತ್ತೇವೆ. ಹಿರಿಯರು ೧೯೮೧ರಲ್ಲಿ ಈ ಸಣ್ಣ ಗುಡಿ ಕಟ್ಟಿದ್ದಾರೆ. ಅಷ್ಟೇ ನಮಗೆ ಗೊತ್ತು ಇದಕ್ಕಿಂತ ಮುಂಚೆ ಪೂರ್ಣ ಮಾಹಿತಿ ಇಲ್ಲವೆಂದು ಹೇಳಿದ್ದಾನೆ.

ಈ ದೇವಿಯ ವಿಶೇಷತೆ : ಇನ್ನೂವರೆಗೂ ಈ ದೇವಿ ಗುಡಿಯ ಒಳಗೆ ಹೊಲೆಯ, ಮಾದಿಗರು ಹೋಗುವಂತಿಲ್ಲ, ದೇವಿ ಶಕ್ತಿ ಬಹಳ ದೊಡ್ಡದು ಈ ದೇವಿ ಬಗ್ಗೆ ಯಾವುದೇ ಆಕ್ಷೇಪ ಎತ್ತವಂಗಿಲ್ಲ ಏನಾದರೂ ಹೇಳಿದರೆ ದೇವಿ ಶಾಪಕ್ಕೆ ಗುರಿಯಾಗುತ್ತಾರೆ ಸ್ವಲ್ಪ ದಿನಗಳಲ್ಲಿ ಅವರು ಮರಣ ಹೊಂದುತ್ತಾರೆಂದು ಹೇಳುತ್ತಾರೆ.

ಶ್ರೀ ಕರೆಮ್ಮ ದೇವಿ ಮೂರ್ತಿ : ಶ್ರೀ ಕರೆಮ್ಮ ದೇವಿ ಮೂರ್ತಿ ಬೆಳ್ಳಿಯಲ್ಲಿ ಮಾಡಿದ್ದಾರೆಂದು ಶ್ರೀ ಭೀಮಣ್ಣ ಪೂಜಾರಿ ಹೇಳಿದ್ದಾನೆ ಆದರೆ ಈ ಮೂರ್ತಿ ಗುಡಿಯೊಳಗೆ ಇಟ್ಟಿರುವುದಿಲ್ಲ ಶ್ರೀ ಭೀಮಣ್ಣ ಪೂಜಾರಿ ಮನೆಯಲ್ಲಿ ಇಟ್ಟಿರುತ್ತಾರೆ. ಈ ಮೂರ್ತಿಯು ಮಹಾರಾಷ್ಟ್ರ ಪುನಾದಲ್ಲಿ ಜಿಲ್ಲೆಯಲ್ಲಿ ಇದೇ ಊರಿನ ಭಕ್ತನೆ ಮಾಡಿದ್ದಾನೆಂದು ಶ್ರೀ ಭೀಮಣ್ಣ ಪೂಜರಿ ಹೇಳುತ್ತಾನೆ. ಇನ್ನೊಬ್ಬ ಪೂಜಾರಿ ಈ ದೇವಿ ಮೂರ್ತಿಯನ್ನು ಪದ್ಧತಿಯಂತೆ ತರದೇ ಕೇವಲ ಕೆಂಪು ಬಟ್ಟೆಯಲ್ಲಿ ತಂದು ಇಟ್ಟಿದರಿಂದ ಅದಕ್ಕೆ ರೂ.೧೫,೦೦೦/– ಮೂರ್ತಿ ಬೆಲೆ. ಅಭಿಷೇಕ ಮಾಡಿಸಿಲ್ಲ ರಕ್ತ ಅಭೀಷೆಕ ಮಾಡಿಸಬೇಕು ಕಾಯಿ ಹೊಡೆಯಬೇಕು ಕುಂಬಳ ಕಾಯಿ ಹೊಡೆಯಬೇಕು ಇದು ಯಾವುದೇ ಮಾಡದೇ ಕೇವಲ ಮೂರ್ತಿ ಮಾಡಿಸಿಕೊಂಡು ಮನೆಯಲ್ಲಿ ಇಟ್ಟಿರುವುದರಿಂದ ಈ ಮೂರ್ತಿ ಮಾಡಿಸಿದ ಪೂಜಾರಿ ದೇವಿ ಶಾಪಕ್ಕೆ ಗುರಿಯಗಿ ಮರಣ ಹೊಂದಿದನೆಂದು ಹೇಳುತ್ತರೆ. ಈಗ ಅಭಿಷೇಕ ಮಾಡಿದ್ದಾರೆ ಮನೆಯಲ್ಲಿ ಈ ದೇವಿ ಮೂರ್ತಿ ಇಟ್ಟಿದ್ದಾರೆ. ದೇವಿ ಕೈಯಲ್ಲಿ ಒಂದು ತಲವರ ಇದೆ (ಭರ್ಚಿ ಇದೆ) ದೇವಿಗೆ ಪ್ರತಿವರ್ಷ ಕುರಿ ಮರಿಯನ್ನು ದೇವತೆಗೆ ಬಿಡುತ್ತಾರೆ.

ಸಗರ ನಾಡಿನ ಗ್ರಾಮ ದೇವತೆಗಳ ಹರಕೆ ಸಂಪ್ರದಾಯಗಳು

ಮಾನವ ಸ್ವಭಾವತಃ ಸುಖಾಪೇಕ್ಷಿ ಇದಕ್ಕಾಗಿ ಗ್ರಾಮೀಣ ಜನರು ದೇವರಲ್ಲಿ ಮೊರೆ ಹೋಗುತ್ತಾರೆ, ಆಸೆ ಆಕಾಂಕ್ಷೆಗಳು ಈಡೇರಿಕೆಯ ಸಮಯಗಳಲ್ಲಿ ಏನಾದರೂ ಎರಡು ತೊಡರುಗಳು ಬಂದಾಗ ಅವುಗಳನ್ನು ತನ್ನಿಂದ ಬಗೆಹರಿಸಿಕೊಳ್ಳಲು ಸಾಧ್ಯವಾಗದೆ ಇದ್ದಾಗ ಆ ಗ್ರಾಮದಲ್ಲಿರುವ ಗ್ರಾಮ ದೇವತೆಯ ಮೊರೆ ಹೋಗುತ್ತಾನೆ. ಅಲ್ಲದೆ ತನ್ನ ಇಚ್ಚೆಗಳ ಸಫಲವಾದಾಗ ದೇವತೆಗೆ ಕೃತಜ್ಞತೆಯನ್ನು ಸೂಚಿಸಲು ಶಕ್ತಿಗನೂಸಾರ ವಿವಿಧ ವಸ್ತುಗಳು ಇಲ್ಲವೆ ಸೇವೆಗಳನ್ನು ದೇವತೆಗೆ ಅರ್ಪಿಸುತ್ತಾರೆ. ಇಂತಹ ಅರ್ಪಣೆ ಆಚರಣೆಗಳಿಗೆ

ಹರಕೆ ಹೊರುವುದು ಎಂದು ಕರೆಯುತ್ತಾರೆ. ಹರಕೆ ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಪ್ರಕಾರ ಆಶೀರ್ವಾದ ದೇವರಿಗೆ ಮಾಡುವ ಸೇವೆ, ನಿರ್ಧಾರ, ಸಂಕಲ್ಪ, ಮುಡಿಪು, ಮೀಸಲು ಕಟ್ಟು, ಮುಡಿವು, ಮಿಸಲಿರಿಸು, ಎಂಬುದಾಗಿರುತ್ತದೆ.

ತಮ್ಮ ನಿತ್ಯ ಜೀವನದಲ್ಲಿ ಹಲವಾರು ಬಯಕೆಗಳು ಆಸೆಗಳು ಮೂಡುತ್ತವೆ. ಇವುಗಳ ಈಡೇರಿಕೆಗಾಗಿ ದೇವತೆಗೆ ಹರಕೆ ಹೋರುತ್ತಾರೆ ಅಥವಾ ಬೇಡಿಕೊಳ್ಳುತ್ತಾರೆ ದೇವತೆಗೆ ತನ್ನ ತೂಕದಷ್ಟು ತೆಂಗಿನ ಕಾಯಿ ಒಡೆಯುತ್ತೇನೆ, ದೀಡ ನಮಸ್ಕಾರ ಹಾಕುತ್ತೇನೆ, ಉರುಳು ಸೇವೆ ಮಾಡುತ್ತೇನೆ, ಮುಡಿಪು ಕಟ್ಟುತ್ತೇನೆ, ಎಲಿ ಪೂಜೆ ಹಾಗೂ ಕುಂಕು ಪೂಜೆ, ಬೆಣ್ಣೆ ಪೂಜೆ, ಬುತ್ತಿ ಪೂಜೆ, ಕೌದಿ ಪೂಜೆ, ಅಗ್ನಿ ತುಳಿಯುವುದು, ಬ್ಯಾಟಿ ಮಾಡುವುದು, ಕಾರ್ತಿಕ ಹಚ್ಚೋದು, ತೇರು ಎಳೆಯುವದು, ಪಲ್ಲಕ್ಕಿ ಮಾಡಿಸುವುದು, ಗುಡಿ ಕಟ್ಟಿಸೋದು, ಅನ್ನಪ್ರಸಾದ ಮಾಡಿಸುವುದು, ಛತ್ರಿ (ಕೊಡೆ) ಎರಿಸುವುದು, ಬೆಳ್ಳಿ ಕುದುರೆ, ಬೆಳ್ಳಿ ತೊಟ್ಟಿಲು ಮಾಡಿಸುವುದು, ಮಕ್ಕಳ ಜವಳ ತೆಗೆಸುವುದು, ಗುಡಿಯಲ್ಲಿ ಗಂಟೆ ಕಟ್ಟುವುದು, ಗುಗ್ಗಳ ಹರಕೆ, ದೇವಿಗೆ ಉಡಿ ತುಂಬುವುದು, ಕೋಳಿ ಹಾರಿಸುವುದು, ಕುರಿ ಮರಿ ಹಾರಿಸುವುದು, ಸಿಡಿ ಆಡುವುದು ಹೀಗೆ ನಮ್ಮ ಭಾಗದ ಗ್ರಾಮೀಣ ಜನರು ದೇವತೆ ತಮ್ಮ ಹರಕೆಯನ್ನು ಬೇಡಿಕೊಳ್ಳುತ್ತಾರೆ.

ಹೀಗೆ ಸಗರನಾಡಿನ ಸಾಂಸ್ಕೃತಿಕ ಪರಿಸರದ ಐತಿಹಾಸಿಕ ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ಸ್ಥೂಲವಾಗಿ ಅಧ್ಯಯನ ಮಾಡಲಾಗಿದ್ದು, ಮುಂದಿನ ಅಧ್ಯಾಯಗಳಲ್ಲಿ ಈ ಪ್ರದೇಶದಲ್ಲಿ ಕಂಡುಬರುವ ಶಿಲಾ, ಮರ, ಲೋಹ ಹಾಗೂ ಸಂಕೀರ್ಣ ಮಾಧ್ಯಮಗಳಿಂದ ರಚನೆಗೊಂಡ ಗ್ರಾಮದೇವತೆಗಳ ಕುರಿತು ವಿವರವಾಗಿ ಅಧ್ಯಯನ ಮಾಡಲಾಗಿದೆ.



ಮರೆಮ್ಮ ದೇವಿ, ಗೋಗಿ ಗ್ರಾಮ, ಶಹಾಪೂರ ತಾ॥



ಶ್ರೀ ಲಕ್ಷ್ಮೀ ದೇವಿ, ಗೋಗಿ ಗ್ರಾಮ, ಶಹಾಪೂರ ತಾ॥



ಶ್ರೀ ದ್ಯಾವಮ್ಮ ದೇವಿ, ಕೊಳ್ಳೂರು (ಎಂ) ಗ್ರಾಮ, ಶಹಾಪೂರ ತಾಲೂಕು



ಶ್ರೀ ದ್ಯಾವಮ್ಮ ದೇವಿ, ಶಹಾಪೂರ ನಗರ



ಶ್ರೀ ದ್ಯಾವಮ್ಮ ದೇವಿ, ಹಳೇ ಪೇಟೆ, ಶಹಾಪೂರ ನಗರ



ಶ್ರೀ ಕಾಳಿಕಾ ದೇವಿ, ಶಹಾಪೂರ ನಗರ



ಶ್ರೀ ಸೀಮಿ ಮರೆಮ್ಮ ದೇವಿ, ಗುಂಡಹಳ್ಳಿ ತಾಂಡಾ, ಶಹಾಪೂರ ತಾಲೂಕು

ಅಧ್ಯಾಯ : ಮೂರು

ಶಿಲಾ ಮಾಧ್ಯಮದ ಗ್ರಾಮದೇವತೆಗಳು

ಅಧ್ಯಾಯ : ಮೂರು

ಶಿಲಾ ಮಾಧ್ಯಮದ ಗ್ರಾಮದೇವತೆಗಳು

ಸಗರನಾಡಿನ ಭವ್ಯಗತ್ತ ಸಂಪ್ರದಾಯ ಹೊಂದಿದ ಫಣಿ ಈ ಸಗರನಾಡು. ಇಲ್ಲಿ ಹಿಂದೆ ಸುರಪುರ ಅರಸರು ಆಳಿದ ನಾಡು. ಇವರ ಆಳ್ವಿಕೆಯ ಅವಧಿಯಲ್ಲಿ ತಮ್ಮದೇ ಆದ ಕಲ್ಪನಾತ್ಮಕ ಹಿನ್ನೆಲೆಯಲ್ಲಿ ಕೆತ್ತಿಸಿರುವ ಶಿಲಾ ಮೂರ್ತಿಗಳನ್ನು ಇಂದಿಗೂ ನಾವು ಕಾಣಬಹುದು. ಹೊಯ್ಸಳ, ಚಾಲುಕ್ಯ ಹಾಗೂ ಜನಪದ ಶೈಲಿಗಳಲ್ಲಿ ಶಿಲಾಕೃತಿಗಳಿದ್ದು, ವಿಜಯನಗರ ಅರಸರ ಆಳ್ವಿಕೆಯ ಸಂದರ್ಭದಲ್ಲಿ ಹಲವಾರು ಮೂರ್ತಿಗಳನ್ನು ಸಗರನಾಡಿನಲ್ಲಿ ರಚನೆ ಮಾಡಿರುವುದನ್ನು ಗುರುತಿಸಬಹುದು. ಉದಾ: ಜೇವರ್ಗಿ ತಾಲೂಕಿನ ನೀರಡಗಿ ಗ್ರಾಮದ ಶ್ರೀ ಕಾಳಿಕಾದೇವಿ, ಸುರಪುರ ತಾಲೂಕಿನ ಏವೂರು ಗ್ರಾಮದ ಶ್ರೀ ಬಸವಣ್ಣ ದೇವಸ್ಥಾನದಲ್ಲಿನ ಮೂರ್ತಿಗಳು, ಅಗ್ನಿ ಗ್ರಾಮದ ಜೈನ ವಿಗ್ರಹಗಳು, ಸನ್ನತಿಯ ಬೌದ್ಧ ವಿಗ್ರಹಗಳು, ಮುಸ್ಲಿಮ್ ವಾಸ್ತುಶಿಲ್ಪಗಳು, ಸುರಪುರ ಮತ್ತು ಶಹಾಪೂರ ಕೋಟೆಯಲ್ಲಿ ಅಂದು ಆಳಿದ ರಾಜಮನೆತನದ ಅರಸರು ಕೆತ್ತಿಸಿದ ಕಲ್ಲಿನ ಮೂರ್ತಿಗಳಿದ್ದು, ಅವುಗಳಲ್ಲಿ ಕೆಲವು ಭಗ್ನಗೊಂಡಿದ್ದು, ಇನ್ನೂ ಕೆಲವು ಹಾಗೆಯೇ ಉಳಿದುಕೊಂಡಿರುವುದನ್ನು ಕಾಣಬಹುದು.

ಒಟ್ಟಾರೆ ಈ ಸಗರನಾಡಿನ ಗತವೈಭವ ವಿವರಣೆ ಬಹಳವಿದ್ದು, ಅವರು ರಚಿಸಿರುವ ಅನೇಕ ಶಿಲ್ಪಕಲಾಕೃತಿಗಳು ಇಂದು ಮಣ್ಣಿನಲ್ಲಿ ಹಲವು ಹುದುಗಿವೆ. ಕೆಲವು ಮೂರ್ತಿಗಳು ಭಗ್ನಗೊಂಡಿವೆ, ಸಂರಕ್ಷಣೆ ಮಾಡುವವರಿಲ್ಲದೆ ಹಾಳುಬಿದ್ದಿವೆ. ಕೆಲವು ದೇವಾಲಯದಲ್ಲಿನ

ಸುಂದರವಾದ ಕಲ್ಲಿನ ನಂದಿ, ವಿಷ್ಣು, ಲಕ್ಷ್ಮೀ, ಆಮೆ, ಸಿಂಹ, ಪಾರ್ವತಿ ಹೀಗೆ ಹತ್ತು ಹಲವು ವಿಷಯಾಧಾರಿತ ಶಿಲಾಕೃತಿಗಳು ಇಂದಿಗೂ ಹಾಗೆಯೇ ಉಳಿದುಕೊಂಡು ಬಂದಿರುವುದು ಸಂತೋಷದಾಯಕವಾಗಿದೆ. ಇಂತಹ ಗತವೈಭವ ಸಗರನಾಡಿನಲ್ಲಿ ರಚನೆಗೊಂಡ ಶಿಲಾಮಾಧ್ಯಮದ ಕಲಾಕೃತಿಗಳನ್ನು ಆಯ್ದು, ಅವುಗಳ ವಸ್ತುವಿಷಯ, ಅಳತೆ, ವಿನ್ಯಾಸ, ಗುಡಿಯ ವಿವರ ಹೀಗೆ ವೈವಿಧ್ಯಮಯವಾಗಿ ಈ ಕೆಳಗಿನಂತೆ ಚರ್ಚಿಸಲಾಗಿದೆ.

೦೧. ಶ್ರೀ ಭೀಮಲಿಂಗೇಶ್ವರ ಗುಡಿಯ

೧೩೯ನೇ ರಥೋತ್ಸವ ಇದೇ ಗ್ರಾಮದ ಗುಡ್ಡದ ಮೇಲೆ ಇರುವ ಶ್ರೀ ಭೀಮಲಿಂಗೇಶ್ವರ ದೇವರ ಜಾತ್ರೆ ಪ್ರತಿ ವರ್ಷ ಬಹಳ ವಿಜೃಮಣೆಯಿಂದ ನಡೆಯುತ್ತದೆ ಪ್ರತಿ ವರ್ಷ ಛಟ್ಟಿ ಅಮವಾಸೆ ದಿನಾಂಕ ೨೯/೧೧/೨೦೧೬ ಸಾಯಂಕಾಲ ೬-೩೦ಕ್ಕೆ ವೇ॥ಮೂ॥ ಶ್ರೀಸಿದ್ದಲಿಂಗಯ್ಯಸ್ವಾಮಿ ಚತುರಾಚಾರ್ಯಮಠ ಇವರ ಮನೆಯಿಂದ ಕರ್ತೃಗದ್ದುಗೆವರೆಗೆ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ನಡೆಯುತ್ತದೆ ಊರಿನಿಂದ ಡೋಳ್ಳು ಹಲಗೆ ಭಾಜಿ ಭಜಂತ್ರಿಯೊಂದಿಗೆ ಪುರವಂತರು ಮಹಾತಂಗಿ ಮಕ್ಕಳು ಊರಿನ ಮಾಲಿಗೌಡ, ಪೊಲೀಸ್‌ಗೌಡ, ಪೂಜಾರಿಗಳು ಸ್ವಾಮಿಗಳು ಪಲ್ಲಕ್ಕಿಯೊಂದಿಗೆ ಭವ್ಯ ಮೆರವಣಿಗೆಯೊಂದಿಗೆ ಶ್ರೀ ಭೀಮಲಿಂಗೇಶ್ವರ ಗುಡಿಗೆ ಬರುತ್ತಾರೆ.



೨೦೧೬ನೇ ವರ್ಷ ವಿವರ ದಿನಾಂಕ ೦೩/೧೨/೨೦೧೬ ರಂದು ಶುಕ್ರವಾರ ಬೆಳಗ್ಗೆ ೯-೦೦ಕ್ಕೆ ಕರ್ತೃಗದ್ದುಗೆಗೆ ರುದ್ರಾಭಿಷೇಕ ಹಾಗೂ ಬಿಲ್ವಾರ್ಚನೆ ರಾತ್ರಿ ೯-೩೦ಕ್ಕೆ ಉಚ್ಚಾಯ ಕಾರ್ಯಕ್ರಮ ನಡೆಯುತ್ತದೆ. ದಿನಾಂಕ ೦೫/೧೨/೨೦೧೬ ರಂದು ಸೋಮವಾರದಂದು ಬೆಳ್ಳಗೆ ೧೦ ಗಂಟೆಯಿಂದ ಕೈ ಕುಸ್ತಿಗಳು ಪ್ರಾರಂಭ ವಾಗುವವು ೩ ಜನರನ್ನು ಗೆದ್ದವರಿಗೆ ತೆಂಗಿನಕಾಯಿ ಮತ್ತು ೫ ಜನರನ್ನು ಗೆದ್ದವರಿಗೆ ಒಂದು ಬೆಳ್ಳಿ ಕಡಗ ಬಹುಮಾನ ಕೋಡಲಾಗುತ್ತದೆ. ದಿನಾಂಕ ೮/೧೨/೨೦೧೬ ರಂದು ಗುರುವಾರ ಸಾಯಂಕಾಲ ೬-೩೦ಕ್ಕೆ ಕಳಸದ ಆವರೋಹಣ ಕಾರ್ಯಕ್ರಮ ಮತ್ತು ಕಡುಬಿನ ಕಾಳಗವು ಇರುವುದು ಇನ್ನೂಳಿದಂತೆ ಪ್ರತಿನತ್ಯ ಬೆಳಗ್ಗೆ ಗದ್ದೆಗೆಯ ಪೂಜಾ ಕಾರ್ಯಕ್ರಮ ಹಾಗೂ ಸಾಯಂಕಾಲ ಭಜನೆ ಕಾರ್ಯಕ್ರಮ ಜರುಗುತ್ತವೆ. ಪರಸ್ಥಳದಿಂದ ಬಂದ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಇರುತ್ತದೆ ಈ ರೀತಿಯಾಗಿ ಪ್ರತಿವರ್ಷ ಶ್ರೀ ಭೀಮಲಿಂಗೇಶ್ವರ ಜಾತ್ರೆ ನಡೆಯುತ್ತದೆಂದು ಊರಿನ ಹಿರಿಯ ಹೇಳಿದ್ದಾರೆ ಈ ಸಂದರ್ಶನ ನೀಡಿದವರು. ದಿನಾಂಕ ೦೪/೧೧/೨೦೧೬ ರಂದು ರವಿವಾರ ಸಾಯಂಕಾಲ ೬-೦೫ಕ್ಕೆ ಭವ್ಯ ರಥೋತ್ಸವ ಜರುಗುವುದು ಸಾವಿರಾರು ಭಕ್ತರ ಮಧ್ಯೆ ಈ ರಥೋತ್ಸವ ನಡೆಯುತ್ತದೆ ಜೈಕಾರ ಮಧ್ಯೆ ರಥ ಎಳೆಯುತ್ತಾರೆ. ಈ ರಥವು ಯಾವ ಕಡೆ ಜಾಸ್ತಿ ಹೋಗುತ್ತದೆ ಆ ಭಾಗದ ಹೋಲ ಗದ್ದೆ ದವಸ ದಾನ್ಯ ಹೆಚ್ಚಿಗೆ ಬೆಳೆಯುತ್ತದೆಂದು ಈ ಊರಿನ ಜನರ ರೈತರ ನಂಬಿಕೆ ಮತ್ತು ಸತ್ಯ ಇದೆ ಎದು ಊರಿನ ಹಿರಿಯರು ಹೇಳುತ್ತಾರೆ.

೦೨. ಶ್ರೀ ಆಂಜನೆಯ ಸ್ವಾಮಿ ಮೂರ್ತಿ

ಸುಮಾರು ೪೦೦ ವರ್ಷಗಳ ಕಾಲ ಹಿಂದೆ ಈ ಮೂರ್ತಿಯನ್ನು ಬಿಳಿ ಸಂಗ್ರಾಮ ಕಲ್ಲಿನಲ್ಲಿ ಕೆತ್ತನೆ ಮಾಡಿದ್ದಾರೆ ಈ ಮೂರ್ತಿ ೫ ಅಡಿ ಎತ್ತರ ವಿದೆ ಅರ್ಧ ಮುಖ ಕಾಣುತ್ತದೆ ಕೈಯಲ್ಲಿ ಗುಡ್ಡ ಇಡಿದಿರುವ ಹಾಗೆ ಶಿಲ್ಪಿಗಳು ಕೆತ್ತನೆ ಮಾಡಿದ್ದಾರೆ ಮುಖ ಕೈ ಕಾಲು ಸುಂದರ ಮತ್ತು ಆಕರ್ಷಿಸುವಂತೆ ಇದೆ ಈ ಭಕ್ತರು ಈ ಮೂರ್ತಿ ಕೆಂಪು ಬಣ್ಣ ಹಚ್ಚಿದ್ದಾರೆ ಎಲ್ಲವು ಕೆಂಪು ಬಣ್ಣದಿಂದ ಕಾಣುತ್ತದೆ ಗುಡಿಯ ಮುಂದೆ ೧೦ ಫೀಟು ಎತ್ತರದ ಒಂದು ಸಿಮೆಂಟಿನಿಂದ ಮಾಡಿದ ಆಂಜನೆಯ ಸ್ವಾಮಿ ನಂತ ಮೂರ್ತಿಯನ್ನು ಮಾಡಿದ್ದಾರೆ ಕೈಯಲ್ಲಿ ಒಂದು ಗಧಾ ಇಡಿದಿದ್ದಾನೆ ಬಾಲ ಮೇಲೆ ಎತ್ತಿ ನಿಂತಿರುವ

ಮೂರ್ತಿ ಭಕ್ತಿ ಉಂಟುಮಾಡುತ್ತಿದೆ ಗುಡಿಯ ಎದುರಿಗೆ ಕಲ್ಲಿನಲ್ಲಿ ಕೆತ್ತನೆ ಮಡಿದ ನಾಗಪ್ಪನ ಮೂರ್ತಿ (ನಾಗರ ಹಾವಿನ) ೨,೩ ಕಲ್ಲಿನ ಮೂರ್ತಿಗಳಿವೆ ಜನರು ಆ ಕಲ್ಲಿನ ಮೂರ್ತಿಗೆ ಹಾಲು, ಎಣ್ಣೆ ಹಾಕಿ ಆ ಮೂರ್ತಿ ಕುಂಕುಮ್ಮ ಚಂದ್ರ ಹಚ್ಚಿದ್ದಾರೆ ಭಕ್ತರ ಅಲ್ಲಿ ಕೈ ಮುಗಿದೆ ಬೇಡಿಕೋಳ್ಳುತ್ತಾರೆ.

೦೩. ಶ್ರೀ ಆಂಜನೇಯ ಸ್ವಾಮಿ (ನಾಯ್ಕಲ್ ಗ್ರಾಮ)

ಈ ಗ್ರಾಮದ ಮೂಲ ದೇವರು ಶ್ರೀ ಆಂಜನೇಯ ಸ್ವಾಮಿ ದೇವರು ಎಲ್ಲಾ ರೀತಿಯ ಗಾಳಿ, ದೂಳಿ, ಜ್ವರ, ಜಡ್ಡು ಆಪತ್ತು ಅನೇಕ ರೀತಿ ಪರಿಹಾರ ನೀಡುವ ದೇವನ್ನು ಶ್ರೀ ಆಂಜನೇಯ ದೇವನ್ನು ಈ ದೇವತಾ ಮೂರ್ತಿ ಕಲ್ಲಿನಿಂದ ಕೆತ್ತನೆ ಮಾಡಿದ್ದಾರೆ ಸುಮಾರು ವರ್ಷಗಳಿಂದ ಆಗಿರಬಹುದೆಂದು ಹಿರಿಯರು ಹೇಳುತ್ತಾರೆ ಊರು ಹುಟ್ಟಿದಾಗಲೇ ಈ ಆಂಜನೇಯ ಸ್ವಾಮಿ ದೇವನ್ನು ಹುಟ್ಟಿದಾನೆಂದು ಜನರ ನಂಬಿಕೆ. ಈ ಆಂಜನೇಯ ಹುಟ್ಟಿದ ದಿನಾಂಕ ಮತ್ತು ಇಸ್ವಿ ಯಾವುದೇ ನಕರ ಮಾಹಿತಿ ಇರುವುದಿಲ್ಲ ಹಿರಿಯರ ಹೇಳಿಕೆಯಂತ ಬರೆದಿದ್ದೇನೆ. ಈ ದೇವನ್ನು ಪೌರಾಣಿಕೆ ಹಿನ್ನಲೆಯಲ್ಲಿ ರಾಮ ಲಕ್ಷ್ಮಣ ಸೀತೆ ಹೀಗೆ ಪೌರಾಣಿಕ ಕಥೆಯಲ್ಲಿ ಶ್ರೀ ರಾಮ ಆಂಜನೇಯ ಸ್ವಾಮಿ ದೇವನ್ನು ಇದ್ದಾನೆಂದು ಹೇಳುತ್ತಾರೆ ಈ ನಾಯ್ಕಲ್ ಗ್ರಾಮದಲ್ಲಿ ಎಲ್ಲಾ ಜಾತಿ ಜನಾಂಗದವರು ಮಹಿಳೆಯರು ಮಕ್ಕಳು ಹಿರಿಯರು ಕಿರಿಯರು ಎಲ್ಲಾರು ದೇವರಿಗೆ ಬಂದು ಬೇಡಿಕೋಳುತ್ತಾರೆ ಅಷ್ಟೆಲ್ಲ ಮುಖ್ಯ ರಸ್ತೆಯ ಪಕ್ಕದಲ್ಲಿ ಇರುವುದರಿಂದ ಬಸ್ಸನಲ್ಲಿ ಪ್ರಯಾಣ ಮಾಡುವರು ಆ ಆಂಜನೇಯ ಸ್ವಾಮಿ ಗುಡಿ ಹೋದಾಕ್ಷಣ ದೇವರಿಗೆ ಕೈ ಮುಗಿದು ಬೇಡಿಕೊಳ್ಳುತ್ತಾರೆ.

ನಮ್ಮ ಮುಂದಿನ ಕೆಲಸ ಸುಗಮವಾಗಿ ಸಾಗಲಿ ನಮ್ಮ ಮನದಲ್ಲಿ ಕೆಲಸ ಇಡೇರಲ್ಲಿ ಎಂದು ಬಸ್ಸ್‌ನ ಕಿಟಕಿಯಲ್ಲಿ ಕುಳಿತವರು ಮತ್ತು ಬಸ್‌ನಲ್ಲಿ ನಿಂತಿರುವ ಈ ದೇವರ ಮೂರ್ತಿ ನೋಡಿದರೆ ಬೇಡಿಕೊಳುತ್ತಾರೆ ಈ ಭಾಗದ ನಂಬಿಕೆ ದೇವರು ಈ ಸಗರನಾಡಿನ ಗ್ರಾಮ ದೇವತೆಗಳು ಯಾವುದೇ ಊರಲ್ಲಿ ಆಗಲ್ಲಿ ರಸ್ತೆಯ ಪಕ್ಕದಲ್ಲಿ ದೇವರ ಗುಡಿ ಇದ್ದರೆ ಸಾಕು ಇಲ್ಲಿ ಜನರು ಕೈ ಮುಗಿದು ಬೇಡಿಕೊಳ್ಳು ರೂಡಿಯು ಈ ಸಗರನಾಡಿನ ಜನಾಂಗದ ಪದ್ಧತಿಯಾಗಿದೆ ಕೆಲವರು ವಿದ್ಯಾವಂತರು ಕೆಲವರು ದೇವರನ್ನು ನಂಬುವುದಿಲ್ಲ ಅವರು

[illegible]


ಬೇಡಿಕೋಳುವುದಿಲ್ಲ. ಪ್ರತಿ ಅಮವಾಸ್ಯೆ ಮತ್ತು ಹುಣ್ಣಿಮೆ ಹಾಗೂ ಶುಕ್ರವಾರ, ಮಂಗಳವಾರ, ಭಕ್ತರಿಗೆ ದೇವಿಯ ಪೂಜಾರಿಯಾದ ಶ್ರೀ ನಾಗಪ್ಪ ಪೂಜಾರಿ ದೇವರು ಹೇಳಿಕೆ ಹೇಳುತ್ತಾನೆ. ಶ್ರೀ ಹುಲಗಮ್ಮ ದೇವಿ ಗುಡಿಯು ಮೇಲಭಾಗ ದೇವಿಯ ಮೂರ್ತಿ ಮಾಡಿದ್ದಾರೆ ಸೀಮೆಂಟಿನಿಂದ ದೇವಿ ಮೂರ್ತಿ ಹಾಗೂ ಹುಲಿ, ಸಿಂಹ ಕೀರ್ತಿ ಮೂಖ, ಪ್ರಬಾವಳಿ ಡಿಜಾಯನಂಗ್ ನೋಡಗರಿಗೆ ಭಕ್ತರಿಗೆ ಭಕ್ತಿ ಮೂಡುವಂತೆ ಶಿಲ್ಪಕಲಾವಿದನು ತನ್ನ ಕಲೆಯನ್ನು ಅತ್ಯಂತ ನಾಜುಕಿನಿಂದ ಸಿದ್ದ ಪಡಿಸಿದ್ದಾನೆ ಆ ಸಿಮೆಂಟಿನ ದೇವಿಯು ಮೂರ್ತಿ ಅದಕ್ಕೆ ತಕ್ಕಂತೆ ಬಣ್ಣವನ್ನು ಚಿತ್ರಕಲಾವಿದ ನೋಡಗರಿಗೆ ದೇವಿ ಎದ್ದು ಬರುವಂತೆ ಬ್ರೆಸ್‌ಗಳ ಸಹಾಯದಿಂದ ಬಣ್ಣಗಳ ಮಿಶ್ರಣದಿಂದ ಅತ್ಯಂತ ಸುಂದರವಾಗಿ ಕಲಾವಿದ ಬಣ್ಣವನ್ನು ಲೇಪನೆ ಮಾಡಿದ್ದಾನೆ ಆ ಚಿತ್ರ ಕಲಾವಿದನೆ ಸಂಭಾವನೆ ಮತ್ತು ಶಾಲು ಹೂವಿನ ಹಾರ ಹಣ್ಣು ಕೊಟ್ಟು ಗೌರವಿಸಿದ್ದಾರೆ. ಚಿತ್ರ ಕಲಾವಿದನಾದ ಶ್ರೀ ಸಿದ್ಧರಾಮ ತಂದೆ ಮರೆಪ್ಪ ಭಂಡಾರಿ ನಾಯ್ಕಲ್ ಈ ಚಿತ್ರಕಲಾವಿದ ಸತತವಾಗಿ ೮ ವರ್ಷಗಳ ಕಾಲ ಚಿತ್ರಕಲಾ ಪದವಿ ಅಭ್ಯಾಸ ಮಾಡಿದ್ದಾನೆ.

ನಾಯ್ಕಲ್ ಗ್ರಾಮದ ಎಲ್ಲಾ ದೇವತೆಯ ಗುಡಿಗಳಿಗೆ ಈ ಚಿತ್ರ ಕಲಾವಿದನಿಂದ ಬಣ್ಣ ಹಚ್ಚಲು ಊರಿನ ಹಿರಿಯ ಹೇಳುತ್ತಾರೆ ಈ ಚಿತ್ರ ಕಲಾವಿದ ಆಯಾ ದೇವಿ ಹೆಸರಿನಿಂದ ಇರುವ ಶಕ್ತಿ ದೇವತೆಯ ಬಣ್ಣಗಳು ಬೇರೆ ಶಾಂತಿ ದೇವತೆಯ ಬಣ್ಣಗಳು ಬೇರೆ ಹೀಗೆ ಆಯಾ ದೇವತೆಗಳಿಗೆ ಹೊಂದುವಂತೆ ಚಿತ್ರ ಕಲಾವಿದ ಬಣ್ಣಗಳನ್ನು ಕೊಟ್ಟು ಒಳ್ಳೆಯ ಚಿತ್ರ ಕಲಾವಿದನಾಗಿದ್ದಾನೆ. ಸಧ್ಯ ಈ ಚಿತ್ರ ಕಲಾವಿದ ಯಾದಗೀರ ಜಿಲ್ಲೆಯ ಡಾನ್ ಬಾಸ್ಕಕೊ ಶಾಲೆಯಲ್ಲಿ ತಾತ್ಕಾಲಿಕವಾಗಿ ಚಿತ್ರಕಲಾ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾನೆ ಯಾವುದೇ ಊರಿನಲ್ಲಿ ಚಿತ್ರ ಬಣ್ಣ ಇದರೆ ಆ ದೇವರ ಗುಡಿಯ ಸಮಿತಿಯವ ಇವನನ್ನು ಬೇಟಿಯಗಿ ಬಣ್ಣ ಹಚ್ಚುವಂತೆ ಕೇಳಿಕೋಳುತ್ತಾರೆ. ಈ ಚಿತ್ರ ಕಲವಿದರಾದ ಶ್ರೀ ಸಿದ್ಧರಾಮ ಭಂಡಾರಿ ತಮ್ಮ ಸುತ್ತಾ ಮುತ್ತಾ ಗ್ರಾಮಗಳ ಗ್ರಾಮ ದೇವತೆಗಳಿಗೆ ಪ್ರತಿ ವರ್ಷ ಮತ್ತು ಮೂರು ವರ್ಷಕೊಮ್ಮೆ ಬಣ್ಣ ಹಚ್ಚುವ ಪದ್ಧತಿ ಇದೆ ಈ ಚಿತ್ರ ಕಲಾವಿದ.

೦೪. ಶ್ರೀ ಮೌನೇಶ್ವರ ಮತ್ತು ಶ್ರೀ ಕಾಳಿಕಾದೇವಿ (ಭೂಯಿ ಕಾಡಮಗೇರಾ ಗ್ರಾಮ)

ಶಹಾಪೂರ ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೫ ಕಿ.ಮೀ ದೂರದಲ್ಲಿ

ಗೋಗಿಯಿಂದ ದರ್ಶನಾಪೂರ ಮಾರ್ಗವಾಗಿ ಮತ್ತು ಚಾಮನಾಳ ಗ್ರಾಮದ ಮಾರ್ಗವಾಗಿ ಹೋದರೆ ಅಲ್ಲಿದೆ ಭೂಯಿಕಾಡಮಗೇರ ಶ್ರೀ ಮೌನೇಶ್ವರ ಮತ್ತು ಶೀ ಕಾಳಿಕಾದೇವಿಯ ಒಂದೇ ಗುಡಿಯಲ್ಲಿ ಎರಡು ದೇವರ ಇರುವ ಈ ಜಿಲ್ಲೆಯಲ್ಲಿ ಇದೆ, ಗ್ರಾಮವಗಿದೆ ಈ ಭೂಯಿ ಕಾಡಮಗೇರ (ಕೆ) ಈ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ದ್ಯಾವಮ್ಮದೇವಿ ಗುಡಿಯು ಸುಮಾರು ೮೦ ವರ್ಷ ಹಳೆ ಗುಡಿಯನ್ನು ನಾವು ನೋಡಬಹುದು. ಈ ಊರಿಗೆ ಮೂಲ ಹೆಸರು ಕಾಳಮ್ಮನ ಕೇರಿ ಎಂದು ಹೇಳುತ್ತಿದ್ದರೆಂದು ಊರಿನ ಮಾಲಿ ಗೌಡರಾದ ಶ್ರೀ ಯಲ್ಲಣ್ಣ ಗೌಡ ಮಾಲಿ ಪಾಟೀಲ ಹೇಳುತ್ತಾರೆ. ಆದರೆ ಈಗ ಜನರ ಆಡು ಭಾಷೆಯಲ್ಲಿ ಕಾಳಮ್ಮ ಕೇರಿ ಹೋಗಿ ಕಾಡಮಗೇರಿ, ಮತ್ತು ಭೂ ಕಂದಾಯ ಇಲಾಖೆಯಲ್ಲಿ ಭೂಮಿ ಕಾಡಮ ಗೇರಿ ಎಂದು ಇರುವುದರಿಂದ ಈ ಊರಿಗೆ ಭೂಯಿಕಾಡಮಗೇರಿ (ಕೆ) ಎಂದು ಇದೆ.



ಈ ಗ್ರಾಮದಲ್ಲಿ ಊರಿನ ಹೃದಯ ಭಾಗದಲ್ಲಿ, ಮತ್ತು ಬೂದೂನೂರಿಗೆ ಹೋಗುವ ರಸ್ತೆ ಮತ್ತು ಚಂದಾಪೂರ ಮಾರ್ಗದ ರಸ್ತೆ ಮತ್ತು ಚಾಮನಾಳ ಗ್ರಾಮಕ್ಕೆ ಹೋಗು ರಸ್ತೆಯ ಪಕ್ಕದಲ್ಲಿ ಶ್ರೀ ಮೌನೇಶ್ವರಸಮಾದಿ ಇದೆ, ಇದರ ಪಕ್ಕದಲ್ಲಿ ೪ ಫಿಟ ಎತ್ತರದಲ್ಲಿ ಗರ್ಭ ಗುಡಿಯಲ್ಲಿ ಶ್ರೀ ಕಾಳಿಕಾದೇವಿಯ ಕುಳಿತ್ತಿರುವ ಕರಿ ಕಲ್ಲಿನ ವಿಗ್ರಹವಿದೆ ಈ ವಿಗ್ರವು ಶ್ರೀ ಕಾಳಿಕಾದೇವಿ ಮೂರ್ತಿಯಾಗಿದ್ದು ಇಲ್ಲಿ ಈ ಊರಿನ ಹಿರಿಯರು ಪೂಜಾರಿಗಳು ಮತ್ತು

ಪಂಚಾಳದವರು ಪ್ರತಿ ಅಮವಾಸೆ, ಹುಣಿಮೇಗೆ ಗುಡಿಯಲ್ಲಿ ಭಜನೆ, ಪೂಜೆ ಮಾಡುತ್ತಾರೆ ಊರಿನ ಎಲ್ಲಾ ಸಮೂಹದವರು ಈ ದೇವರಿಗೆ ಕಾಯಿ, ಕರಪೂರ ಸಕ್ಕರಿ,ಓಳಗಿ,ಅನ್ನ ಹಾಲು ಹೀಗೆ ಅವರ ಸಾಮರ್ಥಗೆ ತಕ್ಕಂತೆ ದೇವರಿಗೆ ನೈವೆದ್ಯ ನೀಡುತ್ತಾರೆ, ದೇವರಲ್ಲಿ ಮತ್ತು ಶ್ರೀ ಕಾಳಿಕಾದೇವಿಯಲ್ಲಿ ಶ್ರೀಮಂತಿಕ್ಕೆ ಸಂಪತ್ತು ಕೋಡು ತಾಯಿ ಎಂದು ಬೇಡಿಕೊಳ್ಳವರು ಕೆಲವರು ಮಕ್ಕಳು ಇಲ್ಲದ ದಂಪತಿಗಳು ಬಂದು ಶ್ರೀ ಕಾಳಿಕಾದೇವಿಗೆ ಮತ್ತು ಶ್ರೀ ಮೋನಪ್ಪ ದೇವರಿಗೆ ಬೇಡಿಕೊಳ್ಳುತ್ತಾರೆ ಭಕ್ತರಿಗೆ ಆಸೆ ಈಡೇರಿಸುತ್ತಾರೆ ಎಂದು ನಂಬಿಕೆಯಾಗಿದೆ.

ಗುಡಿಯ ವಿನ್ಯಾಸದ ವಿವರ : ಶ್ರೀ ಮೌನೇಶ್ವರದೇವರ ಗುಡಿ ಮತ್ತು ಶ್ರೀ ಕಾಳಿಕಾದೇವಿ ಗುಡೀ ಇಬ್ಬರುದು ಒಂದೇ ಗುಡಿ ಈ ಗುಡಿಯು ಉತ್ತರ ದಿಕ್ಕಿಗೆ ಮುಖವಾಗಿದ್ದು ಶ್ರೀ ಕಾಳಿಕಾದೇವಿ ಮತ್ತು ಶ್ರೀ ಮೌನೇಶ್ವರದೇವರು ಉತ್ತರ ದಿಕ್ಕಿಗೆ ಮುಖ ಮಾಡಿ ಕುಳಿತ್ತಿದಾರೆ ಗುಡಿಯ ಒಳ ಅಂಕಣ ೫ ಅಡಿ ಅಗಲ ೮ ಅಡಿ ಎತ್ತರವಿದೆ, ೨ ಅಡಿ ಎತ್ತರದ ೨ ಬಾಗಿಲುಗಳಿವೆ ಶ್ರೀ ಮೌನೇಶ್ವರಬಾಗಿಲು ಒಂದು ಮತ್ತೋಂದು ಶ್ರೀ ಕಾಳಿಕಾದೇವಿ ಬಾಗಿಲೋಂದು ಒಂದೇ ಗುಡಿಯಲ್ಲಿ ೨ಚಿಕ್ಕ ಚಿಕ್ಕ ಬಾಗಿಲು ಇವೆ. ಈ ಎರಡು ಬಾಗಿಲಿಗೆ ಒಂದೋಂದು ಕೀಲಿ ಹಾಕಿದ್ದಾರೆ ಈ ಗುಡಿಯ ಪೂಜಾರಿಗಳು ನಾನು ನೋಡಿ ಪೋಟೊ ಮತ್ತು ವಿಡಿಯೊ ಮಾಡಲು ಹೋದಾಗ ಗುಡಿಯ ಎರಡು ಬಾಗಿಲು ಕೀಲಿ ಹಾಕಿದರು. ಊರಿನ ಮಾಲಿಗೌಡರಾದ ಶ್ರೀ ಯಲ್ಲಣ್ಣಗೌಡರು ಬಂದು ನಮ್ಮ ಜೊತೆ ಊರಿನ ಮತ್ತು ದೇವತೆ ವಿವರ ಹೇಳಿದರು.


ಶ್ರೀ ಮೌನೇಶ್ವರ ಮತ್ತು ಶ್ರೀ ಕಾಳಿಕಾದೇವಿ ಗುಡಿಯ ಮುಂದೆ ಶ್ರೀ ಆಂಜನೇಯ ಸ್ವಾಮಿ ಗುಡಿಯಲ್ಲಿ ಕಲ್ಲಿನಿಂದ ಕೆತ್ತನೆ ಮಾಡಿದ ಶ್ರೀ ಆಂಜನೆಯ ಸ್ವಾಮಿ ಮೂರ್ತಿ ಇದೆ ಭಕ್ತರು ಅಲ್ಲಿ ದೇವರಿಗೆ ಕಾಯಿ ಕರಪೂರದಿಂದ ಪೂಜೆ ಮಾಡುತ್ತಾರೆ ಶ್ರೀ ಕಾಳಿಕಾದೇವಿ ಗುಡಿಯಲ್ಲಿ ಸ್ವಲ್ಪ ದೂರ ಹೋದರೆ ಅಲ್ಲಿ ಶ್ರೀ ದ್ಯಾವಮ್ಮದೇವಿ ಗುಡಿ ಇದೆ. ಈ ಗುಡಿ ಪೂರ್ವ ದಿಕ್ಕಿಗಿದೆ, ಇಲ್ಲಿ ಭಕ್ತರು ತಮ್ಮ ಇಷ್ಟದ ಪೂಜಾ ಸಾಮಗ್ರಿಗಳನ್ನು ತಂದು ಶ್ರೀ ದ್ಯಾವಮ್ಮದೇವಿಗೆ ಮತ್ತು ಮೌನೇಶ್ವರ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಸಗರನಾಡಿನ ಗ್ರಾಮ ದೇವತಾ ಶಿಲ್ಪಗಳು ಇಲ್ಲಿ ಶ್ರೀ ಕಾಳಿಕಾದೇವಿ ಒಂದು ಶಿಲ್ಪವು ಮತ್ತು ಶ್ರೀ ದ್ಯಾವಮ್ಮದೇವಿ ಒಂದು ಶಿಲ್ಪ ಹಾಗು ಶ್ರೀ ಆಂಜನೇಯ ಸ್ವಾಮಿ ದೇವರ ಶಿಲ್ಪ ನಾವು ನೋಡಬಹುದು

ಈ ಊರಲ್ಲಿ ಇನೋಂದು ದೇವರ ಮೂರ್ತಿ ಇದೆ ಶ್ರೀ ರೇವಣ್ಣಸಿದ್ದೇಶ್ವರ ದೊಡ್ಡ ಗುಡಿ ಇದೆ, ಈ ಊರಿನ ಜನ ಸಂಖ್ಯೆ ೩೦೦೦ ಜನರಿದ್ದಾರೆ. ಕಕ್ಕೆಸಗೇರಾ ಪಂಚಾಯತಗೆ ಒಳಪಟ್ಟದೆ ಈ ಊರಿನಿಂದ ೫ ಜನ ಗ್ರಾಮ ಪಂಚಾಯತ ಸದಸ್ಯರು ಹೊಂದಿದ್ದಾರೆ, ಈ ಊರಲ್ಲಿ ಎಲ್ಲಾ ಗುಡಿಯ ಸುತ್ತಾಮುತ್ತಾ ಜಾಗದ ಕೊರತೆ ಇದೆ ಆದರು ಕೂಡಲು ಸುಂದರವಾಗಿ ಗುಡಿಯ ಕಟ್ಟೆ ಮಾಡಿದ್ದಾರೆ, ಶ್ರೀ ಕಾಳಿಕಾದೇವಿ ಮತ್ತು ಶ್ರೀ ಮೌನೇಶ್ವರ ಜಾತ್ರೆ ಉತ್ಸವ ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಬರುತ್ತದೆ. ಶ್ರೀ ತಿಂಥಣಿ ಮೌನೇಶ್ವರ ಜಾತ್ರೆಗೆ ಒಂದುವಾರ ಮೊದಲೇ ಈ ದೇವತೆ ಉತ್ಸವ ನಡೆಯುತ್ತದೆ ದೇವಿ ಪಲ್ಲಕ್ಕಿ ಗಂಗಾ ಸ್ಥಳಕ್ಕೆ ಹೋಗಿ ಪೂಜೆ ಮಾಡಿ ಪುರವಂತರು ಜೊತೆ ಡೋಳ್ಳು ಹಲಗೆ ಬಾಜಿ ಭಜಂತ್ರಿಯೋಂದಿಗೆ ದೇವಿ ಕಾತ್ರಿಕಾ ಉತ್ಸವ ನಡೆಯುತ್ತದೆ, ಈ ಗ್ರಾಮದ ದ್ಯಾವಮ್ಮದೇವಿ ಉತ್ಸವ ೩ವರ್ಷಕೋಮೆ ಮತ್ತು ೫ವರ್ಷಕೋಮ್ಮೆ ಈ ದೇವಿ ಉತ್ಸವ ನಡೆಯುತ್ತದೆ. ಹಾಗೂ ಊರಲ್ಲಿ ಒಂದೇ ಒಂದು ಮನೆ ಇದೆ ಮುಸ್ಲಿಂ ಆದರೂ ಇಲ್ಲಿ ಮೊಹರಂ ಆಚಾರಣೆ ಮಾಡುತ್ತಾರೆ. ಇಲ್ಲಿ ಹಿಂದೂ ಜನಾಂಗದವರೆ ಮೊಹರಂ ದೇವರನ್ನು ಹೋರುತ್ತಾನೆ. ಈ ಊರಿನ ಶ್ರೀ ಕಾಳಿಕಾದೇವಿ ವಿಗ್ರಹವು ಸಮಾರು ೫೦೦ವರ್ಷಗರ ಕಾಲ ಹಳೆಯ ಗುಡಿಯ ವಿಗ್ರಹವಿತ್ತು ಇಗ ಊರಿನ ಜನರು ದಾನಗಳು ಭಕ್ತರು ಕೂಡಿ ಶ್ರೀ ಕಾಳಿಕಾದೇವಿ ಮತ್ತು ಮೌನೇಶ್ವರಗುಡಿಯ ಗುಡಿಯ ಮೆಲ್ಬಗ ಚತ್ತ ಹಾಕಿದ್ದಾರೆ.

೦೫. ಶ್ರೀ ದ್ಯಾವಮ್ಮ ದೇವಿ, ಚಾಮನಾಳ ಗ್ರಾಮ, ಶಹಾಪೂರ ತಾಲೂಕು


ಶ್ರೀ ದ್ಯಾವಮ್ಮ ದೇವಿ ಮೂರ್ತಿಯನ್ನು ಕಲ್ಲಿನಿಂದ ಕೆತ್ತನೆ ಮಾಡಿದ್ದಾರೆ. ಶಿಲ್ಪಿಯೂ ಸುಂದರವಾಗಿ ತನ್ನ ಕೈ ಚಳಕದಿಂದ ಉಳಿ ಸುತ್ತಿಗೆ ಸಹಾಯದಿಂದ ಸುಂದರವಾಗಿ ದೇವಿ ಎದ್ದು ಬರುವಂತೆ ಕಣ್ಣು, ಉಬ್ಬು, ಕಿವಿ, ಮೂಗು, ತಲೆ, ಕೈ-ಕಾಲು, ಎಲ್ಲಾ ಸಂಯೋಜನೆಯೊಂದಿಗೆ ಶಿಲ್ಪಿಯ ಕ್ರಮಬದ್ದವಾಗಿ ಸಿಂಹದ ಮೇಲೆ ಕುಳಿತ್ತಿರುವ ಮೂರ್ತಿ ಜನರಿಗೆ ಭಯವನ್ನುಂಟು ಮಾಡುವಂತೆ ಕೆತ್ತನೆ ಮಾಡಿದ್ದಾನೆ. ದೇವಿ ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ತ್ರಿಶೂಲ, ದೇವಿಯನ್ನು ಯಾರು ನೇರವಾಗಿ ನೋಡಲಾರರು ಯಾಕೆಂದರೆ ನೋಡಿದರೆ ದೃಷ್ಠಿ ತಾಕುವಂತೆ ದೇವಿ ಮೂರ್ತಿ ಕಲಾವಿದನು ರಚಿಸಿದ್ದಾನೆ ದೇವಿಯ ಹಿಂದುಗಡೆ ಪ್ರಬಾವಳಿ ಸುಂದರವಾಗಿ ಕಟ್ಟಿಗೆಯಲ್ಲಿ ಕೆತ್ತನೆ ಮಾಡಿದ್ದಾನೆ. ದೇವಿಯ

ಮುಖಕ್ಕೆ ಬೆಳ್ಳಿ ಮುಖದ ಕವಚ ಮಾಡಿ ದೇವಿಗೆ ಬೆಳ್ಳಿ ಮುಖ ಮಾಡಿದ್ದಾರೆ ಈ ಬೆಳ್ಳಿ ಮುಖವನ್ನು ಪ್ರತಿ ಮೂರು ವರ್ಷಕೊಮ್ಮೆ ಗಂಗಾ ಸ್ನಾನಕ್ಕೆ ಹೋಗುವಾಗ ಬೆಳ್ಳಿ ಮುಖವನ್ನು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ಭವ್ಯ ಮೆರವಣಿಯಲ್ಲಿ ಊರ ಒಳಗೆ ಇರುವ ಸೇದಿ ಬಾವಿಗೆ ಪಲ್ಲಕ್ಕಿ ತಂದು ಗಂಗಾ ಸ್ನಾನ ಮಾಡಿಸಿ ಪುನಃ ದೇವಿ ಪಲ್ಲಿಕ್ಕಿ ಗುಡಿಗೆ ಬಾಜಿ ಭಜಂತ್ರಿಯೊಂದೆ ಡೊಳ್ಳು ಹಲಗೆ ಜೈಕಾರ ಹಾಕುತ್ತಾ ಸನಾದಿ ಅಪ್ಪಣ್ಣನಾದ ದೊಂದಿಗೆ ಗುಡಿಗೆ ಬರುತ್ತಾರೆ ನಂತರ ದೇವಿ ಬೆಳ್ಳಿ ಮೂರ್ತಿಯ ಪುನಃ ದೇವಿ ಮುಖಕ್ಕೆ ಇಟ್ಟು ಕಾಯಿ ಕರಪೂರ ದೂಪ,ದೀಪ ಹಚ್ಚಿ ಆರೂತಿ ಬೆಳಗುತ್ತಾರೆ. ರಾತ್ರಿ ದೇವಿಯ ಮುಂದೆ ಬ್ಯಾಟಿ ಬಲಿ ಕೊಡುತ್ತಾರೆ ಭಕ್ತರು ರಾತ್ರಿ ಭಜನೆ ಡೋಳ್ಳಿನ ಹಾಡು ಜನಪದ ಹಾಡು ಸವಾಲಿನ ಹಾಡು ಹೀಗೆ ಗ್ರಾಮೀಣ ಜನ ಸವಾಲಿನ ಪದ ಹಾಡುವುದರ ಮುಖಂತರ ದೇವಿಯ ಸೇವೆ ಸಲ್ಲಿಸುತ್ತಾರೆ. ಮಾರನೆ ದಿನ ದೇವಿಯ ನೈವ್ಯದೆ ನೀಡಿ ಎಲ್ಲಾರು ಗುಡಿಯ ಸಮಿತಿಯ ಮುಖಂಡರು ಯುವಕರು ಮಹಿಳೆಯರು ಮಕ್ಕಳು ಎಲ್ಲಾರು ದೇವಿಯ ಗುಡಿಯಲ್ಲಿ ಪ್ರಸಾದ ಪಡೆಯುತ್ತಾರೆ ದೇವಿಯಿಂದ ಅರ್ಶಿವಾದ ಪಡೆಯುತ್ತಾರೆ.



ಗುಡಿಯ ವಿನ್ಯಾಸ ವಿವರ : ಶ್ರೀ ದ್ಯಾವಮ್ಮ ದೇವಿಯ ಗುಡಿಯ ಪುರಾತನ ಕಾಲದಿಂದ ಬಂದುದೆಂದು ಹಿರಿಯರು ಹೇಳುತ್ತಾರೆ ಈಗ ಸುಮಾರು ೪ ವರ್ಷವಾಯಿ

ಈ ಗುಡಿಯ ಅಭಿವೃಧಿ ಪಡಿಸಿದ್ದೆವೆಂದು ಹೇಳುತ್ತಾರೆ ಗುಡಿಯ ಚತ್ತಿನಿಂದ ಕೂಡಿದೆ ದೇವಿ ಗರ್ಭ ಗುಡಿ ೧೦ x ೮ ಅಗಲ, ಉದ್ದವಿದೆ ಗರ್ಭ ಗುಡಿಯಲ್ಲಿ ದೇವಿ ಮೂರ್ತಿ ಮತ್ತು ಡೋಳ್ಳು, ಸೀರಿ, ಆರುತ್ತಿ, ಗಂಟೆ, ದೀಪದ, ತಟ್ಟೆ, ಇಟ್ಟಿದು, ದೇವಿಹೊರ ಅಂಕಣದಲ್ಲಿ ದೇವಿ ಕಟ್ಟಿಗೆ ಪಲ್ಲಕ್ಕಿ, ೫, ೬, ಕಂಚಿನ ಗಂಟೆ ಗುಡಿಯ ಮುಂದೆ ಹಾಕಿದ್ದಾರೆ.



ದೇವಿ ಗುಡಿ ಪೂರ್ವದಿಕ್ಕಿಗೆ ಇದೆ, ದೇವಿ ಪೂರ್ವ ದಿಕ್ಕಿಗೆ ಮುಖ ಮಾಡಿ ಕುಳಿತ್ತಿದ್ದಾಳೆ ಗುಡಿಯ ಹೊರ ಅಂಕಣದಲ್ಲಿ ೪ ಕಟ್ಟಿಗೆ ಕಂಬಗಳಿವೆ ಆ ಕಂಬಗಳಿಗೆ ಕಟ್ಟಿಗೆಯಿಂದ ಕೆತ್ತನೆ ಮಾಡಿದ ಕಾಯಿ ಹೂ-ಬಳ್ಳಿಯ ವಿನ್ಯಾಸ, ಗಡಗಿ ಅಷ್ಟ ಕೋನದ ಗಡಗಿ ನವಿಲು, ಗಿಳಿ ಶಿಲ್ಪ ಕಲಾವಿದರನ್ನು ಗುಡಿಗೆ ಹೊಂದುವಂತೆ ಸುಂದರವಾಗಿ ನಾಲ್ಕು ಕಂಬಗಳು ನಾಲ್ಕು ಗಡಿಗೆಗಳು ನಾಲ್ಕು ಚೌಕದ ಕಟ್ಟಿಗೆ ನಾಲ್ಕು ಕಲ್ಲು ಕಂಬದ ಕೆಳಗೆ ಇಡಲು ೧ ೧/೨ ಅಡಿ ಎತ್ತರ ಹೀಗೆ ಗುಡಿಯ ನೋಡಲು ಬಹಳ ಸುಂದರವಾಗಿ ಕಾಣುತ್ತದೆ ಹೊರ ಅಂಕಣದಲ್ಲಿ ೪ ಸಾಲಾಗಿ ಸಿಮೆಂಟ್‌ನ ಕಂಭ ಹಾಕಿದ್ದಾರೆ. ನೆಲ ಹಾಸಿಗೆ ಪಾಲಿಸ್ ಬಂಡೆ ಹಾಕಿದ್ದಾರೆ. ಎರಡು ಗೋಡೆಗೆ ದೇವಿಯ ಭಿತ್ತಿಚಿತ್ರವನ್ನು ಚಿತ್ರಿಸಿದ್ದಾರೆ. ಒಂದು ಗೋಡೆ ಘತ್ತರಗಿ ಭಾಗ್ಯವಂತಿ ಫೋಟೊ ಚಿತ್ರಿಸಿದ್ದಾರೆ. ಎರಡು ಕಟ್ಟಿಯ ಗೋಡೆಗೆ ಆದೀಶೇಷ (ನಾಗರಹಾವಿನ ಮೂರ್ತಿ) ಕಲ್ಲಿನಲ್ಲಿ ಕೆತ್ತನೆ ಮಾಡಿದ್ದಾರೆ. ಗುಡಿಯ ಬಲಗಡೆ ಬಡಿಗೇರ ಅಡಿ ಕಟ್ಟೆ ಇದೆ ಗುಡಿಯ ಮುಂದೆ ಸಿ.ಸಿ ರಸ್ತೆ ಇದೆ, ಅದರ ಮುಂದೆ ಮುಖ್ಯ ರಸ್ತೆ ಇದೆ ಅಲ್ಲಿ ಪ್ರತಿ ರವಿವಾರ ಸಂತೆ ನಡೆಯುತ್ತದೆ.

ಸಂತೆಗೆ ಸುತ್ತಾ ಮುತ್ತಲಿನ ಗ್ರಾಮದಲ್ಲಿ ಸಂತೆಗೆ ಬರುತ್ತಾರೆ ದೇವಿ ದರ್ಶನಾ ಪಡೆಯುತ್ತಾರೆ. ನಗನೂರು, ಗುಂಡಾಪೂರು, ಭೂಯಿಕಾಡಮಗೇರಾ, ಬೂಧೂನೂರು, ದಂಡಸೊಲಾಪೂರು, ಬಿಳವಾರ, ನಡಿಹಾಳ, ಏವುರು, ಚಂದಾಪೂರು, ಉಕ್ಕಿನಾಳ,

ಉಕ್ಕಿನಾಳತಾಂಡಾ ಹೀಗೆ ದೊಡ್ಡ ಸಂತೆಯಾಗುತ್ತದೆ. ಈ ಊರಲ್ಲಿ ದೇವಿಯ ಶಕ್ತಿ ಬಹಳ ದೊಡ್ಡದು ಈ ಚಾಮನಾಳ ಗ್ರಾಮದಲ್ಲಿ ಗುಡಿಯ ಬಲಭಾಗಕ್ಕೆ ಮುಸ್ಲಿಂ ಮೊಹರಂ ದೇವರುಕುಡುವ ಸ್ಥಳವಿದೆ ಮುಂದೆ ಶ್ರೀ ಎಲ್ಲಮ್ಮ ದೇವಿ ಸಣ್ಣ ಗುಡಿ ಇದೆ. ದೇವಿಯ ಎಡಗಡೆ ಆಂಜನೆಯ ದೇವರ ಗುಡಿಯಿದೆ ಈಗ ಗುಡಿಯ ಕಟ್ಟಡ ಮಾಡುತ್ತಿದ್ದಾರೆ. ಮುಂದೆ ಇದು ಚತ್ತಹಾಕಿ ನೀರು ಸೋರದಂತೆ ಮಾಡುತ್ತಿವರು ಈ ಊರಿನ ಭಕ್ತನು ಹೇಳಿದ್ದಾನೆ. ಇದೇ ಗ್ರಾಮದಲ್ಲಿ ಒಂದು ಪೆಟ್ರೋಲ್ ಬಂಕ್ ಇದೆ. ೧ ಕಾಲೇಜು ಸರಕಾರಿಯ ಪದವಿ ಪೂರ್ವ ಕಾಲೇಜು, ಒಂದು ಸರಕಾರಿ ಪ್ರೌಢ ಶಾಲೆ ಇದೆ ೨ಪ್ರಾಥಮಿಕ ಶಾಲೆ ಇವೆ. ೧ ಪಶು ಆಸ್ಪತ್ರೆ ಇದೆ ಒಂದು ಕಸ್ತೂರಿಬಾಯಿ ಪ್ರೌಡ ಶಾಲೆಯ ವಿದ್ಯಾರ್ಥಿನಿಯರ ವಸತಿ ನಿಲಯವಿದೆ ಒಂದು ಪ್ರಾಥಮಿಕ ಆರ್ಯೋಗ ಕೇಂದ್ರವಿದೆ ಇಗೆ ಬಹಳ ಅಭಿವೃದ್ಧಿ ಹೊಂದುವ ಗ್ರಾಮವಿದೆ.

೦೬. ಶ್ರೀ ಕಾಳಿಕಾದೇವಿ, ನೀರಡಗಿ ಗ್ರಾಮ, ಜೇವರ್ಗಿ ತಾಲೂಕು



ಈ ದೇವಿ ಗುಡಿಯು ಊರಿನಿಂದ ೫೦೦ ಅಡಿ ದೂರದಲ್ಲಿ ತಂಪಾದ ಗಿಡಗಳ ಮಧ್ಯದಲ್ಲಿ ಅರಳಿಗಿಡ, ಹುಣಸೆ ಗಿಡ ಶಂಖೇಶ್ವರ ಗಿಡ ಮುಂದೆ ತಿರ್ಥಬಾಯಿ ಮತ್ತು

ಶಂಕರಲಿಂಗೇಶ್ವರ ಗುಡಿಯ ಬಯಲು ಹೊಲದಲ್ಲಿ ಪ್ರಶಾಂತ ವಿಶಾಲವಾದ ಗಿಡಗಳ ನೆರಳಲ್ಲಿ ದೇವಿ ಗುಡಿಯ ಬಹಳ ವರ್ಷಗಳ ಕಾಲ ಹಳೆ ಗುಡಿ ಇದೆ. ಈ ದೇವಿ ಮೂರ್ತಿ ಸುಮಾರು ೬ ಅಡಿ ಎತ್ತರದಿಂದ ಕೂಡಿದೆ ಸುಮಾರು ವರ್ಷಗಳಾಗಿರಬಹುದು ಈ ಮೂರ್ತಿ ಕೆತ್ತನೆ ಮಾಡಿದ್ದಾರೆ ಪುರಾತನ ಇಲಾಖೆಯಲ್ಲಿ ಈ ಊರಿನ ಮತ್ತು ದೇವಿಯ ವಿವರ ಸಿಗಬಹುದೆಂದು ಹಿರಿಯರು ಹೇಳುತ್ತಾರೆ.



ಈ ದೇವಿ ಗುಡಿಯ ದಕ್ಷಿಣ ದಿಕ್ಕಿಗೆ ಇದೆ. ಶ್ರೀ ಕಾಳಿಕಾದೇವಿ ದಕ್ಷಿಣ ದಿಕ್ಕಿಗೆ ಮುಖವಾಡಿ ನಿಂತಿದ್ದಾಳೆ, ಗುಡಿಯ ಸುತ್ತಲು ಹಳೆ ಕಾಲದ ಕರಿಕಲ್ಲು ಬಂಡೆಗಳು ಇವೆ ಅವು ಭಗ್ನವಾಗಿವೆ ರಕ್ಷಣೆವಿಲ್ಲದ ಸ್ಥಿತಿಯಲ್ಲಿವೆ ಹೊಲದಲ್ಲಿವೆ ಬಾವಿಹತ್ತಿರ ೨ ಮೂರ್ತಿಗಳು ಚಿಕ್ಕ ಚಿಕ್ಕ ಮೂರ್ತಿಗಳವೆ. ದೇವಿಯ ಎದುರುಗಡೆ ಶಂಕರಲಿಂಗೇಶ್ವರ ಗುಡಿಯಿದೆ ಅಲ್ಲಿಂದ ದೇವಿಯ ಗುಡಿಯತನಕ ಭೂಮಿಯ ಒಳ ಸುರಂಗ ಮಾರ್ಗ ವಿದೆಂದು ಇಲ್ಲಿ ಜನರು ಹೇಳುತ್ತಾರೆ ದೇವಿ ಗುಡಿಯ ಪಕ್ಕದಲ್ಲಿ ೨ ಬಾವಿಗಳಿದ್ದವು ಅವು ಈಗ ಮುಚ್ಚಿಕೊಂಡಿವೆ.





ಶ್ರೀ ಕಾಳಿಕಾದೇವಿಗೆ ಊರಿನ ಭಕ್ತರು ಸುಮಾರು ಹಸಿರು ಬಣ್ಣದ ಬಳೆಗಳು ಹಾಕಿದ್ದಾರೆ ಸುಮಾರು ಒಂದು ಬಂಡಿಯವು ಕೆಂಪು ಸಿರೆ ಹಸಿರು ಸೀರೆ ಇವೆ. ದೇವತೆ ಉಡಿಸಿರುವ ಸೀರೆಗಳಿವೆ ದೇವಿ ಎಡಭಾಗದಲ್ಲಿ ೨೦೦ ಮೀಟರದೂರದಲ್ಲಿ ಶ್ರೀ ಅಂಜನೇಯ ಸ್ವಾಮಿ ಗುಡಿಯಿದೆ ಊರಿನ ಮಧ್ಯದಲ್ಲಿ ಶ್ರೀ ಬೀರಲಿಂಗೇಶ್ವರ ಗುಡಿಯಿದೆ ಗುಡಿಯ ಬಣ್ಣದಿಂದ ಹಲವಾರು ಚಿತ್ರಗಳನ್ನು ಬರೆದಿದ್ದಾರೆ ಕೆಲವು ಗಾದೆ ಮಾತ್ತುಗಳ ಗುಡಿಯ ಗೋಡೆಗೆ ಬರೆಸಿದ್ದಾರೆ ಕೆಲವು ನಾನುಡಿ ಬರೆದಿದ್ದಾರೆ ಬಿರಲಿಂಗೇಶ್ವರ ಭಕ್ತರು ಹೆಚ್ಚಿಗೆ ಇದ್ದಾರೆಂದು ಅನಿಸುತ್ತದೆ.

೦೭. ಹಳ್ಳಿಸಗರ ಗ್ರಾಮದ ಗ್ರಾಮದೇವತೆ ಶ್ರೀ ದ್ಯಾವಮ್ಮ ದೇವಿ

ಶಹಾಪೂರು ತಾಲೂಕಿನಿಂದ ೨ ಕಿ.ಮಿ. ದೂರದಲ್ಲಿ ಈಶನ್ಯ ದಿಕ್ಕಿಗೆ ಹೋದರೆ ಅಲ್ಲಿಯೂ ಹಳಿಸಗರ ಗ್ರಾಮ ಈ ಗ್ರಾಮದ ಗ್ರಾಮ ದೇವತೆಯಾದ ಶ್ರೀ ದ್ಯಾವಮ್ಮ ದೇವಿ ಗುಡಿ ಬರುತ್ತದೆ. ಈ ಗುಡಿಯ ಎದುರುಗಡೆ ಮುಸ್ಲಿಂ ದೇವರು ಅಲಾಯಿ ದೇವರು ಕೂಡುವ ಸ್ಥಳವಿದೆ. ಮೋಹರಂ ಹಬ್ಬದಲ್ಲಿ ಎಲ್ಲಾ ಜನಾಂಗದವರು ಭಕ್ತಿ ಭಾವದಿಂದ ಮೋಹರಂ ಆಚರಣೆ ಮಾಡುತ್ತಾರೆ.

ದ್ಯಾವಮ್ಮದೇವಿ ಮೂರ್ತಿ ವಿವರ : ಈ ದ್ಯಾವಮ್ಮ ದೇವಿಯ ಮೂರ್ತಿಯನ್ನು ಪ್ರಸಿದ್ಧ ಹೊಂದಿದ ಶಿಲ್ಪಿಗಳಲ್ಲಿ ಬಬ್ಬರಾದ ಶ್ರೀ ಸುರೇಂದ್ರ ಕೆ. ವಿಶ್ವಕರ್ಮ ಸರ್ ಕರ್ನಾಟಕ

ಮಾಜಿ ಶಿಲ್ಪಕಲಾ ಆಕಾಡಮಿ ಸದಸ್ಯರು ಬೆಂಗಳೂರು ಇವರು ಅತ್ಯಂತ ಸೂಕ್ಷ್ಮವಾಗಿ ನಾಜುಕದಿಂದ ಬಹಳ ಸುಂದರವಾಗಿ ಈ ಮೂರ್ತಿ ರಚಿಸಿದ್ದಾರೆ.

ಶ್ರೀ ಸುರೇಂದ್ರ ಕೆ. ವಿಶ್ವಕರ್ಮ ಮಾಜಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರು ಮತ್ತು ಶಿಲ್ಪಕಲಾ ತಜ್ಞರು ಹೌದು ಶ್ರೀ ಸುರೇಂದ್ರ ಸರ್‌ರವರು ಬಹಳ ಸೂಕ್ಷ್ಮಯ ಮತ್ತು ಸೌಮ್ಯವಾದ ವ್ಯಕ್ತಿಯ ಅವರ ನಡೆ ನುಡಿ ಒಂದೇ ಯಾವುದೇ ಮೂರ್ತಿ ಮಾಡಲು ಒಪ್ಪಿಗೆ ಕೊಟ್ಟರೆ ಅದು ಎಷ್ಟೇ ಕಷ್ಟವಾದರು ಸರಿ ಸರ್‌ರವರು ಆ ಮೂರ್ತಿ ಮಾಡಿಯೆ ಹೌದು ಎನಿಸಿಕೊಳ್ಳುತ್ತಾರೆ. ಅವರು ಕಲಾತಪಸ್ವಿ ದೇವಿ ಮೂರ್ತಿ ಮಾಡಲು ಬಹಳ ಶಿಸ್ತು ಬಂದಾವಾಗಿ ನೇಮ, ನಾಮ, ನುಡಿ, ನಡೆ, ತಾಳ್ಮೆ ಬಹಳ ಮುಖ್ಯ ಇವರು ನಮ್ಮ ತಾಲೂಕಿನವರು ಮತ್ತು ಕೊಳ್ಳುರು ಗ್ರಾಮದ ಕೋಹಿನೂರು ವಜ್ರದಂತೆ ಇವರು ನಮ್ಮ ಭಾಗದ ಹೆಮ್ಮಯ ಪುತ್ರ ಶಿಲ್ಪಕಲಾ ಕ್ಷೇತ್ರದ ದಿಗ್ಗವಿಜಯ ತಜ್ಞನರಲ್ಲಿ ತಜ್ಞನಾಗಿ ಡಿಜನರ, ಸೂಕ್ಷ್ಮ ಬಳ್ಳಿ ರೇಖೆ, ಆಕಾರ ಸೌಂದರ್ಯ ಎಲ್ಲಾಮನ್ನು ತೂಗಿ ನೋಡಿ ಮೂರ್ತಿಯನ್ನು ಲಕ್ಷ ಲಕ್ಷ ಜನರು ಮೆಚ್ಚುವಂತೆ ಕೆತ್ತನೆ ಮಾಡಿದ್ದಾರೆ.


ಇವರ ಬಗ್ಗೆ ಎಷ್ಟು ಹೇಳಿದರು ಸಾಲದು ಸಂಗೀತ ಕ್ಷೇತ್ರದಲ್ಲಿ ಪಂಡಿತ ಪುಟರಾಜ ಗವಾಯಿಗಳಂತೆ ಶಿಲ್ಪಕಲಾ ಕ್ಷೇತ್ರದಲ್ಲಿ ಜಕಣ್ಣಚಾರ್ಯಯಂತೆ ಅತ್ತಿ ಸೂಕ್ಷ್ಮ ಕಲಾಕೃತಿಗಳನ್ನು ಕೆತ್ತನೆ ಮಾಡುತ್ತಾರೆ. ನಮ್ಮ ಹೈದ್ರಾಬಾದ-ಕರ್ನಾಟಕ ಭಾಗದ ಮತ್ತು ಸಗರನಾಡಿನ ನಡೆದಾಡುವ ಜಕಣಾಚಾರ್ಯರಂತೆ ಇಲ್ಲಿಯ ಜನರು ಯುವ ಶಿಲ್ಪಿಗಳು, ಹಿರಿಯ ಶಿಲ್ಪಿಗಳು ಹೇಳುತ್ತಾರೆ ಅಂದರೆ ಅವರ ಕಲಾಕ್ಷೇತ್ರಕ್ಕೆ ಎಷ್ಟೆಂದು ಕೆಲಸ ಮಾಡಿರಬೇಕು ನನ್ನ ಸಂತ ಅನುಭವಕ್ಕೆ ಹೇಳುವುದಾದರೆ ನಾನು ಶ್ರೀ ಸುರೇಂದ್ರ ಸರ್‌ರನ್ನು ಕೇವಲ ಪೋನಲ್ಲಿ ಮಾತ್ನಾಡಿದೆ ಅವರು ಸುರುಪೂರು ತಾಲೂಕಿನಲ್ಲಿ ಹೊಯ್ಸಳ ಶೈಲಿಯ ಶಿಲ್ಪಕಲಾ ಶಿಭಿರದಲ್ಲಿ ನನ್ನನು ನೇರವಾಗಿ ಆಯ್ಕೆಮಾಡಿದ್ದು ಅವರ ಅಷ್ಟು ನಂಬಿಕೆ ವ್ಯಕ್ತಿಗಳು ನಂತರ ಅಪರ ಪರಿಚಯವಾಯಿತು. ಅವರ ಮಾತು ನಡೆ-ನುಡಿ ಶುದ್ಧ ಕಾಯಕ ಅವರ ಮಾತುಗಳು ನನ್ನನ್ನು ಹೋಸ ಕ್ಷೇತ್ರಕ್ಕೆ ಸೇಳೆಯುವಂತೆ ಮಾಡಿತ್ತು. ಅವರಲ್ಲಿ ಹೊಸ ಪ್ರತಿಯೊಬ್ಬ ಶಿಲ್ಪಿಯ ಸುಂದರ ಮೂರ್ತಿಯಾಗಿದ್ದಾರೆಂದು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ ನನ್ನಗೂ ಸದ ಸುಮಾರು ೩ ಸಲ ಶಿಬಿರದ ಅವಕಾಶ ಮಾಡಿಕೊಟ್ಟಿದ್ದಾರೆ ಮತ್ತು ಈ ಸಗರನಾಡಿನ



ಗ್ರಾಮ ದೇವತೆಗಳ ಬಗ್ಗೆ ಬಹಳ ಸಹ ವಿಸ್ತರವಾಗಿ ತಿಳಿದು ನನ್ನನ್ನು ಈ ಸಗರನಾಡಿನ ಗ್ರಾಮ ದೇವತೆಗಳ ಬಗ್ಗೆ ಸಂಶೋಧನೆ ಮಾಡಲು ಈ ಸಾಗರದಲ್ಲಿ ದೂಮಿಕಿಸಿದ್ದಾರೆ ನಾನು ಶ್ರೀ ಸುರೇಂದ್ರ ಸರ್‌ರವರ ಮಾತುಗಳು ಕೇಳಿದರೆ ಏನುಬೇಕಾದರು ಸಾಧಿಸಬಹುದೆಂದು ಅನಿಸುತ್ತದೆ ಅತಂಹ ಅದ್ಭುತ ವ್ಯಕ್ತಿ ಶ್ರೀ ಕೆ. ಸುರೇಂದ್ರ ಸರ್ ಅವರ ಸಹಕಾರ ಸಹಾಯ ನಾನು ಸದಾಕಾಲ ಚಿರರುಣಿಯಾಗಿರುತ್ತೇನೆ ಯಾಕೆಂದರೆ ನನಗೆ ಸದಾ ಅವಕಾಶಗಳನ್ನು ಹೊದಗಿಸಿಕೊಡುತ್ತ ಈ ಭಾಗ ಹೊಸಬರಿಗೆ ಅವಕಾಶ ಕೊಡಬೇಕೆಂದು ನನಗೆ ಹೇಳುತ್ತಿದ್ದು ನಿಜಕ್ಕೂ ಈ ತರಹದ ಸಹಾಯ ಮಾಡುವಂತಹ ವ್ಯಕ್ತಿಗಳು ಬಹಳ ಅಪರೂಪ ಇವರು ಸಧ್ಯ ಬೆಂಗಳೂರು ನಗರದ ಮಲತಹಳ್ಳಿ ನಗರದಲ್ಲಿ ಸುಂದರ ಶಿಲ್ಪಕಲಾ ಕೇಂದ್ರ ಕಲಾಕೃತಿಗಳು ರಚಿಸುತ್ತಿದ್ದಾರೆ. ಅತಂಹ ವ್ಯಕ್ತಿ ಕೈಯಿಂದ ಹಳಿಸಗರ ಗ್ರಾಮ ಗ್ರಾಮದೇವತೆಯನ್ನು ಸುಂದರವಾಗಿ ಕೆತ್ತನೆ ಮಾಡಿ ನೋಡಗರಿಗೆ ಭಕ್ತಿಯನ್ನುಂಟು ಮಾಡುವಂತೆ ಆಕರ್ಷಣೆಯಾಗುವಂತೆ ಮಾಡಿದ್ದಾರೆ.

೦೮. ಶ್ರೀ ಪಿಲ್ಲಮ್ಮದೇವಿ, ಗೋಗಿ, ಶಹಾಪೂರ ತಾಲೂಕು

ಆದಿ ಶಕ್ತಿ ಪಿಲ್ಲಮ್ಮದೇವಿಯ ಗೋಗಿಯಿಂದ ಈಶ್ಯನ ದಿಕ್ಕಿಗೆ ಕಂಚನಕವಿ ಕ್ರಾಸ್ ರಸ್ತೆಯ ಪಕ್ಕದಲ್ಲಿ ಸಣ್ಣ ಗುಡಿ ಇದ್ದು, ಇದು ಮರೆಮ್ಮ ದೇವಿ ಕುಂಭಾ ಕಳಸ ಆದ ಮೇಲೆ ಕೋನೆಯ ಶುಕ್ರವಾರ ಶ್ರೀ ಪಿಲ್ಲಮ್ಮದೇವಿಗೆ ಕೋಳಿ, ಹುಂಜ ಕೋಯಿದು ದೇವಿಗೆ ಶಾಂತಿ



ಮಾಡುತ್ತಾರೆ.ಅಲ್ಲಿ ಭಕ್ತರು ಆ ಕೋಳಿ, ಹುಂಜ, ದೇವಿಗೆ ಅರ್ಪಿಸಿ ನಂತರ ದೇವಿಯ ಮುಂದೆ ನೈವೇದ್ಯ ಮಾಡಿ ಭಕ್ತರು ಸೇವಿಸುತ್ತಾರೆ,ಇದು ಸುಮಾರು ವರ್ಷಗಳಿಂದ ನಡೆದುಕೊಂಡುಬಂದ ಪದ್ದತಿಯಾಗಿದೆ ದೇವಿಗೆ ಕಾಯಿ ಕರಪೂರು ಕುಂಕುಮ್ಮ ಸಕ್ಕರೆ ಭಂಡಾರ ಬನ್ನ ಪತ್ರಿ ನಂಬೆ ಹಣ್ಣು ಉದ್ಬತ್ತಿ ಪೂಜೆ ಸಾಮಗ್ರಿಗಳು ಇರುತ್ತವೆ. ಗುಡಿಗೆ ಸುಣ್ಣ ಬಣ್ಣ ಮಾಡಿ ಕಾರ್ಯ ಕ್ರಮ ಮಾಡುತ್ತಾರೆ.

ಶಿಲಾ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ಭೀಮಲಿಂಗೇಶ್ವರ ದೇವಾಲಯದ ಗರ್ಭಗುಡಿ



ಶ್ರೀ ಭೀಮಲಿಂಗೇಶ್ವರ ದೇವರ ಶಿಲ್ಪ



ಶ್ರೀ ಭೀಮಲಿಂಗೇಶ್ವರ ದೇವಾಲಯ, ನಾಯ್ಕಲ್ ಗ್ರಾಮ, ಶಹಾಪೂರ ತಾಲೂಕು

ಶಿಲಾ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ದ್ಯಾವಮ್ಮ ದೇವಿ, ಚಾಮನಾಳ ಗ್ರಾಮ, ಶಹಾಪೂರ ತಾಲೂಕು

ಶಿಲಾ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ಕಾಳಿಕಾ ದೇವಿ, ನೀರಡಗಿ ಗ್ರಾಮ, ಜೇವರ್ಗಿ ತಾಲೂಕು

ಅಧ್ಯಾಯ : ನಾಲ್ಕು

ಮರ ಮಾಧ್ಯಮದ ಗ್ರಾಮದೇವತೆಗಳು

ಅಧ್ಯಾಯ : ನಾಲ್ಕು

ಮರ ಮಾಧ್ಯಮದ ಗ್ರಾಮದೇವತೆಗಳು

ಸಗರನಾಡಿನ ಮರ ಮಾಧ್ಯಮದ ಶಿಲ್ಪಗಳು ಜನಪದ ಶೈಲಿಯಲ್ಲಿ ನಮ್ಮ ಗ್ರಾಮೀಣ ಜನರು ತಮ್ಮದೇ ಆದ ವೈಶಿಷ್ಟ್ಯತೆಯಲ್ಲಿ ರಚನೆ ಮಾಡಿದ್ದಾರೆ. ಸಗರನಾಡಿನ ಮಹಲರೋಜ ದೊಡ್ಡ ಸಗರ ಗ್ರಾಮದ ಶ್ರೀ ಯಲ್ಲಮ್ಮ ದೇವಿಯ ಮೂರ್ತಿಯು ಮರದಲ್ಲಿ ಕಲಾವಿದನು ತನ್ನ ಕೈಚಳಕದಿಂದ ಬಹಳ ಸುಂದರವಾಗಿ ನೋಡುಗರಿಗೆ ಭಕ್ತಿ ಮೂಡುವಂತೆ ಕೆತ್ತನೆ ಮಾಡಿದ್ದಾನೆ. ಜೊತೆಗೆ ತಾಯಿಯ ಪಾದಗಳನ್ನು ಸಣ್ಣ ಗಾತ್ರದಲ್ಲಿ ಕೆತ್ತನೆ ಮಾಡಿರುವುದು ಕಂಡುಬರುತ್ತದೆ.

ಶಹಾಪುರ ತಾಲೂಕಿನ ಸಿಂಗನಹಳ್ಳಿ ಗ್ರಾಮದ ಗ್ರಾಮದೇವತೆಯನ್ನು ಚಿಕ್ಕ ಚಿಕ್ಕ ಗಾತ್ರದಲ್ಲಿ ಮರ ಮಾಧ್ಯಮದ ಮೂರ್ತಿಗಳನ್ನು ನೋಡಬಹುದು. ಅಲ್ಲಿ ಮರದ ಮೂರ್ತಿಗಳು ಹಲವಾರು ಬಗೆ ಬಗೆಯದಾಗಿದ್ದು, ಸಗರನಾಡಿನ ಜನರ ಭಕ್ತಿ, ಶ್ರದ್ಧತೆ ಹಾಗೂ ಅಪಾರ ನಂಬಿಕೆ, ತಮ್ಮದೇ ಆದ ಆಚಾರ, ಸಂಸ್ಕೃತಿಗಳು ಇಡೀ ನಾಡಿನ ಜನ ಮೆಚ್ಚುವಂತೆ ನಿರ್ಮಾಣಗೊಂಡ ಈ ಮೂರ್ತಿಗಳನ್ನು ಇಂದಿಗೂ ನಾವು ನೋಡಬಹುದು. ಇವುಗಳೊಂದಿಗೆ ಸಗರನಾಡಿನಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿದ ದೇವಿ ಶ್ರೀ ಮಹಾಲಕ್ಷ್ಮೀ ತಾಯಿಯ ಮೂರ್ತಿಯನ್ನು ಕಟ್ಟಿಗೆಯಲ್ಲಿ ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದೆ. ಸುಮಾರು ೩೦ ಸಾವಿರ ಜನರು ಒಟ್ಟುಗೂಡಿ ನಡೆಸುವ ಬೃಹತ್ ಗಾತ್ರದ ಜಾತ್ರೆಯು ಈ ದೇವಿಗೆ ಸಗರನಾಡಿನ ಜನತೆ

ಅತ್ಯಂತ ವಿಜೃಂಭನೆಯಿಂದ ಕೊಂಡಾಡುತ್ತಾರೆ. ಅದೇ ರೀತಿ ಏಳೂರು ಗ್ರಾಮದ ದೇವಿಗೂ ಇದೇ ರೀತಿ ಪ್ರತಿವರ್ಷ ಭವ್ಯ ಮೆರವಣಿಗೆಯಿಂದ ತಂದು ಸ್ಥಾಪನೆ ಮಾಡಲಾಗುತ್ತದೆ. ಹೀಗೆ ಸಗರನಾಡಿನುದ್ದಕ್ಕೂ ಕಂಡುಬರುವ ಪ್ರತಿಯೊಂದು ಹಳ್ಳಿಗಳಲ್ಲಿಯೂ ಆಯಾ ಗ್ರಾಮದ ದೇವತೆಗಳನ್ನು ಕಾಣಬಹುದು. ಪ್ರಸ್ತುತ ಇಲ್ಲಿ ಅವುಗಳಲ್ಲಿ ಮುಖ್ಯವಾದುದನ್ನು ಆಯ್ದು ಇಲ್ಲಿ ವಿವರಿಸಲಾಗಿದೆ.

೦೧. ಶ್ರೀ ಹಳ್ಳದ ಯಲ್ಲಮ್ಮ ದೇವಿ, ಶಹಾಪೂರ

ಯಾದಗೀರ ಜಿಲ್ಲೆ ಶಹಾಪೂರ ತಾಲೂಕಿನ ಹೃದಯ ಭಾಗದಲ್ಲಿರುವ ಹಳ್ಳದ ಯಲ್ಲಮ್ಮ ದೇವಿ ಶಕ್ತಿ ದೇವತೆ ಶಹಾಪೂರ ಪಟ್ಟಣ್ಣದ ಬಸವೇಶ್ವರ ಚೌಕ ಹತ್ತಿರ ಹಳ್ಳದ ಯಲ್ಲಮ್ಮ ಸುಮಾರು ೬೦ ವರ್ಷಗಳಿಂದ ಪೂಜಿಸುತ್ತಾ ಭಕ್ತರ ಆಸೆ ಇಡೇರಿಸಿದೆ ಶಕ್ತಿ ದೇವತೆ ಯಲ್ಲಮ್ಮ ತಾಯಿ ಗುಡಿಯ ಎದುರಿಗೆ ಭಾವೈತೆಯ ಸಂಖ್ಯೆತವಾದ ಮುಸ್ಲಿಂ ಮರು ನಮಜಾ ಮಾಡುವ ಮಂದಿರವಿದೆ ಪಟ್ಟಣದಲ್ಲಿ ಹಿಂದೂ ಮುಸ್ಲಿಂಮರು ಅಣ್ಣ ತಮ್ಮಂದಿರಂತೆ ಇದ್ದು ಭಾವೈಕತೆಯಿಂದ ಮರೆದ ಶಹಾಪೂರ ಪಟ್ಟಣ್ಣದ ಜನರು, ಶಕ್ತಿ ದೇವತೆಯಾದ ಹಳ್ಳದ ಯಲ್ಲಮ್ಮ ತಾಯಿ ದೇವಾಸ್ಥಾನ ಅಡಿಗಲ್ಲು ಶ್ರೀ ಬಾಪುಗೌಡ ದರ್ಶನಾಪೂರ ನೇರವೇರಿಸಿದ್ದಾರೆ ಅವರು ಅಡಿಗಲ್ಲು ಇನ್ನೂ ಆಗೆ ಇದೆ.

೧೯೮೫ರಲ್ಲಿ ಸಣ್ಣ ಪ್ರಮಾಣದಲ್ಲಿದೆ ದೇವರ ಸ್ಥಲ ಸಣ್ಣ ಕಲ್ಲಿನಿಂದ ಪತ್ರಾಸ ಹಾಕಿ ಪೂಜೆ ಮಾಡುತ್ತಾ ಬದಿಂದ್ದು ನಂತರದ ದಿನಗಳಲ್ಲಿ ಅರ್ಚಕರು ಭಕ್ತರ ಎಲ್ಲರು ಸೇರಿ ಶ್ರೀ ಎಲ್ಲಮ್ಮ ದೇವಿ ಸ್ವಲ್ಪ ಮಟ್ಟಿಗೆ ದೊಡ್ಡ ಗುಡಿ ಕಟ್ಟಿದ್ದಾರೆ ಈ ಗುಡಿಯ ಕಟ್ಟಿಗೆಯ ಮೂರ್ತಿ ಇದೆ ಶಿಲ್ಪಿ ಕಲಾವಿದನ್ನು ತನ್ನ ಕೈ ಚಳಕದಿಂದ ೨ ಅಡಿ ಎತ್ತರದ ಕಟ್ಟಿಗೆಯ ಮೂರ್ತಿಯನ್ನು ಕೆತ್ತನೆ ಮಾಡಿ ಪ್ರತಿಷ್ಠಾಪನೆ ಮಾಡಿದ್ದಾರೆ.

ಈ ದೇವಿಯ ಪ್ರತಿ ವರ್ಷ ಓಳಿ ಹುಣಿಮೆಯಲ್ಲಿ ಹುಡಿ ತುಂಬುವ ಹರಕೆ ಇಡೆರಿಸುವುದು ಮಹಾತಂಗಿ ಮಕ್ಕಳು ಜೋಗವನವರು ಬಂದು ಎಲ್ಲಮ್ಮ ಹಾಡು ಹಾಡಿ ಬೇವಿನ ಸೋಪ್ಪು ಕೈಯಲ್ಲಿ ಹಿಡಿದು ಭಂಡಾರ ಹಣೆಗೆ ಹಚ್ಚಿ ದೇವಿ ಹೆಸರಿನಲ್ಲಿ ಭಕ್ತಿ ಅರ್ಪಿಸುತ್ತಾರೆ ಈ ಎಲ್ಲಮ್ಮ ದೇವಿ ಗುಡಿಗೆ ಸರಕಾರವಾಗಲ್ಲಿ ಧಾರ್ಮಿಕ ಮತ್ತು ದತ್ತಿ

ಇಲಾಖೆಯಾಗಲ್ಲಿ ಪ್ರವಾಸೋಧ್ಯಮ ಇಲಾಖೆಯಲ್ಲಿ ಯಾವುದೇ ಸಹಾಯ ಸಹಕಾರ ನೀಡಿಲ್ಲವೆಂದು ಈ ಗುಡಿಯ ಅರ್ಚಕರು ಹೇಳುತ್ತಾನೆ.

ಶ್ರೀ ಮಲ್ಲಪ್ಪ ಪೂಜಾರಿ ಈ ದೇವಸ್ಥಾನ ಮುಖ್ಯ ಅರ್ಚಕರಾಗಿದ್ದು ಸುಮಾರು ೬೦ ವರ್ಷಗಳಿಂದ ಈ ತಾಯಿ ಪೂಜೆ ಮಾಡುತ್ತಾ ಭಕ್ತರ ಇಷ್ಟದಂತೆ ಇಲ್ಲಿ ಉಡಿ ತುಂಬುವ ಕಾರ್ಯ ನಡೆಯುತ್ತದೆ ಮೂಲತಃ ಹಳ್ಳಳ್ಳಿ ಗ್ರಾಮದವರಾಗಿದ್ದು ಈಗ ಶಹಾಪೂರ ಮುಚಗೇರಿ ಗಡ್ಡಿ ನಗರದಲ್ಲಿ ವಾಸವಾಗಿದ್ದಾರೆ. ಇವರು ಕುರುಬ ಸಮುದಾಯಕ್ಕೆ ಸೇರಿದ್ದು ಈ ದೇವಸ್ಥಾನ ಯಾವುದೇ ಸರಕಾರದಿಂದ ಹಣ ಸಹಾಯ ಇರುವುದಿಲ್ಲ ಭಕ್ತರ ಇಷ್ಟದಂತೆ ಮನಸ್ಸಿನಲ್ಲಿ ಬೇಡಿಕೊಂಡ ಆಸೆ ಇಡೇರಿದಂತೆ ಭಕ್ತರ ಈ ದೇವಸ್ಥಾನಕ್ಕೆ ಆಸ್ತಿ ಶ್ರೀ ಯಲ್ಲಮ್ಮ ದೇವಿ ದೇವಸ್ಥಾನದ ಎದುರುಗಡೆ ಪಾದಗಟ್ಟಿ ಸ್ಥಳದ ಕಟ್ಟಿ ಇದೆ. ಅದರಲ್ಲಿ ಕಟ್ಟಿಗೆಯ ಪಾದಗಳಿದ್ದು ಪಾದದ ಪಕ್ಕದಲ್ಲಿ ಎರಡು ಕುಂಬಾರ ಪಣತಿ ಇದ್ದು ಅವುಗಳಲ್ಲಿ ಪೂಜೆ ಮಾಡುತ್ತಾರೆ ಪ್ರತಿ ವಾರಕ್ಕೆ ಎರಡು ಬಾರಿ ಮಂಗಳವಾರ ಮತ್ತು ಶುಕ್ರವಾರ ಜನರು ಕಾಯಿ ಕರಪೂರಕ್ಕೆ ಎಣ್ಣಿ ಉದಬತ್ತಿ ತಂದು ತಾಯಿ ದೇವಿಗೆ ಅರ್ಪಿಸುತ್ತಾರೆ.

೦೨. ಶ್ರೀ ಹುಲಿಗೆಮ್ಮ ದೇವಿ, ನಾಯ್ಕಲ್ ಗ್ರಾಮ

ಈ ಊರಿನ ಹೆಸರು ನ್ಯಾಯಾದ ಕಲ್ಲು ಜನರ ಹಾಡು ಭಾಷೆಯಲ್ಲಿ ಈಗ ನಾಯ್ಕಲ್ ಗ್ರಾಮವಾಗಿದೆ. ಶ್ರೀ ಹುಲಗಮ್ಮ ದೇವಿ ವಿವರ:– ಶಹಾಪೂರು ತಾಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೫ ಕಿ.ಮೀ ದೂರದಲ್ಲಿ ದೋರನಹಳ್ಳಿ ಖಾನಾಪೂರು ಮನಗನಾಳ ಗ್ರಾಮದಿಂದ ನೇರವಾಗಿ ನಾಯ್ಕಲ ಗ್ರಾಮವಿದೆ.

ಈ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಹುಲಗಮ್ಮ ದೇವಿ ಗುಡಿ ಇದೆ. ಈ ನಾಯ್ಕಲ್ ಗ್ರಾಮದಲ್ಲಿ ಖಅ ಓಣಿಯಲ್ಲಿ ಮರೆಮ್ಮದೇವಿ ಮತ್ತು ಭಾಗ್ಯವಂತಿ ದೇವಿ ಗುಡಿ ಇದೆ ಮತ್ತು ಮರೆಮ್ಮ ದೇವಿ ಪರಿಶಿಷ್ಟ ಜಾತಿಯವರ ಓಣಿಯಲ್ಲಿ ಮರೆಮ್ಮ ದೇವಿ ಪುರಾತನ ಕಾಲದ ಗುಡಿ ಇದೆ. ನಾಯ್ಕಲ್ ಗ್ರಾಮ ಮುಂದೆ ಗುಡ್ಡದಲ್ಲಿ ಶ್ರೀ ಎಲ್ಲಮ್ಮ ದೇವಿ ಗುಡಿದೆ ಶ್ರೀ ದ್ಯಾವಮ್ಮ ದೇವಿ ಗುಡಿಯ ಗೌಡರ ಓಣಿಯಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವರು ಶಹಾಪೂರು–ಯಾದಗಿರ ಮುಖ್ಯ ರಸ್ತೆಯ ಪಕ್ಕದಲ್ಲಿ ಗುಡಿ ಇದೆ ನಾಯ್ಕಲ್

ಗ್ರಾಮದ ಕರೆಯ ಹಿಂದು ಗುಡಿ ಗುಡ್ಡದಲ್ಲಿ ಶ್ರೀ ಭೀಮಲಿಂಗೇಶ್ವರ ಗುಡಿ ಇದೆ. ಮುಸ್ಲಿಂ ದರ್ಗ ಇದೆ. ಈ ನಾಯ್ಕಲ್ ಗ್ರಾಮದಲ್ಲಿ ಆಯಾ ಜನಾಂಗದ ದೇವರುಗಳು ಆಯಾ ಓಣಿಯಲ್ಲಿ ಇದೆ ಎಲ್ಲಾ ದೇವತೆಯ ಶಿಲ್ಪಗಳು ಒಂದೊಂದು ವಿವರ ಈ ಕೆಳಗಿನಂತಿವೆ.

ಶ್ರೀ ಹುಲಗೆಮ್ಮ ದೇವಿ ಮೂರ್ತಿ : ಶ್ರೀ ಹುಲಗಮ್ಮ ದೇವಿ ಮೂರ್ತಿಯು ಬೆಳ್ಳಿಯಿಂದ ಮಾಡಿರುವ ಮೂರ್ತಿ ಇದೆ ದೇವಿ ಪೂರ್ಣ ಕಟ್ಟಿಗೆಯಿಂದ ಕೆತ್ತನೆ ಮಾಡಿದ್ದಾರೆ ಆದರೆ ಮುಖ ಮಾತ್ರ ಬೆಳ್ಳಿಯ ಮುಖ ಮಾಡಿ ಆ ಕಟ್ಟಿಗೆಯ ಮುಖಕ್ಕೆ ಬೆಳ್ಳಿ ಮುಖ ಅಚ್ಚಿ ನೋಡುಗರಿಗೆ ಭಯ ಭಕ್ತ ಮೂಡುತ್ತದೆ ದೇವಿ ಮೂರ್ತಿಯ ಕಟ್ಟಿಗೆಯ ಕುರ್ಚಿಯಲ್ಲಿ ಕುಳಿತಿರುವ ದೇವಿ ಮೂರ್ತಿ ಬಹಳ ಸುಂದರವಾಗಿ ಶಿಲ್ಪಿಯ ತನ್ನ ಕೈ ಚಳಕದಿಂದ ಆಕರ್ಷಣೆಯಾಗುವಂತೆ ರಚಿಸಿದ್ದಾರೆ. ಶ್ರೀ ಹುಲಗಮ್ಮ ದೇವಿ ಗುಡಿಯು ಉತ್ತರ ದಿಕ್ಕಿಗೆ ಇದೆ ಗುಡಿಯ ಒಳ ಅಂಕಣದಲ್ಲಿ ಒಂದು ಮೂಲಿಗೆ ಉತ್ತು ಬೆಳೆಯುತ್ತದೆ ಭಕ್ತರು ಆ ಉತ್ತಿಗೆ ಬೇಡಿಕೊಳ್ಳುತ್ತಾರೆ ದೇವಿ ಫೋಟೊ ಗೋಡೆಗೆ ಹಾಕಿದ್ದಾರೆ ಈ ಅಂಕಣದಲ್ಲಿ ಧೇವಿ ಪಲ್ಲಕ್ಕಿ ಇದೆ, ಚೌಡಕಿ ಇದೆ.

೦೩. ಶ್ರೀ ದ್ಯಾವಮ್ಮ ದೇವಿ, ನಾಯ್ಕಲ್ ಗ್ರಾಮ

ನಾಯ್ಕಲ್ ಗ್ರಾಮದ ಶ್ರೀಮಂತರ ಮನೆಯಲ್ಲಿರುವ ಬಡಿಗೇರ ಮನೆತನ ಪಂಚಳದವರು ಈ ದೇವಿ ಮೂಲ ಅರ್ಚಕರು ಮತ್ತು ಭಕ್ತರು ಈ ಊರಿನ ಎಲ್ಲಾ ಜನಾಂಗದವರು ಶ್ರೀ ದ್ಯಾವಮ್ಮ ದೇವಿ ಉತ್ಸವದಲ್ಲಿ ಬಂದು ದೇವಿ ಆರ್ಶಿವಾದ ಪಡೆಯುತ್ತಾರೆ. ಈ ದೇವಿ ಉತ್ಸವವು ಪ್ರತಿ ಮೂರು ವರ್ಷಕೊಮ್ಮೆ ಮತ್ತು ೫ ವರ್ಷಕೊಮ್ಮೆ ನಡೆಯುತ್ತದೆ ಈ ದೇವಿ ಶಕ್ತಿ ದೇವತೆ ಬಹಳ ದೊಡ್ಡದ್ದು ದೇವಿ ಗುಡಿಯಿಂದ ಹೊರ ಅಂಕಣದಲ್ಲಿ ದೇವಿಯನ್ನು ಕೂಡಿಸಿ ಭಕ್ತರು ತಮ್ಮ ಹರಕೆಯನ್ನು ಅರ್ಪಿಸುತ್ತಾರೆ. ಡೊಳ್ಳು, ಹಲಗೆ, ಬಾಜಿ, ಭಜಂತರಿಯೊಂದಿಗೆ ದೇವಿ ಬಂಡಿಯನ್ನು ಆಂಜನೇಯ ಗುಡಿಯವರೆಗೆ ಎಳೆದು ಜೈಕಾರ ಹಾಕಿ ದೇವಿಗೆ ಕಾಯಿ ಕುಂಬಳಕಾಯಿ ನಂಬೆ ಹಣ್ಣು ಹೀಗೆ ದೇವಿ ಮುಂದೆ ಹೊಡಿಯುತ್ತಾರೆ. ಪೂಜಾರಿ ದೇವಿ ಮೈಯಲ್ಲಿ ಬಂದು ಹೇಳಿಕೆ ಹೇಳುತ್ತಾನೆ ರೈತರಿಗೆ ವರ್ಷದ ಮಳೆ, ಬೆಳೆ, ದವಸ ಧಾನ್ಯ ಆರೋಗ್ಯ ಸಂಪತ್ತು ಎಲ್ಲವನ್ನು ದೇವಿಗೆ ಕೇಳುತ್ತಾರೆ. ಶ್ರೀದೇವಿ ಶುದ್ಧ ಭಕ್ತಿಯಿಂದ ಕೇಳಿದ ಭಕ್ತರಿಗೆ ಅವರ ಆಸೆಯಂತೆ ಇಡೇರಿಸುತ್ತಾಳೆ

ಶಕ್ತಿದೇವತೆ ಶ್ರೀ ದ್ಯಾವಮ್ಮ ದೇವಿ ಮಹಿಮ್ಮಾ ಬಹಳ ಇದೆಂದು ಊರಿನ ಹಿರಿಯರು ಹೇಳುತ್ತಾರೆ ದೇವಿ ಉತ್ಸವ ದಿನ ಊರಿನ ಎಲ್ಲಾ ಎತ್ತಿನ ಬಂಡಿ ಗಾಲಿಗಳು ಬಿಚ್ಚಿ ಇಡುವುದು ದೇವಿಗೆ ನೀರು ನೀಡುವುದು ದೇವಿಯ ಭಕ್ತರು ಗುಡಿಯ ಸುತ್ತಾ ತೆಂಗಿನ ಎಲೆ (ಪರಕೆ) ಇಟ್ಟು ಮತ್ತು ಮಾವಿನ ಎಲೆ (ತೋರಣ) ವಿವಿಧ ಬಣ್ಣದ ಅಲಂಕರ ಮಾಡುತ್ತಾರೆ ಗುಡಿಯ ಸುತ್ತಾ ವಿವಿಧ ಬಣ್ಣದ ಲೈಟನಿಂದ ಗುಡಿಯು ಕಂಗೋಳಿಸುವಂತೆ ಭಕ್ತರು ಮಾಡುತ್ತಾರೆ. ಕೆಲವರು ದೇವಿಯ ಹೆಸರಿನಿಂದ ೧ ಹೊತ್ತು ೨ ಹೊತ್ತು ಊಟ ಮಾಡುವುದಿಲ್ಲ ಅದು ಅವರ ಹರಕೆ ಯಾಗಿರುತ್ತದೆ ಒಪ್ಪತ್ತು, ಎರಡು ಒಪ್ಪತ್ತು, ಒಂದೊತ್ತು ಗ್ರಾಮೀಣ ಜನರು ದೇವಿಗೆ ಬೇಡಿಕೋಳ್ಳುತ್ತಾರೆ. ಇದು ಹರಕೆಯ ಪದ್ಧತಿ.

೦೪. ಮರೆಮ್ಮದೇವಿ ಎಸ್.ಸಿ ಓಣಿ, ನಾಯ್ಕಲ್ ಗ್ರಾಮ

ಶ್ರೀ ಮರೆಮ್ಮದೇವಿ ಸುಮಾರು ೨೦೦ ವರ್ಷಗಳಿಂದ ಸಣ್ಣ ಗುಡಿ ಇತ್ತೊಂದು ಇಲ್ಲಿಯ ಮೆತ್ರಿ ಭಕ್ತರು ಶ್ರೀ ಬಸವರಾಜ ಮೆತ್ರಿ ಈ ದೇವಿ ಗುಡಿಯ ಉತ್ಸವಾರಿ ನೋಡಿಕೊಳ್ಳುತ್ತಾನೆ ಇಲ್ಲಿ ಪ್ರತಿವರ್ಷ ದೇವಿ ಉತ್ಸವ ಕುಂಬಾ ಕಳಸ ಪಲ್ಲಕ್ಕಿ ಸೇವೆ ನಡೆಯುತ್ತದೆ ಈ ಓಣಿಯ ಜನ ಮತ್ತು ಊರಿನ ಭಕ್ತರು ದೇವಿಗೆ ಭಕ್ತಿಯನ್ನು ಅರ್ಪಿಸುತ್ತಾರೆ ಇಲ್ಲಿ ಮಹಾತಂಗಿ ಮಕ್ಕಳು ಜೋಗಮ್ಮನವರು ಈ ದೇವಿಯ ಮೂಲ ಭಕ್ತರು ಊರಿನ ಹಿರಿಯರು ಹೇಳುತ್ತಾರೆ.

ಇದೇ ಜನಾಂಗದವರು ಹೆಚ್ಚಾಗಿ ಶ್ರೀ ಯಲ್ಲಮ್ಮ ದೇವಿ ಭಕ್ತರು ಇದ್ದಾರೆ ನಾಯ್ಕಲ್ ಗುಡ್ಡಾದಲ್ಲಿ ಶ್ರೀ ಎಲ್ಲಮ್ಮದೇವಿ ಸಣ್ಣ ಗುಡಿ ಇದೆ ಇಲ್ಲಿಯ ಪ್ರತಿ ವರ್ಷ ಭನದ ಹುಣಿಮೆಯಲ್ಲಿ ಭಕ್ತರು ತಮ್ಮ ಹರಕೆಯನ್ನು ದೇವಿಗೆ ಅರ್ಪಿಸುತ್ತಾರೆ ಈ ಗುಡ್ಡದಲ್ಲಿ ದೇವಿ ಪಾದಗಳು ಇವೆ ವಿಶಾಲವದ ಗುಡ್ಡದಲ್ಲಿ ನೀರಿನ ಅನುಕೂಲವಿದೆ ಶ್ರೀ ಬಸವರಾಜ ಮೆತ್ರಿ ದೇವಿಯ ಪರಮ್ಮ ಭಕ್ತನಾಗಿದ್ದಾನೆ.

ಇಬ್ಬರು ದೇವತೆಗಳ ಪ್ರಸಾದ ವಿವರ : ಶ್ರೀ ಮರೆಮ್ಮ ದೇವಿಯ ಹೊಲೆಯರು ಮಾದಿಗರು ತಳವಾರ ಉಪ್ಪಾರು ಕುರಬರು ಹೀಗೆ ಕೆಳಜಾತಿ ಜನಾಂಗದವರು ದೇವಿಗೆ ಹರಕೆ ಬೇಡಿಕೋಳ್ಳುತ್ತಾರೆ ಹರಕೆ ಕುರಿ ಬಲಿ ಕೊಡುವುದು ಮತ್ತು (ಬ್ಯಾಟಿ) ದೀಡನಮಾಸ್ಕರ

ಹಾಕುವುದು ಜೋತಿ ಹೋರುವುದು ಕುಂಭಾ ಹೋರುವುದು ಅಲವಾರು ಪದ್ಧತಿಗಳು ಕೆಳ ಜಾತಿ ಜನಾಂಗದವರು ಮಾಡುತ್ತಾರೆ. ಒತ್ತು(ಬ್ಯಾಟಿ) ಬಲಿ ಕೊಟ್ಟು ದೇವಿಗೆ ಮಾಂಸದ ನೈವಿದ್ಯ ಮಾಡಿ ಮಾಂಸ ಮತ್ತು ಸಿಹಿ ಪದಾರ್ಥದ ಹೋಳಿಗೆ ಅನ್ನಾ ಹಾಲು ಸಕ್ಕರೆ ಚಜ್ಜಕ, ಚಕಾಲಿ, ಹೀಗೆ ಎರಡು ನಮೋನೆ ನೈವಿದ್ಯವನ್ನು ಶ್ರೀ ಮರೆಮ್ಮದೇವಿಗೆ ಸಲ್ಲಿಸುತ್ತಾರೆ, ಆದರೆ ಶ್ರೀ ಭಾಗ್ಯವಂತಿದೇವಿ ಮಾತ್ರ ಮಾಂಸ ಆಹಾರ ಮಾತ್ರ ನಡೆಯುವುದಿಲ್ಲ. ಈ ದೇವಿಗೆ ಬರೆ ಓಳಿಗಿ ಹಾಲು ತುಪ್ಪಾ ಅನ್ನಾ ಸಕ್ಕರಿ ಕಡಬು ಚಜ್ಜಕ್ಕ, ಚಕಾಲಿ ಪೂಜೆ ವಿಧಾನ ಬೇರೆ ಈ ದೇವಿಯ ಪೂಜೆ ಸಾಮಾಗ್ರಿಗಳು ಬೇರೆ ಆದರೆ ಪೂಜಾರಿ ಮಾತ್ರ ಒಬ್ಬನೆ ಶ್ರೀ ಸುಮಾರು ೪೦ ವರ್ಷಗಳಿಂದ ಈ ಇಬ್ಬರ ದೇವಿ ಪೂಜೆ ಮಾಡುತ್ತಾರೆ. ಆದರೆ ಈ ಗುಡಿಯಲ್ಲಿ ಇಬ್ಬರು ದೇವಿ ಕಟ್ಟಿಗೆ ಮೂರ್ತಿಯಾಗಲ್ಲಿ ಅಥವಾ ಕಲ್ಲಿನ ಮೂರ್ತಿಯಾಗಲ್ಲಿ ಮತ್ತು ಸೀಮೆಂಟಿನ ಮೂರ್ತಿಯಾಗಲ್ಲಿ ಇಲ್ಲಾ ಇಲ್ಲಿ ಬರೆ ಫೋಟೋಗಳು ಮಾತ್ರ ಇವೆ. ದೊಡ್ಡ ಗುಡಿ ಇದೆ ಆದರೆ ಮೂರ್ತಿ ಮಾತ್ರ ಇಲ್ಲ ಒಬ್ಬರು ದೇವಿ ಫೋಟೋಗಳು ಮಾತ್ರ ಇವೆ. ಶ್ರೀ ಭಾಗ್ಯವಂತಿ ದೇವಿ ಪೂರ್ವ ದಿಕ್ಕಿಗೆ ಒಂದು ಮೂಲೆಯಲ್ಲಿ ಫೋಟೋ ದೇವತೆ ಕಳಸ ಗಂಟೆ ಇತರೆ ದೇವತೆಯ ಸೀರಿ ಬಟ್ಟೆಗಳು ಒಂದು ಮಾಡ ಇದೆ ಆ ಮಾಡದಲ್ಲಿ ಇವುಗಳು ಇಟ್ಟಿದ್ದಾರೆ.

೦೫. ಶ್ರೀ ಮರೆಮ್ಮ ದೇವಿ ಶ್ರೀ ಭಾಗ್ಯವಂತಿ ದೇವಿ

ಹೋಲೆಯರ ಓಣಿಯಲ್ಲಿರುವ ಶ್ರೀ ಮರೆಮ್ಮ ದೇವಿ ಮತ್ತು ಶ್ರೀ ಭಾಗ್ಯವಂತಿ ದೇವಿಯು ಒಂದೇ ಗುಡಿಯಲ್ಲಿ ಒಂದು ಮೂಲೆಯಲ್ಲಿ ಮರೆಮ್ಮದೇವಿ ಇನ್ನೊಂದು ಮೂಲೆಯಲ್ಲಿ ಶ್ರೀ ಭಾಗ್ಯವಂತಿ ದೇವಿ ಫೋಟೊ, ಕಳಸ, ಗಂಟೆ ಇತರೆ ಪೂಜೆ ಸಾಮಾಗ್ರಿಗಳು ಇವೆ. ಇಬ್ಬರ ನಡುವೆ ಒಂದು ೩ ಫೀಟು ಎತ್ತರದ ಇಟಂಗಿ ಗೋಡೆ ಕಟ್ಟಿದ್ದಾರೆ.

೦೬. ಶ್ರೀ ಎಲ್ಲಮ್ಮ ದೇವಿ, ಸಿಂಗನಹಳ್ಳಿ ಗ್ರಾಮ, ಜೇವರ್ಗಿ ತಾಲುಕು

ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನ ದಕ್ಷಿಣ ದಿಕ್ಕಿಗೆ ೪೦ ಕಿ.ಮಿ. ದೂರದಲ್ಲಿ ಚಿಗರಹಳ್ಳಿ, ಮುಖ್ಯ ರಸ್ತೆಯಿಂದ ಮದ್ರಿಕಿ ಮಾರ್ಗವಾಗಿ ಪಡದಹಳ್ಳಿ ಕ್ರಾಸ್ ಬಂದರೆ ಅಲ್ಲೆ ಸಿಂಗನಹಳ್ಳಿ ಶ್ರೀ ಎಲ್ಲಮ್ಮ ದೇವಿ ಗುಡಿ ಇದೆ. ಇದು ಶಹಾಪೂರ ತಾಲೂಕಿನಿಂದ ಕೇವಲ

೧೫ ಕಿಮೀ. ದೂರ ಸಿಂಗನಹಳ್ಳಿ ಗ್ರಾಮ ಬರುತ್ತದೆ. ಶಹಾಪೂರ ತಾಲೂಕಿನಿಂದ ಭೀಮನರಾಯನಗುಡಿ ಮತ್ತು ಗೋಗಿ ಮಾರ್ಗವಾಗಿ ಗೋಗಿ ಪೇಠ ಬಸ್ ನಿಲ್ದಾಣದಿಂದ ನೇರವಾಗಿ ಸಿಂಗನಹಳ್ಳಿ ಗ್ರಾಮಕ್ಕೆ ಹೋದರೆ ಅಲ್ಲೆ ಶ್ರೀ ಎಲ್ಲಮ್ಮ ದೇವಿ ದರ್ಶಣ ಪಡೆಯಬಹುದು.

ಶ್ರೀ ದೇವಿ ಜಾತ್ರೆಯು ಪ್ರತಿ ವರ್ಷ ಭಾರತ ಹುಣ್ಣಿಮೆಯ ಮೊದಲನೆಯ ವಾರದಲ್ಲಿ ಅಂದರೆ ಪ್ರತಿ ವರ್ಷ ಗುರುವಾರ ದಿನ ಗಂಗಾ ಸ್ನಾನಕ್ಕೆ ಹೋಗುವ ಪದ್ಧತಿ ಗುರುವಾರ ಮುಂಜಾನೆ ೧೦:೩೦ಕ್ಕೆ ಗೋಗಿಪೇಟ ಹೂಗಾರ ಮನೆಯಿಂದ ಎಲ್ಲಮ್ಮ ದೇವಿಯ ಅರ್ಚಕರು ಸಮ್ಮುಖದಲ್ಲಿ ಡೊಳ್ಳು, ಹಲಗೆ, ಬಾಜಿ ಭಜಂತ್ರಿ ಜೈ ಗೋಸಿಯಿಂದ ಪಲ್ಲಕ್ಕಿಯನ್ನು ಮೆರವಣಿಗೆಯಿಂದ ಸಿಂಗನಹಳ್ಳಿ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಎಲ್ಲಮ್ಮ ದೇವಿ ಗುಡಿಗೆ ಹೋಗುತ್ತಾರೆ. ಅಲ್ಲಿ ಎಲ್ಲಮ್ಮ ದೇವಿ ಗುಡಿಯ ಹೊರಗಿನ ಅಂಕದಲ್ಲಿ ಇಟ್ಟು ಪೂಜೆ ಸಲ್ಲಿಸಿ ವಿಧಿ ವಿಧಾನದಿಂದ ಪಲ್ಲಕ್ಕಿಯೊಳಗೆ ಎಲ್ಲಮ್ಮ ದೇವಿ ಮೂರ್ತಿ ಎಟ್ಟು ಪುನಃ ಪಲ್ಲಕ್ಕಿಯನ್ನು ಎಲ್ಲಮ್ಮ ದೇವಿ ಗುಡಿಯಿಂದ ಊರಿನ ಎಲ್ಲಾ ಸಮೂಹದಾಯದವರು ಸೇರಿ ಕೂಡಿಕೊಂಡು ಡೊಳ್ಳು ಹಲಗೆ ಬಾಜಿ ಬಜಂತ್ರಿಯೊಂದಿಗೆ ಭವ್ಯ ಮೆರವಣಿಗೆಯಿಂದ ಶ್ರೀ ಆಚಿಜನೆಯ ದೇವಸ್ಥಾನದ ಮುಖಾಂತರವಾಗಿ ೧೧ ಗಂಟೆಗೆ ಊರ ಪ್ರವೇಶ ಮಾಡುತ್ತಾರೆ. ಊರಿನ ಮಾಲಿಗೌಡರಾದ ಶ್ರೀ ನಿಂಗಣ್ಣಗೌಡ ಹೊಸ್ಮನಿ ಇವರಿಂದ ಎಲ್ಲಮ್ಮದೇವಿಯ ಪಲ್ಲಕ್ಕಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಭಕ್ತರು ಹಿರಿಯ ಮತ್ತು ಯುವಕರು ಅರ್ಚಕರು, ಪೂಜಾರಿಗಳು ಎಲ್ಲರೂ ಸೇರಿ ಪಲ್ಲಕ್ಕಿ ಜೊತೆಗೆ ಗಂಗಾ ಸ್ನಾನಕ್ಕೆ ತೆರಳುತ್ತಾರೆ. ಸಿಂಗನಹಳ್ಳಿಯಿಂದ, ಕೊಡಮನಹಳ್ಳಿ ಮಾರ್ಗವಾಗಿ, ಹುಲಕಲ, ಹೋತಪೇಠ, ಇಂಗಳಗಿ, ಶಿರವಾಳದಿಂದ ಭೀಮ ನದಿಗೆ ಹೋಗಿ ಸನ್ನತಿ ಚಂದ್ರಲಾಂಭ ದೇವಿಯ ಎದುರುಗಡೆ ನದಿಯಲ್ಲಿ ಪಲ್ಲಕ್ಕಿಯನ್ನು ಮತ್ತು ಭಕ್ತರು ನದಿಯ ನೀರಿನಲ್ಲಿ ಸ್ನಾನ ಮಾಡಿ ಪಲ್ಲಕ್ಕಿ ಮತ್ತು ದೇವಿ ಮೂರ್ತಿ ಎಲ್ಲವನ್ನು ನದಿಯ ನೀರಿನಿಂದ ಮಿಂದು (ತೊಳೆದು) ಪೂಜೆ ಸಲ್ಲಿಸುತ್ತಾರೆ ಇದು ಸಮಯ ಸಾಯಂಕಾಲ ೭:೩೦ಕ್ಕೆ ನೆರವೇರಿಸುವರು. ಆ ನಂತರ ಎಲ್ಲರೂ ಸೇರಿ ಉಪಹಾರ ಸೇವಿಸುವರು. ಅದೇ ರಾತ್ರಿ ೮ ಗಂಟೆಯಿಂದ ಪಲ್ಲಕ್ಕಿ ಹೊತ್ತುಕೊಂಡು ಶಿರವಾಳ ಗ್ರಾಮಕ್ಕೆ ಬರುವರು ಅಲ್ಲಿ ಶಿರವಾಳ ಗ್ರಾಮದವರು ಎಲ್ಲ ಜನರು ಸೇರಿ ಊರಲ್ಲಿ ಭವ್ಯ ಮೆರವಣಿಗೆ ಮಾಡುತ್ತಾರೆ. ಡೊಳ್ಳು, ಹಲಗೆ, ಬಾಜಿ ಭಜಂತ್ರಿ ದೀವಂಟಿಗೆ ಬೆಳಕು

ಮತ್ತು ಜೊತೆಗೆ ದೇವಿ ‘ಭವ್ಯ ಮೆರವಣಿಗೆಯಿಂದ ಮುಂದಿನ ಊರಿಗೆ ದೇವಿಯ ಪಲ್ಲಕ್ಕಿ ಕಳಿಸುತ್ತಾರೆ, ಆನಂತರ ಹೊತಪೇಠ ಗ್ರಾಮಕ್ಕೆ ಬಂದು ಅಲ್ಲಿಯು ಜನರು ಎಲ್ಲಮ್ಮ ದೇವಿಗೆ ಊರ ಜನರೆಲ್ಲರೂ ಸೇರಿ ದೇವಿ ತಮ್ಮ ಊರಿಗೆ ಬರ ಮಾಡಿಕೊಂಡು ದೇವಿಗೆ ನೀರು ನೀಡುವುದು ಕಾಯಿ ಕರ್ಪೂರ ದೀಪ ದೂಪ ಹಾಕಿ ಎಲ್ಲಮ್ಮ ದೇವಿಯನ್ನು ಪೂಜಿಸುತ್ತಾರೆ. ಹಿರಿಯರು ಕಿರಿಯರು ಮಾಲಿಗೌಡ ಪೋಲಿಸ್‌ಗೌಡ ಪೂಜಾರಿಯರು ಹೀಗೆ ಊರಿನ ಎಲ್ಲಾ ಜನಾಂಗದವರು ತಾಯಿ ದೇವಿ ಕೃಪೆಗೆ ಪಾರ್ಥರಾಗುತ್ತಾರೆ. ಊರಿಗೆ ಒಳ್ಳೆಯದಾಗಲಿ ಮಳೆ ಬೆಳೆ ಚೆನ್ನಾಗಿ ಆಗಲೆಂದು ದೇವಿಯಲ್ಲಿ ಬೇಡಿಕೊಳ್ಳುತ್ತಾರೆ. ಮಹಿಳೆಯರು ಮಕ್ಕಳಿಲ್ಲದವರು ನಮ್ಮಗೆ ಮಕ್ಕಳು ಕೊಡುತಾಯಿ ಎಂದು ದೇವಿಗೆ ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ನಂತರ ರಾತ್ರಿ ೧೦:೩೦ಕ್ಕೆ ಹುಲಕಲ್ ಗ್ರಾಮಕ್ಕೆ ಬಂದು ದೇವಿ ಶ್ರೀ ಆಚಿಜನೇಯ ಸ್ವಾಮಿ ಗುಡಿಯಲ್ಲಿ ಬಂದು ಇರುವರು ಪಲ್ಲಕ್ಕಿ ಹೊತ್ತು ಬಂದ ಭಕ್ತರಿಗೆ ಹುಲಕಲ್ ಗ್ರಾಮದ ಹಿರಿಯರು ಯುವಕರು ಮಾಲಿಗೌಡರು, ಪೋಲಿಸ್‌ಗೌಡ ಕಲಾವಿದರ ಎಲ್ಲರೂ ದೇವಿ ಕೃಪೆ ಆಶಿರ್ವಾದ ಪಡೆಯುತ್ತಾರೆ.

ಆಂಜನೆಯ ಸ್ವಾಮಿ ಗುಡಿಯಲ್ಲಿ ವಾಸ್ತವ್ಯ ಮಾಡಿ ಮಾರನೆಯ ದಿನ ಅಂದರೆ ಶುಕ್ರವಾರ ಮುಂಜಾನೆ ೬ ಗಂಟೆಗೆ ಹುಲಕಲ್ ಗ್ರಾಮದವರಿಂದ ತಾಯಿ ದೇವಿಗೆ ಪೂಜೆ ಸಲ್ಲಿಸಿ ಎಲ್ಲಾ ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಿರುತ್ತಾರೆ. ದೇವಿಯ ಶಕ್ತಿಯಿಂದ ಭಕ್ತರು ಎಲ್ಲಮ್ಮ ದೇವಿಗೆ ಊರಿನ ಎಲ್ಲ ಜನರು ಸೇರಿ ದೇವಿಗೆ ಭಕ್ತಿಯಿಂದ ತಮ್ಮ ತಮ್ಮ ಬೇಡಿಕೆಗಳನ್ನು ದೇವಿಯ ಮುಂದೆ ಬಂದು ಪ್ರಾರ್ಥನೆ ಮಾಡುತ್ತಾರೆ. ಅದರಂತೆ ಶ್ರೀ ಎಲ್ಲಮ್ಮ ದೇವಿ ಭಕ್ತರ ಆಸೆಯಂತೆ ಆಸೆ ಈಡೇರಿಸಿದೆ, ಆದರೆ ದೇವಿಗೆ ಎಲ್ಮ್ಮ ದೇವಿಗೆ ಭಕ್ತಿಯಿಂದ ಕುರಿ ಬಲಿಕೊಡುವುದು ದೀಡ ನಮಸ್ಕಾರ ಹಾಕುವುದು ಇನ್ನೂ ಹಳ್ಳಿಯ ಜನರಲ್ಲಿ ಭಕ್ತಿಯಿದೆ ನಂಬಿಕೆ ಇದೆ. ಜಾತ್ರೆಗೆ ಸ್ಥಳ ಸಿಗಲಾರದಷ್ಟು ಜನ ಸೇರುತ್ತಾರೆ. ಅಂದರೆ ಶ್ರೀ ಎಲ್ಲಮ್ಮ ದೇವಿ ಶಕ್ತಿ ಎಷ್ಟು ಎಂದು ಈಗಲೂ ಜನ ನೋಡಿ ದೇವಿಯ ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ಆನಂತರ ಮುಂದಿನ ಗ್ರಾಮವಾದ ಕಂಚನಕವಿ ಗ್ರಾಮಕ್ಕೆ ಬಂದು ಕಂಚನ ಕವಿ ಗ್ರಾಮಸ್ಥರಿಂದ ಭವ್ಯ ಮೆರವಣಿಗೆ ಮುಖಾಂತರ ದೇವಿ ಪಲ್ಲಕ್ಕಿ ಬರ ಮಾಡಿಕೊಂಡು ದೇವಿ ಆಶಿರ್ವಾದ ಪಡೆಯುತ್ತಾರೆ. ನಂತರ ಗೋಗಿ ಪೇಠ ಗ್ರಾಮಕ್ಕೆ ಪಲ್ಲಕ್ಕಿಯ ಮುಖಾಂತರ ಬಂದು ಮಹಾತಂಗಿ ಮಕ್ಕಳ ಮನೆಗೆ ಬಂದು ಅಲ್ಲಿಯೇ ಪೂಜೆ

ಸಲ್ಲಿಸುತ್ತಾರೆ ಗೋಗಿ ಪೇಠ ಗ್ರಾಮದ ಜನರು ದೇವಿಗೆ ಪಲ್ಲಕ್ಕಿಗೆ ನೀರು ನೀಡುವುದು ಮತ್ತು ಕಾಯಿ ಒಡೆಯುವುದು ಪಲ್ಲಕ್ಕಿ ಕೆಳಗೆ ಮಲಗುವುದು ಭಕ್ತರ ಹಲವಾರು ರೀತಿ ನಂಬಿಕೆಯ ಪದ್ಧತಿಗಳಿವೆ, ಮಹಾತಂಗಿ ಮಕ್ಕಳು ಪಲ್ಲಕ್ಕಿಯ ಹಿಂದುಗಡೆ ಬೇವಿನ ಸೊಪ್ಪು ಕೈಯಲ್ಲಿ ಹಿಡಿದು ಎಕ್ಕಲಿಗೆ ಜೋ ಯಕ್ಕಲಿಗೆ... ಜೊ ಯಕ್ಕಲಿಗೆ ಎಂದು ಹಾಡುತ್ತಾ ಪಲ್ಲಕ್ಕಿಯನ್ನು ಮುಂದೆ ಹೋಗಲು ಅನುಕೂಲ ಮಾಡುತ್ತಾರೆ. ಹಲಗೆ, ಡೊಳ್ಳು, ಬಾಜಿ ಭಜಂತ್ರಿ ವಾದ್ಯಗಳೊಂದಿಗೆ ಪಲ್ಲಕ್ಕಿಯನ್ನು ಸಿಂಗನಹಳ್ಳಿ ಗ್ರಾಮಕ್ಕೆ ತೆಗೆದುಕೊಂಡು ಹೊರಡುತ್ತಾರೆ.

೨ ಗಂಟೆಯ ತನಕ ಸಿಂಗನಹಳ್ಳಿ ಗ್ರಾಮಕ್ಕೆ ಭವ್ಯ ಮೆರವಣಿಗೆಯಿಂದ ಸಾಗುತ್ತಾರೆ. ಸಿಂಗನಹಳ್ಳಿ ಗ್ರಾಮಕ್ಕೆ ಪಲ್ಲಕ್ಕಿ ಮೆರವಣಿಗೆಯಿಂದ ಬಂದು ಶ್ರೀ ಆಜಿಜನೇಯ ಸ್ವಾಮಿ ಗುಡಿಯಿಂದ ಊರಿನ ಮಾಲಿಗೌಡರ ಮನೆಯಲ್ಲಿ ಪಲ್ಲಕ್ಕಿ ಪೂಜೆ ಸಲ್ಲಿಸಿ ಪಲ್ಲಕ್ಕಿ ಜೊತೆ ಬಂದ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ. ಎಲ್ಲರೂ ಸೇರಿ ಶ್ರೀ ಮಲ್ಲಣ್ಣಗೌಡ ಹೊಸ್ಮನಿ ಭಕ್ತಿಯಿಂದ ಶ್ರೀ ಎಲ್ಲಮ್ಮ ದೇವಿ ಕೃಪಾಶಿರ್ವಾದ ಪಡೆದು ನಂತರ ಎಲ್ಲಾ ಜನರು ಡೊಳ್ಳು, ಹಲಗೆ ಭಾಜಿ ಭಜಂತ್ರಿ ಕುಳಿತ ಜೋಗಮರ ಕುಣಿತ ಭಕ್ತರ ಮಧ್ಯ ಪಲ್ಲಕ್ಕಿ ಮತ್ತು ಕುಂಬಾ ಕಳಸದೊಂದಿಗೆ ಸಿಂಗನಹಳ್ಳಿ ಹೊರ ಹೊಲದಲ್ಲಿರುವ ದೇವಿ ಮೂಲ ಗುಡಿಗೆ ಪ್ರವೇಶ ಮಾಡುತ್ತಾಳೆ. ಸುಮಾರು ೬ ಗಂಟೆಯ ತನಕ ಗುಡಿಗೆ ಬಂದ ಪಲ್ಲಕ್ಕಿ ಕುಂಭ ಕಳಸವು ಗುಡಿಯ ಸುತ್ತಾ ೫ ಸುತ್ತು (ಪ್ರದಕ್ಷಣೆ ಹಾಕಿ) ನಂತರ ಪಲ್ಲಕ್ಕಿ ಕುಂಭಾ ಕಳಸವು ಎಲ್ಲಮ್ಮ ದೇವಿಯ ಗುಡಿಯ ಒಳ ಅಂಕಣದಲ್ಲಿ ಕಟ್ಟಿಗೆಯ ಮಂಚದ ಮೇಲೆ ಪಲ್ಲಕ್ಕಿ ಇಡುತ್ತಾರೆ, ಭಕ್ತರು ಜೈಕಾರ ಹಾಕುತ್ತ ಉಲ್ಲಾಸ ಭರಿತರಾಗುತ್ತಾರೆ.

ಶನಿವಾರ ತೇರಿನ (ರಥ) ವಿವರ: ಶನಿವಾರ ಮಧ್ಯಾಹ್ನ ೪ ಗಂಟೆಗೆ ಸಿಂಗನಹಳ್ಳಿ ಗ್ರಾಮದ ಎಲ್ಲ ಜನರು ಸವರಿಕೊಂಡು ಮಾಲಿಗೌಡರ ಮನೆಯಲ್ಲಿರುವ ಥೇರಿನ ಕಳಸಕ್ಕೆ ಪೂಜೆ ಸಲ್ಲಿಸಿ ಮಾಲಿಗೌಡರು ಮನೆಯಿಂದ ಎಲ್ಲಮ್ಮ ದೇವಿ ಗುಡಿಯವರೆಗೆ ಬಾಜಿ ಭಜಂತ್ರಿಯೊಂದಿಗೆ ಹಲಗೆನಾದದೊಂದಿಗೆ ಕಳಸವು ಮೆರವಣಿಗೆಯ ಮುಖಾಂತರ ಗುಡಿಯ ಹತ್ತಿರವಿರುವ ತೇರಿನ ಮೇಲೆ ತುದಿಗೆ ಕಳಸವನ್ನು ಇಟ್ಟು, ಪುನಃ ಪೂಜೆ ಸಲ್ಲಿಸುತ್ತಾರೆ. ತೇರು ಸುಮಾರು ೩೦ ಅಡಿ ಎತ್ತರವಿದ್ದು ನಾಲ್ಕು ಕೋನದ ೧೦ ಅಡಿ ಚೌಕಾಕಾರವಿದ್ದು ೪ ಸುಮಾರು ೫ ಅಡಿ ಎತ್ತರ ಕಲ್ಲಿನ ಗಾಲಿ ಇದ್ದು ಕಬ್ಬಿಣದ ಎಂಗಲ್ ಅಳವಡಿಸಿದ್ದಾರೆ.

ಪೂರ್ತಿ ಕಬ್ಬಿಣದಿಂದ ಕಬ್ಬಿಣದ ಪೆಟ್ಟಿಗೆಯಿಂದ ಕಬ್ಬಿಣದ ಪಟ್ಟಿಯಲ್ಲಿ ಹೂವಿನ ಆಕಾರ ಕಮಲದ ಹೂ, ಸೂರ್ಯಕಾಂತ ಹೂ ಆಕಾರ ಮಾಡಿದ್ದಾರೆ ಆಗೆ ತೇರಿನ ಸುತ್ತಲೂ ಸಣ್ಣ ಸಣ್ಣ ಗಂಟೆಗಳಿಂದ ಅಲಂಕರಿಸಿದ್ದಾರೆ. ತೇರಿನ ಮೇಲೆ ಗೋಲಾಕರದಿಂದ ಕೂಡಿದೆ, ಕಬ್ಬಿಣದ ಸರಪಳಿಯಿಂದ ರಿಂಗ್ ಮಾಡಿ ತೇರು ಎಳೆಯಲು ೪ ದೊಡ್ಡ ಗಾಲಿಯಿದೆ ತೇರಿನ ಮಧ್ಯೆ ೪ ಇಂಚಿನ ಕಬ್ಬಿಣದ ಪೈಪು ಇದೆ ತೇರಿನ ಮೇಲೆ ಕೋಡೆ ಇದೆ, ತೇರು ತೇರಿನ ಸುತ್ತು ತೆಂಗಿನ ಗಿಡದ ಪರಕೆ ಇದೆ.

ಇದು ತೇರಿನ ಮೂಲ ಆದರೆ ಜಾತ್ರೆಗೆ ಸಿಂಗಾರಗೊಳ್ಳುವುದು ಹೀಗಿದೆ ಈ ತೇರು ಮೊದಲು ಹೂವಿನಿಂದ ಮತ್ತು ತೆಂಗಿನ ಪರಕೆಯಿಂದ ಬಾಳೆ ದಿಂಡು ಮತ್ತು ನಂಬೆ ಹಣ್ಣು ವಿವಿಧ ಬಗೆಯ ಹೂವಿನಿಂದ ಅಲಂಕಾರ ಮಾಡುತ್ತಾರೆ. ನಾಲ್ಕು ದಿಕ್ಕಿಗೆ ಒಂದರ ಮೇಲೊಂದರಂತೆ ೨೧ ಕಳಸವನ್ನು ಇಡುತ್ತಾರೆ. ನಂತರ ತೇರು ಎಳೆಯಲು ಜನರು ಸಿದ್ಧರಾಗುತಿದ್ದಂತೆ ಎಲ್ಲಮ್ಮ ದೇವಿ ಗುಡಿಯಲ್ಲಿದ ಪಲ್ಲಕ್ಕಿಯನ್ನು ತಂದು ತೇರಿನ ಸುತ್ತ ಐದು ಪ್ರದಕ್ಷಣೆ ಹಾಕಿದ ನಂತರ ಗುಡಿಯ ಅರ್ಚಕರು ಕಾಯಿ ಒಡೆದು ಭಂಡಾರ ಹಚ್ಚಿ ತೇರಿನ ಒಳಗಡೆ ಅರ್ಚಕರು ಕೊಡುತ್ತಾರೆ. ಶ್ರೀ ಎಲ್ಲಮ್ಮ ದೇವಿಯ ಹೆಸರಿನಿಂದ ತೇರು ಎಳೆಯುವುದು ಸುರುವಾಗುತ್ತಿದ್ದಂತೆ ತೇರಿನ ಮೇಲೆ ಭಕ್ತರು ಉತ್ತುತ್ತಿ, ಬಾಳೆ ಹಣ್ಣು ಎಸೆಯುತ್ತಾರೆ. ಕೆಲವು ಭಕ್ತರ ಉತ್ತುತ್ತಿ ಬಾಳೆ ಹಣ್ಣಿಗಾಗಿ ಕೈ ಚಾಚುತ್ತಾರೆ. ಒಬ್ಬರ ಮೇಲೊಬ್ಬರು ಬೀಳುತ್ತಾರೆ ಕಾಯಿ ಬಾಳೆ ಹಣ್ಣು ಎಲ್ಲವನ್ನು ಭಕ್ತರು ತೆಗೆದುಕೊಂಡು ಪೂಜಿಸಿ ಅದನ್ನು ಕೇಲವರು ಅಲ್ಲೆ ತಿನ್ನುತ್ತಾರೆ. ಕೆಲವರು ಮನೆಗೆ ತೆಗೆದುಕೊಂಡು ಹೋಗುತ್ತಾರೆ ಈಗ ಸುಮಾರು ೫೦೦ ಮೀಟರ ದೂರದವರೆಗೂ ತೇರು ಎಳೆಯುತ್ತಾರೆ. ತೇರು ಎಳೆಯುತ್ತಿದ್ದಂತೆ ತೇರಿನ ಹಿಂದುಗಡೆ ಎಲ್ಲಮ್ಮ ದೇವಿ ಪಲ್ಲಕ್ಕಿಯು ಹಿಂದೆ ತೆಗೆದುಕೊಂಡು ಹೋಗುತ್ತಾರೆ.

ನಂತರ ಪಾದಗಟ್ಟೆಯಲ್ಲಿ ತೇರು ನಂತ ಮೇಲೆ ಸಾವಿರಾರು ಭಕ್ತರು ಚಪ್ಪಾಳೆ ಹಾಕುತ್ತಾರೆ. ಕೆಲವರು ಕೈ ಮುಗಿದು ಬೇಡಿಕೊಳ್ಳುತ್ತಾರೆ. ಕೆಲವರು ದೂರದಲ್ಲಿ ನಿಂತು ಕೈ ಮುಗಿದು ಬೇಡಿಕೊಳ್ಳುತ್ತಾರೆ. ಪಾದಗಟ್ಟೆಗೆ ಪಲ್ಲಕ್ಕಿಯು ೫ ಸುತ್ತ ಸುತ್ತಿದ ನಂತರ ಪುನಃ ತೇರು ಮೂಲ ಸ್ಥಳಕ್ಕೆ ಭಕ್ತರು ಎಳೆದುಕೊಂಡು ಹೋಗುತ್ತಾರೆ. ಹೋಗುವಾಗಲು ಭಕ್ತರು

ಉತ್ತುತ್ತಿ, ಬಾಳೆ ಹಣ್ಣು ತೇರಿನ ಮೇಲೆ ಎಸೆಯುತ್ತಾರೆ. ಎಸೆದಂತಹ ಉತ್ತುತ್ತಿಯನ್ನು ಬೇರೆಯವರ ಕೈಗೆ ಸಿಕ್ಕರೆ ಒಳ್ಳೆಯದಾಗುತ್ತದೆಂದು ಜನರ ನಂಬಿಕೆ ಹಾಗಾಗಿ ಜನರು ಮುಗಿ ಬೀಳುತ್ತಾರೆ ಉತ್ತುತ್ತಿ ಬರುವ ಕಡೆ ಎಲ್ಲರು ಕೈ ಮುಂದೆ ಚಾಚುವರು ಸಿಕ್ಕವರು ಕುಸಿಯಿಂದ ನಕ್ಕು ನಲಿವರು ಸಿಗದೇ ಇರುವವರು ಕೆಳಗೆ ಬಿದ್ದಿರುವ ಉತ್ತುತ್ತಿಯನ್ನು ಹುಡುಕಾಡುತ್ತಾರೆ ಸಿಕ್ಕರೆ ಕುಸಿಯಿಂದ ಹೋಗುತ್ತಾರೆ. ತೇರು ಮೂಲ ಸ್ಥಳಕ್ಕೆ ಹೋಗಿ ನಂತ ಮೇಲೆ ಎಲ್ಲಾ ಭಕ್ತರು ಜೋರಾಗಿ ಚಪ್ಪಾಳೆ ಹಾಕುತ್ತಾರೆ. ದೇವಿಗೆ ನಮಸ್ಕರಿಸುತ್ತಾರೆ ನಂತರ ಕೆಲವು ತೇರಿಗೆ ಕಾಯಿ ಕರ್ಪೂರ ಉದಬತ್ತಿ ಕೊಡುತ್ತಾರೆ. ನಂತರ ಎಲ್ಲಮ್ಮದೇವಿಯ ಪಲ್ಲಕ್ಕಿಯನ್ನು ಪುನಃ ಗುಡಿಯ ಒಳ ಅಂಕಣದಲ್ಲಿರುವ ಕಟ್ಟಿಗೆ ಮಂಚದ ಮೇಲೆ ಇಡುತ್ತಾರೆ. ಸುಮಾರು ೭ ಗಂಟೆಯ ತನಕ ಈ ತೇರಿನ ಕಾರ್ಯ ನಡೆಯುತ್ತದೆ.

ಸೋಮವಾರ ದಿನ : ಊರಿನ ಸಮಸ್ತ ಜನರು ದೇವಿಗೆ ನೈವೇಧ್ಯ ಮಾಡುವರು ಹೋಳಿಗೆ ಕಡುಬು ಅನ್ನ ಸಕ್ಕರಿ ಹಾಲು ತುಪ್ಪ ಹೀಗೆ ಎಲ್ಲಾ ಜನರು ಅವರವರ ಮನೆಯಿಂದ ಶ್ರೀ ಎಲ್ಲಮ್ಮ ದೇವಿ ಗುಡಿಗೆ ಬಂದು ನೈವೇಧ್ಯ ನೀಡುವರು ಮಧ್ಯಾಹ್ನ ೩ ಗಂಟೆಗೆ ತೇರಿಗೆ ಪೂಜೆ ಸಲ್ಲಿಸಿ ತೇರಿನ ಮೇಲೆ ಇರುವ ಕಳಸವನ್ನು ತೆಗೆದುಕೊಂಡು ಮೆರವಣಿಗೆಯಿಂದ ಶ್ರೀ ನಿಂಗಣ್ಣಗೌಡ ಹೊಸ್ಮನಿ ಇವರ ಮನೆಗೆ ಕಳಸವನ್ನು ಕೊಟ್ಟು ಬರುವರು. ನಂತರ ಸಾಯಂಕಾಲ ೫:೩೦ ಕ್ಕೆ ಶ್ರೀ ಎಲ್ಲಮ್ಮ ದೇವಿಯ ಪಲ್ಲಕ್ಕಿಯನ್ನು ಪೂಜೆ ಮಾಡಿ ಎಲ್ಲಾ ಜನರು ಸೇರಿ ಪಲ್ಲಕ್ಕಿಯನ್ನು ತೆಗೆದುಕೊಂಡು ಸಿಂಗನಹಳ್ಳಿ ಗ್ರಾಮದಿಂದ ಗೋಗಿ ಪೇಠ ಗ್ರಾಮದವರಿಗೆ ಡೊಳ್ಳು ಹಲಗೆಯಿಂದ ಮೆರವಣಿಗೆಯಲ್ಲಿ ಹೂಗಾರ ಮನೆಗೆ ಪಲ್ಲಕ್ಕಿ ತೆಗೆದುಕೊಂಡು ಬರುತ್ತಾರೆ. ರಾತ್ರಿ ೮:೩೦ಕ್ಕೆ ಹೂಗಾರ ಮನೆಗೆ ಪಲ್ಲಕ್ಕಿ ಇಟ್ಟು ಭಕ್ತರು ತಮ್ಮ ತಮ್ಮ ಮನೆಗೆ ಹೋಗುತ್ತಾರೆ. ಈ ರೀತಿಯಾಗಿ ಶ್ರೀ ಎಲ್ಲಮ್ಮ ದೇವಿ ಜಾತ್ರೆ ನಡೆಯುತ್ತದೆ.

ದೇವಿಯ ಬಯಲಾಟ : ಶ್ರೀ ಎಲ್ಲಮ್ಮ ದೇವಿ ಜಾತ್ರೆ ಮುಗಿದು ನಾಲ್ಕು ದಿನಗಳಾದ ಮೇಲೆ ಶುಕ್ರವಾರ ಸಿಂಗನಹಳ್ಳಿ ಗ್ರಾಮದವರೆ ದೇವಿಯ ಬಯಲಾಟ ಆಡುತ್ತಾರೆ. ಪ್ರತಿವರ್ಷ ದೇವಿಯ ಬಯಲಾಟವನ್ನು ತಪ್ಪದೆ ಶುಕ್ರವಾರ ರಾತ್ರಿ ೧೦:೩೦ಕ್ಕೆ ಪ್ರಾರಂಭಿಸುತ್ತಾರೆ. ಶ್ರೀ ಎಲ್ಲಮ್ಮ ದೇವಿ ದೇವಸ್ಥಾನದ ಎಡಗಡೆ ಇರುವ ರಂಗ ಮಂದಿರದಲ್ಲಿ ಈ ದೇವಿಯ ಬಯಲಾಟ ನಡೆಯುತ್ತದೆ. ಈ ದೇವಿ ಬಯಲಾಟವನ್ನು ಶುಕ್ರವಾರ ಮತ್ತು ಮಂಗಳವಾರ

೨ ದಿನ ಆಡುತ್ತಾರೆ. ಮಂಗಳವಾರದ ಬಯಲಾಟವನ್ನು ಸಿಂಗನಹಳ್ಳಿ ಗ್ರಾಮದಲ್ಲಿ ಆಡುತ್ತಾರೆ. ಊರಿನ ಎಲ್ಲಾ ಜನಾಂಗದವರು ಮಹಿಳೆಯರು, ಮಕ್ಕಳು, ಹಿರಿಯರು, ಕಿರಿಯರು ಸುತ್ತ ಮುತ್ತಲಿನ ಊರಿನವರು ಆಸಕ್ತಿಯುಳ್ಳವರು ಈ ದೇವಿ ಆಟವನ್ನು ೧ ದಿನ ರಾತ್ರಿ ಪೂರ್ತಿಯಾಗಿ ನಡೆಯುತ್ತದೆ. ಮುಂಜಾನೆ ೬ ಗಂಟೆಗೆ ಮಂಗಳಾರತಿ ಮಾಡಿ ದೇವಿಯಲ್ಲಿ ಕೈ ಮುಗಿದು ಬೇಡಿಕೊಂಡು ಎಲ್ಲಾ ಜನರಿಗೆ ಊರಿಗೆ ಬೆಳೆ, ಮಳೆ ಸಮೃದ್ಧಿಯಾಗಿ ಆಗಲೆಂದು ಬೇಡಿಕೊಳ್ಳುತ್ತಾರೆ.

ಶ್ರೀ ಎಲ್ಲಮ್ಮ ದೇವಿ ಸಿಂಗನಹಳ್ಳಿಯ ಈ ಗ್ರಾಮವು ಎರಡು ಜಿಲ್ಲೆಗೆ ಸಂಬಂಧಪಟ್ಟಿದೆ. ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನಲ್ಲಿ ಶ್ರೀ ಎಲ್ಲಮ್ಮ ದೇವಿ ಗುಡಿ ಇದೆ, ಇದೆ ಗುಡಿಯಿಂದ ೧೦೦ ಮೀಟರ ದೂರದಲ್ಲಿ ಗಡಿ (ರೇಖೆ) ಸೀಮಿ ಇದೆ, ಇನ್ನೂ ಇದರ ಹತ್ತಿರ ಸಿಂಗನಹಳ್ಳಿ ಗ್ರಾಮವು ಯಾದಗಿರಿ ಜಿಲ್ಲೆ ಶಹಾಪೂರ ತಾಲೂಕಿಗೆ ಸಂಬಂಧಪಟ್ಟ ಗ್ರಾಮವಾಗಿದೆ. ಇದರಿಂದ ಈ ಎಲ್ಲಮ್ಮ ದೇವಿಯ ಜಾತ್ರೆ ಬಂದಬಸ್ತ ಯಡ್ರಾಮಿ ಪೋಲಿಸ್ ಠಾಣೆಗೆ ಬರುತ್ತದೆ. ಶ್ರೀ ಎಲ್ಲಮ್ಮ ದೇವಿಯ ಪ್ರತಿಯೊಂದು ಕಾರ್ಯವು ಸಿಂಗನಹಳ್ಳಿ ಗೌಡರ ಮನೆಯಿಂದ ತೇರಿನ ಕಳಸ ಮತ್ತು ಕುಸ್ತಿ ಪಟುಗಳಿಗೆ ಬೆಳ್ಳಿ ಖಡ್ಗ ಎಲ್ಲವೂ ಸಿಂಗನಹಳ್ಳಿ ಗ್ರಾಮದ ಹೊಸ್ಮನಿ ಗೌಡರು ನಡೆಸಿಕೊಡುತ್ತಾರೆ. ಸಿಂಗನಹಳ್ಳಿ ಶ್ರೀ ಎಲ್ಲಮ್ಮ ದೇವಿ ಗುಡಿಯ ಹೊಲವನ್ನು ಸುಮಾರು ೬ ಎಕರೆ ಜಮೀನನ್ನು ಶ್ರೀ ನಿಂಗಣ್ಣಗೌಡ ಹೊಸ್ಮನಿ ಇವರು ಗುಡಿಯ ಅಭಿವೃದ್ಧಿಗಾಗಿ ಬಿಟ್ಟುಕೊಟ್ಟಿರುತ್ತಾರೆ. ಈ ದೇವಿ ಜಾತ್ರೆಗೆ ಸುಮಾರು ೨೦ ಸಾವಿರ ಜನಸಂಖ್ಯೆ ಸೇರುತ್ತಾರೆಂದು ಇಲ್ಲಿ ಭಕ್ತರು ಹೇಳುತ್ತಾರೆ. ಶಹಾಪೂರ, ಸುರಪುರ, ಜೇವರ್ಗಿ, ಕಲಬುರಗಿ, ಶಹಾಬಾದ, ವಾಡಿ, ಚಿತ್ತಾಪೂರು, ಯಾದಗಿರಿ, ಸಿಂದಗಿ, ಬಿಜಾಪೂರು, ಇಂಡಿ, ಆಲಮೇಲ್, ತಾಳಿಕೋಟಿ, ಮುದ್ದೆಬಿಹಾಳ, ಮಹಾರಾಷ್ಟ್ರ ಪೂನಾ, ಆಳಂದ, ಅಫಜಲಪೂರು, ರಾಯಚೂರು, ಲಿಂಗಸೂಗುರು, ಮಾನ್ವಿ, ದೇವದುರ್ಗ, ಗುರುಮಿಟಕಲ್, ಬೀದರ, ಬಸವಕಲ್ಯಾಣ, ಹುಮನಾಬಾದ ಹೀಗೆ ಹಲವಾರು ತಾಲೂಕು, ಜಿಲ್ಲೆಯಿಂದ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಾರೆ ತಾಯಿಯ ಕೃಪೆಗೆ ಪಾತ್ರರಾಗುತ್ತಾರೆ.

೦೬. ಶ್ರೀ ಹುಲಗಮ್ಮ ದೇವಿ, ಬೇವಿನಾಳ

ಯಾದಗಿರಿ ಜಿಲ್ಲೆ ಸುರಪೂರ ತಾಲೂಕು ಕೇಂದ್ರದಿಂದ ೧೨ ಕಿ.ಮಿ. ದಕ್ಷಿಣ ದಿಕ್ಕಿಗೆ ದೂರದಲ್ಲಿರುವ ಗ್ರಾಮವಾದ ಬೇವಿನಾಳ ಸುರುಪುರ ತಾಲೂಕಿನಿಂದ ಕುಂಬಾರಪೇಟ

ಗಂಜ ಕ್ರಾಸದಿಂದ ವೆಂಕಟಪೂರು ಮತ್ತು ರೂಕಂಪೂರ ಮಾರ್ಗವಾಗಿ ಚಂದಲಾಪೂರು ನೇರವಾಗಿ ಬೇವಿನಾಳ ಗ್ರಾಮಕ್ಕೆ ಹೋಗುವುದು ಇಲ್ಲಿ ಈ ಊರಿನ ಗ್ರಾಮ ದೇವತೆಯಾದ ಶ್ರೀಹುಲಗಮ್ಮದೇವಿ ಅದ್ದುಬೂತವಾಗಿದೆ ಮತ್ತು ಪ್ರಸಿದ್ದವಾಗಿರುವ ದೇವತೆ ೨೦೧೬-೧೭ನೇ ಸಾಲಿನಲ್ಲಿ ಕಂಪ್ಯೂಟರ ಯುಗ, ತಂತ್ರಗಾರಿಕೆ ಯುಗ, ಮೊಬಲ್ ಮೇಸೆಜ್, ಫ್ಯಾಕ್ಸ್ ಹೀಗೆ ಹಲವಾರು ತಂತ್ರಗಾರಿಕೆ ಇರುವ ಈಗ ಸುಡುವ ಕೆಂಡದ ಮೇಲೆ ಮತ್ತು ಕುದಿಯುವ ಬೆಳೆ ಪಾಯಸ ಬೆಲ್ಲಾ ಸೇರಿಸಿ ಕುದಿಯುವ ಬೆಳೆದ ಬೊಗಣಿಯಲ್ಲಿ ಪೂಜಾರಿ ತನ್ನ ಎರಡು ಕೈಗಳನ್ನು ಆ ಬೊಗಾಣಿಯಲ್ಲಿ ಕೈ ಹಾಕಿ ಅದರೊಳಗೆ ಕುದಿಯುತ್ತಿರುವ ಪಾಯಿಸವನ್ನು ಭಕ್ತರಿಗೆ ಸೋರಿಸುವುದು ಇದು ಈಗಲೂ ಇದೆ ಇದು ಸತ್ಯ ಇದೆ ಈ ಪವಾಡವನ್ನು ಪ್ರತಿ ವರ್ಷ ಶಿವರಾತ್ರಿ ಅಮವಾಸೆದಿಂದ ೨ ದಿನ ಭವ್ಯ ಮೆರವಣಿಗೆಯಿಂದ ಪಲ್ಲಕ್ಕಿ ತೆಗೆದುಕೊಂಡು ಊರು ಹೊರಗಡೆ ಇರುವ ಬಾವಿಗೆ ಪಲ್ಲಕ್ಕಿಯನ್ನು ತೆಗೆದುಕೊಂಡು ಹೋಗುತಾರೆ ಹಲಗೆ, ಡೊಳ್ಳು ಬಾಜಿ, ಭಜಂತ್ರಿ ಕುಣಿತ ಕೋಲಾಟ ಹೀಗೆ ಗ್ರಾಮೀಣ ಕಲಾವಿದರು ಹಿರಿಯರು ಯುವಕರು ಊರಿನ ಮುಖಂಡರು ಎಲ್ಲರು ಸೇರಿ ದೇವಿ ಪಲ್ಲಕ್ಕಿ ಮೆರವಣಿಗೆ ಮಾಡುತ್ತಾರೆ.

ಬಾವಿಗೆ ಪಲ್ಲಕ್ಕಿ ತಂದು ಬಾವಿಯಲ್ಲಿರುವನೀರನ್ನು ತೆಗೆದುಕೊಂಡು ಪಲ್ಲಕ್ಕಿಯಲ್ಲಿರುವ ದೇವಿ ಮೂರ್ತಿಗೆ ಪಲ್ಲಕ್ಕಿಗೆ ನೀರು ಸಿಂಪರ್ಣಿಮಾಡಿ ಪೂಜೆ ಸಲ್ಲಿಸಿ ಕಾಯಿ, ಕರಪೂರು ದೂಪ ದೀಪಹಚ್ಚಿ ಜೈಕಾರ ಹಾಕುತ್ತಾ ಮರಳಿ ಹುಲಗಮದೇವಿ ಗುಡಿಗೆ ಬರುತ್ತಾರೆ, ಗುಡಿಹತ್ತಿರ ಬರುತ್ತಿದ್ದಂತೆ ಕೆಂಡ ತುಳಿಯುವುದು (ಅಗ್ನಿ) ಪಾಯಿಸ ತೋರಿಸುವುದು ಸುಡುವ ಬಿಸಿ ಪಾಯಸದಲ್ಲಿ ಎರಡು ಕೈ ಹಾಕಿ ಎಲ್ಲಾ ಭಕ್ತರಿಗೆ ಕೈಯಿಂದ ತೇಗೆದುಕೊಂಡ ಎರಡು ಸಲ ಹೋಸ ಮರದಲ್ಲಿ ಎರಡೂ ಬಗಿಸಿ (ಬೋಗನಿ) ಹಾಕುತ್ತಾನೆ ಇದನ್ನು ನೋಡಿದ ಜನರು ಭಕ್ತಿಯಿಂದ ಕೈಮುಗಿದು ದೇವಿಗೆ ನಮಸ್ಕಾರಿಸುತ್ತಾರೆ ಸಾವಿರಾರು ಜನರು ಸೇರಿರುತ್ತಾರೆ.

ಗುಡಿಯ ವಿನ್ಯಾಸದ ವಿವರ : ಈ ಹುಲಗೆಮ್ಮದೇವಿ ಗುಡಿಯು ಉತ್ತರ ದಿಕ್ಕಿಗೆ ಮುಖ್ಯಬಾಗಿಲಿದ್ದು ಒಳ ಅಂಕಣವು ೩೦ x ೩೦ ಅಗಲ ಹೊಂದಿದೆ ಎರಡು ಕಂಬಗಳಿಂದ ಛತ್ತಹಾಕಿದ ಗುಡಿದೆ.ಈಗುಡಿಯ ಒಳ ಗೋಡೆಗೆ ಪಲ್ಲಕ್ಕಿ ತೂಗಹಾಕಿದ್ದು ಒಂದು ಮೂಲೆಯಲ್ಲಿ ಬಣ್ಣಬಣ್ಣದ ಕೊಡೆ ಇದೆ.ಈ ಗುಡಿಯ ಒಳಗಡೆ ಸದಾ ದೀಪ ಉರಿಯುತ್ತಿದೆ. ಹೊರ

ಅಂಕಣದಲ್ಲಿ ಸಣ್ಣದೊಂದು ಗುಡಿ ಇದೆ. ಈ ಸಣ್ಣ ಗುಡಿಯೊಳಗೆ ಒಂದು ಕಂಚಿನ ಕೊಡ ಇಟ್ಟಿದ್ದು ಈ ಕೊಡದಿಂದ ಬಾವಿ ನೀರು ತಂದು ಅಮವಾಸೆ ಹುಣಿಮೆ ದಿನ ತಾಯಿ ದೇವಿಗೆ ಪೂಜೆಗೆ ಸಲ್ಲಿಸುತ್ತಾರೆ ಈ ಸಣ್ಣ ಗುಡಿಯ ಒಂದು ಮೂಲಿಗೆ ೫ ಅಡಿ ಎತ್ತರದ ಕಟ್ಟಿಗೆ ಇದೆ ಈ ಕಟ್ಟಿಗೆಗೆ ಮೈಮರೆತೇಪ್ಪ ಕಂಚಿನ ಮೂರ್ತಿ ಇದೆ ಇದು ಕೀರ್ತಿ ಮೂಖ ಇದ್ದ ಹಾಗೆ ಕಾಣುತ್ತದೆ, ಹೊಯ್ಸಳ ಶೈಲಿಯಲ್ಲಿ ಮಾಡಿದ ಮೂರ್ತಿಯಾಗಿದೆ.

ಗರ್ಭಗುಡಿ : ಈ ದೇವಿಯ ಗರ್ಭ ಗುಡಿಯಲ್ಲಿ ಶ್ರೀ ಹುಲಗಮ್ಮದೇವಿ ಮೂರ್ತಿ ದಕ್ಷಿಣ ದಿಕ್ಕಿಗೆ ಮುಖಮಾಡಿ ಕುಳಿತ್ತಿದ್ದಾಳೆ ಶ್ರೀ ಹುಲಗಮ್ಮದೇವಿ ಒಂದು ಕಟ್ಟಿಗೆಯ ಕುರ್ಚಿಯ ಮೇಲೆ ಕೂಡಿಸಿ ದೇವಿಗೆ ಪೂಜೆ ಸಲ್ಲಿಸುತ್ತಾರೆ.ದೇವಿ ಮೂರ್ತಿ ಮುಂದೆ ಸಣ್ಣ ಗಂಟೆಗಳು ಸಾಲು ತುಂಬಿವೆ ಎದುರುಗಡೆ ಸಣ್ಣ ಮಾಡವಿದೆ ಈ ಮಾಡದೋಳಗೆ ಕುಂಬಾರ ಪಣತಿ ಇದ್ದು ಈ ಪಣತಿಯಲ್ಲಿ ಎಣ್ಣೆ ಹಾಕಿ ಸದಾ ದೀಪ ಹಚ್ಚಿರುತ್ತಾರೆ. ಈ ಗರ್ಭ ಗುಡಿಯ ೮ x ೮ ಇದ್ದು ಕಟ್ಟಿಗೆಯ ಮೂರ್ತಿಗೆ ಈಗ ಬೆಳ್ಳಿ ಮೂರ್ತಿಮಾಡಿ ಆ ಕಟ್ಟಿಗೆ ಮೂರ್ತಿ ಮೇಲೆ ಅಂಟಿಸಿದ್ದಾರೆ (ಫಕ್ಸ ಮಾಡಿದ್ದಾರೆ)

ಈ ಗುಡಿಯ ಗೋಪುರದ ವಿವರ : ಶ್ರೀ ಹುಲಗಮ್ಮದೇವಿ ಗುಡಿಯ ಗೋಪುರ ೨೦ ಅಡಿ ಎತ್ತರವಿದೆ ಈ ಗೋಪುರ ಸುತ್ತ ದೇವತೆ ಮೂರ್ತಿಗಳಿವೆ ಶಿವ ಪಾರ್ವತಿ, ಎಲ್ಲಮ್ಮದೇವಿ ಸಿಂಹ ಅಲವಾರು ವಿವಿಧ ಮೂರ್ತಿಗಳಿವೆ ನಾಲ್ಕು ಹಂತದಿಂದ ಗೋಪುರು ಕಟ್ಟಿದ್ದಾರೆ. ಈ ಗೋಪುರು ಸುತ್ತಲು ವಿವಿಧ ಬಗೆಯ ಬಣ್ಣ ಹಚ್ಚಿದ್ದಾರೆ ಬಂಗಾರದ ಬಣ್ಣ, ನೀಲಿಬಣ್ಣ ಕೆಂಪುಬಣ್ಣ ಮೇಲಭಾಗ ಗೋಲಾಕಾರದಿಂದ ಕೂಡಿದೆ ಪೂರ ಮೇಲೆ ಭಾಗ ಕಳಸ ಇಟ್ಟಿದ್ದಾರೆ. ಈ ಗೊಡೆಯ ಉತ್ತರದಿಕ್ಕಿಗೆ ೫೦ಅಡಿ ಅಂತರದಲ್ಲಿ ದ್ಯಾವಮ್ಮ ದೇವಿ ಗುಡಿ ಇದೆ ಅದರ ಪಕ್ಕದಲ್ಲಿ ಮುಸ್ಲಿಂ ದೇವರು ಮೊಹರಂ ದೇವರು ಕೂಡುವ ಸ್ಥಳವಿದೆ ಈ ಸ್ಥಳದ ಎದುರಿಗೆ ಹುಲಗಮ್ಮ ದೇವಿ ಹಗ್ಗಿ ತುಳಿಯುವ ಕುಂಡಾ ಇದೆ. ಇದರ ಮುಂದೆ ಶ್ರೀಗುರುಪ್ಪ ಮುತ್ಯಾನ ಗುಡಿಇದೆ ಶ್ರೀ ಗುರುಪ್ಪ ಮುತ್ಯಾನ ಸುಮಾರು ೮೦ ವರ್ಷಗಳ ಕಾಲ ಶ್ರಿ ಹುಲಗಮ್ಮ ದೇವಿ ಅರ್ಚಕರಾಗಿದ್ದರು ಈ ಅರ್ಚಕನ ಮಗನಾದ ಶ್ರೀ ಹೊನ್ನಯ್ಯ ತಂ ಗುರಪ್ಪ ಪೂಜಾರಿ ಈಗ ದೇವಿ ಅರ್ಚಕರು.

ಗಂಗಾಮತ ಸಮಾಜದವರು ಸುಮಾರು ೮ ವರ್ಷದಿಂದ ಆಚರಿಸುತ್ತಾರೆ.

೦೧. ಶ್ರೀ ಹಳ್ಳದ (ಗದ್ದೆನ) ಎಲ್ಲಮ್ಮದೇವಿ ಪಲ್ಲಕ್ಕಿ ಕಳಸದೊಂದು ಗುಡಿಗೆ ಪ್ರವೇಶ ಮಾಡುತ್ತಾಳೆ.

೦೨. ಶ್ರೀ ಪಾಲಕಮ್ಮ ದೇವಿ (ಯಾದವ ಜನಾಂಗದವರು ಆಚರಿಸುತ್ತಾರೆ)

೦೩. ಶ್ರೀ ವಡರ ಲಚ್ಚಮ್ಮಮ್ಮ ದೇವಿ (ಕೆಂಬಾವಿ ಊರಿನವರು ಆಚರಿಸುತ್ತಾರೆ)

೦೪. ಕುದುರೆ ಬಿಡುವ ಪದ್ದತಿ (ಗೋಗಿ ಕೆ)

೦೯. ನೀರಡಗಿ ಗ್ರಾಮದೇವತೆ ಶ್ರೀ ಲಕ್ಕಮ್ಮದೇವಿ

ಜೇವರ್ಗಿ ತಾಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ಚಿಕ್ಕ ಮುದುವಾಳ ಮಾರ್ಗವಾಗಿ ಹೋದರೆ ಲಕಣಾಪೂರ ಮತ್ತು ನೀರಡಿಗಿ ಗ್ರಾಮ ಬರುತ್ತದೆ ಈ ಗ್ರಾಮಕ್ಕೆ ನಾನು ಗೋಗಿಯಿಂದ ಮುಂಜಾನೆ ೮-೦೦ ಗಂಟೆ ಬಿಟ್ಟು ೯-೩೦ಕ್ಕೆ ಬಿಳವಾರ ಗ್ರಾಮ ತಲುಪಿದೆ ನನ್ನಗೆ ಗ್ರಾಮದೇವತೆ ವಿವರ ಹೇಳಲು ನಂದಿಹಳ್ಳಿ ಗ್ರಾಮದ ರಥ ಶಿಲ್ಪಿಯವರು ಮುಂಜಾನೆ ೯-೨೦ಕ್ಕೆ ನಂದಿಹಳ್ಳಿ ಬಿಟ್ಟು ೯:೩೦ಕ್ಕೆ ಬಿಳವಾರ ಗ್ರಾಮಕ್ಕೆ ಬಂದಿದರು ನಾನು ಮತ್ತು ಶ್ರೀ ಪ್ರಭು ಶಿಲ್ಪಿಗಳು ಒಬ್ಬರಿಗೊಂಬರ ಕೈಕೈ ಮಿಲಾಯಿಸಿ ಅಪ್ಪಿಕೊಂಡು ಈ ಬಿಳಾವರ ಗ್ರಾಮಕ್ಕೆ ಮೊಬೈಲ್ ನೆಟವರ್ಕ ಬರುವುದಿಲ್ಲ ಎಂದು ಅವರು ಹೇಳಿದ್ರ ನಾನು ಹೌದ್ರಿ ಸರ್ ಎಂದು ಹೇಳಿ ಇಬ್ಬರು ಬಿಳವಾರ ಬಸ್ ಸ್ಟ್ಯಾಂಡ್ ಹತ್ತಿರವಿರ ಹೊಟಲ್ ಹೋಗಿ ಒಂದೊಂದು ಚಹಾ ಕುಡಿದೇವು ೩ ರೂಪಾಯಿಗೆ ಒಂದು ರಂತೆ ೬ ರೂಪಾಯಿ ಕೊಟ್ಟು ಬಿಳವಾರ ಗ್ರಾಮದಿಂದ ೬ ಮೈಲಿ ದೂರವಿರುವ ನೀರಡಗಿ ಗ್ರಾಮಕ್ಕೆ ಬೈಕ ಮೇಲೆ ಹೋದೇವು ಹೋಗಿ ನೇರವಾಗಿ ಗ್ರಾಮ ದೇವತೆಯ ಗುಡಿಗೆ ಹೋಗಿ ಇಬ್ಬರು ಕೈಮುಗಿದು ಬೇಡಿಕೊಂಡು ನಮ್ಮ ಕೆಲಸ ಇಡೇರಿಸು ತಾಯಿ ಎಂದು ಮತ್ತು ನನ್ನಗೆ ಈ ದೇವತೆ ಪೂರ್ಣ ಮಾಹಿತಿ ಸಿಗುವಂತೆ ಆರ್ಶಿವಾದ ಮಾಡುತಾಯಿ ಎಂದು ನಾನು ಕೈಮುಗಿದು ಬೇಡಿಕೊಂಡು ಬಾಗಲ ಮುಂದೆ ಇದ್ದ ಆದರ ಹಣೆಗೆ ಹಚ್ಚಿ ಕೊಂಡು ಇಬ್ಬರು ದೇವಿಯ ವಿಗ್ರಹವನ್ನು ನೋಡಿ ಆದೇವಿ ಮೂರ್ತಿಯ ಪೋಟೊಗಳು ತೆಗೆದುಕೊಂಡು ಆದೇವಿ ಮೂರ್ತಿಯ ಶಿಲ್ಪಿಗಳು ಎಷ್ಟೊಂದು ಸುಂದರವಾಗಿ ಕೆತ್ತಿದ್ದಾನೆಂದು ನಾನು ಬಹಳ ಮನದಲೆ ಸಂತೋಷ ಪಟ್ಟೆನು. ನನ್ನ ಹತ್ತಿರಿನೆ ಇದ್ದ ಈ ದೇವಿಯ ಮೂರ್ತಿಯ ಕೇತ್ತನೆ ಮಾಡಿ ಶ್ರೀ ಪ್ರಭ

ಶಿಲ್ಪಿಗಳಿಗೆ ಧನ್ಯವಾದಗಳೆಂದು ಹೇಳಿದೆ ಇದು ಎಂತಹ ಅದ್ದೂಭತ ಶಕ್ತಿ ದೇವತೆ ನೋಡಿದರೆ ಕಣ್ಣಿಗೆ ನೇದರೆ ಸಿಡಿಯಬೇಕು (ದೃಷ್ಠಿ ತರಬೇಕು) ಆ ತರಹ ಕಟ್ಟಿಗೆಯಲ್ಲಿ ಮೂರ್ತಿಯನ್ನು ಶಿಲ್ಪಿಗಳು ತನ್ನ ಉಳಿ ಸುತ್ತಿಗೆಯಿಂದ ಮತ್ತು ಮನಸ್ಸು ಏಕಾಗ್ರತೆಯಿಂದ ಈ ಮೂರ್ತಿಯನ್ನು ಶಿಲ್ಪಿಗಳು ಈಡಿ ಸುತ್ತಿನ ಹಳ್ಳಿ ಜನರು ಮತ್ತು ಗುಡಿಯ ಸಮಿತಿಯವ ಬಹಳ ಕುಸಿಯಿಂದ ಶಿಲ್ಪಿಗಳಿಗೆ ಮತ್ತು ಶ್ರೀ ಲಕ್ಷ್ಮೀ ದೇವಿ ಮೂರ್ತಿಯನ್ನು ತಮ್ಮೂರಿನಲ್ಲಿ ಭವ್ಯ ಮೆರವಣಿಗೆ ಮಾಡಿದ್ದು ಶಿಲ್ಪಿಗಳಿಗೆ ಶಾಲು ಸನ್ಮಾನ ಮಾಡಿ ಗೌರವಿಸಿದ್ದಾರೆ.

ಗ್ರಾಮದೇವಿ ಆಚರಣೆ : ಶ್ರೀ ಲಕ್ಕಮ್ಮ ದೇವಿಯ ಆಚರಣೆ ಮತ್ತು ಪದ್ದತಿಗಳು ಪ್ರತಿ ಮೂರು ವರ್ಷಕೊಮ್ಮೆ ೫ ದಿನ ಮುಂಚೆನೆ ಈದೇವಿ ಮೂರ್ತಿಯ ಬಾಜಿ ಭಂಜತ್ರಿಯೊಂದಿಗೆ ಹಲಗೆ ಡೋಳ್ಳು ನಾದದೊಂದಿಗೆ ಮೂಲ ಗರ್ಭ ಗುಡಿಯಿಂದ ಊರು ಹೊರಗಡೆ ಹೊಲದಲ್ಲಿ ಶ್ರೀ ಕಾಳಿಕಾದೇವಿ ಗುಡಿಯಿದೆ ಈ ದೇವಿಯ ಗುಡಿಗೆ ಶ್ರೀಲಕ್ಕಮ್ಮ ದೇವಿ ಮೂರ್ತಿಯನ್ನು ತಂದು ಶ್ರೀ ಕಾಳಿಕಾದೇವಿಯ ಗೂಡಿಯಲ್ಲಿ ಇಟ್ಟು ಶ್ರೀ ಲಕ್ಕಮ್ಮ ದೇವಿಗೆ ಮೂರ್ತಿಬಣ್ಣ ಅಚ್ಚುತ್ತಾರೆ ದೇವಿಯ ವಾಹನವಾಗಿರುವ ಕುದುರಿಗೆ ಇರುವ ವಿವಿದ ಬಗ್ಗೆಯ ಬಣ್ಣ ಹಚ್ಚಿ ಅಲಂಕಾರ ಮಾಡಿ ೫ ದಿನಕ್ಕೆ ಮರಳಿ ಡೊಳ್ಳು, ಬಾಜ ಭಜಂತ್ರಿಯೊಂದಿಗೆ ಮತ್ತೆ ತನ್ನ ಮೂಲಗುಡಿಗೆ ಭವ್ಯ ಮೆರವಣಿಗೆ ಯೊಂದಿಗೆ ಗುಡಿಗೆ ಬರುತ್ತಾಳೆ ದೇವಿಯು ಗುಡಿಗೆ ಬಂದನಂತರ ಊರಿನ ಎಲ್ಲಾ ಸಮುದಾಯ ದವರು ದೇವಿ ನೈವಿದ್ಯನೀಡುತ್ತಾರೆ ಹೋಳಿಗಿ, ತುಪ್ಪಾ, ಅನ್ನ, ಹಾಲು, ಸಕ್ಕರೆ ದೀಪ ದೂಪ ಹಚ್ಚಿ ಬೇಡಿಕೊಳ್ಳುತ್ತಾರೆ. ನನ್ನಗೆ ಮತ್ತು ನನ್ನ ಕುಟುಂಬಕ್ಕೆ ಶಾಂತಿ ಕೊಡುತ್ತಾಯಿ ಶ್ರೀಮಂತಿಕೆ ಕೊಡು ಬೆಳೆ ಹೊಲದಲ್ಲಿರುವ ದವಸ, ದ್ಯಾನ ಹೆಚ್ಚುಸುಂತೆ ರೈತರು ತಮ್ಮ ತಮ್ಮ ಇಷ್ಟದಂತೆ ತಾಯಿ ದೇವಿಯಲ್ಲಿ ಬೇಡಿಕೊಳ್ಳುತ್ತಾರೆ.

ಶ್ರೀ ಲಕ್ಕಮದೇವಿ ಮತ್ತು ಶ್ರೀ ಕಾಳಿಕಾದೇವಿ ಈ ಎರಡೂ ಸಗ್ರಾಮದೇವತೆಗಳು ಊರು ಹುಟ್ಟಿರುಗಲೇ ದೇವತೆಗಳು ಹುಟ್ಟಿವೆಂದು ಊರಿನ ಹಿರಿಯರಾದ ಶ್ರೀ ಬಸಣ್ಣಗೌಡ ಹೇಳುತ್ತಾರೆ ಮೊದಲು ನಮ್ಮ ಮುತ್ತ್ಯಾನ ಮುತ್ತನವರು ನಾವುದೇವಿ ಕಾರ್ಯ ಆಚರಿಸುವರುಈಗ ನಮ್ಮ ಮುತ್ಯಾ ಹೇಳಿದ ಪ್ರಕಾರ ಶ್ರೀ ಕಾಳಿಕಾದೇವಿ ಹಿಂದೆ ಬ್ರೀಟಿಷ ಆಳ್ವಿಕೆಯಿದ್ದಾಗ ಈ ಊರಿನ ಕೆಲವು ಮೂರ್ತಿಗಳನ್ನು ನಾಶಮಾಡಿದ್ದಾರೆ, ಕೇಲವರು ಉಳಿಸಿದ್ದಾರೆ. ಆದರೆ ಶ್ರೀ

ಕಾಳಿಕಾದೇವಿ ಕೃಪೆಯಿಂದ ಮತ್ತು ಶಕ್ತಿಯ ಆ ದಂಡುಕೋರರು ಕಣ್ಣು ಕಾಣದಂತೆ ಮಾಯಾಗಿ ಹೊಲದಲ್ಲಿ ಬಾವಿಯಲ್ಲಿ ಮುಳಿಗಿದಳು ಎಂದು ಹೇಳುತ್ತಾರೆ.

ನಂತರ ಊರಿನ ಗೌಡರ ಕನಸಿನಲ್ಲಿ ಬಂದು ನಾನು ತಿರ್ಥಬಾಯಿಯಲ್ಲಿ ಇರುವೆ ನನ್ನು ನನ್ನನ್ನು ಬಾಜಿ ಭಂಜತ್ರಿಯೊಂದಿಗೆ ಬಂದು ನನ್ನನ್ನು ಮೇಲೆ ತಂದು ಗುಡಿ ಕಟ್ಟಿದರೆ ನನಗೆ ಬೇಕಾದು ಕೋಡುವೆಂದು ಆ ಗೌಡನ ಕನಸಿನಲ್ಲಿ ಬಂದಳು ಎಂದು ಹಿರಿಯರು ಹೇಳುತ್ತಾರೆ. ಅದರಂತೆ ಆ ಊರಿನ ಗೌಡನು ೨ ದಿನದಲ್ಲಿ ಬಾಜಿ ಭಜಂತ್ರಿ ಡೋಳು ಕೊಂಬು ವಾದ್ಯಗಳಿಂದ ಪಂಚಳಾದವರು ಮತ್ತು ಪಂಡಿತರು ಹಾಗೂ ಜೋತಿಷ್ಯರು ಊರಿನ ಎಲ್ಲಾ ಹಿರಿಯರ ಸಮ್ಮುಖದಲ್ಲಿ ತಿರ್ಥಬಾಯಿಯಲ್ಲಿ ಶ್ರೀ ಕಾಳಿಕಾದೇವಿಯ ಮೂರ್ತಿಯನ್ನು ತಂದು ಹುಣಚೆಮರದ ಮತ್ತು ಅರಳಿಮರ ಶಂಕೇಶ್ವರ ಗಿಡದ ಮಧ್ಯದಲ್ಲಿ ದೇವಿಯ ಮೂರ್ತಿಯನ್ನು ಸ್ಥಾಪನೆ ಮಾಡಿರು ಬಂದೆಂದು ಹೇಳುತ್ತಾರೆ. ಈ ಕಾಳಿಕಾದೇವಿಯ ಬಲಗಡೆ ೨ ಭಾವಿಗಳಿರುವು ಆದರೆ ಈಗ ಅವು ಮುಳಿಗಿವೆ ನೆಲ ಸಮ ಆಗಿವೆ ಆದರೆ ತಿರ್ಥ ಬಾಯಿ ಮಾತ್ರ ನೀರಿನಿಂದ ಇನ್ನೂ ಸುಂದರವಾಗಿದೆ, ಆದೆ ಆ ಬಾಯಿಯ ಸುತ್ತ ಯಾವುದೆ ತಡೆಗೋಡೆ ನಿರ್ಮಿಸಿಲ್ಲ ಊರಿನ ಹಿರಿಯರು ಮತ್ತು ಗೌಡರ ನೀರ್ಲಕ್ಷತನ ಎದ್ದು ಕಾಣುತ್ತದೆ ಶ್ರೀ ಕಾಳಿಕಾದೇವಿ ಗುಡಿ ಸುತ್ತಾ ಜಾಲಿ ಕಂಟಿಗಳು ಬೆಳದಿವೆ, ಕಸ ಕಡ್ಡಿ ತುಂಬಿವೆ ಈ ಊರಲ್ಲಿ ದೇವಿಯ ಬಗ್ಗೆ ಕಾಳಿಜಿ ಇಲ್ಲ ಅಂತ ಕಾಣುತ್ತದೆ. ನಾನು ನೋಡಿದಾಗ ಅಲ್ಲಿ ಪೋಟೋ ತೆಗೆದಾಗ ಕಸಕಡ್ಡಿ ಜಾಲಿ ಕಂಠಿ ಮಧ್ಯ ಇದೆ ಮುಂದಿನ ದಿನಗಳಲ್ಲಿ ದೇವಿ ಗುಡಿ ಸುತ್ತ ಪಂಚಾಯತಿಯಿಂದ ಉದ್ಯೋಗ ಖಾತ್ರಿಯೋಜನೆಯಿಂದ ಸಿಸಿ ರಸ್ತೆ ನಿರ್ಮಿಸಿದರೆಂದು ಮತ್ತು ತಿರ್ಥಬಾಯಿಂದ ಶ್ರೀ ಕಾಳಮ್ಮದೇವಿ ಗುಡಿಯವರಿಗೆ ಬಂಡೆಗಳು ಹಾಸಿರಿ ಎಂದು ಊರಿ ಹಿರಿಯಗೌಡರಿಗೆ ಮನವಿ ಮಾಡಿಕೊಂಡಿದೆನೆ ಎಲ್ಲರೂ ನನ್ನ ಅನಸಿಕೆ ಒಪ್ಪಿಗೆ ಸೂಚಿಸಿದ್ದಾರೆ.

ಶ್ರೀ ಲಕ್ಕಮ್ಮ ದೇವಿಯ ಮಹಿಮೆ : ಶ್ರೀ ಲಕ್ಕಮ್ಮದೇವಿಯು ಈ ಹಿಂದೆ ನೀರಡಗಿ ಗ್ರಾಮದಿಂದ ಲಕಣಾಪೂರ ಗ್ರಾಮಕ್ಕೆ ಕೇವಲ ನಾಲ್ಕು ಹೆಜ್ಜೆಯಲ್ಲಿ ಲಕಣಾಪೂರು ಗ್ರಾಮಕ್ಕೆ ಹೋಗಿ ಅಲ್ಲಿಯು ನೇಲಸಿದ್ದಾಳೆಂದು ಊರಿನ ಹಿರಿಯರಾದ ಶ್ರೀ ಬಸವಣ್ಣಗೌಡ ಹೇಳುತ್ತಾರೆ ಸುಮಾರು ೪ ಕಿ.ಮಿ. ದೂರವಿರುವ ಈ ಲಕಣಾಪೂರ ಗ್ರಾಮವು ಶ್ರೀದೇವಿಯ ಶಕ್ತಿಯಿಂದ

೪ ಹೆಜ್ಜೆ ಇಟ್ಟದ್ದಾಳೆ ಆ ಹೆಜ್ಜೆ ಗುರುತಿಗೆ ಆ ಹೋಲದ ಮಾಲಿಕರು ಪ್ರತಿ ಅಮವಾಸೆ ಹುಣಿಮೆಗೆ ಕಾಯಿ, ಉದ ಭತ್ತಿ ಹಚ್ಚಿ ಕೈಮುಗಿಯುತ್ತಾರೆಂದು ಹೇಳುತ್ತಾರೆ ದೇವಿ ಶಕ್ತಿ ಬಹಳ ದೊಡ್ಡದೆಂದು ಹೇಳುತ್ತಾರೆ.

ವಿಶೇಷ ಮೆರವಣಿಗೆ : ಈ ದೇವಿಯ ಗುಡಿಯ ಹೊರಗಡೆ ಮತ್ತು ಕಾಳಿಕಾದೇವಿ ಗುಡಿಯ ಒಳಗಡೆ ಮತ್ತು ತಿರ್ಥಬಾಯಿ ನೀರನ್ನು ಇನ್ನೂ ಇಲ್ಲಿ ಹೊಲೆಯರು ಮಾದಿಗರು ಮತ್ತು ತಳವಾರು ಕೀಳು ಜಾತಿಯ ಜನರು ಹೋಗುವಂತಿಲ್ಲ ಯಾರು ಬಾವಿ ನೀರು ಮುಟ್ಟುವಂತಿಲ್ಲ. ಆದೇವಿಯ ಗುಡಿಯು ಮುಟ್ಟಿ ನಮ್ಮಸ್ಕಾರ ಮಾಡುವಂತೆಯಿಲ್ಲ. ಅಲ್ಲಿಯ ಎಸ್.ಸಿ. ಜನಾಂಗದವರು ದೇವಿಯಲ್ಲಿ ಭಕ್ತಿ ಮತ್ತು ನಂಬಿಕೆಯಿಂದ ದೂರದಲ್ಲಿಯೆ ನಮಸ್ಕಾರ ಮಾಡಿ ಕಾಯಿ ಹೊಡೆದು ಮತ್ತು ಅರ್ಚಕರಿಗೆ ಕೈಲ್ಲಿ ಕಾಯಿ ಕರಪೂರು ಕೊಡುತ್ತಾರೆ ಈ ಊರಲ್ಲಿ ಗೌಡರು ಹಿರಿಯರು ಯಾವು ಜಾತಿ ಜನಾಂಗದವರಿಗೆ ದೇವರಿಗೆ ಮುಟ್ಟಬ್ಯಾಡ ನೀರು ಬಾಯಿ ಮುಟ್ಟು ಬ್ಯಾಡ ಎಂದು ಯಾರು ಹೇಳುವುದಿಲ್ಲ ನಾವು ಎಲ್ಲರು ಒಂದೆ ಮಾನವರು ಎಂದು ಊರಿನ ಗೌಡರು ಪೂಜಾರಿಗಳು ಪಂಚಾಳದವರು ಹೇಳುತ್ತಾರೆ ಆದರೆ ಇಲ್ಲಿ ದೇವಿಯ ಮೇಲೆ ಭಕ್ತಿಯಿಂದ ಯಾರು ದೇವರ ವಿರುದ್ಧ ಹೋಗುವುದಿಲ್ಲ ಒಂದು ವೇಳೆ ಹೊದರೆ ಅವರ ಮಾಡಿದ ಕರ್ಮ ಅವರೆ ಅನುಭವಿಸಿರುತ್ತಾರೆಂದು ಹಿರಿಯರು ಹೇಳುತ್ತಾರೆ ಇದು ಸತ್ಯ ಮಾತು.

ಶ್ರೀ ಲಕ್ಕಮ್ಮ ದೇವಿ ಗುಡಿಯ ವಿವರ : ಶ್ರೀ ಲಕ್ಕಮ್ಮ ದೇವಿ ಗುಡಿಯ ನೀರಡಗಿ ಗ್ರಾಮದ ಮಧ್ಯಭಾಗದಲ್ಲಿ ಈ ಗುಡಿಯು ಪೂರ್ವ ದಿಕ್ಕಿಗೆ ಇದೆ ಗರ್ಭ ಗುಡಿಯು ೬*೮ ಅಡಿ ಇದ್ದು ಮೇಲಭಾಗ ಛತ್ತ ಹಾಕಿದ್ದಾರೆ ಹೊರ ಅಂಕಣ ಪತ್ರಾಸ ಹಾಕಿದ್ದಾರೆ ಗುಡಿಯ ಮುಂದೆ ಸಿಸಿ ರಸ್ತೆ ಇದೆ ಓಣಿಯ ಜನರಿಗೆ ದೇವಿ ಗುಡಿಗೆ ಬರುವರಿಗೆ ಅನೂಕಲಕ್ಕಾಗಿ ದೇವಿ ಹೊರ ಜಾಗದಲ್ಲಿ ಸಿಸಿ ರಸ್ತೇ ನರ್ಮಾಣ ಮಾಡಿದ್ದಾರೆ. ಹೊರ ಅಂಕಣದಲ್ಲಿ ೨ ಪಾದಗಳಿವೆ ಕಲ್ಲಿನಿಂದ ಕೇತ್ತನೆ ಮಾಡಿದ್ದಾರೆ ಗುಡಿಯ ಕಟ್ಟೆಗೆ ಎತ್ತು ದನ ಕರ ಕಟ್ಟುತ್ತಾರೆ. ಗುಡಿಯ ಒಳ ಅಂಕಣ ೪ ಕಟ್ಟೆಗೆ ಕಂಬಗಳಿವೆ ಅವುಗಳಿಗೆ ಕಟ್ಟೆಗೆಯಿಂದ ಕಾಯಿಗಿಳಿ ಡೀಜನಂಗ್ ಹೂ ಎಲೆ ಶಿಲ್ಪಿಕೈಯಲ್ಲಿ ಅರಳಿದ್ದಾವೆ. ಗುಡಿಯ ಹೊಳಗೊಡೆಗೆ ಬಣ್ಣದಿಂದ ದೇವರ ಮೂರ್ತಿ ಬಸವಣ್ಣ ಮೂರ್ತಿ ನಕ್ಷ ಚಿತ್ರ ವಿವಿಧ ಆಕಾರ ಚಿತ್ರಗಳನ್ನು ಆಯಿಲ್‌ಪೆಂಟ ಬರೆಯಲಾಗಿದೆ.

೧೦. ಶ್ರೀ ಮರೆಮ್ಮ ದೇವಿ ದೇವಸ್ಥಾನ, ಗೋಗಿ

ಶಹಾಪೂರು ತಾಲೂಕಿನಿಂದ ಪಶ್ಚಿಮ ದಿಕ್ಕಿಗೆ ೧೨ ಕಿ.ಮಿ. ದೂರದಲ್ಲಿರುವ ಗೋಗಿ (ಕೆ) ಗೋಗಿ (ಪಿ) ಎಂಬ ಎರಡೂರು ಹೆಸರು ಒಂದೇ ಇದೆ.ದೊಡ್ಡ ಗ್ರಾಮಗಳಾಗಿವೆ ಇವು ತಾಲೂಕಿನಲ್ಲಿ ಅತ್ಯಂತ ದೊಡ್ಡ ಗ್ರಾಮವಾಗಿವೆ ಈ ದೊಡ್ಡ ಗ್ರಾಮದ ಗ್ರಾಮದೇವತೆ ಗಾಳಿ ಮರೆಮ್ಮ ದೇವಿ ಈ ದೇವಿ ಶಕ್ತಿ ಎಷ್ಟು ಹೇಳೀದ್ದರು ಕಡಿಮೆ ಪೂರ್ಣ ವಿವರ ಇಲ್ಲಿದೆ.

ಗಾಳಿ ಮರೆಮ್ಮ ದೇವಿ ಸ್ಥಾಪನೆ ವಿವರ : ಗಾಳಿ ಮರೆಮ್ಮ ದೇವಿ ಹಿರಿಯರ ಹೇಳಿಕೆಯ ಪ್ರಕಾರ ಊರು ಹುಟ್ಟಿದಾಗಲೇ ಹುಟ್ಟಿದ್ದಾಳೆಂದು ಹೇಳುತ್ತಾರೆ, ಪೂರ್ಣ ವಿವರ ದಾಖಲಾತಿಗಳು ಇರುವುದಿಲ್ಲ. ಹಿರಿಯರ ಹೇಳಿಕೆಯಂತೆ ಇಲ್ಲಿ ಬರೆಯಲಾಗಿದೆ. ನಂಬಿಕೆ ಶ್ರದ್ಧೆಯಿಂದ ನಡೆದು ಬಂದ ದೇವಿ ವಿವರ ಗೋಗಿ ಪೇಠ ಗ್ರಾಮದಿಂದ ಹಾರಣಗೇರಿ ಅಗಸಿ ಮಾರ್ಗವಾಗಿ ಮುತ್ತಿನ ಬಾಜರದಿಂದ ಸಣ್ಣ ಕಟ್ಟಿಗೆ ಬಂಡಿಯಲ್ಲಿ ಕಟ್ಟಿಗೆಯಿಂದ ಮಾಡಿದ ಚಿಕ್ಕ ಚಿಕ್ಕ ಗೊಂಬೆಗಳನ್ನು ಅದಕ್ಕೆ ಸೀರಿ ಉಡಿಸಿ, ಕುಂಕಮ್ಮ ಬಂಡಾರ ಕಾಯಿ, ಕರಪೂರು ಹೂ. ಹೀಗೆ ಅಲಂಕಾರ ಮಾಡಿಕೊಂಡು ಸಣ್ಣ ಕೈ ಬಡ್ಡಿಯಲ್ಲಿ ಕೈಯಿಂದ ಎಳೆದು ತರುವ ಪದ್ದತಿ ಇತ್ತು. ಒಂದೂ ಊರಿನಿಂದ ಮತ್ತೊಂದು ಊರಿಗೆ ಈ ಚಿಕ್ಕ ಗೊಂಬೆಗಳು ಇರುವ ಬಂಡ್ಡಿಗಳನ್ನು ತರುತ್ತಿದರು.

ಅದರಂತೆ ಮುತ್ತಿನ ಬಾಜಾರ ಮತ್ತು ಚಂದಾಹುಸೇನ ದರ್ಗಾ ಮಾರ್ಗವಾಗಿ ಶಹಾಪೂರು ದಿಕ್ಕಿಗೆ ಬರುತ್ತಿರುವಾಗ ಗೋಗಿ (ಕೆ) ಗ್ರಾಮದ ಅಗಸಿಯಲ್ಲಿ ಜೋಲಿ ಹೊಡೆದು ಮುಂದೆ ಸಾಗಿದರು ನಂತರ ಮುಂದೆ ವಿಶಾಲವಾದ ಜಾಗ ಮತ್ತು ಬೇವಿನ ಗಿಡ, ಅರಳಿ ಗಿಡ, ನೀರು ತಂಬಿದ ಬಾವಿ ಇದ್ದು ಈ ಬಾವಿಯಲ್ಲಿ ನೀರು ತರಲು ತುಂಬು ಗರ್ಭಿಣಿ ನೀರು ತರುತಿದ್ದಳು ತರುವ ಸಮಯದಲ್ಲಿ ಎದುರಿಗೆ ದೇವತೇಯ ಬಂಡಿ ಬಂತ್ತು ಆ ತುಂಬು ಗರ್ಭಿಣಿಯ ದೃಷ್ಠಿ ದೇವತೆ ಮೇಲೆ ಬಿತ್ತು ಆ ಕ್ಷಣದಲ್ಲೆ ಗರ್ಭಿಣಿ ಪ್ರಜ್ಞ ತಪ್ಪಿ ಬಿದ್ದಳು ಆ ಕಾಲದಲ್ಲಿ ದವಾಖಾನೆ ಔಷದ ಎಂಬ ಇತ್ಯಾದಿ ಯಾವುದೇ ಇರಲಿಲ್ಲ. ದೇವತೆ ಭಂಡಾರ, ಕುಂಕುಮ ಆಧಾರ ಹಚ್ಚಿ ಆ ಹೆಣ್ಣು ಮಗಳು ಪ್ರಜ್ಞೆ ಬರದೆ ಮೃತ ಪಟ್ಟಳು ಎಂದು ಹೇಳುತ್ತಾರೆ. ಅಲ್ಲಿಂದ ಮರೆಮ್ಮದೇವಿ ಸಣ್ಣ ಕೈ ಬಂಡಿಯ ಗಾಡಿಯನು ಮುಂದೆ

ಎಳೆಯವರು ಅಲ್ಲಿ ನಲ್ಲಿಸಿ ಆ ಹೆಣ್ಣು ಮಗಳ ಆರೈಕೆಯ ಕಡೆ ಬಂದರು ನಂತರ ಈ ಮರೆಮ್ಮ ದೇವಿ ಇಲ್ಲಿ ವಿಶಾಲವಾಗಿ ಜಾಗದಲ್ಲಿ ನೆಲಸಿದಳು ಎಂದು ಹಿರಿಯರು ತಮ್ಮ ತಂದೆಯ ತಂದೆ ಹೇಳಿದನು ನನಗೆ ಹೇಳಿದ್ದಾರೆ ಅಲ್ಲಿಂದ ಇಲ್ಲಿಯವರೆಗೆ ನಡೆದು ಬಂದ ದೇವಿ ಸ್ಥಾನ ವಿವರ.

ಮರೆಮ್ಮ ದೇವಿ ವಿವರ : ಪ್ರತಿವರ್ಷ ಜೂಲೈ ತಿಂಗಳಲ್ಲಿ ಬರುವ ಶ್ರೀ ಮರೆಮ್ಮ ದೇವಿ ಕುಂಭಾ ಕಳಸ ಜಾತ್ರೆಗೆ ಸುಮಾರು ೨೫ ಸಾವಿರ ಜನ ಸಂಖ್ಯೆ ಸೇರುತ್ತಾರೆ.

೦೧. ದೀಪ ಹಾಕುವ ಪದ್ಧತಿ : ಪ್ರತಿ ವರ್ಷ ಮಣ್ಣೇತ್ತಿನ ಅಮವಾಸೆ ದಿವಸ ಮರೆಮ್ಮ ದೇವಿಯ ಮೂರ್ತಿಯನ್ನು ಗುಡಿಯ ಹೊರ ಅಂಕಣದಲ್ಲಿ ತಂದು ಕುಡಿಸುತ್ತಾರೆ. ದೇವಿಯ ಹೊರ ಬರುವಾಗ ಘಂಟೆನಾಧ ಡೊಳ್ಳುನಾದ ಹಲಗೆನಾದ ಜೈಕಾರ ಬಾಜಿ ಭಜಂತ್ರಿಯೊಂದಿಗೆ ದೇವಿ ಮೂರ್ತಿ ದೊರ ಅಂಕಣದಲ್ಲಿ ಕುಡಿಸುತ್ತಾರೆ. ನಂತರ ಗುಡಿಯ ಮೇಲಭಾಗ ಮತ್ತು ಗುಡಿಯ ಸುತ್ತ ಮುತ್ತ ಗೋಡೆ ಹಾಗೂ ದೇವಿ ಗರ್ಭ ಗುಡಿ ಎಲ್ಲಾವನ್ನು ಸಂಪೂರ್ಣ ನೀರಿನಿಂದು ತೊಳೆದು ದೇವಿಯ ಹೆಸರಿನಿಂದ ದೀಪ ಹಾಕುತ್ತಾರೆ ನಂತರ ದೇವಿಗೆ ಕಾಯಿ ಕರಪೂರು ದೂಪ ದೀಪ ಸಕ್ಕರಿ ಹಣ್ಣು ಹೀಗೆ ದೇವಿ ಪೂಜೆ ಸಲ್ಲಿಸುತ್ತಾರೆ ದೇವಿಯ ಗರ್ಭ ಗುಡಿಯಿಂದ ಹೊರ ಅಂಕಣಕ್ಕೆ ಬರುವ ಸಮಯ ೮:೩೦ ರಿಂದ ೯:೩೦ರವರೆಗೆ ಕಾಲಾವಧಿ ಇರುತ್ತದೆ. ಇದು ದೀಪ ಹಾಕುವ (ದೀಪ ಹಚ್ಚುವುದು) ಪದ್ಧತಿ ಎಂಬುದು ೨ ಊರಿನ ಜನರ ನಂಬಿಕೆ ಮತ್ತು ಸತ್ಯವು ಹಾಗಿದೆ, ನಂತರ ಸಾಯಂಕಾಲ ೫:೦೦ ರಿಂದ ೬:೦೦ ಘಂಟೆಯೊಳಗೆ ಗರ್ಭಗುಡಿ ಪ್ರವೇಶ ಮಾಡುತ್ತಾಳೆ.

೦೨. ದೀಪ ಹಾಕುವ ನಿಯಮಗಳು : ಈ ದೀಪವು ಸುಮಾರು ೧ ತಿಂಗಳ ಕಾಲ ಉರಿಯುತ್ತದೆ ಮಣೇತ್ತಿನ ಅಮವಾಸೆಯಿಂದ ನಾಗರ ಅಮವಾಸೆಯವರೆಗೆ ದೀಪ ಉರಿಯುತ್ತದೆ. ಈ ದೀಪವು ಹಾಕಿದ ಮೇಲೆ ಎರಡೂ ಊರಿನ ಜನ ಸುಮಾರು ೧೫ ಸಾವಿರ ಜನ ಸಂಖ್ಯೆ ಹೊಂದಿದ ಈ ಗ್ರಾಮವು ಈ ಎರಡೂರಿಗೂ ಗ್ರಾಮ ದೇವತೆಯಾದ ಆಧಿ ಶಕ್ತಿ ಶ್ರೀ ಮರೆಮ್ಮ ದೇವಿಯ ಮಹಿಮೆಯು ಇವತ್ತಿಗೂ ಜನ ನಂಬೀಕೆಯಂತೆ ೧ ತಿಂಗಳ ಕಾಲ ಬೇರೆ ಊರಿಗೆ ಬುತ್ತಿ ಕಟ್ಟುವುದಿಲ್ಲ. ಇದು ಸತ್ಯ ಇಗಲೂ ನಂಬಿಕೆ ಇಲ್ಲದವರ ಬಂದು ಕೇಳಬುದು.

೦೩. ದೀಪದ ನೇಮ ಪದ್ದತಿ : ನಮ್ಮೂರಿನ ಗ್ರಾಮ ದೇವತೆಯಾದ ಅಧಿಶಕ್ತಿ ಮರೆಮ್ಮ ದೇವಿಯ ಈ ಪದ್ದತಿ ಪೂರ್ವಜ್ಜರು ನಡೆದುಕೊಂಡ ಬಂದ ಪದ್ದತಿಯಾಗಿದೆ ದೀಪ ಹಾಕಿದ ಮೇಲೆ ೧ ತಿಂಗಳ ಕಾಲ ಈ ಎರಡೂ ಊರಿನಲ್ಲಿ ಯಾವುದೇ ಶುಭಕಾರ್ಯ ಮಾಡುವುದಿಲ್ಲ.ಅಂದರೆ ಮದುವೇ, ಜವಳ ತೇಗೆಯುವುದು, ಸೋಭಾನ ಕುಡಿಸುವುದು (ಹೆಣ್ಣು ಮಕ್ಕಳು ಋತ್ತು ಮತ್ತಿಯಾದರೆ ಕುಡಿಸುವುದಿಲ್ಲ, ಪದ ಸಂಪ್ರಾದಾಯ ಮಾಡುವುದಿಲ್ಲ) ತೋಟ್ಟಿಲಲ್ಲಿ ಹಾಕುವುದಿಲ್ಲ, ನಾಮಕರಣ ಮಾಡುವುದಿಲ್ಲ, ಯಾರಾದರು ಸತ್ತರೆ ಹಲಗೆ ಬಾರಿಸುವುದಿಲ, ಡೋಳ್ಳು ಬಾರಿಸುವುದಿಲ್ಲ, ಬ್ಯಾಂಜ ಬಾರಿಸುವುದಿಲ್ಲ, ಈಗೇ ಯಾವುದೇ ಕಾರ್ಯ ಮಾಡುವುದಿಲ್ಲ. ಏಕೆಂದರೆ ಈ ದೇವಿ ಶಕ್ತಿ ಅಂತದ್ದು ಒಂದು ವೇಳೆ ಆಗೇನಾದರು ಮಾಡಿದರೆ ಅದರ ಪರಿಣಾಮ ಅವರೆ ಅನುಭವಿಸುತ್ತಾರೆ, ಇನ್ನುವರಿಗೂ ಯಾರು ದೇವಿ ವಿರುದ್ಧ ಯಾವುದೇ ಕಾರ್ಯ ಮಾಡಿರುವುದಿಲ್ಲ, ಇದು ಇಗಲೂ ಸತ್ಯ ೨೦೧೭ನೇ ವರ್ಷ ೨೧ನೇಯ ಶತಮಾನ ಕಂಪ್ಯೂಟರ್ ಯುಗ, ಮೊಬಲ್, ಟಿವಿ ಫ್ಯಾಕ್ಸ್ ಮೇಸೇಜ್ ವ್ಯಾಟ್ಸ್‌ಅಫ್ ಮುಂದುವರೆದ ಜಗತ್ತಿನಲ್ಲಿ ನಾವು ಇನ್ನು ಈ ಅದ್ಭೂಬೂತ್ತ ಸತ್ಯೆ ಶಕ್ತಿಯನ್ನು ನಾವು ನಂಬಲೇ ಬೇಕು ಹಿಂದಿನಿಂದಲು ಸಂಪ್ರದಾಯ ನಡೆಸುತ್ತಾ ಬಂದಿದ್ದಾರೆ, ಈ ಗ್ರಾಮದ ಗ್ರಾಮ ದೇವತೆಯ ಶಕ್ತಿಯೇ ಅಂತಹದ್ದು

೦೪. ದೇವಿ ವಾರ ಹಿಡಿಯುವ ಪದ್ದತಿ : ಈ ಗ್ರಾಮ ದೇವತೆಯ ವಾರಹಿಡಿದ ಮೇಲೆ ೫ ವಾರಗಳ ಕಾಲ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಊರಲ್ಲಿ ಎಲ್ಲರು ಎಲ್ಲ ಜಾತಿ ಜನಾಂಗದವರು ದೇವಿಯ ಹೆಸನಿಂದ ಭಯ ಭಕ್ತಿಯಿಂದ ಅಧಿ ಶಕ್ತಿ ಶ್ರೀ ಮರೆಮ್ಮದೇವಿ ದೀಪ ಹಾಕಿದ ಮೇಲೆ ೨ ಊರಲ್ಲಿ ಯಾವುದೇ ಹೋಸ ವಾಹನ ಖರದೀ ಮಾಡುವುದಿಲ್ಲ ಕಾರು, ಸೈಕಲ, ಮೋಟರು, ಜೀಪು, ಟ್ಯಾಂಕರು, ಲಾರಿ, ಮಿನಿ ಓಮನಿ ಕಾರು, ಎತ್ತಿನ ಗಾಡಿ (ಎತ್ತಿನ ಬಂಡಿ) ದೊಬಲಿ ಬಂಡಿ (ಚಕ್ರವಿಲ್ಲದು) ಹಾಗೂ ಹಳೆ ವಾಹನವನ್ನು ಯಾವುದೇ ತರಹದು ವಾಹನವನ್ನು ಖರದೀ ಮಾಡುವುದಿಲ್ಲ, ಯಾಕೆಂದರೆ ದೇವಿ ರಥದ ಸಂಖ್ಯೆತವಾಗಿರುವ ವಾಹನವನ್ನು ಜನ ಈ ೧ ತಿಂಗಳ ಕಾಲ ತೇಗೆದುಕೊಳ್ಳುವುದಿಲ್ಲ. ಶ್ರೀಮಂತರು ಬಡವರು ಯಾರೇ ಆಗಲ್ಲಿ ದೇವಿ ವಿರುದ್ಧವಾಗಿ ನಡೆಯುವುದಿಲ್ಲ ಆಗೇನಾದರು ಮಾಡಿದರೆ ದೇವಿ ಶಾಪದಿಂದ ವಾಹನವನ್ನು ಅಪಘತವಾಗುತ್ತದೆಂದು ಜನರ ನಂಬಿಕೆಯಾಗಿದೆ. ಎಲ್ಲಾ ಜಾತಿ ಜನರು ಈ ಗ್ರಾಮದೇವಿಯ ಪದ್ದತಿ ಅನುಸರಿಸುತ್ತಾರೆ.

೦೫. ವಾರ ಹಿಡಿಯುವ ಪದ್ದತಿಗಳು : ಈ ಊರಿನ ಶಕ್ತಿ ದೇವಿ ಮತ್ತು ಗ್ರಾಮ ದೇವತೆಯಾದ ಮರೆಮ್ಮ ದೇವಿಯ ವಾರಡಿಯುವುದು ದೀಪ ಹಾಕಿದ ಮೇಲೆ ೫ ವಾರಗಳು ಹಿಡಿಯುವ ಪದ್ದತಿಯಾಗಿದೆ. ಇದು ಹಿಂದಲಿಂದಲೂ ನಡೆದು ಕೊಂಡ ಬಂದ ಪದ್ದತಿಯಾಗಿದೆ ದೀಪ ಹಾಕಿದ ಮೇಲೆ ವಾರ ಹಿಡಿಯುವ ಸಲುವಾಗಿ ಗ್ರಾಮ ಪಂಚಾಯಿತಿಯಿಂದ ಡಂಗೂರ ಬಾರಿಸುತ್ತಾ ಎಲ್ಲರಿಗೂ ಕೂಗಿ ಹೇಳುತ್ತಾ ವಾರ ಹಿಡಿಯುತ್ತಾರೆ ಕೇಳಿರಿಯುಪೋ ಕೇಳಿರಿ ಮರೆಮ್ಮದೇವಿ ವಾರ ಹಿಡಿಯುತ್ತಾರೆ ಕೇಳಿರೊಪೋ ಕೇಳರಿ ಎಂದು ಊರಿನ ಸುತಾ ಮುತ್ತಾ ಓಣಿ ಓಣಿ ಸುತ್ತಾ ತಿರುಗಿ ಡಂಗೂರು ಬಾರಿಸುತ್ತಾ ದೇವಿ ವಾರದ ಬಗ್ಗೆ ಜನರಿಗೆ ಎಚ್ಚರಿಕೆ ಮಾಡುತ್ತಾರೆ ಮತ್ತು ಯಾರು ಮನೆಯಲ್ಲಿ ರೋಟ್ಟಿ ಮಾಡುಬಾರದರ್ರಿ ಎಂದು ಹೇಳುತ್ತಾನೆ ಅದೇ ರೀತಿಯಾಗಿ ಊರಿನ ಹಿರಿಯರು ದೇವಿ ಹೆಸರಿನಿಂದ ೫ ವಾರಗಳ ಕಾಲ ಮನೆಯಲ್ಲಿ ರೊಟ್ಟಿ ಮಾಡುವುದಿಲ್ಲ. ಮುಂಜಾನೆ ೫ ದಿನಕಾಲ ಮತ್ತು ರಾತ್ರಿ ಹೊತ್ತಿನಲ್ಲಿ ರೊಟ್ಟಿ ಮಾಡುವುದಿಲ್ಲ ಹಾಗ ರೈತರು ಹೊಲಗಳಲ್ಲಿ ಬಿತ್ತನೆ ಕಾರ್ಯ ಮಾಡುವುದಿಲ್ಲ ಬಂಡಿ ಎತ್ತು ಕಟ್ಟುವುದಿಲ್ಲ ಹೊಲಗಳಿಗೆ ಕಾಲು ನಡಿಗೆಯಿಂದ ಹೋಗುತ್ತಾರೆ.

೦೬. ಬಡಿಗತನ : ಈ ಎರಡೂ ಊರಿನಲ್ಲಿ ಇರುವ ಬಡಿಗೆತನ ಮಾಡುವ ಬಡಿಗೇರು ಮಂಗಳವಾರ ಶುಕ್ರವಾರ ತಮ್ಮ ಕೆಲಸ ಮಾಡುವುದಿಲ್ಲ. ದೇವಿ ಹೆಸರಿನಿಂದ ಬಡಿಗೆತನ ಕೆಲಸ ಮಾಡುವುದಿಲ್ಲ, ಬಾಗಿಲು ಚಾಕಟ್ಟು, ಕಿಡಿಕಿ, ರೈತರಿಗೆ ಬಿತ್ತಲು ಕೂರಿಗೆ ಗಳೆ ಸಾಮಗ್ರಿಗಳು ವರ್ಸು ನೆಯುವುದು ಯಾವುದೇ ಕೆಲಸ ಕಾರ್ಯ ಮಾಡುವುದಿಲ್ಲ.

೦೭. ನೇಕಾರರು : ಗೋಗಿ ಪೇಠ ಗ್ರಾಮದಲ್ಲಿ ಸುಮಾರು ೨ ಸಾವಿರ ಜನ ಸಂಖ್ಯೆಹೊಂದಿದ ಈ ಊರು ದೇವಿಯ ವಾರ ಹಿಡಿದ ಮೇಲೆ ತಮ್ಮ ಮನೆಯಲ್ಲಿ ಬಟ್ಟೆನೇಯುವುದು ಸುತ್ತುವುದು ಸೀರೇ ನೇಯುವುದು ಕೈಮಗ್ಗದ ಕೆಲಸ ಯಾವುದೇ ಕೆಲಸಗಳು ಈ ೫ ದಿನಗಳು ಮಾಡುವುದಿಲ್ಲ.

೦೮. ಕುಂಬಾರಿಕೆ : ಈ ಗ್ರಾಮದೇವತೆಯ ವಾರ ಹಿಡಿದ ಮೇಲೆ ಕುಂಬಾರಣ್ಣ ತನ್ನ ಕುಂಬಾರಿಕೆ ಗಡಿಗೆ, ಪಣತ್ತಿ,ಪರೇಣ, ಓಲೆ, ಕೊಡ, ಹೀಗೆ ಕುಂಬಾರಣ್ಣ ಕೆಲಸ ದೇವಿಯ ಹೆಸರಿನಿಂದ ೫ ದಿನಗಳು ತನ್ನ ಕಾರ್ಯ ಕೆಲಸಗಳು ಮಾಡುವುದಿಲ್ಲ ಕುಂಬಾರಣ್ಣನ

ಚಾಜ ಬಹಳ ಶ್ರೇಷ್ಠವಾದದು ಯಾಕೆಂದರೆ ಕುಂಬಾರ ಗಡಿಗೆಯಿಂದ ದೇವಿ ಕುಂಬಾ ತರುವದು (ಗಟ್ಟ).

೦೯. ಕಂಬಾರ : ಈ ೫ ದಿನಗಳಕಾಲ ನಮ್ಮೂರಲ್ಲಿ ಕಂಬಾರರು ರೈತರ ಕೂರಿಗೆ, ಮಳಿ, ಕೊಡಲೇ, ಕುರಿಪಿ, ಕುಡುಗೋಲು, ಎಡೇ, ಚಿಪ್ಪು, ಉಳಿ, ಭಾಚಿ ಇತರೆ ಯಾವುದೇ ತರಹದ ತನ್ನ ಕಾರ್ಯ ಮಾಡುವುದಿಲ್ಲ. ದೇವಿ ಭಕ್ತನಾಗಿ ದೇವಿ ನಂಬಿಕೆಯಿಂದ ೫ ದಿನಗಳ ಕಾಲ ವಿಶ್ರಾಂತಿ ಪಡೆಯುತ್ತಾನೆ.ಹೀಗೆ ಊರಿನ ಎಲ್ಲಾ ಸಮೂದಾಯದ ಜನರು ತಮ್ಮತಮ್ಮ ಭಕ್ತಿಯಂತೆ ದೇವಿಯ ಕೃಪಿಗೆ ಪಾತ್ರರಾಗುತ್ತಾರೆ ಯಾವುದೇ ಜಾತಿ ಕುಲ ಗೊತ್ರ ಪಂತವಿಲ್ಲದೆ ಎಲ್ಲರೂ ದೇವಿ ಆರ್ಶಿವಾದ ಪಡೆಯುತ್ತಾರೆ.

೧೦. ನೀರು ನೀಡುವ ಪದ್ಧತಿ : ೫ ವಾರ ಅಂದರೆ ೩ ಮಂಗಳವಾರ ೨ ಶುಕ್ರವಾರ ದೇವತೆಗೆ ನೀರು ನೀಡುತ್ತಾರೆ ಭಕ್ತರು ತಮ್ಮ ಮನೆಯಿಂದ ಕೊಡ, ಕಳಸಿ, ಚರಿಗೆ, ಗ್ಲಾಸು (ಲೋಟಾ) ಹೀಗೆ ಅವರ ಅವರ ಸಾಮರ್ಥ್ಯದಂತೆ ದೇವಿಯ ಗುಡಿಗೆ ಬಂದು ನೀರು ನೀಡುತ್ತಾರೆ ದೇವಿ ಶಾಂತಳಾಗಿ ಊರಿಗೆ ಕೇರಿಗೆ ಮಳೆ ಬರುತ್ತದೆಂದು ಜನರ ನಂಬಿಕೆ ಊರಿನ ಹಿರಿಯರು ಮಕ್ಕಳು, ಮಹಿಳೆಯರು ತಮ್ಮ ತಮ್ಮ ಮನೆಯಿಂದ ನೀರು ತಂದು ಗುಡಿಯ ಮುಂದೆ ದೇವಿಯ ಮುಂದೆ ನೀರು ಸುರಿಯುತ್ತಾರೆ ಎಲ್ಲ ಸಮಾಜದವರು ದೇವಿಗೆ ನೀರು ನೀಡುತ್ತಾರೆ.

ನಂತರ ನೀರು ನೀಡಿದವರೆ ಅವರ ಮನೆಯಲ್ಲಿ ಜೋಳದ ಹಿಟ್ಟಿನಿಂದ ಮಾಡಿದ ತನ್ನುಂಡಿ (ಗೋಲಾಕಾರ ಉಂಡಿ ಎಂದು ಕರೆಯುತ್ತಾರೆ ೨,೪,೫,೬,೮ ಹೀಗೆ ಅವರವರ ಭಕ್ತಯಂತೆ ದೇವಿಗೆ ತಂದು ನೈವೇದ್ಯ ನೀಡುತ್ತಾರೆ. ಹೀಗೆ ೪ ವಾರ ಮಾಡಿದ ನಂತರ ೫ ವಾರ ಮಂಗಳವಾರ ದೇವತೆಗೆ ಘಂಟೆ ನಾಧದೊಂದಿಗೆ ಹಲಗೆ ನಾದದೊಂದಿಗೆ ಭಕ್ತಿಯ ಜೈಕಾರದಿಂದ ದೇವಿಯ ಮೂರ್ತಿಯನು ಗರ್ಭಗುಡಿಯಿಂದ ಹೊರ ಅಂಕಣದಲ್ಲಿ ಕುಡಿಸುತ್ತಾರೆ.ಭಕ್ತರು ದೇವಿದರ್ಶ ಪಡೆಯಲು ಎಲ್ಲಿರಿಗೂ ಅವಕಾಶ ಮಾಡುತ್ತಾರೆ ನಂತರ ೨:೦೦ ಗಂಟೆಗೆ ಇಳೇಗಾರ ಮನೆಯಿಂದ ಕುಂಭಾ ಕಳಸ ದೊಂದಿಗೆ ದೇವಿಯು ಗುಡಿಗೆ ಆಗಮಿಸುತ್ತಾಳೆ. ಕುಂಭಾ ತರವು ಪದ್ಧತಿ (ಗಟ್ಟೀತರವುದು).

೧೧. ಕುಂಭಾದಲ್ಲಿ ಅಮ್ಮ (ಅಂಭಾ) ಪದ್ದತಿ : ಕುಂಭಾದಲ್ಲಿ ಅಂಭಾ (ಅಮ್ಮ) ಎಂದರೆ ದುರ್ಗ ಪರಮೇಶ್ವರಿ ದೇವಿ ರಾಕ್ಷಸರ ಸೌಂಹಾರ ಮಾಡುವಾಗ, ರಾಕ್ಷಸರ ರಕ್ತವೋ ಒಂದು ಹನ ಕೇಳಿಗೆ ಬಿದ್ದರೆ ಸಾವಿರಾರು ರಾಕ್ಷಸರು ಹುಟ್ಟುತ್ತಾರೆಂದು ವಾಡಿಕೆ. ಅದಕ್ಕಾಗಿ ರಾಕ್ಷಸರ ರಕ್ತ ನೆಲದ ಮೇಲೆ ಬಿಳದಂತೆ ದೇವಿ ತಾನೆ ಕುಡಿಯುತ್ತಿದ್ದಳು, ರಾಕ್ಷಸರ ಸೌಂಹಾರ ಮಾಡುವಾಗ ತನ್ನ ವಾಹನವಾದ ಸಿಂಹದ ಜೋತೆಯಲ್ಲಿ ದಣಿವು ಆರಿಸಿಕೊಳ್ಳಲು ಮತ್ತು ದಾಹ ಇಂಗಿಸಿಕೊಳ್ಳಲು ಇಚ್ಚಲ ಮರಕ್ಕೆ ಹೋಗಿ ನಂತಾಗ ಆ ಇಚ್ಚಲ ಮರದ ನೀರೇ ಆ ದುರ್ಗ ಪರಮೇಶ್ವರಿ ದೇವಿಗೆ ಬಾಯಿ ಆರಿಕೆ ಇಂಗಿಸಲು ಆ ಇಚ್ಚಲ ಮರದ ನೀರೇ ಕುಡಿಯುತ್ತಾಳೆ.ಈ ಇಚ್ಚಲ ಮರದ ನೀರೆ ಅಂಭಾ (ಅಮ್ಮ) ಹೆಂಡಾ ಎನ್ನುತ್ತಾರೆ.ಪ್ರತಿವರ್ಷ ಪದ್ದತಿಯಂತೆ ಪೆಠಗೋಗಿಯಲ್ಲಿರುವ ಇಳಗೇರಿ ಮನೆಯಲ್ಲಿ ಕುಂಬಾ ಕಳಸದೊಂದಿಗೆ ದೇವಿ ಗುಡಿಗೆ ಆಗಮನ.

೧೨. ಕುಂಭಾ : ಕುಂಭಾವು ಅಂದರೆ ಕುಂಭಾರಣ್ಣ ಮನೆಯಿಂದ ಹೋಸ ಗಡಿಗೆ ತಂದು ಅದಕ್ಕೆ ಸುಣ್ಣ ಹಚ್ಚಿ ಅದರೋಳಗೆ ಎಂಡ ಹಾಕಿ ಅದರ ಮೇಲೆ ಕುಂಬಾರ ಪರೇಣಾ ಮುಚ್ಚಿ ಅದರ ಸುತ್ತ ಹೂವಿನ ಹಾರ ಹಾಕಿ, ಕುಂಬಾದ ಕೇಳಗೆ ಹೂವಿನ ಹಾರದ ಸಿಂಬೇಮಾಡಿ ಜೈಕಾರದೊಂದಿಗೆ ದೇವಿಅವಾತರ ತೋಡುತ್ತಾಳೆ, ಕಾಯಿ ಹೊಡೆಯುವುದು, ನಂಬೆಕಾಯಿ ಕೋಯಿವುದು, ಭಂಡಾರ ಹಚ್ಚುವುದು, ಸಿಡಿಕಾಯಿ ಹೊಡೆಯುವುದು,ಜೈಕಾರಹಾಕುವುದು, ಮನೆಯಹೊರಗಡೆ ಚೋಟೇ ಹೊಡೆಯುವುದು, ಹೀಗೆ ಇಳೆಗೇರ ಮನೆಯಿಂದ ಶ್ರೀ ಸೈಯದ್‌ಹಜರತ್ ಚಂದಾ ಹುಸೇನ್ ದರ್ಗಾ ಮಾರ್ಗವಾಗಿ ಅಗಸಿ ಮುತ್ತಿನ ಬಾಜಾರ ಮುಖ್ಯ ರಸ್ತೆಯಾಗಿ ಬಾರಿ ಜನ ಸಂಖ್ಯೆಯಿಂದ ಡೋಳ್ಳು ಕುಣಿತ್ತಾ, ಬ್ಯಾಂಜೋ ಕುಣಿತ, ಕ್ಯಾಶೋ ಕುಣಿತ್ತಾ, ಜೋಗಮ್ಮನವರ ಕುಣೀತ್ತಾ, ಹೀಗೆ ಜನರು ಉಲ್ಲಾಸದಿಂದ ಎರಡೂ ಊರು ಮುಖ್ಯರಸ್ತೆಗೆ ಜನರು ಸೇರುತ್ತಾರೆ, ಪೋಲಿಸ್ ಠಾಣೆ, ಪಂಚಾಯತ ಆಫೇಸ್, ಕನ್ಯ ಪ್ರೌಢಶಾಲೆ ಉರ್ದು ಪ್ರೌಢಶಾಲೆ ಮಾರ್ಗ ಶ್ರೀ ಸೈಯದ್ ಚಂದಾ ಹುಸೇನಿ ದರ್ಗ ಮುಂದೆ ದೇವಿಯ ಭವ್ಯ ಮೆರವಣಿಗೆಯಿಂದ ಕೂಡಿರುತದೆ.

ಶ್ರೀ ಸೈಯದ್ ಚಂದಾಹುಸೇನ ದೇವರಿಗೆ (ಅಣ್ಣನಿಗೆ) ನಮಸ್ಕರಿಸುತ್ತಾ ದೇವರು

ಶ್ರೀ ಸೈಯದ್ ಚಂದಾಹುಸೇನ ದೇವರು ಅಣ್ಣನೆಂದು ಆಧಿಶಕ್ತಿ ಮರೆಮ್ಮದೇವಿ ತಂಗಿಯಂದು ದೇವಿ ಅಣ್ಣನ ದರ್ಗಾ ಮುಂದೆ ನಿಂತು ಬೇಟ್ಟಿಯಾಗಿರುವಂತೆ ಬೇಡಿಕೊಂಡು ತೆಂಗಿನ ಕಾಯಿ ನಂಬೆ ಹಣ್ಣು ಭಂಡಾರ ಚಲ್ಲುತ್ತಾ ಅಣ್ಣನಾದಶ್ರೀ ಸೈಯದ್ ಚಂದಾಹುಸೇನ ದರ್ಗಾಕ್ಕೆ ನಮಸ್ಕರಿಸುತ್ತಾಳೆ, ಕುಂಭಾ ಹೊತ್ತ ದೇವಿ ನಂತರ ಕುಂಭಾ ಕಳಸ ಜನರ ಮಧ್ಯೆ ಮುಂದೆ ಸಾಗುತ್ತಾಳೆ. ನಂತರ ಗೋಗಿ (ಕೆ) ಗ್ರಾಮದ ಮುಖ್ಯ ರಸ್ತೆಗೆ ಹೊಂದಿಕೊಂಡ ಆಗಸಿಗೆ ಬರುತ್ತಾಳೆ ಅಲ್ಲಿ ಈ ಹಿಂದೆ ಕುಂಭಾ ಬಂದಾಗ ಊರಿನ ಪೋಲಿಸಗೌಡರ ಮನೆತನದವರು ಕುರಿ ಮರಿ ಕಡೆಯುವುದು ಪದ್ಧತಿ ಇತ್ತು. ಆದರೆ ಈಗ ಕಾಲ ಬದಲಾಗಿರುವುದರಿಂದ ಕುರಿ ಮರಿ ಕಡೇಯುವ ಬದಲು ಕುಂಬಳಕಾಯಿ ಹೊಡೆಯುತ್ತಾರೆ. ಅದರಲ್ಲಿ ಚಂದ್ರ ತುಂಬಾತ್ತಾರೆ, ಅದು ಹೊಡೆದತಕ್ಷಣ ಅದರೋಳಗಿರುವ ಚಂದರ ರಕ್ತದಂತೆ ಕಾಣುತ್ತದೆ, ಮತ್ತು ಅದರಲ್ಲಿ ಭಂಡಾರ ಹಾಕುತ್ತಾರೆ,

೧೩. ಅಗಸಿ ಎಂದರೆನು? : ಪ್ರತಿಯೊಂದು ಊರಿಗೆ ಒಂದು ಅಗಸಿ ಇದ್ದೆ ಇರುತ್ತದೆ. ಇದು ಇತಿಹಾಸವಿದೆ ಅದೇ ರೀತಿ ನಮ್ಮೂರಿನ ಅಗಸಿ ಊರು ಹುಟ್ಟಿದಾಗಲೇ ಅಗಸಿ ಹುಟ್ಟಿರುತ್ತದೆಂದು ಊರಿನ ಹಿರಿಯರು ಹೇಳುತ್ತಾರೆ ಅಗಸಿಯ ಮಹಿಮೆ ಬಹಳವಿದೆ ದೇವಾದೇವತೆಗಳು ಮೊದಲಿಗೆ ಅಗಸಿಗೆ ಬಂದು ಅಲ್ಲಿ ಆ ಊರಿನ ದೇವರಿಗೆ ಭೇಟಿಯಾಗಿ ಅಗಸಿಗೆ ಕೈಮುಗಿದು ಮುಂದೆ ಸಾಗುತ್ತಾರೆಂದು ಹಿರಿಯರ ಅಭಿಪ್ರಾಯ.

ಅದರಂತೆ ಈ ಊರಿನ ಗ್ರಾಮ ದೇವತೆಯಾದ ಗಾಳಿ ಮರೆಮ್ಮ ದೇವಿ ಈ ಊರಿನಿಂದ ಮುಂದೆ ಸಾಗುವಾಗ ಅಗಸಿಗೆ ನಿಂತು ಅಣ್ಣನಾದ ಶ್ರೀ ಸೈಯದ್ ಚಂದಾಹುಸೇನ ದೇವರಿಗೆ ಕೇಳಿಕೊಳ್ಳುತ್ತಾಳೆ ನನ್ನಗೆ ಶಾಂತಿ ಮಾಡು ಕುರಿ, ಕೋಳಿ ಕೋಣ ಪ್ರಾಣಿ ಬಲಿಕೊಡು ಎಂದು ಪೂಜಾರಿ ಹೇಳಿಕೆ ಹೇಳುವ ಪದ್ದತಿ ಗೋಗಿ (ಕೆ) ಗ್ರಾಮದ ಅಗಸಿಯಲ್ಲಿ ಈ ಹಿಂದೆ ೩೦ ವರ್ಷ ವಾಯಿತ್ತು ಸುಮಾರು ೫೦, ೬೦ ಕುರಿ ಬ್ಯಾಟಿ ಬಲಿಕೊಡುತ್ತಿದ್ದನೆಂದು ಊರಿನ ಹಿರಿಯರು ಹೇಳುತ್ತಾರೆ ಅಗಸಿಗೆ ೨ ಕುರಿ ಬ್ಯಾಟಿ ಮತ್ತು ದೇವಿ ಗುಡಿಯ ಮುಂದೆ ಗುಡಿಗೆ ಕುಂಭಾ ಪ್ರವೇಶ ಆಗುತ್ತಿದ್ದಂತೆ ಹಿಂಡು ಹಿಂಡು ಕುರಿ ಮರಿಗಳನ್ನು ಭಕ್ತರು ಹಿಡಿದು ಕಡಿಯುತ್ತಿದ್ದರೂ ದೇವಿಗೆ ಅರ್ಪಿಸುತ್ತಿದ್ದರೂ. ಆದರೆ ಈಗ ಕಾಲ ಬದಲಾಗಿದ್ದು ಈಗ ವಿದ್ಯಾವಂತರು, ಪ್ರಜ್ಞಾವಂತರು ಕುರಿ ಬ್ಯಾಟಿ ಬಲಿ ಕೊಡುವುದು

ಕಾನೂನಿನ ಪ್ರಕಾರ ವಿರುದ್ಧವಾಗಿದ್ದು ಇದು ಸರಿಯಲ್ಲ ಎಂದು ಇದೇ ಊರಿನ ಕೇಲವರು ಪೊಲೀಸ ಠಾಣೆಗೆ ದೂರು ಕೊಟ್ಟ ಪ್ರಯುಕ್ತ ಪ್ರಾಣಿ ಬಲಿ ಕೊಡುವುದು ನಿಲ್ಲಿಸಲಾಗಿದೆ. ಈಗ ಸುಮಾರು ೩೦ ವರ್ಷವಾಯಿತು ಎಂದು ಹೇಳುತ್ತಾರೆ.

ಆದರೆ ಭಕ್ತರು ದೇವಿಯ ಹೆಸರಿನಲ್ಲಿ ಅವರ ಅವರ ಮನೆ ಮುಂದೆ ಈಗಲೂ ಪ್ರಾಣಿ ಭಲಿ ಕೊಡುತ್ತಾರೆ ಭಕ್ತಿ ಈಡೇರಿಸುತ್ತಾರೆ. ಪ್ರಜ್ಞೆವಂತ ಪಧವಿದಾರರು, ನೌಕರರು, ವಿದ್ಯಾವಂತರು ನಮಗೆ ಸಂಪ್ರದಾಯವಿರಲಿ ಸಂಸ್ಕೃತಿಯಿರಲಿ, ಪದ್ದತಿಯಿರಲಿ, ಆಚರಣೆಯಿರಲ್ಲಿ ಆದರೆ ಪ್ರಾಣಿ ಬಲಿ ಕೊಡುವುದು ಬ್ಯಾಡವೆಂದು ತಡೆದಿದ್ದಾರೆ. ಕುಂಭಾ ಕಳಸುವು ಇಳಿಗೇರ ಮನೆಯಿಂದ ದೇವಿಯ ಗುಡಿಯವರೆಗೆ ಸುಮಾರು ೨ ಕಿ.ಮಿ. ದೂರವಿದ್ದು ಭವ್ಯ ಮೆರವಣೆಗೆಯಲ್ಲಿ ಬರಬೇಕೆಂದರೆ ದಾರಿಉದ್ದಕ್ಕೂ ಭಕ್ತರು ದೇವಿಗೆ ಕುಂಭಾ ಹೊತ್ತ ದೇವಿಗೆ ನೀರು ನೀಡುವುದು, ನಂಬೇಕಾಯಿ ಕೋಯಿವುದು ತೆಂಗಿನಕಾಯಿ ಹೊಡೆಯುವುದು, ಸರ ಚೊಟ್ಟೆ ಹೊಡೆಯುವುದು ಮಾಡುತ್ತಾರೆ. ಗುಡಿಗೆ ದೇವಿ ಬಂದ ಪ್ರವೇಶ ಮಾಡುವುದು ಸುಮಾರು ೫ ತಾಸುಗಳಾಗುತ್ತವೆ.

೧೪. ಹೇಳಿಕೆ ಹೇಳುವ ಪದ್ದತಿ : ನಮ್ಮ ಸಗರನಾಡಿನ ಗ್ರಾಮದೇವತೆಗಳ ಎಲ್ಲ ದೇವತೆ ಮುಂದೆ ಹೇಳಿಕ್ಕೆ ಹೇಳುವ ಪದ್ದತಿ ಇದೆ. ದೇವಿ ಪೂಜೆ ಮಾಡುವ ಪೂಜಾರಿಮೈಮೇಲೆ ದೇವಿ ಬರುತ್ತಾಳೆ ದೇವಿಗುಡಿಯಲ್ಲಿ ಗಂಟೆ, ಹಲಗೆ, ಡೋಳ್ಳು ಶಬ್ದ ಕೇಳಿದರೆ ನಮ್ಮ ಪೂಜಾರಿ ಮೈಮೇಲೆ ಬಂದು ದೇವರು ಹೇಳುತ್ತಾಳೆ ಹೇಳಿಕೆ ಕೇಳಲು ಜನ ಸಾಗರವೇ ನಂತಿರುತ್ತಾರೆ. ಇದು ಸಗರನಾಡಿನ ನಡೆದು ಬಂದ ಪದ್ದತಿಯಾಗಿದೆ.

ಗೋಗಿ ಗ್ರಾಮದ ಗ್ರಾಮದೇವತೆ ಯಾವ ಆಧಿಶಕ್ತಿ ಮರೆಮ್ಮ ದೇವಿಯ ಹೇಳಿಕೆ ಯಾವತ್ತು ಸುಳ್ಳಾಗುತ್ತಿರಲ್ಲ ಗುಡಿಯ ದೇವಿಯ ಪೂಜಾರಿ ಸಾಬವ್ವ ಸುಮಾರು ೩೦ ವರ್ಷಗಳ ಕಾಲ ಹೇಳಿಕೆ ಹೇಳುತ್ತಿದ್ದಳೆಂದು ಊರಿನ ಹಿರಿಯರು ಹೇಳುತ್ತಾರೆ ಹೇಳಿಕೆ ಸತ್ತ್ಯವೆ ಆಗಿರುತ್ತಿತ್ತು. ಯಾವುದೇ ಕಾರಣಕ್ಕೂ ಹೇಳಿಕೆ ಸುಳ್ಳಾಗುತಿರಲಿಲ್ಲ ಅದಕ್ಕಾಗಿ ಮರೆಮ್ಮ ದೇವಿಯ ಗುಡಿಯ ಮುಂದೆ ಸಾಬವ್ವ ಸಣ್ಣ ಗುಡಿ ಕಟ್ಟಿಸಿದ್ದಾರೆ. ಈಗ ಜನರು ಹೇಳಿಕ್ಕೆ ಕೇಳಲು ನಾ ಮುಂದೆ ತಾ ಮುಂದೆಂದು ಜನರು ಮುಂದೆ ಹೋಗುತ್ತಾರೆ. ಸಗರನಾಡಿನ ಗ್ರಾಮ ದೇವತೆಯ ಮತ್ತು ದೇವರ ಹೇಳಿಕ್ಕೆ ಪ್ರಸಿದ್ದವಾದ ಊರುಗಳು.

೦೧. ಸಗರ ಯಲ್ಲಮ್ಮ ದೇವಿ

೦೨. ಶ್ರೀ ಹೈಯಾಳ ಲಿಂಗೇಶ್ವರ ದೇವರು

೦೩. ಶ್ರೀ ಬಲಭೀಮೇಶ್ವರ ದೇವರು ಬಿ.ಗುಡಿ

೦೪. ಶ್ರೀ ಸಂಗಮೇಶ್ವರ ದೇವರು ಗುಡಿ ದಿಗ್ಗಿ

೦೫. ಗೋಗಿ ಗ್ರಾಮ ದೇವತೆಯಾದ ಮರೆಮ್ಮ ದೇವಿ ಗೋಗಿ

೦೬. ಶ್ರೀ ಮೈಲಾಪೂರ ಮೈಲಾರಲಿಂಗೇಶ್ವರ ದೇವರು ಮತ್ತು ಸರಪೂಳಿ ಹರಿಯುವಾಗ

೦೭. ಹಾಲಗೇರಿ ಯಲ್ಲಮ್ಮದೇವಿ

೦೮. ಸುರುಪೂರು ತಾಲೂಕಿನ ತಿಂಥಿಣಿ ಮೌನೇಶ್ವರ ದೇವರು ಹೇಳಿಕೆಯ ಪ್ರಸಿದ್ದವಿದೆ.

ಹೀಗೆ ನಮ್ಮ ಭಾಗದ ದೇವಾ ದೇವತೆಗಳು ಹೇಳಿಕೆ ಹೇಳುವುದು ಈಗಲು ನಡೆಯುತ್ತದೆ ಅದನ್ನು ಜನ ಈಗಲೂ ನಂಬುತ್ತಾರೆ ಹೇಳಿಕೆ ಕೇಳಲು ಜನ ನುಕೂ ನುಗ್ಗಲು ಗಲಾಟೆ ಆಗಿದುಂಟು ಅದಕ್ಕಾಗಿ ಜಾತ್ರೆ ಉತ್ಸವ ಕುಂಬಾ ಕಳಸ ದೇವ ದೇವತೆಯಗೆ ವಿಶೇಷವಾಗಿ ಪೊಲೀಸ್‌ರನ್ನು ನಿಯೋಜಿಸುತ್ತಾರೆ.ಜನರ ನಿಯಂತ್ರಣ ಮಾಡಲು ಹೇಳಿಕೆ ಕೇಳಿದ ಜನರ ಒಂದು ವಾರದವರೆಗೆ ರೈತಾಪಿ ವರ್ಗ ಅದೇ ಮಾತ್ತು ಅದೇ ಚರ್ಚ ನಡೆಯುತ್ತದೆ. ಕೆಲವು ರೈತರು ದೇವರ ಹೇಳಿಕೆ ಕೇಳಿ ಹೊಲದಲ್ಲಿ ಬಿತ್ತುತ್ತಾರೆ ಬಿಳಿ ಜೋಳ, ತೋಗರಿ, ಶೇಂಗಾ, ಹತ್ತಿ ಸೂರ್ಯಕಾಂತಿ ಹೆಸರು ಗೋದಿ ಎಳ್ಳು ಅಹಲವಾರು ತರಹದ ರೈತರು ತಮ್ಮಗೆ ಅನಿಸಿದ ಬೀಜವನ್ನು ನಂಬಿಕೆ ಪ್ರಕಾರ ಹೊಲಗಳಲ್ಲಿ ಬಿತ್ತುತ್ತಾರೆ ಇದು ಈಗಲೂ ಸತ್ಯವಿದೆ. ದೇವಾನು ದೇವತೆಯ ಪೂಜಾರಿಗಳು ಹೇಳಿಕೆ ಹೇಳುತ್ತಾರೆ. **ಬಿಳಿ ಎತ್ತುಗೆದ್ದಿತ್ತು ಕೆಂಪು ಎತ್ತು ಸೋತ್ತಿತ್ತಲ್ಲೆ ಮೊಮ್ಮಕಳೆ**. ಆದರೆ ಈ ವರ್ಷದ ಬೆಳೆ ಬಿಳಿ ಎತ್ತು ಎಂದರೆ ಬಿಳಿ ಜೋಳ, ಹತ್ತಿ ಬಿಳಿ ಹೊಲುವಂತ ದ್ಯಾನಗಳು ಎಂದು ಅರ್ಥ **ಕೆಂಪುಎತ್ತು ಎಂದರೆ :** ತೋಗರಿ ಅಲಸಂದಿ ಕಡಲೇ ಮುಂತಾದವುಗಳೆಂದು ಜನರ ನಂಬಿಕೆ.

೧೫. ಮರೆಮ್ಮ ದೇವಿಯ ಮೂರ್ತಿ ವಿವರ : ದೇವಿಯ ಮೂರ್ತಿಯು ಕಟ್ಟಿಗೆಯಿಂದ ಕೆತ್ತಲು ಪಟ್ಟಿದೆ ಖ್ಯಾತ ಶಿಲ್ಪಿಗಳಾದ ಶ್ರೀ ಕಾಳಪ್ಪ ಬಡಿಗೇರ ಇವರು ಪಂಚಳದವರು ಸಂಪ್ರದಾಯದಂತೆ ಮೂರ್ತಿಯನ್ನು ಕೇತ್ತಿದ್ದಾರೆ, ಈಮೂರ್ತಿಯೂ ಕಾಳಪ್ಪ ಬಡೇಗರ

ಮನೆಯಿಂದ ಭವ್ಯ ಮೆರವಣಿಗೆಯಲ್ಲಿ ತಂದು ಗುಡಿಯಲ್ಲಿ ಸ್ಥಾಪನೆ ಮಾಡಿದ್ದಾರೆ. ೪ ಅಡಿ ಎತ್ತರ ಮೂರ್ತಿ ಕಟ್ಟಿಗೆಯಿಂದ ಮಾಡಿದ್ದಾರೆ ಕಣ್ಣು, ಕಿವಿ, ಮೂಗು, ಬಂಗಾರ ಓಲೆ ಮೂಗಿನಲ್ಲಿ ಬಂಗಾರದ ಮುತ್ತು ಹಣೆಯ ಮೇಲೆ ಕುಂಕುಮ ಮತ್ತು ಬಂಡಾರ ಕೈಗಳಲ್ಲಿ ಹಸಿರು ಬಣ್ಣದ ಬಳೆಗಳು ಕೈಯಲ್ಲಿ ತಲ್ಲವಾರ (ಭರ್ಚಿ) (ಖಡ್ಗ) ಕಟ್ಟಿಗೆಯಿಂದ ಮಾಡಿದ ಆಸಾನ (ಬ್ರೇಂಚ್) ಕೆಂಪು ಸಿರಿ, ಹಸಿರು ಕುಪಸ, ಬಣ್ಣಬಣ್ಣದ ಹೂವಿನ ಹಾರ ನೋಡಗರಿಗೆ ಭಕ್ತಿ ಭಯ ಮೂಡಿಸುತ್ತಿದೆ.

ಮರೆಮ್ಮ ದೇವಿ ಆಗಿನ ಕಾಲದ ಗುಡಿ : ಸುಮಾರು ೧೫೦ ವರ್ಷಗಳಲ್ಲಿ ಮರೆಮ್ಮ ದೇವಿ ಗುಡಿ ಕಲ್ಲು ಗೊಡೆಯಿಂದ ೧ ಕೊಣೆ ಇತ್ತು ಅಲ್ಲಿ ಕಟ್ಟಿಗೆಯ ಗೊಂಬೆಯನ್ನು ಮರೆಮ್ಮ ದೇವಿ ಪ್ರತಿ ರೂಪವೆಂದು ಜನರು ನಂಬಿಕೆ ಭಕ್ತಿಯಿಂದ ಕಾಯಿಅಗರಬತ್ತಿ ಪೂಜೆ ಮಾಡುತ್ತಿದ್ದರು. ಮೊದಲು ಗುಡಿ ಕಲ್ಲು, ಮಣ್ಣು ಕಟ್ಟಿಗೆಯ ಎಳೆ ಜಂತಿನಿಂದ ಮಾಡಿದ ಗುಡಿ ಇತ್ತು ಮಳೆ ಬಂದರೆ ಸೋರುತ್ತಿತ್ತು ನಂತರ ಹಿರಿಯರು ಕೂಡಿ ೪ ಅಂಕಣ್ಣದ ೪ ಕಂಬ ಕಟ್ಟಿಗೆಯ ಗರ್ಭಗುಡಿ ಒಂದು ೧ ಹೊರ ಅಂಕಣ ಮುಂದು ವಿಶಾಲವಾದ ಬಯಲು ಜಾಗ ಕಟ್ಟೆ ಮುಂದೆ ಬೇವಿನ ಗಿಡ ಇತ್ತು ಜನರು ಬೆಸಿಗೆಯ ಸಮಯದಲ್ಲಿ ದೇವಿಯ ಗುಡಿಕಟ್ಟಿಗೆ ಕುಳಿತು ಅಗ್ಗ ಹೊಸ್ಸೆಯುವುದು, ವರಸ್ಸ ನೈಯುವುದು, ಚಕ್ಕರ ಆಡುವುದು, ಹುಲಿ ಮನೆ ಆಟ ಆಡುವುದು, ಹಿರಿಯರು ಬಯಲಾಟದ ಕಥೆ ಹೇಳುವುದು, ಎಷ್ಟು ಬಯಲಾಟದ ಕಥೆ ಈ ಗುಡಿಯಲ್ಲೆ ನಡೆದಿದೆ.ಬಯಲಾಟ ಎಂದರೆ ಜನರು ಉಲ್ಯಾಸ ಸಂತೋಷ ಈ ಗುಡಿಯಲ್ಲಿ ನಡೆಯುತ್ತಿತ್ತು.

೧೫೦ ವರ್ಷ ನಡೆದು ಪದ್ದತಿ ಮೊದಲು ಮರೆಮ್ಮ ದೇವಿಗೆ ೫೦ ರಿಂದ ೬೦ ಕುರಿ ಮರಿಗಳು ದೇವತೆಗೆ ಬಲಿಕೊಡುತ್ತಿದ್ದರೆಂದು ಹಿರಿಯರು ಹೇಳುತ್ತಾರೆ. ೧೦೦ ವರ್ಷದ ಒಂದು ನೆನಪು ದೇವತೆಯ ಗಟ್ಟೆ (ಕುಂಬಾ) ವಿವರ ಈ ಹಿಂದು ಗುಡಿಯಿತ್ತು ಆಕಳ ಹೆಂಡಿ ತಂದು ಗುಡಿಗೆ ಸಾರಿಸಿ ಗುಡಿ ಸುತ್ತಾ ಕೆಮ್ಮನ್ನು (ಕೆಂಪು ಮಣ್ಣು) ಸುಣ್ಣ ಕಲ್ಲು ಪಟಗಬಿಳಿ ಬಣ್ಣದ ಮಣ್ಣು ತಂದು ಗುಡಿಗೆ ಪಟ್ಟಿ ಕೊಡುತ್ತಿದರು ನಂತರ ಗುಡಿ ಕುಂಬಾ ತರಲು ಹಲಗೆ ಡೊಳ್ಳು ಬಾಂಜಿ ಮೆರವಣಿಗಿಂದ ತರುತ್ತಿದ್ದು ಗೋಗಿ ಅಗಸಿಗೆ ಕುರಿ ಮರಿ ಕಡಿಯುವುದು ಊರಿನ ಮಾಲಿಗೌಡ ಕಡ್ಡಿತ್ತಿದನು ನಂತರ ದೇವಿಯ ಕುಂಬಾ (ಗಟ್ಟೆ)

ಮುಂದೆ ಸಾಗಿ ಗುಡಿಪ್ರವೇಶ ಮಾಡುತ್ತಿದ್ದರು ದೇವಿ ಮುಂದು ಊರಿನ ಪೊಲೀಸಗೌಡ ಸುಮಾರು ೫೦-೬೦ ಕುರಿ ಮರಿಗಳನ್ನು ದೇವರಿಗೆ ಬಲಿ ಕೊಡುತ್ತಿದ್ದು ನಂತರ ಆ ಕುರಿ ಮರಿಗಳು ಕಟ್ಟಗರಿಗೆ ಚೌದ್ರಿ ಸುಲಿದು ಕುರಿ ಮುರಿಗಳು ಕಡಿದ್ದು ಸುಲಿದ ಸ್ವಚ್ಚಗೊಳಿಸುತ್ತಿದ್ದನು ಅದರಿಂದ ಅಡಿಗೆ ಮಾಡುತ್ತಿದರು.

ಪ್ರಾಸಾದ ವಿವರ : ಕುರಿ ಮರಿ ಕಡದನ್ನು ಚೌದ್ರಿ ಸುಲಿದು ಅದರ ಮಾಂಸ ಕಂಡಾ ಎಲುಬು ಎಲ್ಲವು ಸ್ವಚ್ಚಗೊಳಿಸಿ ಗುಡಿಯ ಮುಂದುಗಡೆ ದೊಡ್ಡದಾದಬೋಗಾಣಿ ಹಾಕಿ ಕಾರ, ಉಪ್ಪ ಎಣ್ಣಿ, ಕೊಬ್ಬರಿ ಇತ್ಯಾದಿ ಮಸಾಲ ಪದಾರ್ಥ ಹಾಕಿ ತಯಾರು ಮಾಡುತಿದರು, ಪ್ರಸಾದವಾಗಿ ಚೂರು, ಅಂಬಲ್ಲಿ (ಬಾನ) ಜೋಳದ ನುಚ್ಚು ಕುಂಬಾರ ಗಡಿಗೆಯಿಂದ ಮಾಡಿದ ದೊಡ್ಡ ಗಡಿಗೆಯಲ್ಲಿ ಜೋಳದ ಬಾನಮಾಡಿ ಪ್ರತಿಯೊಂದು ಮನೆಯಿಂದ ಗುಡಿಗೆ ತಂದು ಇಡುತ್ತಿದ್ದರು ಎಂದು ಹಿರಿಯರು ಹೇಳುತ್ತಾರೆ ಜೋಳದ ನುಚ್ಚು ಗೋದಿ ಮಾಲದಿ, ಕುರಿ, ಕೋಳಿ ಕೋಣ ಮಾಂಸ ಮತ್ತು ಮಾಂಸದ ಸಾರು ಬಲು ರುಚಿ ಎಂದು ಹೇಳುತ್ತಾರೆ ಇದೆ ಆಗಿನ ಕಾಲದ ದೇವರ ಪ್ರಸದ

ಗೋಗಿ ಮರೆಮ್ಮದೇವಿ ಗುಡಿಯ ವಿನ್ಯಾಸದ ವಿವರ

- ಶ್ರೀ ಮರೆಮ್ಮ ದೇವಿ ಗುಡಿಯು ಪೂರ್ವ ದಿಕ್ಕಿಗೆ ಇದೆ. ೨ ಅಂಕಣದಿಂದ ಕೂಡಿದೆ ೪ ಕಂಬಗಳು ಹೊಂದಿದ್ದು ಗುಡಿ ಗೋಪುರದಿಂದ ಬಹಳ ಸುಂದರವಾಗಿ ಕಾಣುತ್ತಿದೆ ಇಲ್ಲಿ ಗೋಪುರ ಸುತ್ತ ದೇವತೆಗಳ ಬಗೆ ಬಗೆಯ ಮೂರ್ತಿಗಳನ್ನು ಸೀಮೆಂಟ್ಟಿನಿಂದ ಕೆತ್ತಲ್ಪಟ್ಟಿದೆ.

- ಗುಡಿಯ ಮೇಲಭಾಗ ಸೀಮೆಂಟ್ ಚತ್ತನಿಂದ ಕೂಡಿದೆ ನೆಲ ಹಾಸಿಗೆ ಪಾಲಿಸ ಬಂಡೆಗಳು ಹಾಕಿದೆ ಗುಡಿಯ ಒಳ ಅಂಕಣದಲ್ಲಿ ಉತ್ತರ ದಿಕ್ಕಿಗೆ ಭಾವಿ ವಿದೆ.

- ದೇವಿ ಕುಳಿತಿರುವ ಗರ್ಭಗುಡಿಯ ಮೂರ ಅಡಿ ಎತ್ತರದ ಬಾಗಿಲು ಮತ್ತು ಬಣ್ಣದಿಂದ ಲೇಪನ ಮಾಡಿದ್ದಾರೆ ಒಳ ಅಂಕಣದ ನಾಲ್ಕು ಗೋಡೆಗಳಿಗೆ ಏಷಿಯನ್ ಪೆಂಟ ಹಚ್ಚಿದ್ದಾರೆ. ಗುಡಿಯಲ್ಲಿ ಭಕ್ತರು ಗಂಟೆಗಳನ್ನು ಕಟ್ಟಿದ್ದಾರೆ.

- ಗುಡಿಯ ಮುಂದುಗಡೆ ಪಾದ ಗಟ್ಟೆ ಕಟ್ಟೆ ಇದೆ ಈ ಕಟ್ಟೆಯ ಮಧ್ಯ ಒಂದು ದೊಡ್ಡ ಬೇವಿನ ಗಿಡ ಇದೆ ನೆರಳಲ್ಲಿ ಭಕ್ತರು ಬಂದು ದೇವಿದರ್ಶನ ಪಡೆದು ವಿಶ್ರಾಂತಿ ಪಡೆಯುತ್ತಾರೆ. ಈ ಬೇವಿನ ಗಿಡ ಸುಮಾರು ವರ್ಷಗಳಿಂದ ಇದ್ದು ಈ ಗಿಡದ ಮಹಿಮೆ ಬಹಳ ಈ ಗಿಡದ ತಪ್ಪಲ (ಸೋಪ್ಪು) ತೆಗೆದುಕೊಂಡು ಅರಮವಿಲ್ಲದ ಮಕ್ಕಳಿಗೆ ನೀರಿನಲ್ಲಿ ಕುದಿಸಿ ಆರಿಸಿ ಮೈತೋಳೆದರೆ ಮಕ್ಕಳಿಗೆ ಮೈಮೇಲೆ ಇದ್ದ ಒಟ್ಟು ತಟ್ಟು ಪರಿಹಾರವಾಗುತ್ತವೆ. ಮತ್ತು ಮನೆಯಲ್ಲಿ ಈ ಸೋಪ್ಪನುಹೋಗೆ ಹಾಕಿದರೆ ಮನೆಯಲ್ಲಿ ಇರುವ ಕ್ರೀಮಿಕಿಟಗಳು ನಾಶವಾಗುತ್ತವೆಂದು ಇಲ್ಲಿ ಭಕ್ತರು ಹೇಳುತ್ತಾರೆ.

- ಶ್ರೀ ಮರೆಮ್ಮ ದೇವಿ ಗುಡಿಯ ಮುಂದು ಈ ದೇವಿ ಸೇವೆ ಮಾಡಿದ ಪೂಜಾರಿ ಸಮಾದಿ ಇದೆ ಈ ದೇವಿಯ ಸೇವೆ ಸುಮಾರು ೫೦ ವರ್ಷಗಳ ಕಾಲ ಅರ್ಚಿಕೆಯಾಗಿ ದೇವರು ಹೇಳುವುದು ಅಮವಾಸೆ, ಹುಣಿಮೆದಿನ ದೇವಿ ಹೆಸರಿನಿಂದ ಆದರ ಅಚ್ಚುವುದು ಮಾಡುತ್ತಿದ್ದಳು ಆ ಅರ್ಚಿಕೆಯ ಹೆಸರು ಸಾಬವ್ವ ಎಂದು ಇಲ್ಲಿ ಭಕ್ತರು ಹೇಳುತ್ತಾರೆ.

- ಶ್ರೀ ಮರೆಮ್ಮ ದೇವಿಯ ಕಟ್ಟಿಗೆಯ ಮೂರ್ತಿಗಳು ಒಳಗರ್ಭ ಗುಡಿಯಲ್ಲಿ ಕುಳಿತವು ಈ ಮೂರ್ತಿಗಳು ಪಕ್ಕದಲ್ಲಿ ತಳಪಟರಾಯ ಎಂದು ಚಿಕ್ಕ ಕಟ್ಟಿಗೆಯ ೨ ಮೂರ್ತಿಗಳಿವೆ ಈ ಮೂರ್ತಿಯು ಕಟ್ಟಿಗೆಯಲ್ಲಿ ಕೇತ್ತನೆ ಮಾಡಿದ್ದಾರೆ. ನೋಡಿದರೆ ಭಕ್ತಿ ಭಾವ ಮೂಡುತ್ತದೆ.

- ಗುಡಿಯ ಎಡಗಡೆ ಒಂದು ಕಲ್ಲು ನಡೆಹಾಕಿದು ಆ ಕಲ್ಲಿಗೆ ಭಕ್ತರು ಮಂಗಳವಾರ, ಶುಕ್ರವಾರ ಮತ್ತು ಅಮವಾಸೆ, ಹುಣಿಮೆ ದಿನ ಎಣ್ಣೆ ಹಾಕಿ ಆ ಕಲ್ಲಿನ ಕಂಬಕ್ಕೆ ಸುತ್ತುವರಿಯುತ್ತಾರೆ ಅಂದರೆ ಯಾರು ಆರೋಗ್ಯವಾಗಿ ಇರುವುದಿಲ್ಲವೋ ಅವರು ಈ ಕಂಬವನ್ನು ಸುತ್ತು ವರಿಯುತ್ತಾರೆ ಸುತ್ತು ವರೆದರೆ ಮೈಯಲ್ಲಿರುವ ಜಡ್ಡು ಜಪಾತ್ರ ಹೋಗುತ್ತದೆ ಎಂದು ಇಲ್ಲಿಯ ಜನರ ನಂಬಿಕೆ ಗುಡಿಯ ಈಶ್ಯನ ದಿಕ್ಕಿಗೆ ಒಂದು ಬಾವಿ ಇದೆ ಉತ್ತರಕ್ಕೆ ದರ್ಗ ರೋಡ ಮತ್ತು ಶಹಾಪೂರಕ್ಕೆ ಹೋಗು ರಸ್ತೆ ಇದೆ.

- ಶ್ರೀ ಮರೆಮ್ಮ ದೇವಿ ಗುಡಿಯ ಮುಂದ ೪, ೫ ಕರಿಕಲ್ಲಿನ ಗುಂಡುಗಳಿವೆ ಇವು ಹಿಂದಿನ ಕಾಲದಲ್ಲಿ ಭಾರ ಎತ್ತುವ ಸ್ಪರ್ಧೆಯ ಇತ್ತು ಎನ್ನುತ್ತಾರೆ ಹಿರಿಯರು ಈ ಗುಂಡು ಕಲ್ಲು ಯಾರು ಹೆಚ್ಚಿಗೆ ಎತ್ತುತ್ತಾರೆ ಅವರಿಗೆ ಬೆಳ್ಳಿ ಖಡಗ್ಗ ಬಹುಮಾನವಾಗಿ ಕೊಡುತ್ತಾರೆ, ಅವರಿಗೆ ಗೌರವಸನ್ಮಾನ ಮಾಡುತ್ತಾರೆ. ಗುಡಿಯ ಸುತ್ತಲು ವಿಶಾಲವಾದ ಜಾಗವಿದೆ ಆ ಜಾಗದಲ್ಲಿ ಸೀಮೆಂಟಿನಿಂದ ಸಿ.ಸಿ. ರಸ್ತೆ ಮಾಡಿದ್ದಾರೆ. ಕಾಲಿ ಜಾಗದಲ್ಲಿ ಸೀಮೆಂಟಿನಿಂದ ನೆಲ ಅಂಗಳ ಮಾಡಿದ್ದಾರೆ ಕುಡಿಯಲು ನೀರಿನ ಅನೂಕುಲವಿದೆ.

- ಈ ದೇವಿ ಗುಡಿಯಲ್ಲಿ ಭಕ್ತರು ತಮ್ಮ ಹಣವನ್ನು ದೇವಿ ಕಾಣಿಕೆಪಟ್ಟಿಯಲ್ಲಿಹಾಕುತ್ತಾರೆ. ಅದು ನೂತನ ತಾಂತ್ರಿಕ ಲಾಕರ್ ಸೌಲಭ್ಯವಿದೆ. ಗುಡಿಯ ಅಂಕಣದಲ್ಲಿ ಒಳಗಡೆ ಕಬ್ಬಿಣದ ಗೇಟ್ ಮಾಡಿದ್ದಾರೆ (ಸೇಟರ್ ತರಹ ಜಾಲರಿ) ಗುಡಿಯ ಬಹಳ ಸುಂದರವಾಗಿದೆ.

- ಈ ಗುಡಿಯ ಗೋಪುರವು ಸುಮಾರ ೩೦ ಅಡಿ ಎತ್ತರವಾಗಿ ಅಷ್ಟ ಕೋನದಿಂದ ಕಟ್ಟಿದ್ದಾರೆ ಈ ಗೋಪುರ ಸುತ್ತ ದೇವತೆ ಮೂರ್ತಿಗಳಿವೆ ಸಿಂಹ, ನರ್ತಿಕಿಯರು ರಾಕ್ಷಸರು, ಶಿವ ಪಾರ್ತಿಯ ಚಿತ್ರ ನೋಡಗರಿಗೆ ಭಕ್ತಿ ಭಯ ಮೂಡುತ್ತದೆ ಈ ಗುಡಿಯು ಹೊಯ್ಸಳ ಶೈಲಿಯ ಕಲಾಕೃತಿಗಳು ಮತ್ತು ಡಿಜೈನಂಗಗಳು ಬಹಳ ಸುಂದರವಾಗಿ ಸೀಮಿಂಟಿನಲ್ಲಿ ಮಾಡಿದ್ದಾರೆ.

೧೧. ಶ್ರೀಮಹಾಲಕ್ಷ್ಮಿ ದೇವಿ ಜೇವರ್ಗಿ

ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕು ಕೇಂದ್ರ ಸ್ಥಾನದಲ್ಲಿನ ಪ್ರಸಿದ್ಧಿ ಹೊಂದಿದ ಏಳೂರು ಸೀಮೆ ದೇವತೆ (ಕಲ್ಕತ್ತಾದೇವಿ) ಲಕ್ಷ್ಮಿದೇವಿ ಶ್ರೀಮಹಾಲಕ್ಷ್ಮಿ ದೇವಿ ಗುಡಿಯು ಅತ್ಯಂತ ಸುಂದರವಾಗಿ ಹೋಯ್ಸಳ ಶೈಲಿಯ ಗೋಪುರ ಗುಡಿಯ ಸುತ್ತಾ ಗೋಪುರದಂತೆ ಹೋಲುವಾ ಕೀರ್ತಿ ಮುಖ ಮತ್ತು ಡಿಜಾಯಿನಂಗ್ ನೋಡಿಗರಿಗೆ ಭಕ್ತಿ ಭಾವ ನಂಬಿಕೆ ಶ್ರದ್ಧೆ ಮಾಡುತ್ತದೆ. ಜೇವರ್ಗಿ ತಾಲೂಕಿನ ಹೃದಯಭಾಗದಲ್ಲಿರುವ ಇಡೀ ಜೇವರ್ಗಿ ನಗರ ಮತ್ತು ಸುತ್ತಾ ಮುತ್ತಲಿನ ಗ್ರಾಮದ ಜನರು ಏಳೂರು ಗ್ರಾಮದೇವತೆ ಈ ದೇವಿಯ ಶಕ್ತಿ ಎಷ್ಟು ಹೇಳಿದರು ಸಾಲದು ಎಷ್ಟು ಬರೆದರು ಮುಗಿಯದು ಅಷ್ಟು ಸತ್ಯ ದೇವತೆ ಈ ದೇವಿ

ಮೂಲತಃ ಕಲಕತ್ತಾದಿಂದ ಬಂದ ದೇವಿಯಂದು ಹಿರಿಯರು ಹೇಳುತ್ತಾರೆ. ಭಕ್ತನ ಕನಸಿನಲ್ಲಿ ಬಂದು ನನಗೆ ಜಾಗ ಕೊಡು ನನಗೆ ಸಂಪತ್ತು ಕೋಡುತ್ತೇನೆಂದು ಭಕ್ತನ ಕನಸಿನಲ್ಲಿ ಬಂದು ಹೇಳಿದ್ದಾಳೆಂದು ಹೇಳುತ್ತಾರೆ. ಅದರಂತೆ ಮೊದಲಿಗೆ ಎಸ್.ಸಿ. ಓಣಿಯಲ್ಲಿರುವ ಒಂದು ಗುಡಿಯಲ್ಲಿ ದೇವಿಯ ಪೂಜೆ ಪ್ರಾರಂಭಿಸಲಾಯಿತು.

ನಂತರ ದೇವಿಗೆ ಪೂಜೆ ಸಂಪ್ರದಾಯ ಇಷ್ಟವಾಗಲಿಲ್ಲ ಕಾರಣ ಶ್ರೀಮಂತ ಮನೆತನ ಗೌಡರಾದ ಹೀರೇಗೌಡ ಕನಸಿನಲ್ಲಿ ದೇವಿ ಹೋಗಿ ನನಗೆ ಒಂದು ಗುಡಿ ಕಟ್ಟಿಸು ಎಂದು ಹೇಳಿದಾಳಂತೆ ಅದರಂತೆ ಹೀರೇಗೌಡರು ಜೇವರ್ಗಿ ನಗರದ ವಿಶಾಲವಾದ ಜಾಗದಲ್ಲಿ ಒಂದು ಸಣ್ಣ ಗುಡಿ ಕಟ್ಟಿ ಆ ಗುಡಿಯಲ್ಲಿ ಮರೆಮ್ಮದೇವಿ ಹೆಸರು ಬದಲು ಕಲ್ಕತ್ತಾದೇವಿ ಎಂದು ಮತ್ತು ಊರಿನ ಎಲ್ಲಾ ಸಮೂದಾಯದವರು ಸೇರಿ ಕಲ್ಕತ್ತಾದೇವಿ ಹೆಸರು ಬದಲಾಯಿಸಿ ಶ್ರೀಲಕ್ಷ್ಮಿದೇವಿಯಂದು ಕರೆಯಲಾಯಿತು. ಹಿರೇಗೌಡರು ಸಂಪತ್ತು ಹೆಚ್ಚುತ್ತಾ ಹೋಯಿತು ದೇವಿ ನೆಲೆಸಿದಳೆಂದು ಹೇಳುತ್ತಾರೆ.

ಶ್ರೀಲಕ್ಷ್ಮಿದೇವಿ ಮೂರ್ತಿ ಮಾಡುವ ಪದ್ಧತಿ : ಶ್ರೀ ಲಕ್ಷ್ಮಿದೇವಿಯು ಪ್ರತಿ ವರ್ಷವೂ ಬಸರ ಗಿಡದ ದಪ್ಪನ ಗಿಡದ ಬಡ್ಡಿ ಅಥವಾ ಕೊಲ್ಲೆ ಪದ್ಧತಿಯಂತೆ ಅರ್ಚಕರೊಂದಿಗೆ ಹೋಗಿ ಆ ಬಸರ ಗಿಡಕ್ಕೆ ಪೂಜೆ ಸಲ್ಲಿಸಿ ಭಕ್ತರ ಸಮ್ಮುಖದಲ್ಲಿ ಆ ಹಸಿ ಗಿಡ ಕಡೆದು ದೇವಿಯು ಆಗುವಷ್ಟು ಎತ್ತರ ಅಗಲ ದಪ್ಪ ಭಕ್ತರ ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಭಕ್ತಿಯ ಶಕ್ತಿಯಿಂದ ಜೈಕಾರ ಹಾಕುತ್ತಾ ಬರುತ್ತಾರೆ. ಯುವ ಮಾಸ್ತದಿಗಳು ಮಳೆ ನೀರಿನಿಂದ ಗದ್ದೆಯಂತೆ ಆಗಿದ್ದ ಹೊಲದಲ್ಲಿ ಒಂದು ಮೂಲೆಯಲ್ಲಿ (ಬೆಂಚಿ, ತೆಗ್ಗು ಹೊಂದುವ ಸ್ಥಳ) ಈ ಹೊಲದಲ್ಲಿ ಕಾಲುಗಳು ಮಳೆ ಕಾಲುಮಟ್ಟ ಕೆಸರು ಇಳಿದರು ಯುವಕರು ಹಿರಿಯರು ಪಂಚಾಳದವರು ಹಿರಿಯ ಗೌಡರು ಎಲ್ಲಾರು ದೇವಿ ಶಕ್ತಿಯಿಂದ ಆ ಕೆಸರು ಗದ್ದೆಯಂತೆ ಇದ್ದ ಹೊಲದಲ್ಲಿ ಕಾಲು ಕಿತ್ತುತ್ತಾ ದೇವಿಯ ಗಿಡದ ತುಂಡು ಹೆಗಲಮೇಲೆ ಇಟ್ಟುಕೊಂಡು ಹೊಲ ದಾಟುವುದು ನಿಜಕ್ಕೂ ದೇವಿ ಶಕ್ತಿಯಂತೆ ಕಾಣುತ್ತದೆ.

ದೇವಿಯ ಭಕ್ತರು ೫೦೦ ದಿಂದ ಒಂದು ಸಾವಿರ ಜನ ೪ ಕಿ.ಮೀ ದೂರದವರಿಗೆ ಕಾಲು ನಡೆಗೆಯಿಂದ ಬರುವುದು ನಿಜಕ್ಕೂ ದೇವಿ ಶಕ್ತಿಇದೆ ಎಂದು ಹೇಳಬಹುದು ದೇವಿ ಮೂರ್ತಿಯಾಗುವ ಗಿಡದ ತುಂಡು ಒಬ್ಬರ ಹೆಗಲ ಮೇಲೆ ಒಬ್ಬರಂತೆ ತೆಗೆದುಕೊಳ್ಳುತ್ತಾ

ಮತ್ತೊಬ್ಬರಿಗೆ ದೇವಿ ಸೇವೆ ಮಾಡಲು ಅನುಕೂಲ ಮಾಡುತ್ತಾರೆ. ಅಲ್ಲಿಗೆ ಹೋದರು ಒಂದು ಗಿಡದ ತುಂಡು ತೆಗೆದುಕೊಂಡು ಬರುತ್ತಾರೆ.

ಲಕ್ಷ್ಮೀ ದೇವಿ ಗಿಡದ ಪೂಜೆ ವಿಧಾನ : ಶ್ರೀ ಲಕ್ಷ್ಮೀದೇವಿ ಭಕ್ತರು ಮುಂಜಾನೆ ೬-೩೦ ಗಂಟೆಗೆ ಜೇವರ್ಗಿ ಮುಂದೆ ೪ಕಿ.ಮೀ. ದೂರದಲ್ಲಿರುವ ಭಸರಿಗಿಡವನು ಪ್ರತಿವರ್ಷದಂತೆ ಪಂಚಳದವರು ಸಂಮುಖದಲ್ಲಿ ಮತ್ತು ಶಾಸ್ತ್ರ ಮಂತ್ರಗಳೊಂದಿಗೆ ಬಸರಿ ಗಿಡಕ್ಕೆ ಪೂಜೆ ಸಲ್ಲಿಸಿ ಪಂಚಳದವರಿಂದ ಕಚ್ಚ ಗಿಡಕ್ಕೆ ಕೊಡಲೆಯಂದು ಮುಟ್ಟಿಸಿ ನಂತರ ಕೆಚ್ಚದೆಯ ಯುವ ಗಂಡುಗಳು ದಂಡೆಯಿಂದ ದೇವಿಯ ಗಿಡವಾದ ಬಸರಿ ಗಿಡವನ್ನು.ಕಡಿದು ನಂತರ ಈ ಕೆಚ್ಚದೇಯ ಯುವ ಗಂಡುಗಳು ದಂಡಿನ ಹೆಗಲ ಮೇಲೆ ಬಸರ ಗಿಡದ ದೇವಿಯ ಸ್ವರೂಪವಾದ ಗಿಡದ ತುಂಡು ವಿವಿಧ ಆಕಾರವುಳ್ಳವ ತುಂಡುಗಳು ಯುವಕರು ಆಕರೇ ಉಲ್ಲಾಸ ಉಮ್ಮಸು ನಿಂತಲೇ ಪುಡ್ಡಿಯುವ ಯುವ ಮನಸ್ಸಿನ ಯುವಕರು ಎಲ್ಲ ದೇವಿಯ ಗಿಡದ ಒಂದೋಂದು ಕೋಲ್ಲೆಗಳು (ತುಂಡುಗಳು) ಭಕ್ತಿಯದ ತಮ್ಮ ಹೆಗಲ ಮೇಲೆ ಇಟ್ಟುಕೋಂಡು ಉಮ್ಮಸಿನಿಂದ ಬರುತ್ತಾರೆ ದೇವಿ ಮೂರ್ತಿ ಯಾಗುವಂತಹ ದೋಡ್ಡ ತುಂಡುದೇವಿ ಬಂಡಿಯ ದಿಂಡು ಗಾಲಿ ಇವರ ಇಬ್ಬರು, ಮೂವರು,ನಾಲ್ಕು ಜನ ಸೇರಿ ತಮ್ಮ ಹೆಗಲ ಮೇಲೆ ಎತ್ತಿಕೊಂಡು ನಾಲ್ಕ ಕೀಲೋ ಮೀಟರ ದೂರದಿಂದ ಬರುತ್ತಾರೆ. ಈ ಮೂಲಕ ಜನರು ಭಕ್ತಿಯನ್ನು ಸಲ್ಲಿಸುತ್ತಾರೆ.

೧೨. ಬಡಿಗೇರ ಮನೆಯ ಅಡಿಕಟ್ಟಿ

ಹೊಲದಿಂದ ತರುವ ದೇವಿಯ ಮೂರ್ತಿಯ ಗಿಡದ ತುಂಡುಗಳು ಸುಮಾರು ಒಂದು ಎತ್ತಿನ ಬಂಡಿಯಷ್ಟು ಇರುತ್ತವೆ ಇಷ್ಟು ಗಿಡದ ತುಂಡುಗಳು ಯುವಕರು ಹಿರಿಯರು ಹೆಗಲ ಮೇಲೆ ಹೋತ್ತುಕೊಂಡು ದೇವಿಯ ಗುಡಿಯ ಬಲಗಡೆ ರಸ್ತೆಯ ಮಾರ್ಗವಾಗಿ ಬಡಿಗೇರ ಮನೆ ಅಡಿಕಟ್ಟೆಗೆ ತರುತ್ತಾರೆ, ತಂದ ನಂತರ ಇಲ್ಲಿ ಸುತ್ತಮುತ್ತ ಮನೆಯ ಹೆಣ್ಣು ಮಕ್ಕಳು ಗಂಡು ಮಕ್ಕಳು ಯುವಕು ಶ್ರದ್ದೆ ಬಕ್ತಿಯಿಂದ ಆ ಗಿಡದ ತುಂಡುಗಳಿಗೆ ಕೈ ಮುಟ್ಟಿ ಕೈ ಮುಟ್ಟಿ ಮತ್ತು ಕೆಲವರು ತಮ್ಮ ಹಣೆ ಹಚ್ಚಿ ನಮಸ್ಕಾರ ಮಾಡುತ್ತಾರೆ, ನಂತರ ಮೂಲ ಗುಡಿಗೆ ಹೋಗಿ ಅಲ್ಲಿ ಒಂದು ದಿನ ಪೂಜಾ ಸಲ್ಲಿಸಿ ಮಾರನೇದಿನ ಮುಂಜಾನೆ ಏಳುನೂರು

ಸೀಮೆ ಇರುವ ಸ್ಥಳಕ್ಕೆ ಭವ್ಯ ಮೆರವಣಿಗೆಯಿಂದ ದೇವಿ ಹೊರಡುತ್ತಾಳೆ, ಸಂಜೆಗೆ ಸೀಮಿ ಹೊಲದಲ್ಲಿ ಇರುವ ಗುಡಿಯಲ್ಲಿ ದೇವಿ ಮೂರ್ತಿ ಸ್ಥಾಪನೆ ಮಾಡುತ್ತಾರೆ.

೧೩. ಗೋಗಿಯ ಗದ್ದೆನ ಎಲ್ಲಮ್ಮ ದೇವಿ ವಿವರ

ಗೋಗಿಯ ಗದ್ದೆನ ಎಲ್ಲಮ್ಮ ದೇವಿಯ ವಿವರವೂ ದೇವಿ ಅರ್ಚಕರಾದ ಶ್ರೀ ಹಣಮಂತ ಪೂಜಾರಿ ಹೇಳಿಕೆಯ ಪ್ರಕಾರ ಮತ್ತು ಭಕ್ತರ ಹೇಳಿಕೆಯ ಪ್ರಕಾರ ಬರೆದ್ದಿದ್ದೇನೆ. ೮೯೭೧೪೫೮೪೭೫ ಈ ಎಲ್ಲಮ್ಮ ದೇವಿಯು ಸುಮಾರು ೮೦-೯೦ ವರ್ಷಗಳಿಂದ ಸಣ್ಣ ಕಲ್ಲು ಬಡೇಗಳಲ್ಲಿ ಸಣ್ಣ ಕಟ್ಟಿಗೆಯ ಗೊಂಬೆಗಳು ಇದ್ದವು ಇಲ್ಲಿ ಜನರು ಕುಡ್ಡ ಎಲ್ಲಮ್ಮ ದೇವಿಯಂದ ಕರೆಯುತ್ತಿದ್ದರು ಯಾರಿಗಾದರೂ ಜ್ವರ ಬಂದರೆ ತಲೆ ನೋವು ಬಂದರೆ ಜನರು ಕಾಯಿ ಉದ್ಬತ್ತಿ ಕೊಡುತ್ತಿದ್ದರು ಅಮವಾಸೆ, ಹುಣ್ಣಿಮೆ ದಿನ ಜನರು ತಮ್ಮ ಇಷ್ಟದಂತೆ ಆಸೆ ಈಡೇರಿದರೆ ಕುರಿ ಮರಿ (ಓತು ಮರಿ) ಬಲಿಕೊಡುತ್ತಿದ್ದರು ಇಷ್ಟು ಈ ಗದ್ದೆನ ಎಲ್ಲಮ್ಮ ದೇವಿಗೆ ಜನರು ನಡೆದು ಕೊಂಡು ಬಂದದ್ದು.

ಆದರೆ ೨೦೦೮ರಲ್ಲಿ ಶ್ರೀ ಹಣಮಂತ ಪೂಜಾರಿ ಕನಸಿನಲ್ಲಿ ಬಂದು ನನ್ನ ಪೂಜಿಸು ನನೂ ಅಂದುದನ್ನು ಮಾಡಿ ತೋರಿಸುವುತ್ತೇನೆಂದು ಪೂಜಾರಿ ಕನಸಿನಲ್ಲಿ ಎಲ್ಲಮ್ಮದೇವಿ ಅಮ್ಮ ಬಂದಳು ಎಂದು ಶ್ರೀ ಹಣಮಂತ ಪೂಜಾರಿ ಹೇಳುತ್ತಾನೆ ದೇವಿ ಹೇಳಿದಂತೆ ಬಂದು ದೇವಿ ಗುಡಿ ನೋಡುತ್ತಾನೆ ಯಲ್ಲದೇವಿ ಗುಡಿ ಸುತ್ತಾ ಮುತ್ತು ಮುಳ್ಳು ಕಂಠೆಗಳು ಕೆಸರು ಗದ್ದೆಯಂತೆ ಇತ್ತು ಈ ಮುಳ್ಳು ಕಂಠಿ ಕೆಸರು ಗದ್ದೆಯಂತೆ ಇದ್ದಂತಹ ಈ ಗುಡಿಯು ಪೂಜಾರಿ ಕೈಯಿಂದ ಪ್ರತಿವರ್ಷ ಬದಲಾವಣೆಯಾಗುತ್ತಾ ನಡೆದಿದೆ ಪ್ರತಿವರ್ಷ ಪಲ್ಲಕ್ಕಿ ಮೆರವಣಿಗೆ, ಪಲ್ಲಕ್ಕಿ ಗಂಗಾಸ್ನಾನ ಗೋಗಿ ಪೇಠದಿಂದ ಗದ್ದೆನ ಎಲ್ಲಮ್ಮ ಗುಡಿಯವರಿಗೆ ಮೆರವಣಿಗೆ ಮಾಡುತ್ತಾ ಬರುತ್ತಾರೆ

ನಂತರ ಗುಡಿಯಲ್ಲಿ ಪಲ್ಲಕ್ಕಿ ಕುಡಿಸಿ ೮,೧೦ ಕುರಿ ಕೋಳಿ ಕೊಯುತ್ತಾರೆ. ದೇವಿಗೆ ಅರ್ಪಿಸುತ್ತಾರೆ ಕುರಿ, ಕೋಳಿ ಕಡಿದ ನಂತರ ಕುರಿ ಕುತ್ತಿಗೆಯನ್ನು ಅದರ ಬಾಯಿಗೆ ಅದರ ಒಂದು ಕಾಲನ್ನು ಇಡುತ್ತಾರೆ. ಬಂಡಾರ ಹಚ್ಚುತ್ತಾರೆ. ಕುಂಕುಮ ಹಚ್ಚುತ್ತಾರೆ ದೇವಿಗೆ ಅರ್ಪಿಸುತ್ತಾರೆ ಈಗೆ ದೇವಿಗೆ ಪ್ರತಿ ವರ್ಷ ಮಾಡುವ ಪದ್ದತಿ

ಯಾಗಿದೆ. ಗದ್ದೆನ ಎಲ್ಲಮ್ಮ ದೇವಿಯ ಗುಡಿ ಈಗ ೨೦೦೯ರಲ್ಲಿ ಕೆಟ್ಟಲಾಗಿದೆ ಎಲ್ಲಾ ದೇವಾಲಯ ವಾಸ್ತು ಪ್ರಕಾರವಾಗಿ ಕಟ್ಟಲಾಗಿದೆ ಎಲ್ಲಮ್ಮದೇವಿ ಗುಡಿಯು ಪೂರ್ವಕ್ಕೆ ಮುಖ ಹೊಂದಿದೆ ಗುಡಿಯ ಮುಂದುಗಡೆ ಮಾಲ ಗಂಭ ಇದೆ ಸುಮಾರು ೮ ಫಿಟ ಎತ್ತರವಿ ಇದರ ಕೆಳಗೆ ಒಂದು ಸಣ್ಣ ಮಾಡವಿದೆ.

ಎಲ್ಲಮ್ಮ ದೇವಿಯ ಗುಡಿಗೆ ಹೊಂದುಕೊಂಡಂತೆ ಪಕ್ಕದಲ್ಲಿ ಸಣ್ಣ ದೊಂದು ಪರುಶುರಾಮನ ಗುಡಿದೆ ಗುಡಿಯಲ್ಲಿ ಪರುಶುರಾಮನ ಸಣ್ಣದೊಂದು ಮೂರ್ತಿ ಇದೆ.ಎಲ್ಲಮ್ಮ ದೇವಿಯ ಗುಡಿಯ ಬಲಗಡೆ ಮಹಾ ತಂಗಿ ಕೆಟ್ಟಿ ಇದೆ ಕಟ್ಟಿಯಲ್ಲಿ ೨ ಕುಂಡಾ ನೀರಿನ (ಕೊಳ್ಳಾ) ಇದೆ ಈ ನೀರು ಮೈಕೈಗೆ ಹಚ್ಚಿಕೊಂಡೆ ಯಾವುದೆ ಜ್ವರ, ನೇಗಡಿ, ಕೇಮು, ಇತ್ಯಾದಿ ರೋಗಗಳು ಬರುವುದಿಲ್ಲ ಎಂದು ಹಣವಂತ ಪೂಜಾರಿ ಹೇಳುತ್ತಾನೆ. ಎಲ್ಲಮದೇವಿ ದೇವಿ ಗುಡಿ ಬಲಗಡೆ ನಂಗಯ್ಯ ಮುತ್ತ್ಯ ಕಟ್ಟಿ ಇದೆ ಇದು ರಾಜಾಪೂರು ಪಲ್ಲಕ್ಕಿ ಬರುವಾಗ ಪಲ್ಲಕ್ಕಿ ಗೂಡಿಸಲು ನಂಗಯ್ಯ ತಾತನ ಕಟ್ಟಿಯಂದು ಕರೆಯುತ್ತಾರೆ ಈ ಎಲ್ಲಮ್ಮ ದೇವಿಯ ಮುಂದುಗಡೆ ೮೦ ಫೀ ಮುಂದೆ ನಾಗಯಲ್ಲಮ್ಮದೇವಿ ಇದೆ (ಹುತ್ತು ನಾಗರ ಹಾವಿನ ಹುತ್ತಿನ ಗುಡಿ ಎಂದಲು ಕರೆಯುತ್ತಾರೆ.) ಮನೆಯಲ್ಲಿ ಹುತ್ತು ಇರುವುದರಿಂದ ನಾಗಯಲ್ಲಮ್ಮ ದೇವಿಯಂದು ಕರೆಯುತ್ತಾರೆ ಜನರು ಆ ಉತ್ತಿಗೆ ಹಾಲು ಸಕ್ಕರೆ ಹೂ ಕಾಯಿ, ಕರಪೂರು ಕೊಡುತ್ತಾರೆ ಜನರು ನಂಬಿಕೆಯಂತೆ ಪ್ರತಿ ಅಮವಾಸೆ, ಹುಣಿಮೆಯದಿನ ಜನರು ಬಂದು ಭಕ್ತಿ ಅರ್ಪಿಸುತ್ತಾರೆ.

ದೇವತೆಯ ಹಿನ್ನಲೆ : ಶಿವನ ಹೆಂಡತ್ತಿಯಾದ ಪಾರ್ವತಿದೇವಿವು ೯ನೇಯ ಅವತಾರ ತಾಳಿ ೧) ಕಾಳಿಕಾದೇವಿ ೨) ಅಂಭಾ ಮಹೇಶ್ವರಿ ದೇವಿ ೩) ಶಾರದಾಂಭಾದೇವಿ ೪) ಅನ್ನ ಪೂರ್ಣಶ್ವರಿದೇವಿ ೫) ಭನಶಂಕರಿದೇವಿ ೬) ಶ್ರೀ ಮೈಸೂರು ಚಾಮುಮಡೇಶ್ವರಿ ದೇವಿ ೭) ಶ್ರೀ ದುರ್ಗಾ ಪರಮೇಶ್ವರಿದೇವಿ ೮) ಶ್ರೀ ಲಕ್ಷ್ಮೀದೇವಿ ೯) ಶ್ರೀ ಗಾಳಿ ಮರೆಮ್ಮ ದೇವಿ ಹೀಗೆ ಪಾರ್ವತಿದೇವಿ ಅವತಾರ ಹಲವರು ಹೆಸರು ಹೊಂದಿರು ಆಯಾ ಜನಾಂಗಕ್ಕೆ ಅವರ ಅವರ ಹೆಸರುಗಳು ಪ್ರಸಿದ್ದ ಹೊಂದಿವೆ.

ಮರ ಮಾಧ್ಯಮದ ದೇವತಾ ಶಿಲ್ಪಗಳು







ಶ್ರೀ ಹಳ್ಳದ ಯಲ್ಲಮ್ಮ ದೇವಿ, ಶಹಾಪೂರ ನಗರ

ಮರ ಮಾಧ್ಯಮದ ದೇವತಾ ಶಿಲ್ಪಗಳು






ಶ್ರೀ ಮರೆಮ್ಮ ದೇವಿ, ಎಸ್.ಸಿ. ಓಣಿ, ನಾಯ್ಕಲ್ ಗ್ರಾಮ, ಶಹಾಪೂರ ತಾಲೂಕು

ಮರ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ಎಲ್ಲಮ್ಮ ದೇವಿ, ಸಿಂಗನಹಳ್ಳಿ ಗ್ರಾಮ, ಶಹಾಪೂರ-ಜೇವರ್ಗಿ ತಾಲೂಕು



ಶೀ ಎಲ್ಲಮ್ಮ ದೇವಿಯ ಪಾದಗಳು


ಮರ ಮಾಧ್ಯಮದ ದೇವತಾ ಶಿಲ್ಪಗಳು





ಶೀ ಹುಲಗಮ್ಮ ದೇವಿ, ಬೇವಿನಾಳ ಗ್ರಾಮ, ಸುರಪೂರ ತಾಲೂಕು

ಮರ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ಲಕ್ಕಮ್ಮ ದೇವಿ, ನೀರಡಗಿ ಗ್ರಾಮ, ಜೇವರ್ಗಿ ತಾಲೂಕು

ಮರ ಮಾಧ್ಯಮದ ದೇವತಾ ಶಿಲ್ಪಗಳು







ಶ್ರೀ ಮರೆಮ್ಮ ದೇವಿ, ಗೋಗಿ ಗ್ರಾಮ, ಶಹಾಪೂರ ತಾಲೂಕು


ಮರ ಮಾಧ್ಯಮದ ದೇವತಾ ಶಿಲ್ಪಗಳು





ಶೀ ಮಹಾಲಕ್ಷ್ಮೀ ದೇವಿ, ಜೇವರ್ಗಿ

ಮರ ಮಾಧ್ಯಮದ ದೇವತಾ ಶಿಲ್ಪಗಳು







ಬಡಿಗೇರ ಮನೆಯ ಅಡಿಕಟ್ಟಿ (ಲಕ್ಷ್ಮೀ ದೇವಿ ಮೂರ್ತಿಯನ್ನು ನಿರ್ಮಿಸುವ ಕಟ್ಟಿಗೆ), ಜೇವರ್ಗಿ ನಗರ

ಮರ ಮಾಧ್ಯಮದ ದೇವತಾ ಶಿಲ್ಪಗಳು





ಕುಂಭಾ ಹೊತ್ತ ಮರೆಮ್ಮಾ ದೇವಿ, ಗೋಗಿ, ಶಹಾಪೂರ ತಾಲೂಕು

ಅಧ್ಯಾಯ : ಐದು

ಲೋಹ ಮಾಧ್ಯಮದ ಗ್ರಾಮದೇವತೆಗಳು

ಅಧ್ಯಾಯ : ಐದು

ಲೋಹ ಮಾಧ್ಯಮದ ಗ್ರಾಮದೇವತೆಗಳು

ಸಗರನಾಡಿನಲ್ಲಿ ಲೋಹಮಾಧ್ಯಮದ ಶಿಲ್ಪಗಳು ಕೆಲವು ದೇವಾಲಯದಲ್ಲಿ ಮರದ ಮೂರ್ತಿಗೆ ಲೋಹವನ್ನು ಅಂಟಿಸಿರುವುದು ಕಂಡುಬರುತ್ತದೆ. ಇನ್ನೂ ಕೆಲವು ದೇವಾಲಯಗಳಲ್ಲಿ ಕಲ್ಲಿನ ಮೂರ್ತಿಗಳಿಗೆ ಬೆಳ್ಳಿ, ಬಂಗಾರ, ಹಿತ್ತಾಳೆ ಹಾಗೂ ಅಲ್ಯೂಮಿನಿಯಂ ಇತ್ಯಾದಿ ಲೋಹ ಮಾಧ್ಯಮದ ಮೂರ್ತಿಗಳನ್ನು ಸಗರನಾಡಿನ ದೇವಾಲಯದಲ್ಲಿ ಮತ್ತು ಶ್ರೀಮಂತ ಕುಟುಂಬದ ಮನೆಯ ಜಗಲಿನಲ್ಲಿ, ಕೆಲವು ವಸ್ತುಸಂಗ್ರಹಾಲಯದಲ್ಲಿ ನಾವು ಕಾಣಬಹುದು. ಸಗರನಾಡಿನ ಶ್ರೀಮಂತ ಸಂಪ್ರದಾಯವಿರುವ ಈ ಸಗರನಾಡಿನ ಕಲೆ, ಸಾಹಿತ್ಯ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ಜನಪದ ಕಲೆ ಹೀಗೆ ಹಲವಾರು ಬಗೆಯ ಕಲೆಗಳು ಸಗರನಾಡಿನ ಭವ್ಯ ಸಂಪ್ರದಾಯದಲ್ಲಿ ಅಡಗಿದೆ. ಶಿಲ್ಪಕಲಾ ಕೃತಿಗಳಲ್ಲಿ ಲೋಹ ಮಾಧ್ಯಮದ ಶಿಲ್ಪಗಳು ಬಹಳ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ.

ಅದೇ ರೀತಿ ಇದನ್ನು ನಿರ್ಮಿಸುವ ಕಲಾವಿದರು ಕಡಿಮೆ ಪ್ರಮಾಣದಲ್ಲಿರುವರು. ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಕಂಪ್ಯೂಟರ್ ಯುಗಕ್ಕೆ ತಕ್ಕಂತೆ ಕಲಾವಿದನೂ ತನ್ನ ಕಲೆಯನ್ನು ಯಂತ್ರದ ಮುಖಾಂತರ ಮೂರ್ತಿಯನ್ನು ರಚಿಸುತ್ತಿರುವುದು ವಿಶೇಷತೆಯೆನಿಸುತ್ತದೆ ಮತ್ತು ಈ ಕಲೆಯಲ್ಲಿ ಕಂಡುಕೊಂಡ ಬೆಳವಣಿಗೆಯೆಂದೂ ಹೇಳಬಹುದು. ಯಂತ್ರದ ಮುಖಾಂತರ ಜನರು ಮೆಚ್ಚುವಂತ ಲೋಹದ ಮೂರ್ತಿಯನ್ನು ಕೆಲವೇ ತಾಸುಗಳಲ್ಲಿ

ರಚಿಸಿ ಜನರಲ್ಲಿ ಭಕ್ತಿ, ಶ್ರದ್ಧೆ, ನಂಬಿಕೆ, ಭಯ ಮೂಡುವಂತೆ ಅವುಗಳ ಹಾವ-ಭಾವಗಳನ್ನು ಕಲಾತ್ಮಕವಾಗಿ ನಿರ್ಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಗರನಾಡಿನಲ್ಲಿ ಕಂಡುಬಂದ ಲೋಹ ಮಾಧ್ಯಮದ ಶಿಲ್ಪಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೦೧. **ಕಂದುಕೂರ ಗ್ರಾಮದ ಗ್ರಾಮ ದೇವತೆ ಶ್ರೀ ಕೊಂಡೇಮ ದೇವಿ ದೇವತಾ ಶಿಲ್ಪಗಳ ವಿವರ ಮತ್ತು ಆಚರಣೆಗಳು.**

ಯಾದಗಿರ ಜಿಲ್ಲೆ ಯಾದಗಿರ ತಾಲೂಕು ಕೇಂದ್ರದಿಂದ ೩೦ ಕೀ.ಮಿ ದೂರದ ಪೂರ್ವ ದಿಕ್ಕಿಗೆ ರಾಮಸಮುದ್ರ ಕಂದಕೂರ ಹೈದ್ರಾಬಾದ ಮುಖ್ಯ ರಸ್ತೆಗೆ ಹೊಂದುಕೊಂಡಿದೆ ಈ ಕಂದು ಕುರ ಗ್ರಾಮವು ದೊಡ್ಡ ಗ್ರಾಮವಾಗಿದೆ ಈ ಗ್ರಾಮದ ಗ್ರಾಮ ದೇವತೆ ಶ್ರೀ ಕೊಂಡೇಮ ದೇವಿ ಪ್ರತಿ ವರ್ಷ ನಾಗರ ಪಂಚಾಮಿಯ ದಿನ ದೇವಿ ಪಲ್ಲಕ್ಕಿ ಗಂಗಾ ಸ್ನಾನಕ್ಕೆ ಹೋಗಿ ಸಂಜೆಗೆ ಗುಡ್ಡದಲ್ಲಿರುವ ಮಾಹಾಮೈಹಿಮೆ ಶ್ರೀ ಕೊಂಡೇಮ ದೇವಿ ಗುಡಿ ಬರುತ್ತಾಳೆ. ಈ ಗುಡಿಯ ಊರಿನಿಂದ ೧ ಕೀ. ಮಿ ದೂರದ ಎತ್ತರದ ಗುಡ್ಡದಲ್ಲಿ ಶ್ರೀ ಮಹಾಮೈಹಿಮೆ ಶ್ರೀ ಕೊಂಡೆಮ್ಮ ದೇವಿ ನೆಲಸಿದ್ದಾಳೆ. ಗುಡಿಯ ಪೂರ್ವ ದಿಕ್ಕಿಗೆ ಮುಖ್ಯ ದ್ವಾರ ಬಾಗಿಲು ಇದು ಈ ಗುಡಿಗೆ ಚತ್ತು ಹಾಕಿಸಿದ್ದಾರೆ, ಗುಡಿಯ ಮೇಲ್ಭಾಗ ಗೋಪುರವಿದೆ ಆದರೆ ಗೋಪುರು ಸುತ್ತಾಹ ಯಾವುದೇ ದೇವರ ಮೂರ್ತಿ ಮಾಡಿಲ್ಲ

ಮೂರ್ತಿ ವಿವರ : ಶ್ರೀ ಮೆಹಾಮೈಹಿಮೆ ಕೊಂಡೇಮ್ಮ ದೇವಿಯ ಮೂರ್ತಿಯು ಬೆಳ್ಳಿಯಿಂದ ಮಾಡಿದ್ದರೆ ಎರಡು ಅಡಿ ಎತ್ತರದ ಮೂರ್ತಿ ಇದೆ ಗರ್ಭ ಗುಡಿಯಲ್ಲಿ ಒಂದು ಕಂಚಿನ ಕೊಡ ಇದೆ ಆ ಕೋಡದ ಮೇಲೆ ಒಂದು ತೆಂಗಿನ ಕಾಯಿ ಇದೆ ದೇವಿ ಫೋಟೊ ಗರ್ಭ ಗುಡಿಯಲ್ಲಿ ಹಾಕಿಸಿದ್ದಾರೆ. ದೇವಿ ಗುಡಿಯ ಹೊರ ಅಂಕಣದಲ್ಲಿ ಒಂದು ನಂದಿ ಮೂರ್ತಿ ಇದೆ ದೇವಿ ಮುಂದು ಪಾದಗಟ್ಟಿ ಇರಬಹುದು ಒಂದು ಸಣ್ಣ ಗುಡಿ ಇದೆ ಆ ಸಣ್ಣ ಗುಡಿಯಲ್ಲಿ ಭಕ್ತರ ಕಾಯಿ ಕೋಡುತ್ತಾರೆ, ಒಂದು ದೊಡ್ಡ ಮರವಿದೆ(ಗಿಡ) ಸಧಾ ನೇರಳಿನಿಂದ ಗುಡಿಯ ಮುಂದೆ ವಿಶಾಲವಾದ ಗುಡ್ಡ ಆ ಗುಡ್ಡದ ಮೇಲೆ ನಿಂತ್ತು ನೊಡಿದರೆ ಸುತ್ತಾ ಹತ್ತಾರು ಊರುಗಳು ಕಾಣುಬಹುದು.

ಶ್ರೀ ಕೊಂಡೆಮ್ಮ ದೇವಿ ವಿಶೇಷ ಮೈಹಿಮೇ : ಶ್ರೀ ಕೊಂಡೆಮ್ಮ ದೇವಿಯ

ವಿಶೇಷವೆಂದರೆ ಇಲ್ಲಿ ಗುಡ್ಡದಲ್ಲಿ ಸಾವಿರಾರು ಜೀವಂತ ಚೇಳುಗಳು ನಾಗರ ಪಂಚಮಿಯ ದಿನ ಅಂದರೆ ಶ್ರೀ ಕೊಂಡೇಮ್ಮ ದೇವಿ ಪಲ್ಲಕ್ಕಿ ದಿನ (ಜಾತ್ರೆ ದಿನ) ಯಾವುದೇ ಒಂದು ಚೇಳು ಭಕ್ತರಿಗೆ ಕಚ್ಚುವುದಿಲ್ಲ ಇದು ಸತ್ಯ ಇಲ್ಲಿ ಸಾವಿರಾರು ಜೀವಂತ ಚೇಳುಗಳು ವಿಷ ಕೊಂಡ್ಡಿ ಇದ್ದು ಸಹ ಕೈ ಮೇಲೆ ಕಾಲು ಮೇಲೆ ಹಣೆ ಮೇಲೆ ಭಕ್ತರು ಅವುಗಳನ್ನು ಕೈಯಿಂದಲ್ಲೆ, ಇಡಿದು ಭಕ್ಕಿಯಿಂದ ದೇವಿ ಸತ್ಯ ಪರೀಕ್ಷೆ ಮಾಡುತ್ತಾರೆ.

ದೊಡ್ಡ ಚೇಳು, ಸಣ್ಣ ಚೇಳು ಯಾವುದೆ ಕೆಂಪು, ಚೇಳು. ಕರಿಚೇಳು ಆ ದಿನ ಕಚ್ಚುವಿದಿಲ್ಲ. ಇದು ಸಾವಿರಾರು ಭಕ್ತರ ನಂಬಿಕೆ ಮತ್ತು ಸತ್ಯವಾಗಿದೆ ನಾನು ಈ ಸತ್ಯ ತಿಳಿಯಲು ದೇವಿ ಗುಡಿಗೆ ಹೋಗಿ ಕೈಮುಗಿದು ಬೇಡಿಕೊಂಡು ಇಲ್ಲಿ ನೋಡುತ್ತೆನೆ ಒಂದು ಕಲ್ಲು ತೆಗೆದರೆ ಸಾಕು ಆ ಕಲ್ಲಿನ ಕೆಳಗೆ ಒಂದು ಎರಡು ಚೇಳುಗಳು ಸೀಗುತ್ತವೆ. ಸಣ್ಣವು ದೋಡ್ಡವು ಕೊಂಡಿ ಇರುವ ಚೇಳು ಕೊಂಡಿಗೆ ಮುಳ್ಳು ಇರುತ್ತದೆ ಆ ಮುಳ್ಳು ಇದ್ದರು ಸಹ ದೇವಿಯ ಶಕ್ತಿಯಿಂದ ಆ ಯಾವುದೇ ಒಂದು ಚೇಳು ಭಕ್ತರಿಗೆ ಕಚ್ಚುವುದಿಲ್ಲ ಅಂದರೆ ದೇವಿ ಮಹಿಮೆ ಎಷ್ಟು ನೀವೆ ತಿಳಿಯಿರಿ.

ಈ ಕಂಪ್ಯೂಟರ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ ಫಾಕ್ಸ, ಮೇಸೆಜ ಖಿ.ಗಿ. ಮೊಬೈಲ ಈ ೨೧ನೇಯ ಶತಮಾನದಲ್ಲಿ ದೇವಿ ಶಕ್ತಿ ಇದೆ ಎಂದರೆ ನಾವು ಎಲ್ಲರು ನಂಬಲೇಬೇಕು. ಕೈಯಿಂದ ಮುಟ್ಟಿ ನೋಡಿದೆ, ಸಣ್ಣ ಮಕ್ಕಳು, ಮಹಿಳೆಯರು ಹಿರಿಯರು ಎಲ್ಲರು ಈ ಚೇಳುಗಳನ್ನು ಕೈಯಿಂದ ಹಿಡಿದು ನೋಡುತ್ತಾರೆ ಆ ಊರಿನ ಭಕ್ತರು ಅವುಗಳು ಇಡಿದು ಭಕ್ತರಿಗೆ ಕೈಗೆ ಕೋಟ್ಟು ತೋರಿಸುತ್ತಾರೆ, ಗುಡ್ಡದ ಸಣ್ಣ ಸಣ್ಣ ಕಲ್ಲಿನಲ್ಲಿ ಅವುಗಳು ಹುದುಗಿಕೊಂಡಿರುತ್ತವೆ (ನೆಲಸಿ ಕೊಂಡಿರುತ್ತಾವೆ).

೦೨. ಶ್ರೀ ಎಲ್ಲಮ್ಮದೇವಿ ಸಿಂಗನಹಳ್ಳಿ, ವಿರಟನಾಳ

ಕಲಬುರಗಿ ಜಿಲ್ಲೆ ಜೇವರ್ಗಿ ತಾಲೂಕಿನ ದಕ್ಷಿಣ ದಿಕ್ಕಿಗೆ ೪೦ ಕಿ.ಮಿ. ದೂರದಲ್ಲಿ ಚಿಗರಹಳ್ಳಿ, ಮುಖ್ಯ ರಸ್ತೆಯಿಂದ ಮದ್ರಿಕಿ ಮಾರ್ಗವಾಗಿ ಪಡದಹಳ್ಳಿ ಕ್ರಾಸ್ ಬಂದರೆ ಅಲ್ಲೆ ಸಿಂಗನಹಳ್ಳಿ ಶ್ರೀ ಎಲ್ಲಮ್ಮ ದೇವಿ ಗುಡಿ ಇದೆ. ಇದು ಶಹಾಪೂರ ತಾಲೂಕಿನಿಂದ ಕೇವಲ ೧೫ ಕಿಮೀ. ದೂರ ಸಿಂಗನಹಳ್ಳಿ ಗ್ರಾಮ ಬರುತ್ತದೆ. ಶಹಾಪೂರ ತಾಲೂಕಿನಿಂದ

ಭೀಮನರಾಯನಗುಡಿ ಮತ್ತು ಗೋಗಿ ಮಾರ್ಗವಾಗಿ ಗೋಗಿ ಪೇಠ ಬಸ್ ನಿಲ್ದಾಣದಿಂದ ನೇರವಾಗಿ ಸಿಂಗನಹಳ್ಳಿ ಗ್ರಾಮಕ್ಕೆ ಹೋದರೆ ಅಲ್ಲೆ ಶ್ರೀ ಎಲ್ಲಮ್ಮ ದೇವಿ ದರ್ಶಣ ಪಡೆಯಬಹುದು.

ಶ್ರೀ ಎಲ್ಲಮ್ಮ ದೇವಿ ಮೂರ್ತಿ ವಿವರ : ಶ್ರೀ ದೇವಿ ಮೂರ್ತಿಯು ಗೋಗಿ ಪಂಚಳದವರಾದ ಶ್ರೀ ಪ್ರಕಾಶ ಪತ್ತಾರ ಇವರು ೧ ಕೆಜಿ ತೂಕದ ಬೆಳ್ಳಿಯಲ್ಲಿ ಸುಂದರವಾಗಿ ಕಣ್ಣು, ಕ್ವಿಮಿ, ಮೂಗು, ಉಬ್ಬು, ತಲೆಗೆ ಕಿರಟ ಇಟ್ಟಿದ್ದಾರೆ ಮತ್ತು ಕಿವಿಯಲ್ಲಿ ಓಲೆ ಹಾಕಿದ್ದು ಕಣ್ಣುಗಳು ನೋಡಿದರೆ ದೇವಿ ನಮ್ಮನ್ನೆ ನೋಡುತ್ತಿರುವಂತೆ ಸುಂದರವಾಗಿ ದೇವಿ ಮೂರ್ತಿಯನ್ನು ಪದ್ದತಿಯಂತೆ ಮಾಡಿ ತಾಯಿ ಕೃಪೆಗೆ ಪಾತ್ರರಾಗಿದ್ದಾರೆ. ಈ ಶಿಲ್ಪಿಗಳು ಮೂಲ ಕಸಬು ಬೆಳ್ಳಿ ಬಂಗಾರ ಒಡವೆಗಳು ತಯಾರು ಮಾಡುತ್ತಾರೆ ಅದರಂತೆ ಶ್ರೀ ಎಲ್ಲಮ್ಮ ದೇವಿ ಮೂರ್ತಿ ಜನರು ಮೆಚ್ಚುವಂತೆ ಮಾಡಿದ್ದಾರೆ.

ಶ್ರೀ ಎಲ್ಲಮ್ಮ ದೇವಿ ಹರಿಕೆ : ಶ್ರೀ ಎಲ್ಲಮ್ಮ ದೇವಿಗೆ ಹರಕೆಯನ್ನು ಗುಡಿಯ ಮುಂದೆ ಒಂದಿಷ್ಟ ಸ್ಥಳದಲ್ಲಿ ಗುಡಿಯ ಮುಂದೆ ಇರುವ ಬಾವಿಯಲ್ಲಿ ನೀರು ತಂದು ಹರಕೆ ಹಿಡಿದವರ ಮೇಲೆ ಹಾಕುತ್ತಾರೆ ಹರಕೆ ಬೇಡಿಕೊಂಡವರು ದೀಡ್ ನಮಸ್ಕಾರ ಹಾಕುತ್ತಾರೆ. ಅವರ ಹಿಂದೆ ಜೋತಿ ಹೊತ್ತವರು ಮತ್ತು ಬರೆಮೈಯಲ್ಲಿ ಬೇವಿನ ಸೋಪ್ಪು ಸೀರೆಯಂತೆ ಕಟ್ಟಿಕೊಂಡು ಹಿಟ್ಟಿನ ಆರತಿ ಸೇವೆ, ಎಲ್ಲಮ್ಮ ದೇವಿಗೆ ತಮ್ಮ ಕಷ್ಟಗಳೂ ದೂರವಾದವರು ಬೇವಿನ ಸೀರೆಯನ್ನು ಉಟ್ಟು ದೇವಿಯ ಗುಡಿಯನ್ನು ಐದು ಸುತ್ತು ತಿರುಗಿ ಬೇವಿನ ಸೀರೆಯನ್ನೂ ಕಳಚಿ ದೇವಿಗೆ ಪೂಜೆ ಮಾಡುವರು ತಂಬಿಟ್ಟಿನಿಂದ ದೀವಪನ್ನು ಹಚ್ಚಿಕೊಂಡು ಒಂದು ತಟ್ಟೆಯಲ್ಲಿಟ್ಟು ಅದನ್ನು ಬೇವಿನ ಸೋಪ್ಪು ಹೂವಿನ ಅಲಂಕಾರ ಮಾಡಿ ತಲೆಯ ಮೇಲೆ ಹಿಟ್ಟಿನ ಆರತಿ ಹೊತ್ತು ದೇವಿಗೆ ತಮ್ಮ ಹರಕೆ ಸಲ್ಲಿಸುತ್ತಾರೆ.

ದೀವಂಟಿಗೆ (ಬೆಳಕು) ವಿವರ : ಇದು ಒಣ (ಬಡಿಗೆ) ಕಟ್ಟಿಗೆಯಿಂದ ೫ ಅಡಿ ಉದ್ದ ಇದ್ದ ಕಟ್ಟಿಗೆಯನ್ನು ತೇಗೆದುಕೊಂಡು ಆ ಕಟ್ಟಿಗಿಗೆ ಹಳೆಯ ಬಟ್ಟೆಗಳನ್ನು ಸುತ್ತುತ್ತಾರೆ ಅದು ದಪ್ಪ ಆಗುವರಿಗೆ, ಹಳೆ ಬಟ್ಟೆ ಸುತ್ತಿದ ನಂತರ ಆ (ಬಡಿಗೆ) ಕಟ್ಟಿಗೆಯನ್ನು ಎಣ್ಣೆಯಲ್ಲಿ (ತೆಂಗಿನ ಎಣ್ಣೆ ಇತರೆ ಎಣ್ಣೆಯಲ್ಲಿ) ತೋಯ್ದು ಸಂಪೂರ್ಣ ತ್ಯೊದು ಮೇಲೆ

ಆ (ಬಡಿಗೆಗೆ) ಕಟ್ಟಿಗಿಗೆ ಕಡ್ಡಿಯಿಂದ ದೀಪ ಹಚ್ಚುತ್ತಾರೆ. ಅದೇ ದೀಪದ ಬೆಳಕಿನಿಂದ ಎಲ್ಲಮ್ಮ ದೇವಿ ಪಲ್ಲಕ್ಕಿಯನ್ನು ಗಂಗಾಸ್ನಾನದ ನಂತರ ರಾತ್ರಿ ೭:೩೦ ರಿಂದ ದೀವಂಟಿಗೆ ಬಳಸುತ್ತಾರೆ. ಇವು ಸುಮಾರು ೮:೧೦ ದೀವಂಟಿಗೆಗಳು ಇರುತ್ತವೆ.

೦೩. ಶ್ರೀ ಎಲ್ಲಮ್ಮ ದೇವಿ, ಶಹಾಪೂರ ತಾಲೂಕು

ಈ ಸಗರನಾಡಿನ ಪ್ರಸಿದ್ಧಿ ಹೊಂದಿದ ಗ್ರಾಮ ದೇವತೆಯು ಶಹಾಪೂರು ತಾಲೂಕಿನಿಂದ ೩೦ ಕಿ.ಮಿ ದೂರದಲ್ಲಿ ನೈರುತ್ತ್ಯ ದಿಕ್ಕಿನಲ್ಲಿ ೨ ಮಾರ್ಗಗಳಿವೆ ೧ ಮಾರ್ಗ ಶಹಾಪೂರದಿಂದ ರಸ್ತಾಪೂರು ಮಾರ್ಗವಾಗಿ ದೊಡ್ಡ ಸಗರ ಗಂಗನಾಳ ಕ್ರಾಸ್ ದಿಂದ ನೇರವಾಗಿ ಎಲ್ಲಮ ದೇವಿ ಗುಡ್ಡಕ್ಕೆ ಹೋಗುತ್ತಾರೆ, ಇನ್ನೊಂದು ಮಾರ್ಗ ವೆಂದರೆ ಶಹಾಪೂರದಿಂದ ಭೀ ಗುಡಿ, ದಿಗ್ಗಿ, ಸೈದಾಪೂರು ಬಾಳತಿಹಾಳ, ನಾಗನಟಿಗಿ ಧರಿಯಾಪೂರು ದಿಂದ ನೇರವಾಗಿ ಶ್ರೀ ಎಲ್ಲಮ್ಮ ದೇವಿ ದೇವಸ್ಥಾನಕ್ಕೆ ಹೋಗುತ್ತಾರೆ.

ಈ ಎಲ್ಲಮ್ಮದೇವಿ ಗುಡ್ಡಕ್ಕೆ ಇನ್ನೊಂದು ಮಾರ್ಗವಿದೆ ಸುರುಪೂರು ತಾಲೂಕಿನಿಂದ ಲಕ್ಷಂಪೂರು, ಕೃಷ್ಣಪೂರು ಮಾರ್ಗವಾಗಿ ಶಾರದಹಳ್ಳಿ, ಸಗರ ಮಹಲ್ ರೋಜಾ, ಯಕ್ಕಿಗಡ್ಡಿ ಗ್ರಾಮದಿಂದ ಬರಬಹುದು ಹಾಗೂ ಮಹಲ್ ರೋಜಾದಿಂದ ಬರಬಹುದು. ಈ ದೇವಿ ದೇವಸ್ಥಾನಕ್ಕೆ ಶಹಾಪೂರು ತಾಲೂಕಿನಿಂದ ಮತ್ತು ಸುರುಪೂರು ತಾಲುಕಿನಿಂದ ಬರಲು ಮಾರ್ಗವಿದೆ ಹಾಗೂ ಬಸ್ಸಿನ ಅನುಕುಲವಿದೆ, ಒಳ್ಳೆಯ ರಸ್ತೆ ಇದೆ, ಒಳ್ಳೆಯ ವಿಶಾಲವಾದ ಮತ್ತು ಪ್ರಶಾಂತಿಯಾದ ಗುಡ್ಡದಲ್ಲಿ ಶ್ರೀ ಎಲ್ಲಮ್ಮ ದೇವಿ ನೆಲೆಸಿದ್ದಾಳೆ. ಇದು ಪ್ರವಾಸಿಗರ ತಾಣವಾಗಿದೆ. ಮೊದಲಿಗೆ ಎಲ್ಲಮ್ಮ ದೇವಿಯ ಸ್ವಾಗತ ಕಮಾನು ಬರುತ್ತದೆ. ಮುಂದೆ ಸಾಗಿದರೆ ಎಲ್ಲಮ್ಮ ದೇವಿ ಗುಡಿ ಇದೆ. ಇಲ್ಲೀಯೂ ಸ್ವಾಗತ ಕಮಾನು ಇದೆ.

ಶ್ರೀ ಎಲ್ಲಮ್ಮ ದೇವಿ ಜಾತ್ರೆಯ ಪಲ್ಲಕ್ಕಿ ವಿವರ : ಪ್ರತಿ ವರ್ಷ ಫೆಬ್ರುವರಿ ತಿಂಗಳಲ್ಲಿ ಈ ಪ್ರಸಿದ್ಧಿ ಹೊಂದಿದ್ದ ದೇವತೆ ಜಾತ್ರೆ ಬಹಳ ವಿಜ್ರಮಣೆಯಿಂದ ನಡೆಯುತ್ತಿದೆ ಈ ಜಾತ್ರೆಯಲ್ಲಿ ಸುಮಾರು ೨೦ ಸಾವಿರ ಜನಸಂಖ್ಯೆ ಸೇರುತ್ತಾರೆ ಈ ಜಾತ್ರೆಯ ಗುಡಾರಗಳು, ವಿವಿಧ ಭಗಯ ಜಾತ್ರೆಯ ಅಂಗಡಿಗಳು ಇರುತ್ತವೆ. ಹೆಣ್ಣು ಮಕ್ಕಳಿಗೆ ಸಾಕಷ್ಟು ಸಾಮಗ್ರಿಗಳು ಈ ಜಾತ್ರೆಯಲ್ಲಿ ಸಿಗುತ್ತವೆ, ಬಳೆಗಳು ಕಿವಿಯಲ್ಲಿರುವ ಓಲೆಗಳು ವಿವಿಧ ಬಗ್ಗೆ ಬಣ್ಣ ಬಣ್ಣದ

ಸಾಮಗ್ರಿಗಳು ಇರುತ್ತವೆ ಚಿಕ್ಕ ಮಕ್ಕಳಿಗೆ ಸಾಕಷ್ಟು ಬಣ್ಣ ಬಣ್ಣದ ಆಟದ ಗೊಂಬೆಗಳು ಸಿಗುತ್ತವೆ ಗುಡಿಯ ಸಮಿತಿಯವರು ನೀರಿನ ವ್ಯವಸ್ಥೆ ಮಾಡಿರುತ್ತಾರೆ ಮತ್ತು ಅನ್ನ ಪ್ರಸಾದ ವ್ಯವಸ್ಥೆಯೂ ಇರುತ್ತದೆ. ಸುಮಾರು ೪ ದಿನಗಳ ಕಾಲ ಈ ಜಾತ್ರೆ ಬಹಳ ವಿಜ್ರಂಭಣೆಯಿಂದ ನಡೆಯುತ್ತದೆ. ಇಲ್ಲಿ ಜಾಗ ಸಾಕಗಷ್ಟು ಇದ್ದು ಭಕ್ತರು ತಮ್ಮ ಜಾಗ ಗೂರ್ತಿಸಲು ಮೇಲಭಾಗ ಟೆಂಟ ಹಾಕುತ್ತಾರೆ ಮತ್ತು ತಮ್ಮ ವಾಹನ ಆಶ್ರೆಯ ಪಡೆದು ವಾಹನದ ಮೇಲೆ ಇನ್ನೊಂದು ವಾಹನ ಹಗ್ಗ ದಿಂದ ಟೆಂಟ ಹಾಕಿ ನೇರಳು ಆಶ್ರಯ ಪಡೆದು ದೇವಿ ಕಾರೆ ಮಾಡುತ್ತಾರೆ.

ಪ್ರಾಣಿ ಬಲಿ ಕೊಡುವ ಪದ್ದತಿ ಸಂಪ್ರದಾಯ : ಈ ದೇವತೆಗೆ ಬಹಳ ಜನ ಕುರಿ ಬಲಿಕೊಡುವುದು ಸಾಮಾನ್ಯ ಆದರೆ ಇಲ್ಲಿ ಕೆಲವು ಪದ್ದತಿಗಳಿವೆ ಈ ದೇವತೆಗೆ ಬಲಿಕೊಡಲು ಭಕ್ತರು ತಮ್ಮ ಇಷ್ಟದಂತೆ ಆಶೆ ಈಡೇರಿದರೆ ಆ ಈಡೇರಿಸಿದ ಕೆಲಸಕ್ಕೆ ದೇವಿಗೆ ಕೃತಜ್ಞತೆ ಸಲ್ಲಿಸಲು ದೇವಿಗೆ ಕುರಿ ಮರಿ ಬ್ಯಾಟಿ ಬಲಿ ಕೊಡುತ್ತಾರೆ.

ಭಕ್ತರು ಹೆಣ್ಣು ಮಕ್ಕಳು ಗುಡಿಯ ಮುಂದೆ ಒಂದು ಜಾಗದಲ್ಲಿ ಸ್ಥಳ ಪಡೆದು ಅಲ್ಲಿಂದ ದೇವಿಗೆ ತುಂಬಿದ ಕೊಡದ ನೀರು ತಂದು ಆ ಹೆಣ್ಣು ಮಗಳಿಗೆ ಮೇಲೆ ಹಾಕಿ ತೋಯಿದ ಬಟ್ಟೆಯಲೇ ದೇವಿಗೆ ದೀಡನಮಸ್ಕಾರ ಹಾಕುತ್ತಾಳೆ ಒಬ್ಬ ಹೆಣ್ಣು ಮಗಳು ತಲೆಯ ಮೇಲೆ ಜೋತಿ ಹೋರುತ್ತಾಳೆ ಮತ್ತು ೨ ಕುರಿ ಮರಿಯನ್ನು ಅವುಗಳಿಗೂ ಕೊಡದಿಂದ ನೀರು ಹಾಕಿ ಕೊರಳಲ್ಲಿ ಹೂವಿನ ಹಾರ ಹಾಕುತ್ತಾರೆ ಮತ್ತು ಕುರಿ ಮರಿಗೆ (ಓತ್ತು ಮರಿ) ಹಣೆಗೆ ಬಂಡಾರ ಹಚ್ಚಿ ಹಲಗೆ, ಡೊಳ್ಳುಗಳೊಂದಿಗೆ ದೇವಿಯ ಗುಡಿಯ ಕಡೆ ಹೆಜ್ಜೆ ಹಾಕುತ್ತಾರೆ ಈ ದೇವರು ಮಾಡುವರ ಒಂದು ಗುಂಪು ಇರುತ್ತದೆ ಈ ದೇವರು ಮಾಡುವರು ಬಂಧುಗಳು ಬಿಗರು ಅಣ್ಣ ತಮ್ಮಂದಿರು ಅಕ್ಕ ತಂಗಿಯ ತಂದೆ-ತಾಯಿ ಬಂಧು ಬಳಗದವರು ಎಲ್ಲರು ಕೂಡಿರುತ್ತಾರೆ. ಈ ದೇವರು ಮಾಡುವರ ಜೋತೆ ಎಲ್ಲರು ಕೂಡಿ ಜೋತಿಹೋರುವರಿಗೆ ಮತ್ತು ದೀಡನಮಸ್ಕಾರ ಹಾಕುವರಿಗೆ ಅವರ ಭಂದು ಬಳಗದವರ ಹೋಸ ಬಟ್ಟೆಗಳನ್ನು ತಂದಿರುತ್ತಾರೆ. ಈ ದೇವತೆಗೆ ಕುರಿ ಮರಿ ಮತ್ತು ಜೋತಿ ಹೊತ್ತವರು ಹಾಗೂ ದೀಡನಮಸ್ಕಾರ ಹಾಕುವರು ಎಲ್ಲರೂ ತಮ್ಮ ಜಾಗದಿಂದ ದೇವಿಯ ಗುಡಿಯ ಕಡೆ ಹೊರುಡುತ್ತಾರೆ ಹಲಗೆ ಡೋಳು ಬಾರಿಸುತ್ತ ಕೊಡೆ ಹಿಡಿದುಕೊಂಡು ಹೋಗಿ ಅಲ್ಲಿ ಜೋಗುಳ ಹಾಡುಗಳು ಹಾಡುತ್ತಾ ಮಾತಂಗಿ ಮಕ್ಕಳು ಬಂದು ಈ ಭಕ್ತರಿಗೆ ಭಂಡರ ಹಚ್ಚಿ

ದೇವಿ ಹೆಸರಿನಿಂದ ಬೇವಿನ ಸೋಪ್ಪು ಮುಖದ ಮೇಲೆ ಇಳಿಸಿ ಎಲ್ಲರಿಗೂ ಬೇವಿನ ಸೋಪ್ಪು ಇಳಿಸುತ್ತಾರೆ ಎಲ್ಲಾ ಭಕ್ತರು ಸಾಲಾಗಿ ಮತ್ತು ಗುಂಪಾಗಿ ನಿಲ್ಲುತ್ತಾರೆ ಅವಾಗ ಅಲ್ಲಿ ಇದು ಮಹಾ ತಂಗಿ ಮಕ್ಕಳು ಬಂದು ಎಲ್ಲಾ ಭಕ್ತರಿಗೆ ಬೇವಿನ ಸೋಪ್ಪು ಮುಖದ ಮೇಲೆ ಇಳಿಸಿ ಅವರಿಗೆ ಹಣೆಯ ಮೇಲೆ ಬಂಡಾರ ಹಚ್ಚುತ್ತಾರೆ. ಈ ಬಂಡಾರ ಹಚ್ಚುವಾಗ ಕೆಲವು ಭಕ್ತರು ಅವರಿಗೆ ಹಣದ ಕಾಣಿಕೆ ಕೊಡುತ್ತಾರೆ, ೧೦, ೨೦, ೫೦, ೧೦೦ಗೆ ಅವರ ಭಕ್ತಿಯ ಶಕ್ತಿಯ ಸಾಮರ್ಥಕ್ಕೆ ತಕ್ಕಂತೆ ಹಣ ಕೊಡುತ್ತಾರೆ.

ನಂತರ ದೀಡ ನಮಸ್ಕಾರ ಹಾಕಿದ ಹೆಣ್ಣು ಮಗಳಿಗೆ ಬಟ್ಟೆ ಬಿಡುಸುವರು ಮತ್ತು ಜೋತಿ ಹೊತ್ತವರಿಗೂ ಬಟ್ಟೆ ಬಿಡು ಸುವರು ಬಂದು ಬಳಗದವ ದೇವಿಗುಡಿಗೆ ಹೋಗಿ ಕಾಯಿ, ಕರಪೂರು ಹೂ ಅಗರಬತ್ತಿ ಹಚ್ಚಿ ಬರುತ್ತಾರೆ ಅಲ್ಲಿ ಕುರಿ ಮರಿಯನ್ನು ಓತ್ತುಗಳು ಮಹಾತಂಗಿ ಮಕ್ಕಳು ತಮ್ಮ ಹಾಡಿನ ಮುಖಾಂತರ ಆ ಕುರಿ ಮರಿಗೆ ಮಲಗಿಸುವರು ನಂತರ ಆ ಕುರಿ ಮರಿಯ ದೇವಿ ಹೆಸರಿನ ಮೇಲೆ ಕೊಯ್ದು ಕುರಿಮರಿ ಓತುಗಳ ಬಾಯಿಯಲ್ಲಿ ಆದರ ಒಂದು ಕಾಲು ಬಾಯಾಗ ಇಡುತ್ತಾರೆ. ಇಟ್ಟು ಅದರ ಹೆಣೆಗೆ ಭಂಡಾರ ಕುಂಕುಮ ಹಚ್ಚಿ ನಮಸ್ಕಾರ ಮಾಡುತ್ತಾರೆ. ನಂತರ ಅದರ ಮಾಂಸವನ್ನು ಅಲ್ಲಿ ಬಂದಂತಹ ಭಕ್ತರ ಚೌದ್ರಿಯ ಸಹಾಯದಿಂದ ಮಾಂಸಕಂಡಗಳು ಚೂರು ಚೂರು ಮಾಡಿ ಆ ಮೌಂಸ ಕಂಡವನ್ನು ಒಂದು ದೊಡ್ಡ ಬೋಗಣಿಯಲ್ಲಿ ಮಾಂಸದ ಕಂಡಾ ಹಾಕಿ ಅದಕ್ಕೆ ಕಾರ, ಉಪ್ಪು, ಬಳ್ಳೊಳಿ ಇತರೆ ಮಸಾಲ ಸಾಮಗ್ರಿಗಳನ್ನು ಹಚ್ಚಿ ಅಡಿಗೆ ಮಾಡುತ್ತಾರೆ ಅನ್ನಾ ಸಾರು ಹೋಳಿಗೆ ಕಡೂಬು ಶೆಂಗಾದ ಚಟ್ನಿ ಹಲವಾರ ತರತರದ ಪ್ರಸಾದ ಮಾಡಿರುತ್ತಾರೆ.

ಮಾಂಸದ ಅಡಿಗೆ ಮತ್ತು ಹೋಳಿ ಅನ್ನ ಸಾರು ಎಲ್ಲಾವನ್ನು ಒಂದೊಂದ ಪ್ಲೆಟನಲ್ಲಿ (ಗಂಗಾಳ) ತೆಗೆದು ಕೊಂಡು ಎಲ್ಲರು ಭಕ್ತರು ಸೇರಿ ಡೊಳ್ಳು ಹಲಗೆ ಜೊತೆ ತಾಯಿ ಗುಡಿಗೆ ಹೋಗಿ ನೈವೆದ್ಯ ನೀಡುತ್ತಾರೆ ನೈವೆದ್ಯ ನೀಡಿ ಬಂದ ಮೇಲೆ ಎಲ್ಲ ಭಕ್ತರು ತಮ್ಮ ತಮ್ಮ ಬಂಧು ಬಳಗವರು ಬೀಗರು ಬಂದುಗಳು ಸೇರಿ ಈ ದೇವಿ ಗುಡಿಯಲ್ಲಿ ಮಾಂಸದ ಊಟ ಪ್ರಸಾದವೆಂದು ಸೇವಿಸುತ್ತಾರೆ ಕೆಲವರು ಮಾಂಸದ ಊಟ ಮಾಡದವರು ಹೊಳಿ ತುಪ್ಪಾ ಅನ್ನಾ ಸಾರು ಕಡುಬು, ಉಳಗಡಿ ಬದನೆಕಾಯಿ, ಪುಂಡಿ ಪಲ್ಯಾ ಶೆಂಗಾದ

ಚಟ್ನಿ ಹೀಗೆ ಹಲವಾರು ನಮೂನೆಯ ಅಡಿಗೆ ಪದಾರ್ಥ ಮಾಡಿರುತ್ತಾರೆ ಭಕ್ತರು ಇಲ್ಲಿ ಪ್ರಸಾದ ಸೇವಿ ದೇವಿಯ ಕೃಪಾ ಆರ್ಶಿವಾದ ಪಡೆಯುತ್ತಾರೆ. ಇನ್ನೂ ಮೇಲ್ವರ್ಗದವರಾದ, ಲಿಂಗಾಯತರು, ಬ್ರಾಹಮಣರು ಇತರೆ ಮೇಲ್ವರ್ಗದವರು ಈ ದೇವಿಗೆ ಕೇವಲ ಹೋಳಗಿ ತುಪ್ಪಾ ಅನ್ನಾ ಸಾರು, ಸಜ್ಜಿ ಕಡುಬು ಹಸಿ ಉಳಾಗಡ್ಡೆ ಹಸಿ ಬದಿನೆಕಾಯಿ ಪುಂಡಿ ಪಲ್ಯಾ ಶೇಂಗಾದ ಕಾಳು, ಮಾವಿನ ಕಾರ ಹೆಸರು ಕಾಳು, ಅಲಸಂದಿಕಾಳು ಇತರೆ ನಮನೆಯ ಅಡಿಗೆಯನ್ನು ಮನೆಯಲ್ಲೇ ಸಿದ್ದಪಡಿಸಿಕೊಂಡು ಬಂದು ಈ ದೇವಿ ಗುಡಿಯಲ್ಲಿ ಒಂದು ಜಾಗದಲ್ಲಿ ಕುಳಿತ್ತು ಎಲ್ಲರು ಒಟ್ಟಿಗೆ ದೇವಿ ಗುಡಿಗೆ ಹೋಗಿ ಮನೆಯಲ್ಲಿ ಮಾಡಿರುವ ವಿವಿದ ತರದ ಅಡಿಗೆಯ ದೇವಿಗೆ ನೈವಿದೆ ಮಾಡಿ ದೇವಿಗೆ ಕಾಯಿ ಕರಮುರ ತುಪ್ಪದೀಪ ಹಚ್ಚಿ ಆರತಿ ಬೆಳಗಿ ಕೈಮುಗಿದು ಬೇಡಿಕೊಂಡು ಬರುತ್ತಾರೆ ಬಂದ ನಂತರ ತಮ್ಮ ಸ್ಥಳದಲ್ಲಿ ಎಲ್ಲರು ಒಟ್ಟಿಗೆ ಕುಳಿತ್ತು ತಮ್ಮ ಮನೆಯಲ್ಲಿ ಸಿದ್ದಪಡಿಸಿದ ಅಡಿಗೆಯ ಸೇವಿಸುತ್ತಾರೆ.

ನಂತರ ಈ ದೇವಸ್ಥಾನದಲ್ಲಿ ವಿವಿಧ ಬಗೆಯ ಜಾತ್ರೆಯ ಆಟದ ಸಾಮಗ್ರಿಗಳು ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ತೇಗೆದು ಕೋಳುತ್ತಾರೆ ಹೆಣ್ಣು ಮಕ್ಕಳು ಚಿಕ್ಕ ಮಕ್ಕಳು ಹಿರಿಯ ಎಲ್ಲರು ತಮ್ಮ ಇಷ್ಟದ ವಸ್ತುವನ್ನು ತೇಗೆದು ಕೊಳ್ಳುತ್ತಾರೆ ಇದು ದೇವಿಯ ಜಾತ್ರೆಯ ಬರುವ ಮತ್ತು ಜಾತ್ರೆ ಮಾಡುವ ಪದ್ಧತಿಯಾಗಿದೆ.

ಲೋಹ ಮಾಧ್ಯಮದ ದೇವತಾ ಶಿಲ್ಪಗಳು






ಶ್ರೀ ಕೊಂಡೆಮ್ಮ ದೇವಿ, ಕಂದುಕೂರು ಗ್ರಾಮ, ಯಾದಗಿರಿ

ಲೋಹ ಮಾಧ್ಯಮದ ದೇವತಾ ಶಿಲ್ಪಗಳು





ಶ್ರೀ ಸಗರ ಎಲ್ಲಮ್ಮ ದೇವಿ, ದೊಡ್ಡಸಗರ, ಶಹಾಪೂರ ತಾಲೂಕು

ಲೋಹ ಮಾಧ್ಯಮದ ದೇವತಾ ಶಿಲ್ಪಗಳು



ಶ್ರೀ ಲಕ್ಷ್ಮೀ ದೇವಿ (ಕಲ್ಕತ್ತಾ ದೇವಿ), ಜೇವರ್ಗಿ ನಗರ

ಅಧ್ಯಾಯ : ಆರು

ಸಂಕೀರ್ಣ ಮಾಧ್ಯಮದ ಗ್ರಾಮದೇವತೆಗಳು

ಅಧ್ಯಾಯ : ಆರು

ಸಂಕೀರ್ಣ ಮಾಧ್ಯಮದ ಗ್ರಾಮದೇವತೆಗಳು

ಸಗರನಾಡಿನಲ್ಲಿ ಸಂಕೀರ್ಣ ಮಾಧ್ಯಮ ಶಿಲ್ಪಗಳು ಬಹಳ ಕಡಿಮೆ ಯಾಕೆಂದರೆ ಈ ಸಂಕೀರ್ಣ ಮಾಧ್ಯಮದ ಶಿಲ್ಪಗಳು ಕೇವಲ ಹೊಸಮನೆ ಶಾಂತಿ ಮಾಡುವಾಗ (ಗೃಹ ಪ್ರವೇಶ) ಈ ಸಂಕೀರ್ಣ ಮೂರ್ತಿ (ಶಿಲ್ಪ) ಮನೆಗೆ ದೃಷ್ಟಿ ತಾಕಬಾರದೆಂದು ಈ ಸಂಕೀರ್ಣ ಶಿಲ್ಪಗಳು ಮನೆಯ ಮುಂದೆ ಗೋಡೆಗೆ ಹಾಕುತ್ತಾರೆ ಈ ಶಿಲ್ಪವು ಮನೆಯ ದೋಷ ಮುಕ್ತಾ ಮಾಡುವವೆಂದು ಜನರ ನಂಬಿಕೆ ಆದ್ದರಿಂದ ಈ ಸಂಕೀರ್ಣ ಮಾಧ್ಯಮದ ಶಿಲ್ಪಿಗಳು ಹಾಕುತ್ತಾರೆ. ನಮ್ಮ ಸಗರನಾಡಿನ ಜನರು ಮತ್ತು ರೈತರು ತಮ್ಮ ಹೊಲಗಳಲ್ಲಿ ಸಂಕೀರ್ಣ ಮಾಧ್ಯಮದ ಶಿಲ್ಪಗಳು ಹಾಕುತ್ತಾರೆ. ಮೆಣಸಿನ ಕಾಯಿ ಹೊಲಗಳಲ್ಲಿ ಬೆಂಡಿಕಾಯಿ ಟೊಮಟ ಹೆಣ್ಣಿನ ಹೊಲಗಳಲ್ಲಿ ಮತ್ತು ಶೆಂಗಾದ ಹೊಲಗಳಲ್ಲಿ ಕಡಲೆಕಾಯಿ ಹೊಲಗಳಲ್ಲಿ ಹಳ್ಳಿಯ ಜನರು ತಮ್ಮ ಕಲಾತ್ಮಕ ಭಾವನೆಯಿಂದ ಹಳೆ ಅಂಗಿ, ಹಳೆ ಚಣ್ಣ(ಪ್ಯಾಂಟ್) ಇವುಗಳನ್ನು ಬಳಸಿ ಹಳೆ ವಸ್ತ್ರಗಳ ಹಳೆ ಬಟ್ಟೆಗಳನ್ನು ಅವುಗಳಲ್ಲಿ ಹಾಕಿ ತುಂಬುತ್ತಾರೆ ತುಂಬಿದ ನಂತರ ಸೂಜಿ, ದಾರದೊಂದಿಗೆ ಹೊಲೆಯುತ್ತಾರೆ. ಅದು ಮನುಷ್ಯ ರೂಪದಂತೆ ಕಾಣುತ್ತದೆ. ಮುಖಕ್ಕೆ ಹಳೆ ಕುಂಬಾರ ಗಡಗಿ ಅದರ ಮೇಲೆ ಇಡುತ್ತಾರೆ. ಇಲ್ಲದಿದ್ದರೆ ಇದು ಸಹ ಹಳೆ ಬಟ್ಟೆಯಿಂದ ಮುಖವನ್ನು ದುಬ್ಬು ತರಹ ಮಾಡಿ ಸೂಜಿ ದಾರ ಜೊತೆ ಹೊಲೆದು ರೈತರು ತಮ್ಮ ಹೊಲಗಳಲ್ಲಿ ನೆತ್ತು ಹಾಕುತ್ತಾರೆ.

ಈ ಭಾಗದ ರೈತರು ತಮ್ಮ ಹೊಲಗಳಿಗೆ ಯಾರು ಕಳ್ಳರು, ಕಾಡು ಪ್ರಾಣಿಗಳು ಹೊಲಗಳಿಗೆ ನುಗ್ಗಿ ಬೆಳೆ ಹಾಳು ಮಾಡುವುದು ಮತ್ತು ಕಳ್ಳರು ಹೊಲದಲ್ಲಿರುವ ದವಸ ದಾನ್ಯಗಳನ್ನು ಕಳ್ಳತ್ತನವಾಗಬಾರದೆಂದು ರೈತರು ತಮ್ಮ ಕಲಾತ್ಮಕವಾಗಿ ಗೊಂಬೆಯನು ರಚನೆ ಮಾಡಿರುತ್ತಾರೆ. ಆ ಗೊಂಬೆಯನ್ನು ನೋಡಿದರೆ ಕಳ್ಳರು ಯಾರೋ ಹೊಲದಲ್ಲಿ ಇದ್ದಾರೆ ಎಂದು ಭಾಪಿಸುವಂತೆ ಕಾಣುತ್ತದೆಂದು ರೈತನ ಭಾವನೆಯಾಗಿರುತ್ತದೆ. ಅದೇ ರೀತಿಯಾಗಿ ಕಾಡು ಪ್ರಾಣಿಗಳಾದ ನರಿ ನಾಯಿ, ಕಾಡು ಹಂದಿ ತೋಳ ಬೆಕ್ಕು ಆನೆ, ಇತರೆ ಕಾಡು ಪ್ರಾಣಿಗಳು ಈ ಗೊಂಬೆಯನ್ನು ನೋಡಿದರೆ ಭಯವಾಗಲೆಂದು ರೈತನು ಈ ಗೊಂಬೆಯನ್ನು ಹೊಲದಲ್ಲಿ ಒಂದು ಕಟ್ಟಿಗೆ ನೆತು ಹಾಕಿ ಕಟ್ಟಿರುತ್ತಾನೆ. ಕಾಡು ಪ್ರಾಣಿಗಳು ಇದರಿಂದ ದೂರ ಇರುತ್ತವೆ ಹೊಲಗಳಿಗೆ ನುಗ್ಗುವುದಿಲ್ಲ. ಬೆಳೆ ಹಾನಿ ಮಾಡುವುದಿಲ್ಲ. ನಮ್ಮ ಸಗರನಾಡಿನ ರೈತರು ಈ ಸಂಕೀರ್ಣ ಮೂರ್ತಿಯ ಒಂದು ಕಥೆ ಕಟ್ಟಿದ್ದಾರೆ ಅದು ಬಹಳ ಅರ್ಥ ಪೂರ್ಣವಾಗಿದೆ.

ಸಂಕೀರ್ಣ ಮಾಧ್ಯಮದ ಶಿಲ್ಪಗಳು





ರಕ್ಷಣಾ ದೇವತೆ (ಗೊಂಬೆ), ಚಂದಾಪೂರ, ಶಹಾಪೂರ ತಾಲೂಕು

ಅಧ್ಯಾಯ : ಏಳು

ಸಗರನಾಡಿನ ಪ್ರಮುಖ ಗ್ರಾಮೀಣ ಶಿಲ್ಪಕಲಾವಿದರು

ಅಧ್ಯಾಯ : ಏಳು

ಸಗರನಾಡಿನ ಪ್ರಮುಖ ಗ್ರಾಮೀಣ ಶಿಲ್ಪಕಲಾವಿದರು

೭.೧. ಸಗರನಾಡಿನ ಶಿಲಾಮಾಧ್ಯಮದ ಶಿಲ್ಪಕಲಾವಿದರು

೭.೧.೧. ಶ್ರೀ ಸುರೇಂದ್ರ ಕೆ. ವಿಶ್ವಕರ್ಮ

ಸಗರನಾಡಿನ ಮತ್ತು ಕೊಳ್ಳೂರು ಗ್ರಾಮದವರು. ಇವರ ಶಿಲ್ಪಗಳು ಅತ್ಯಂತ ಸೂಕ್ಷ್ಮ ಕಲಾಕೃತಿಗಳಾಗಿದ್ದು, ಹಲವಾರು ದೇವತಾ ಶಿಲ್ಪಗಳನ್ನು ತಮ್ಮ ಕೈ ಚಳಕದಿಂದ ಕೆತ್ತನೆ ಮಾಡಿದ್ದಾರೆ. ಶಹಾಪೂರು ನಗರದಲ್ಲಿ ಶ್ರೀಕಾಳಿಕಾದೇವಿ ಮೂರ್ತಿ, ಹಳ್ಳಿಸಗರ ಗ್ರಾಮದ ಗ್ರಾಮ ದೇವತೆ ಶ್ರೀದ್ಯಾವಮ್ಮದೇವಿ ಮೂರ್ತಿ, ತಮ್ಮ ಊರಿನಲ್ಲಿಯೇ ಶ್ರೀ ಮರೆಮ್ಮ ದೇವಿ ಮೂರ್ತಿಯನ್ನು ಅತ್ಯಂತ ಸುಂದರ ಮತ್ತು ಆಕರ್ಷಿಸುವಂತೆ ಕೆತ್ತನೆ ಮಾಡಿದ್ದಾರೆ. ಶ್ರೀ ಸುರೇಂದ್ರ ಕೆ. ವಿಶ್ವಕರ್ಮರವರು ಮಾಜಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿದ್ದರು. ಕಲಾವಿದರು ರಚಿಸಿದಂತಹ ಶ್ರೀ ಮರೆಮ್ಮ ದೇವಿ ಮೂರ್ತಿಗೆ ಸ್ವಗ್ರಾಮದವರು ಮಾರುಹೋಗಿ ಭವ್ಯ ಮೆರವಣಿಗೆಯೊಂದಿಗೆ ಅವರಿಗೆ ಗೌರವ ಸನ್ಮಾನ ಮಾಡಿದ್ದಾರೆ.

೭.೧.೨. ಶ್ರೀ ಜಕಣಾಚಾರ್ಯ ತಂದೆ ಬಸವಣ್ಣ ವಿಶ್ವಕರ್ಮ

ಏಪ್ರಿಲ್ ೦೧, ೧೯೮೮ರಲ್ಲಿ ಯಲಗೋಡ ಗ್ರಾಮದಲ್ಲಿ ಜನಿಸಿದ ಇವರು ಎರಡು ವರ್ಷ ಸರ್ಟಿಫಿಕೆಟ್ ಕೋರ್ಸ್ ಮರ ಕೆತ್ತನೆಯ ವಿಷಯದಲ್ಲಿ ಪರಿಣಿತಿ ಹೊಂದಿದ್ದಾರೆ.

(1) 90

(2) 454

ಶ್ರೀ ಜಕಣಾಚಾರ್ಯಯವರು ಅನೇಕ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಭೆಯ ಪ್ರದರ್ಶನ ಮಾಡಿದ್ದಾರೆ. ಪಲ್ಲಕ್ಕಿ, ತಲಬಾಗಿಲು, ರಥ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯೂ ಇವರ ಶಿಲ್ಪಕ್ಕೆ ೧೨ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನದಲ್ಲಿ ಇವರಿಗೆ ಸಂಪ್ರದಾಯಕ ಪ್ರಕಾರದಲ್ಲಿ ಬಹುಮಾನ ನೀಡಿ ಗೌರವಿಸಿ ಇವರಿಗೆ ಹೆಚ್ಚಿನ ಶಿಲ್ಪಕಲಾ ಕೃತಿಗಳು ಈ ನಾಡಿಗೆ ಹೊಸ ಹೊಸ ಕೃತಿಗಳು ರಚಿಸಲೆಂದು ಅಕಾಡೆಮಿ ಅವರಿಗೆ ಗೌರವಪೂರ್ವಕವಾಗಿ ಸನ್ಮಾನಿಸಿದೆ. ಇವರ ಶಿಲ್ಪಕಲಾಕೃತಿಯ ವಾರಿಯರ್ಸ್ ವಿತ್ ಹಾರ್ಸ= ಮರ ಶಿಲ್ಪ ಕೀರ್ತಿ ಮುಖ, ಅಲವರ ಕಟ್ಟಿಗೆಯಲ್ಲಿ ಪರಿಣಿತಿ ಹೊಂದುತ್ತಿದ್ದಾರೆ. ನಮ್ಮ ಸಗರನಾಡಿನ ಮರ ಶಿಲ್ಪಗಳಲ್ಲಿ ಇವರು ಹಿರಿಯ ಶಿಲ್ಪಗಳು, ಒಳ್ಳೆಯ ಶಿಲ್ಪಕಲಾಕಾರರು ಸುರುಪೂರ ತಾಲೂಕಿನಲ್ಲಿ ಹೊಯ್ಸಳ ಶೈಲಿ ಶಿಲ್ಪಕಲಾ ಶಿಬಿರದಲ್ಲಿ ಉತ್ತಮ ಶಿಲ್ಪ ಕೆತ್ತನೆ ಮಾಡಿ ಎಲ್ಲರಿಂದ ಮೆಚ್ಚಿಗೆ ವ್ಯಕ್ತಪಡಿಸಿಕೊಂಡಿದ್ದಾರೆ.

೭.೧೩. ಶ್ರೀಮಲ್ಲಿಕಾರ್ಜುನ ತಂದೆ ಮಾನಪ್ಪ ಪತ್ತಾರ ವಿಶ್ವಕರ್ಮ

ಸಾಂಪ್ರದಾಯಿಕ ಕಾಷ್ಠ ಶಿಲ್ಪಕಲಾ ಕ್ಷೇತ್ರದಲ್ಲಿ ಅನನ್ಯ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀ ಮಲ್ಲಿಕಾರ್ಜುನ ತಂದೆ ಮಾನಪ್ಪ ಪತ್ತಾರ ಅವರು ಯಾದಗೀರ ಜಿಲ್ಲೆ ಶಹಾಪೂರ ತಾಲೂಕಿನ ಭೂಯಿಕಾಡಮಗೇರಾ ಗ್ರಾಮದಲ್ಲಿ ಜನಿಸಿರುವರು. ತಮ್ಮ ಉರಿನ ಗ್ರಾಮ ದೇವತೆಯಾದ ಭೂಯಿಕಾಡಮಗೇರಾ ದೇವಿಯ ಶಿಲ್ಪವು ಇವರ ಪ್ರಸಿದ್ಧಿ ಹೊಂದಿದ ಶಿಲ್ಪವಾಗಿದೆ. ಶ್ರೀಮಲ್ಲಿಕಾರ್ಜುನರವರು ರಚಿಸಿದ ವಿಗ್ರಹಗಳು ಶಹಾಪೂರ ತಾಲೂಕಿನ ದರ್ಶನಪೂರು ಗ್ರಾಮದಲ್ಲಿ ಸುಮಾರು ೫-೬ ದೇವತೆಗಳನ್ನು ಕಾಣಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಇವರು ಕೊಳಲು ರಚನೆಯಲ್ಲಿ ಸಿದ್ದ ಹಸ್ತರು. ಇವರು ಕಟ್ಟಿಗೆಯಲ್ಲಿ ಕೊಳಲು ಸುಮಾರು ೫೦೦ ರಿಂದ ೮೦೦ರವರಿಗೆ ಕೆತ್ತನೆ ಮಾಡಿದ್ದಾರೆ.

ಕರ್ನಾಟಕಾದ್ಯಂತ ಇವರ ಕೈ ಚಳಕದಿಂದ ಕೊಳಲು ಮಾಡಿಕೊಟ್ಟಿದ್ದಾರೆ. ಶಹಾಪೂರು, ಸುರುಪೂರ, ಸಿಂದಗಿ, ಗ್ರಾಮಗಳಲ್ಲಿ ಸಣ್ಣಸಣ್ಣ ಕಟ್ಟಿಗೆ ಗೊಂಬೆಗಳನ್ನು ಕೆತ್ತನೆ ಮಾಡಿದ್ದಾರೆ. ಆನೆ, ಸಿಂಹ, ಗರುಡ, ಗೌರಿ ಗಣೇಶ ತಲಾಬಾಗಿಲು ಚೌಕಟ್ಟು ಗೌರಿ ಮಾಡಿದ ಅಲಂಕಾರದ ಚಿತ್ರಗಳನ್ನು ಕಟ್ಟಿಗೆಯಲ್ಲಿ ಕೆತ್ತನೆ ಮಾಡಿದ್ದಾರೆ.

ಶ್ರೀಮಲ್ಲಿಕಾರ್ಜುನ ಪತ್ತಾರ ಶಾಸ್ತ್ರದ ಪ್ರಕಾರವಾಗಿಯೇ ಕೈಗಳಿಂದ ಸಿದ್ದವಾಗುವ ದೇವತೆಗಳ ಮೂರ್ತಿಗಳನ್ನು ಎಲ್ಲರು ಮೆಚ್ಚುವಂತೆ ಮಾಡಿದ್ದಾರೆ. ಇವರು ತಮ್ಮ ಊರಲ್ಲಿ ಪಂಚಂಗ ಹೇಳುವುದು ಪೌರಾಣಿಕ ಕಥೆಗಳು ದೇವತೆಯರ ಕಥೆಗಳು ಹೇಳುತ್ತಾರೆ. ತಮ್ಮ ಇಬ್ಬರು ಗಂಡು ಮಕ್ಕಳಿಗೆ ತಮ್ಮ ಶಿಲ್ಪಕಲಾ ಕ್ಷೇತ್ರವನ್ನೆ ಕಲಿಸುತ್ತಿದ್ದಾರೆ. ತಂದೆಯಂತೆ ಮಕ್ಕಳೂ ಕಲೆಯಲ್ಲಿ ಪರಣಿತ ಹೊಂದುತ್ತಿದ್ದಾರೆ. ಇವರ ಸಾಧನೆಗೆ ಇಂದಿನ ಖಾತೆ ಮಾಜಿ ಸಚಿವರಾದ ಶ್ರೀಶರಣಪ್ಪಗೌಡ ದರ್ಶನಾಪೂರರಿಂದ ಸನ್ಮಾನ ಲಭಿಸಿದೆ.

೭.೧.೪. ಶ್ರೀ ವಿರೇಂದ್ರ ತಂದೆ ಅಯ್ಯಣ್ಣ ಪತ್ತಾರ ವಿಶ್ವಕರ್ಮ

೩೫ ವರ್ಷದಿಂದ ತಮ್ಮ ವೃತ್ತಿ ಜೀವನ ಸಾಗಿಸುತ್ತಾ ಬಂದಿದ್ದ ಗೋಗಿ (ಪೇಠ) ಗ್ರಾಮದ ಗ್ರಾಮ ದೇವತೆ ಪ್ರತಿ ೩ ವರ್ಷಕ್ಕೊಮ್ಮೆ ಇವರ ಕೈಯಿಂದಲೆ ಮೂರ್ತಿಯು ರೂಪುಗೊಳ್ಳುತ್ತದೆ. ಇವರು ಗೌರಿ ಗಣೆಶ, ಲಕ್ಷ್ಮಿದೇವಿ, ಶಿವನ ಮೂರ್ತಿ ನಾಗರ ಪಂಚಮಿಯಲ್ಲಿ ನಾಗರಾಜ (ಆದಿಶೇಷ) ಹೀಗೆ ಹಲವಾರು ಮೂರ್ತಿಗಳನ್ನು ಮಾಡಿ ಈ ಗ್ರಾಮದಲ್ಲಿ ಜನರ ಮೆಚ್ಚಿಗೆ ಪಡೆದಿದ್ದಾರೆ.

ಶಿಕ್ಷಣ :- ೯ನೇಯ ತರಗತಿಯವರಿಗೆ ಅಭ್ಯಾಸ ಮಾಡಿ ನಂತರ ಶಿಲ್ಪಕಲಾ ಕ್ಷೇತ್ರದಲ್ಲಿ ಜೋಡು ಕುದುರೆ ತಲಬಾಗಿಲು ಚೌಕಟ್ಟು ಹಣೆ ಪಟ್ಟಿ ಗೌರಿ ಮಾಡ, ಗಣೇಶ ಮಾಡ, ಲಕ್ಷ್ಮಿ ಮಾಡ, ಹಾಗೂ ಸಣ್ಣ, ಸಣ್ಣ ಗೊಂಬೆಗಳು ವಿನ್ಯಾಸ ಅಲಂಕಾರ ಬೆಳ್ಳಿಗಳು, ಹೂಗಳು, ಕಟ್ಟಿಗೆಯ ಕಂಬಗಳು ಅಲಂಕಾರ ಮಾಡಿದ್ದಾರೆ. ಕಟ್ಟಿಗೆ ಸೀಳಿ ಹೋಗದಂತೆ ಕೆತ್ತನೆ ಕೆಲಸ ಮಾಡುತ್ತಾರೆ.

ಶಹಾಪೂರು ನಗರದಲ್ಲಿ ಪ್ರಸಿದ್ಧಿ ಹೊಂದಿದ ದೇವತೆಯಾದ ಶ್ರೀಭಾಗ್ಯವಂತಿ ದೇವಿ ಮೂರ್ತಿ ಹಾಗೂ ಬಂಡಿಯನ್ನು ಸ್ವಂತ ತನ್ನ ಕೈಯಿಂದಲೆ ಸುಮಾರು ೬ ತಿಂಗಳ ಕಾಳ ಎಡ ಬಿಡದೆ ಮಾಡಿ ಇಡಿ ತಾಲೂಕಿನ ಜನರ ಮೆಚ್ಚಿಗೆ ಪಡೆದಿದ್ದಾರೆ. ಶ್ರೀವಿರೇಂದ್ರ ಪತ್ತಾರ ತಮ್ಮ ವೃತ್ತಿ ಜೀವನವನ್ನು ಗೋಗಿ ಪೇಠ ಗ್ರಾಮದಲ್ಲಿ ವರ್ಕಶಾಪ್ ಹಾಕಿ ಸಾರ್ವಜನಿಕರಿಗೆ ತಮ್ಮ ಕಲೆಯನ್ನು ಮುಕ್ತವಾಗಿ ಪ್ರದರ್ಶನದ ಆಕಾಂಕ್ಷ ಕಲಾವಿದರಿಗೆ ತಮ್ಮ ಕಲೆಯ ಛಾಯಾಚಿತ್ರಗಳನ್ನು ತೋರಿಸುತ್ತಾರೆ.

೭.೨. ಸಗರನಾಡಿನ ಮರ(ಕಟ್ಟಿಗೆ) ಮಾಧ್ಯಮದ ಶಿಲ್ಪಕಲಾವಿದರು

೭.೨.೧. ಶ್ರೀದೇವೀಂದ್ರಪ್ಪ ಪರಪ್ಪ ವಿಶ್ವಕರ್ಮ, ನಂದಿಹಳ್ಳಿ ಯಲಗೋಡು

ಜನವರಿ ೦೧, ೧೯೪೫ರಲ್ಲಿ ನಂದಿಹಳ್ಳಿಯಲ್ಲಿ ಜನಿಸಿದ್ದಾರೆ. ಇವರು ಬಾಲ್ಯದಲ್ಲಿಯೇ ಕಲೆಯಲ್ಲಿ ಆಸಕ್ತಿ ಹೊಂದಿದವರು ಗ್ರಾಮದೇವತೆಯಲ್ಲಿ ಕೆತ್ತನೆ ಕೆಲಸ ಅತ್ತಿ ಸೂಕ್ಷ್ಮವಾಗಿ ಮತ್ತು ಜನರು ಮೆಚ್ಚುವಂತೆ ತಮ್ಮ ಕೈ ಚಳಕದಿಂದ ಗ್ರಾಮದೇವತೆಯ ಅಲವಾರು ಕಟ್ಟಿಗೆಯ ಮೂರ್ತಿಗಳನ್ನು ರಚನೆ ಮಾಡಿದ್ದಾರೆ.

ಇವರು ಸಾಂಪ್ರದಾಯಕ ಕಾಷ್ಠ ಶಿಲ್ಪ ಕಲಾಕಾರರು ಶ್ರೀದೇವಿಂದ್ರಪ್ಪ ನಿರ್ಮಿಸಿರುವ ವಿಗ್ರಹಗಳು, ಶಹಾಪೂರು ತಾಲೂಕಿನ ಕರಕಳ್ಳಿ, ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲೂಕಿನ ಹೊನಗುಂಟಿ ಗ್ರಾಮದಲ್ಲಿ ಶಕ್ತಿ ಪೀಠವೆಂದೆ ಪ್ರಸಿದ್ಧವಾಗಿರುವ ಶ್ರೀಚಂದ್ರಕಲಾ ಪರಮೇಶ್ವರಿ ದೇವಿಯ ಉತ್ಸವಕೆಂದೆ ನಿರ್ಮಿಸಿರುವ ರಥ ಮುದ್ದೆಬಿಹಾಳದ ಮೈಲೆಶ್ವರ ಗ್ರಾಮದ ಗ್ರಾಮ ದೇವತೆ ಸುಂದರವಾಗಿ ಕೆತ್ತನೆ ಮಾಡಿದ್ದಾರೆ. ಹಲವಾರು ಸಣ್ಣಸಣ್ಣ ಮತ್ತು ದೊಡ್ಡ ದೇವತೆಯ ಮೂರ್ತಿಗಳ ಜೊತೆ ರಥಗಳನ್ನು ನಿರ್ಮಿಸಿರುವರು ಇವರು ಹಿರಿಯ ಶಿಲ್ಪ ಕಲಾವಿದರು ಕಷ್ಟ ನಷ್ಟ ಅನುಭವಿಸಿ ಕಲೆ ಕರಗತ ಮಾಡಿಕೊಂಡವರು.

ಶ್ರೀದೇವಿಂದ್ರಪ್ಪ ವಿಶ್ವಕರ್ಮ ೧೯೭೨, ೭೩ ರಲ್ಲಿ ಬರಗಾಲದಲ್ಲಿ ಕಷ್ಟದ ಜೀವನ ಜೊತೆ ಕಲೆಯನ್ನು ಬಿಡದೇ ಜನ ಮೆಚ್ಚುವಂತೆ ಗ್ರಾಮೀಣ ಪ್ರದೇಶದಲ್ಲಿ ಮೊದಲಿಗೆ ಜೋಡು ಕುದುರೆಗಳನ್ನು ಮಾಡಿ ಜನರಿಂದ ಮೆಚ್ಚಿಗೆ ಪಡೆದಿದ್ದಾರೆ. ಮತ್ತು ಇವರು ತಮ್ಮ ಊರಿನಲ್ಲಿಯೇ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ೩೫ ಅಡಿ ಎತ್ತರದ ಅತ್ಯಂತ ಕಲಾತ್ಮಕವಾಗಿ ತೇರಿನ ಸುತ್ತಾ ನವಗ್ರಹ ಮೂರ್ತಿಗಳು ಪ್ರಭಾವಳಿ ಸಿಂಹವಾಹಿನಿ ಮುಖ ಕಂಬಗಳು ಇವೆಲ್ಲವನ್ನು ಶಾಸ್ತ್ರೋಕ್ತವಾಗಿ ಸಿದ್ಧಪಡಿಸಿದ್ದಾರೆ. ಇವರ ಸೇವೆ ಮತ್ತು ಕಲಾವಂತಿಕೆಯನ್ನು ಮೆಚ್ಚಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ೨೦೧೫ನೇ ಸಾಲಿನಲ್ಲಿ ವಾರ್ಷಿಕ ಗೌರವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ. ಶ್ರೀದೇವಿಂದ್ರಪ್ಪ ವಿಶ್ವಕರ್ಮ ಇವರು ಕಲೆಯನ್ನು ತಮ್ಮ ಮಕ್ಕಳಿಗೆ ಹಾಗೂ ಶಿಲ್ಪಕಲಾ ಆಸಕ್ತಿ ಯುವ ಕಲಾವಿದರಿಗೆ ಕಲೆಯನ್ನು ಕಲಿಸುವುದು ಯುವ ಕಲಾವಿದ ಇವರ ಮಾರ್ಗದರ್ಶನದಲ್ಲಿ ಶಿಲ್ಪಕಲಾ ಕ್ಷೇತ್ರದಂತೆ ಬೆಳೆಯುತ್ತಿದ್ದಾರೆ.

೭.೨.೨. ಶ್ರೀ ಪ್ರಭು ತಂದೆ ದೇವಿಂದ್ರಪ್ಪ ವಿಶ್ವಕರ್ಮ

ಶ್ರೀ ಪ್ರಭು ಶಿಲ್ಪಿಗಳು ಸಾಂಪ್ರದಾಯಿಕ ಶಿಲ್ಪಿಗಳು ಹಾಗೂ ಗ್ರಾಮದೇವತೆಯ ರಚನಾಕಾರರು ಇವರ ಕೈ ಚಳಕದಿಂದ ಹಲವಾರು ಗಂಡು, ಹೆಣ್ಣು ದೇವತೆಗಳನ್ನು ಕೇತ್ತನೆ ಮಾಡಿದ್ದಾರೆ ಹಾಗೂ ಹಲವಾರು ಗೌರಿ ಮಾಡ ಗಣೇಶ ಮಾಡ ರಥ ಶಿಲ್ಪಿಗಳು ಸಹ ಇವರು ಮಾಡಿದ್ದಾರೆ. ಪಲ್ಲಕ್ಕಿ, ಕುದುರೆ, ಕೀರ್ತಿ ಮುಖಿ, ಗಣೇಶನ ಮೂರ್ತಿ ಮಾಡಿದ್ದಾರೆ. ಹೀಗೆ ಹಲವಾರು ಮೂರ್ತಿಗಳನ್ನು ಮಾಡಿ ಜನರಿಂದ ಮೆಚ್ಚಿಗೆ ಪಡೆದಿದ್ದಾರೆ.

ಇವರು ಜೇವರ್ಗಿ ತಾಲೂಕಿನ ಗ್ರಾಮದೇವತೆಯಾದ ಶ್ರೀ ಲಕ್ಕಮ್ಮದೇವಿ ಮಾರಡಗಿ ದೇವಿ, ಸಿಂದಗಿ ತಾಲೂಕಿನ ಬಿಜಂಲಬಾವಿ ಗ್ರಾಮದ ಶ್ರೀಮಲ್ಲಿಕಾರ್ಜುನ ದೇವರು, ಆಳಂದ ತಾಲೂಕಿನ ಖಿಜುರಿ ಗ್ರಾಮದಲ್ಲಿ ಶ್ರೀವೆಂಕಟೇಶ್ವರ ದೇವರ ಮೂರ್ತಿ, ಚಿತ್ತಾಪೂರು ತಾಲೂಕಿನ ಹೊನಗುಂಟ ಗ್ರಾಮದ ಶ್ರೀಚಂದ್ರಲಾ ಪರಮೇಶ್ವರಿ ದೇವತೆ ಕಟ್ಟಿಗೆಯ ಮೂರ್ತಿ, ಸುರುಪೂರ ತಾಲೂಕಿನ ತಳವಾರಗೇರಿ ಗ್ರಾಮ ದೇವಿ ಮೂರ್ತಿ ಮುದ್ದೆಬಿಹಾಳ ತಾಲೂಕಿನ ಮೈಲಾಪೂರು ಗ್ರಾಮದ ಗ್ರಾಮ ದೇವತೆಯಾದ ಶ್ರೀದ್ಯಾವಮ್ಮ ದೇವಿ ೫ ಅಡಿ ಎತ್ತರ ಮೂರ್ತಿ, ಮುದ್ದೆಬಿಹಾಳ ತಾಲೂಕಿನ ಕರಕಲ್ಲ ಗ್ರಾಮದಲ್ಲಿ ಶ್ರೀ ದ್ಯಾವಮ್ಮದೇವಿ ಮೂರ್ತಿ, ಸುರುಪೂರು ತಾಲೂಕಿನ ಯಾಕ್ತಾಪೂರು ಗ್ರಾಮದಲ್ಲಿ ಶ್ರೀ ಲಕ್ಕಮ್ಮದೇವಿ ಕಟ್ಟಿಗೆ ಮೂರ್ತಿಯನ್ನು ೩ ಅಡಿ ಎತ್ತರ ಮೂರ್ತಿ ಹಾಗೂ ಬಸವನ ಬಾಗೇವಾಡಿ ತಾಲೂಕಿನ ಕಣಕಲ್ ಗ್ರಾಮದಲ್ಲಿ ಶ್ರೀ ಲಕ್ಕಮ್ಮದೇವಿ ಕಟ್ಟಿಗೆ ಮೂರ್ತಿ ೩ ಅಡಿಎತ್ತರ ಶ್ರೀಯುತರಾದ ಶ್ರೀಪ್ರಭು ಶಿಲ್ಪಿಗಳು ಹಲವಾರು ದೇವಾ ದೇವತೆಯ ಮೂರ್ತಿಗಳನ್ನು ಮಾಡಿ ಸಗರನಾಡಿ ಪ್ರಸಿದ್ಧಿ ಹೊಂದುತ್ತಿರುವ ಶಿಲ್ಪಿಗಳಾಗಿದ್ದಾರೆ. ಸದ್ಯ ಇವರು ಶಹಾಪೂರು ತಾಲೂಕಿನಲ್ಲಿ ವರ್ಕಶಾಪ್ ಹಾಕಿದ್ದಾರೆ. ಸಾರ್ವಜನಿಕರ ಇವರ ಶಿಲ್ಪಕಲಾ ಕ್ಷೇತ್ರದ ಶಿಲ್ಪಿಗಳ ದೇವತಾ ಹಲವಾರು ಕಟ್ಟಿಗೆ ಕೆಲಸಗಳಿಗೆ ಇವರ ಸೇವೆ ಪಡೆಯುತ್ತಿದ್ದಾರೆ.

೭.೨.೩. ಶೀ ದಿ, ಕಾಳಪ್ಪ ಬಡಿಗೇರ

ವಯಸ್ಸು : ೬೦

ಶಿಕ್ಷಣ : ೪ನೇ ತರಗತಿ

ಕಾಯಕ : ತಲಬಾಗಿಲು ಚೌಕಟ್ಟಿಗೆ ಡಿಜನಂಗ ಮತ್ತು ಗಿಳಿ, ನವಿಲು, ಎಲೆ, ಹೂ, ಕಾಯಿ ಮತ್ತು ಗೋಗಿ (ಕೆ) ಗ್ರಾಮದ ಗ್ರಾಮ ದೇವತೆಯಾದ ಶ್ರೀಮರೆಮ್ಮದೇವಿ ಕಟ್ಟಿಗೆ ಮೂರ್ತಿ ಮಾಡಿ ಕೀರ್ತಿ ಪಡೆದಿದ್ದಾರೆ. ಹಾಗೆ ಸಣ್ಣ ಸಣ್ಣ ಗೊಂಬೆಗಳು ಕೆತ್ತನೆ ಮಾಡಿದ್ದಾರೆ. ಇವರ ಸಹಜ ವಯೋವೃದ್ದಿಯಿಂದ ಅನಾರೋಗ್ಯದಿಂದ ನಧನ ಹೊಂದಿದ್ದಾರೆ. ಇವರ ಮಗನಾದ ಶ್ರೀಮೋನಪ್ಪ ಬಡಿಗೇರ ತಂದೆಯ ಕಾಯಕವನೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

೭.೨.೪. ಶ್ರೀಲಕ್ಷ್ಮಿಕಾಂತ ತಂದೆ ಬಸಣ್ಣ ಬಡಿಗೇರ ವಿಶ್ವಕರ್ಮ

ವಯಸ್ಸು : ೪೫

ಶಿಕ್ಷಣ : ೧೦ನೇ ತರಗತಿ

ಉದ್ಯೋಗ : ಶ್ರೀಲಕ್ಷ್ಮಿದೇವಿ ಮೂಲ ಅರ್ಚಕರು ಹಾಗೂ ಶಿಲ್ಪಗಳು ಇವರು ಪ್ರತಿವರ್ಷ ಜೇವರ್ಗಿ ತಾಲೂಕಿನ ಕೇಂದ್ರ ಸ್ಥಾನದಲ್ಲಿರು ಪ್ರಸಿದ್ದಿ ಹೊಂದಿದ ೭ ಊರು ಸೀಮೆಯ ದೇವತೆ ಶ್ರೀಲಕ್ಷ್ಮಿದೇವಿ ಕಟ್ಟಿಗೆಯ ಮೂರ್ತಿ ಮತ್ತು ಬಂಡಿ ಗಾಲಿ, ರಥ, ಎಲ್ಲವು ಬಸರ ಗಿಡದಲ್ಲಿ ಅದು ಕೇವಲ ೩, ೪, ದಿನಗಳಲ್ಲಿ ಪದ್ದತಿಯಂತೆ ಮಾಡಿ ಲಕ್ಷ ಲಕ್ಷ ಜನ ಮೆಚ್ಚುವಂತೆ ಮಾಡಿರುತ್ತಾರೆ.

ಶ್ರೀ ಲಕ್ಷ್ಮಿಕಾಂತ ಬಡಿಗೇರ ದೇವಿ ಅರ್ಚಕರು ಹಾಗೂ ಶಿಲ್ಪಿಗಳು ಎಂದು ಬಹಳ ನಿಷ್ಠೆಯಿಂದ ಭಕ್ತಿಯಿಂದ ಶ್ರದ್ಧೆಯಿಂದ ಶ್ರೀಲಕ್ಷ್ಮಿದೇವಿ (ಕಲ್ಪತದೇವಿ) ಅರ್ಚಕರು ಮತ್ತು ಶಿಲ್ಪಿಗಳು ಇವರು ಶಿಲ್ಪಿಗಳ ನೋಡಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಇವರಿಗೆ ಶಾಲು ಹೊದಿಸಿ ಸನ್ಮಾನ ಮಾಡಿದ್ದಾರೆ. ಇವರು ಸುಮಾರು ೩೫ ವರ್ಷದಿಂದ ದೇವಿ ಮೂರ್ತಿ ಮಾಡುತ್ತಾ ಬಂದಿದ್ದಾರೆ. ಆದರೆ ಶಿಲ್ಪಕಲಾ ಅಕಾಡೆಮಿ ಇವರನ್ನು ಗುರುತಿಸಲಾರದ್ದು ವಿಪರಹಸ್ಯವಾಗಿದೆ. ಇಂತಹ ಗ್ರಾಮೀಣ ಶಿಲ್ಪಕಲಾವಿದರನ್ನು ಸರಕಾರ ಹಾಗೂ ಇಲಾಖೆ ಗೌರವಿಸಲೆಂದು ಜನರ ಅಭಿಪ್ರಾಯವಾಗಿದೆ. ಮತ್ತು ಈ ಶಿಲ್ಪ ಕಲಾವಿದರು ಇನ್ನೂ ಹೆಚ್ಚಿನ ವಿವರ ಕಲಾಕೃತಿಗಳನ್ನು ಮಾಡಲು ಪ್ರೇರಣೆ ಮಾಡಿಸಲಾಯಿತು.

೭.೨.೫. ಶ್ರೀಕಾಳಪ್ಪ ತಂದೆ ಮಾನಪ್ಪ ಬಡಿಗೇರ ವಿಶ್ವಕರ್ಮ

ವಯಸ್ಸು : ೩೪

ಶಿಕ್ಷಣ : ೯ನೇ ತರಗತಿ

ಕಾಯಕ : ವಂಶ ಪರಂಪರೆಯಿಂದ ಬಂದಂತಹ ವೃತ್ತಿ ಬಡಿಗೇತನ ತಂದೆಯಿಂದ ಪ್ರೇರಣೆಯಾದ ಶ್ರೀ ಕಾಳಪ್ಪ ತಂದೆ ಮಾನಪ್ಪ ಬಡಿಗೇರ ಗ್ರಾಮದೇವತೆಯನ್ನು ತಮ್ಮ ಕೈ ಚಳಕದಿಂದ ಹೊನ್ನಕಿರಣಗಿಯಲ್ಲಿ ಮರೆಮ್ಮ ದೇವಿ ಮೂರ್ತಿಯನ್ನು ಮಾಡಿದ್ದಾರೆ. ಸಣ್ಣಸಣ್ಣ ಕಟ್ಟಿಗೆ ಗೊಂಬೆಗಳು ಲಕ್ಷ್ಮಿದೇವಿ, ಗೌರಮ್ಮ ದೇವಿ, ಗಣೇಶನಮೂರ್ತಿ ಹಾಗೂ ಶ್ರೀಮಂತರ ಮನೆಗೆ ತಲಬಾಗಿಲು ಚೌಕಟ್ಟು ಆ ಚೌಕಟ್ಟಿಗೆ ಬಳ್ಳಿಗಳು, ಎಲೆಗಳು, ಹೂಗಳು ಗಿಳಿ, ನವಿಲು, ಲಿಂಗ, ಬಸವಣ್ಣ ಮೂರ್ತಿ ಪಾವರ್ತಿದೇವಿ ಮೂರ್ತಿ ಬಾಗಿಲು ತಲುಪಿಗೆ ಹಲವಾರು ದೇವ ದೇವತೆಯ ಭಾವ ಚಿತ್ರವನ್ನು ಕಟ್ಟಿಯಲ್ಲಿ ಕೆತ್ತನೆ ಮಾಡಿದ್ದಾರೆ. ಹಾಗೆ ರೈತರಿಗೆ ಕೂರಿಗಿ, ಗಳೆ, ಎಡೆದಿಂಡು ಎಲ್ಲವು ಮಾಡಿ ಜನರಿಂದ ಶಬ್ಬಾಸ ಎಂದು ಎನಸಿಕೊಂಡಿದ್ದಾರೆ. ಇವರು ಸದ್ಯ ಗೋಗಿ (ಕೆ) ಗ್ರಾಮದಲ್ಲಿ ಹಳೆ ಬಸ್ ನಿಲ್ದಾಣದ ಹತ್ತಿರ ವರ್ಕಶಾಪ ಹಾಕಿದ್ದಾರೆ. ಇವರು ಸದಾ ತಮ್ಮ ಕೆಲಸದಲ್ಲಿ ನರಂತರವಾಗಿ ಕೆಲಸ ಮಾಡುತ್ತಾರೆ.

೭.೩. ಸಗರನಾಡಿನ ಲೋಹ ಮಾಧ್ಯಮದ ಶಿಲ್ಪಕಲಾವಿದರು

೭.೩.೧. ಪ್ರಕಾಶ ಪತ್ತಾರ ಅರಿಕೇರಿ

ವಯಸ್ಸು : ೫೦

ಶಿಕ್ಷಣ : ೧೦ನೇ ತರಗತಿ

ಉದ್ಯೋಗ : ಬೆಳ್ಳಿ ಬಂಗಾರ, ಆಭರಣಗಳು ತಂದು ಅದರಲ್ಲಿ ದೇವಿಮೂರ್ತಿ ಮಾಡುವುದು. ಶಹಾಪೂರ ತಾಲೂಕಿನ ಸಿಂಗನಹಳ್ಳಿ ಗ್ರಾಮದೇವತೆ ಶ್ರೀಯಲ್ಲಮ್ಮದೇವಿ ಬೆಳ್ಳಿಮೂರ್ತಿ ಇವರ ಕೈಯಲ್ಲಿ ರಚನೆ ಮಾಡಿದ್ದಾರೆ. ದೇವದುರ್ಗಾ ತಾಲೂಕಿನ ಅರಕೇರ ಗ್ರಾಮದಲ್ಲಿ ಜನಿಸಿದರು ನಂತರ ಮದುವೆಯಾದ ಮೇಲೆ ಗೋಗಿ ಗ್ರಾಮಕ್ಕೆ ಬಂದು ನೆಲಸಿದರು. ಬೆಳ್ಳಿ ಮೂರ್ತಿ ಶ್ರೀಯಲ್ಲಮ್ಮದೇವಿ ಮೂರ್ತಿ. ದೇವಿ ಪಾದಗಳು ದೇವಿ

ಕಣ್ಣುಗಳು, ಕೊರಳಲ್ಲಿ ಹಾಕಿಕೊಳ್ಳುವ ಪಾದಗಟ್ಟಿಗಳು ಸುಮಾರು ನೂರಾರು ದೇವಿ ಸಣ್ಣ ಸಣ್ಣ ಮೂರ್ತಿಗಳು ಶ್ರೀಅಂಬಾ ಭವಾನಿ ದೇವಿ ಮೂರ್ತಿ ನಂದಿ, ಈಶ್ವರ ಲಕ್ಷ್ಮಿದೇವಿ ಹಲವಾರು ದೇವಿ ಮತ್ತು ದೇವರ ಮೂರ್ತಿ ಮಾಡಿ ಈ ಭಾಗದ ಲೋಹಶಿಲ್ಪಗಳು ಹೆಸರು ಪಡೆದಿದ್ದಾರೆ. ಸದ್ಯ ಗೋಗಿ (ಪೆಠ) ಗ್ರಾಮದಲ್ಲಿ ಮುಖ್ಯರಸ್ತೆಗೆ ಬಂಗಾರದ ಅಂಗಡಿ ಹಾಕಿದ್ದಾರೆ.

ಸಗರನಾಡಿನ ಗ್ರಾಮೀಣ ಶಿಲ್ಪಕಲಾವಿದರು - ಶಿಲಾ ಮಾಧ್ಯಮ



ಶ್ರೀ ಸುರೇಂದ್ರ ಕೆ. ವಿಶ್ವಕರ್ಮ
ಕೊಳ್ಳೂರು (ಎಂ.), ಶಹಾಪೂರ ತಾ॥






ಶ್ರೀ ಜಕಣಾಚಾರ್ಯ ವಿಶ್ವಕರ್ಮ
ಯಲಗೋಡ, ಜೇವರ್ಗಿ ತಾ॥



ಸಗರನಾಡಿನ ಗ್ರಾಮೀಣ ಶಿಲ್ಪಕಲಾವಿದರು - ಮರ ಮಾಧ್ಯಮ



ಶ್ರೀ ಮಲ್ಲಿಕಾರ್ಜುನ ವಿಶ್ವಕರ್ಮ
ಭೂಂಯಿ ಕಾಡಮಗೇರಾ, ಶಹಾಪೂರ ತಾ॥





ಶ್ರೀ ವೀರೇಂದ್ರ ವಿಶ್ವಕರ್ಮ
ಗೋಗಿ (ಪಿ), ಶಹಾಪೂರ ತಾ॥



ಸಗರನಾಡಿನ ಗ್ರಾಮೀಣ ಶಿಲ್ಪಕಲಾವಿದರು - ಮರ ಮಾಧ್ಯಮ



ಶಿಲ್ಪಿ ದೇವೇಂದ್ರಪ್ಪ ವಿಶ್ವಕರ್ಮ
ನಂದಿಹಳ್ಳಿ, ಯಲಗೋಡ, ಜೇವರ್ಗಿ ತಾ॥





ಶ್ರೀ ವೀರೇಂದ್ರ ವಿಶ್ವಕರ್ಮ
ಗೋಗಿ (ಪಿ), ಶಹಾಪೂರ ತಾ॥



ಸಗರನಾಡಿನ ಗ್ರಾಮೀಣ ಶಿಲ್ಪಕಲಾವಿದರು - ಮರ ಮಾಧ್ಯಮ



ಶ್ರೀ ಲಕ್ಷ್ಮೀಕಾಂತ ಬಡಿಗೇರ ವಿಶ್ವಕರ್ಮ
ಜೇವರ್ಗಿ ನಗರ, ಜೇವರ್ಗಿ ತಾ॥





ಶ್ರೀ ಕಾಳಪ್ಪ ಬಡಿಗೇರ ವಿಶ್ವಕರ್ಮ
ಗೋಗಿ (ಕೆ), ಶಹಾಪೂರ ತಾ॥



ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಮನುಷ್ಯನ ಜೀವನ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಜಾನಪದ, ಶಿಲ್ಪಕಲಾ, ಲಲಿತಕಲಾ ಸಾಹಿತ್ಯ ಅತ್ಯಂತ ಮಹತ್ವವಾದ ವಿಷಯವಾಗಿದೆ. ಮಾನವ ಜೀವನದ ಸಮಸ್ತ ವ್ಯವಹಾರಗಳನ್ನು ಒಳಗೊಡಿರುವ ಶಾಸ್ತ್ರವಾಗಿದೆ. ಹೀಗಾಗಿ ಶಿಲ್ಪಕಲಾ, ಲಲಿತಕಲಾ, ಜನಪದವು ಮಾನವನ ಪರಂಪರಾಗತವಾಗಿ ಅಭಿವ್ಯಕ್ತಿ ಗೊಂಡಿರುವ ಅದರ ಎಲ್ಲಾ ಮುಖಗಳನ್ನು ಪರಿಶೀಲಿಸುವುದು ಅತ್ಯಂತ ಪ್ರಮುಖ ವಿಷಯವಾಗಿದೆ. ಶಿಲ್ಪಕಲಾ, ಲಲಿತಕಲಾ ಕ್ಷೇತ್ರವು ಅಕ್ಷರ ಜಗತ್ತಿನ ಸಂಪರ್ಕಕ್ಕೆ ಹೊರತಾದ ಗ್ರಾಮೀಣರ ಜಗತ್ತು ಯಾವ ಬಗೆಯ ಲಿಖಿತ ಆಧಾರಗಳಿಲ್ಲದಿದ್ದರೂ ಅನಾಗೀಕ ಅಥವಾ ಗ್ರಾಮ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದು ಬಂದಿರುವ ದೇವತೆಗಳನ್ನು ಜನಪದ ಶಿಲ್ಪಗಳು ದೇವತೆಗಳಿಂದ ಹೇಳಬಹುದು.

ಸಗರನಾಡಿನ ಗ್ರಾಮೀಣ ಜನರ ಜೀವನದಲ್ಲಿಯ ಅನಾದಿ ಕಾಲದಿಂದಲೂ ಹಾಸು ಹೊಕ್ಕಾಗಿ ಬೆರೆತುಬಂದಿರುವ ಗ್ರಾಮ ದೇವತೆಗಳು, ಜನಪದ ಶಿಲ್ಪಗಳು, ಜನಪದ ಹಾಡುಗಳು, ಬದುಕಿನ ಒಂದು ಅಂಗವಾಗಿದೆ. ನಾನು ಸಗರನಾಡು ಗ್ರಾಮದೇವತೆ ಶಿಲ್ಪಗಳ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮಹಾಪ್ರಬಂಧವನ್ನು ರಚಿಸಲು ನಾನು ಯಾದಗಿರ ಜಿಲ್ಲೆಯ ಶಹಾಪೂರು ಹಾಗೂ ಸುರಪೂರು ತಾಲೂಕಗಳು ಹಾಗೂ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗ್ರಾಮಗಳಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ದೊರೆಯುವ ಪ್ರಮುಖ ವಿಭಿನ್ನ ಆಚರಣೆ,

ಗ್ರಾಮದೇವತೆಗಳು, ಗ್ರಾಮದೇವತೆಯ ಶಿಲ್ಪಗಳು, ಸಂಕೀರ್ಣ ಶಿಲ್ಪಗಳು, ಮಣ್ಣಿನ ಶಿಲ್ಪಗಳು, ಶಿಲಾ ಮಾಧ್ಯಮದ ಶಿಲ್ಪಗಳು, ಸಿಮೆಂಟಿನ ಶಿಲ್ಪಗಳು ಮತ್ತು ಕಟ್ಟಿಗೆಯ ಶಿಲ್ಪ ದೇವತೆಗಳನ್ನು ನಾನು ನೋಡಿ ಊರಿನ ಹಿರಿಯ ಸಹಾಯದಿಂದ ಶಿಲ್ಪಗಳ ಮಾಹಿತಿಪಡೆದಿದ್ದು, ಕೆಲವುಕಡೆ ಶಿಲ್ಪಗಳು ನಾಶವಾಗಿವೆ, ಭಗ್ನವಾಗಿವೆ. ಇನ್ನೂ ಕೆಲವು ದೇವತೆಗಳು ಕಲ್ಲಿನ ಮತ್ತು ಕಟ್ಟಿಗೆಯ ಶಿಲ್ಪಗಳು ಧೂಳು ತಿನ್ನುತಿವೆ ಊರಿನ ಹಿರಿಯರ ನಿರ್ಲಕ್ಷವಾಗಿದೆ.

ಹೀಗೆ ಹತ್ತು ಹಲವು ಪ್ರಮುಖ ಕಾರಣಗಳ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ. ಇಲ್ಲಿ ಅಧ್ಯಯನದ ಅನುಕೂಲತೆಗಾಗಿ ಒಟ್ಟು ಎಂಟು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಗೊಂಡ ವಿಷಯಗಳ ಕುರಿತು ಸಂಕ್ಷಿಪ್ತ ಸಮೀಕ್ಷೆಯನ್ನು ನೀಡಲಾಗಿದೆ.

ಮೊದಲೆನೆಯ ಅಧ್ಯಾಯದಲ್ಲಿ ಈ ಅಧ್ಯಯನದ ಪ್ರಮುಖ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತ, ಅಧ್ಯಯನ ರೂಪಿಸಲು ಅದರದೇ ಆದ ಸ್ವರೂಪ ಮತ್ತು ವ್ಯಾಪ್ತಿಯನ್ನು ಚರ್ಚಿಸಲಾಗಿದೆ. ಅಲ್ಲದೆ ಪ್ರಸ್ತುತ ಪ್ರಬಂಧಕ್ಕೆ ಗಟ್ಟಿಯಾದ ಪೀಠಿಕೆಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಗರನಾಡಿನ ಐತಿಹಾಸಿಕ ಹಿನ್ನೆಲೆಯ ಕುರಿತಾಗಿದ್ದು, ಇಲ್ಲಿ ವೈಭವಿತ ಸಗರನಾಡಿನ ಸಾಂಸ್ಕೃತಿಕ ಪರಿಸರ, ಇತಿಹಾಸ, ರಾಜಕೀಯ, ಭೌಗೋಳಿಕ ಮುಂತಾದ ಪ್ರಮುಖ ಅಂಶಗಳೊಂದಿಗೆ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಗ್ರಾಮದೇವತೆಗಳ ಆಚಾರ-ವಿಚಾರ ಮತ್ತು ಸಂಸ್ಕೃತಿಯನ್ನು ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಗರನಾಡಿನ ಶಿಲಾ ಮಾಧ್ಯಮದಲ್ಲಿ ರಚನೆಗೊಂಡಿರುವ ಗ್ರಾಮದೇವತೆಗಳ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಅವುಗಳ ವಸ್ತುವಿಷಯ, ಆಚಾರ-ವಿಚಾರ, ದೇವಿಯ ಪ್ರಮುಖ ವಿಶೇಷತೆಗಳನ್ನು ಸಂಗ್ರಹಿಸಿ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮರ (ಕಟ್ಟಿಗೆ) ಮಾಧ್ಯಮದಲ್ಲಿ ರೂಪುಗೊಂಡಿರುವ ಗ್ರಾಮದೇವತೆಗಳ ಶಿಲ್ಪಗಳ ಕುರಿತು ಅಧ್ಯಯನ ಮಾಡಲಾಗಿದ್ದು, ಇಲ್ಲಿ ಅವುಗಳಿಗೆ ಬಳಸಿರುವ

ಕಟ್ಟಿಗೆ, ಅವುಗಳ ಅಳತೆ, ಆಕಾರ, ವರ್ಣಗಾರಿಕೆ ಹೀಗೆ ಪ್ರಮುಖ ಅಂಶಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಲೋಹ ಮಾಧ್ಯಮದಲ್ಲಿ ನಿರ್ಮಾಣವಾದ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಇಲ್ಲಿಯೂ ಅವುಗಳು ರಚನೆಯಾದ ಲೋಹದ ವಿವರಗಳೊಂದಿಗೆ, ಅವುಗಳ ರಚನೆಯ ತಂತ್ರ, ಶೈಲಿ ಹಾಗೂ ವರ್ಣಗಾರಿಕೆಯ ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಶಿಲಾ, ಮರ ಹಾಗೂ ಲೋಹ ಈ ಮೂರು ಮಾಧ್ಯಮಗಳನ್ನು ಹೊರತುಪಡಿಸಿ ಮಿಶ್ರಮಾಧ್ಯಮ ಅಥವಾ ಸಂಕೀರ್ಣ ಮಾಧ್ಯಮಗಳಲ್ಲಿ ರಚನೆಯಾದ ಗ್ರಾಮದೇವತೆಗಳ ಶಿಲ್ಪಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸಗರನಾಡಿನ ಗ್ರಾಮೀಣ ಪರಿಸರದ ಪ್ರಮುಖ ಕಲಾವಿದರುಗಳನ್ನು ಗುರುತಿಸಿ, ಅವರ ಜೀವನದ ಪ್ರಮುಖ ಘಟನೆಯನ್ನು ಸ್ಥೂಲವಾಗಿ ಇಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆ ಪ್ರಸ್ತುತ ಅಧ್ಯಯನದಿಂದ ಕಂಡುಬಂದ ಪ್ರಮುಖ ಫಲಿತಗಳನ್ನು ಈ ಕೆಳಗೆ ನೀಡಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

* ಪ್ರಸ್ತುತ ಅಧ್ಯಯನವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ನಡೆಸಿದಂತೆ ಕಂಡುಬಂದರೂ, ಇಲ್ಲಿ ನಿರ್ಮಿಸಿರುವ ಪ್ರತ್ಯೇಕ ಶಿಲಾ, ಮರ, ಲೋಹ ಹಾಗೂ ಮಿಶ್ರ ಮಾಧ್ಯಮಗಳ ಗ್ರಾಮದೇವತಾ ಶಿಲ್ಪಗಳ ಕುರಿತು ಅಧ್ಯಯನವಿದಾಗಿದ್ದು, ಆದ್ದರಿಂದ ಇಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಈ ದೇವತಾ ಮೂರ್ತಿಗಳ ರಚನೆ, ಆಕಾರ, ವರ್ಣಗಾರಿಕೆ ಹಾಗೂ ತಯಾರಿಸುವ ಹಂತಗಳನ್ನು ತಿಳಿದುಕೊಳ್ಳಬಹುದಾಗಿದೆ.

* ಪ್ರತಿಯೊಂದು ಗ್ರಾಮದಲ್ಲಿಯೂ ಜನರು ತಮ್ಮ ರಕ್ಷಣೆಯ ಹಿನ್ನೆಲೆಯಲ್ಲಿ ಪ್ರಾದೇಶಿಕವಾಗಿ ಬಲಿಷ್ಠವಾದ ಅಥವಾ ತಮ್ಮ ಜ್ಞಾನಕ್ಕೆ ತಕ್ಕಂತೆ ದೇವಿಯನ್ನು ರೂಪಿಸಿ, ಅದನ್ನು ಪೂಜಾ ಮೂರ್ತಿಯನ್ನಾಗಿ ಪರಿವರ್ತಿಸಿ, ದಿನನಿತ್ಯ ಪೂಜೆ–ಪುನಸ್ಕಾರಗಳನ್ನು

ಮಾಡುತ್ತಾರೆ. ವಿಶೇಷವಾಗಿ ಇದೊಂದು ಅಲ್ಲಿನ ದಿನನಿತ್ಯ ಕಾರ್ಯ ಮತ್ತು ತಮ್ಮದೇ ಆದ ಆಚಾರ, ಸಂಸ್ಕೃತಿಗಳನ್ನು ಹಿಂದಿನಿಂದಲೂ ಬಂದಿರುವುದರಿಂದ ಅದನ್ನು ನಿರಾಕರಿಸದೇ ಮುಂದಿನ ಪೀಳಿಗೆಗೂ ಮುಂದುವರಿಸಿ ಅವರಲ್ಲಿಯೂ ಆ ಭಾವನೆಯನ್ನುಂಟು ಮಾಡುವ ಈ ಪದ್ಧತಿ ಒಂದು ರೀತಿಯಲ್ಲಿ ತಮ್ಮ ಪರಂಪರೆಯನ್ನು ಬೆಳೆಸುತ್ತಿರುವುದು ವಿಶೇಷತೆಯಾಗಿದೆ.

* ಕಲಾತ್ಮಕ ಹಿನ್ನೆಲೆಯಲ್ಲಿ ಗಮನಿಸಿದಲ್ಲಿ ಇಲ್ಲಿ ಕೆಲವು ದೇವತೆಗಳು ಒಂದೇ ಹೆಸರಿದ್ದರೂ ನಾನಾ ರೀತಿಯ ಆಕಾರಗಳಲ್ಲಿ ನಿರ್ಮಿಸಿ ಅವುಗಳಲ್ಲಿಯೇ ಭಿನ್ನತೆಯನ್ನುಂಟು ಮಾಡಿದ್ದಾರೆ. ನೋಡುಗರಲ್ಲಿ ದೈವ ಭಕ್ತಿ, ಶ್ರದ್ಧಾ, ಭಯಾನಕ ಹೀಗೆ ಹಲವಾರು ವಿವಿಧ ಭಾವನೆಗಳನ್ನು ಹೊರತರುವಂತೆ ಕಾರ್ಯ ಮಾಡಿರುವುದನ್ನು ಮೆಚ್ಚಬಹುದಾಗಿದೆ.

* ಇಲ್ಲಿನ ಎಲ್ಲಾ ದೇವತೆಗಳಿಗೂ ಅತಿ ಹೆಚ್ಚು ಕೆಂಪು ವರ್ಣವನ್ನು ಬಳಸಿರುವುದು ವಿಶೇಷತೆಯೆನಿಸುತ್ತದೆ. ಸಾಮಾನ್ಯವಾಗಿ ಈ ಕೆಂಪು ವರ್ಣವು ಭಯದ ಸೂಚಕವಾಗಿದ್ದರೂ ಭಕ್ತರಿಗೆ ಒಳ್ಳೆಯದನ್ನು, ದುಷ್ಟರಿಗೆ ಕೆಟ್ಟದನ್ನು ಕೊಡುವ ಒಂದು ನಂಬಿಕೆ ಜನರಲ್ಲಿ ಕಂಡುಬಂದಿರುವುದನ್ನು ಸ್ವತಃ ಅಲ್ಲಿನ ಜನರೇ ವ್ಯಕ್ತಪಡಿಸಿದ್ದಾರೆ.

* ಪ್ರತಿಯೊಂದು ದೇವತೆಗೂ ತನ್ನದೇ ಆದ ಆಚಾರ, ನಂಬಿಕೆ, ಸಂಪ್ರದಾಯ ಹೀಗೆ ಪ್ರಮುಖ ಅಂಶಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸುವಲ್ಲಿ ಯಶಸ್ವಿಗೊಂಡು, ಸಗರನಾಡಿನ ಗ್ರಾಮೀಣ ಪ್ರದೇಶದ ಕೆಲವು ಪ್ರಮುಖ ಆಚಾರ, ನಂಬಿಕೆ, ಸಂಪ್ರದಾಯಗಳ ಕುರಿತು ಹೊಸ ಹೊಸ ಅಂಶಗಳು ಇಲ್ಲಿ ತಿಳಿಯಲಾಗಿದೆ.

* ಇವೆಲ್ಲವೂ ಮೂಡನಂಬಿಕೆಗಳಾಗಿದ್ದರೂ, ಜನರು ತಮ್ಮ ಬೇಡಿಕೆಗಳನ್ನು ದೇವರ ಮುಂದಿಟ್ಟು, ಆ ಬೇಡಿಕೆ ಈಡೇರಿದ ನಂತರ ಪ್ರಾಮಾಣಿಕವಾಗಿ ಅದಕ್ಕೆ ಈಡಾಗಿ ಭಕ್ತರೂ ದೇವತೆಗೆ ನೀಡುವ ಕಾಣಿಕೆಯನ್ನು ಗಮನಿಸುವಲ್ಲಿ ಸಾಮಾನ್ಯ ಜನರಲ್ಲಿ ಮಾತ್ರವೇ ಅಲ್ಲ ದೈವ-ಮಾನವ ಇವರಲ್ಲಿಯೂ ಕೊಡುಕೊಳ್ಳುವಿಕೆಯಿರುವುದನ್ನು ಮೇಲ್ನೋಟಕ್ಕೆ ಅರಿಯಬಹುದು.

* ಸಗರನಾಡಿನ ಗ್ರಾಮದೇವತಾ ಮೂರ್ತಿಗಳಲ್ಲಿ ವಿಶೇಷವಾಗಿ ಜನಪದ, ಶಿಷ್ಟಪದ, ಹೊಯ್ಸಳ, ಚಾಲುಕ್ಯ, ವಿಜಯನಗರ ಹೀಗೆ ಪ್ರಮುಖ ಶೈಲಿಗಳಲ್ಲಿ ನಿರ್ಮಿತಗೊಂಡಿರುವುದನ್ನು ನಾವು ಕಾಣಬಹುದು.

* ಸಗರನಾಡಿನ ದೇವತಾ ಮೂರ್ತಿಗಳಿಗೆ ನೀಡಿರುವಂತಹ ಪ್ರಾಮುಖ್ಯತೆಯನ್ನು ಆ ದೇವಾಲಯದ ವಾಸ್ತುಶಿಲ್ಪಕ್ಕೂ ನೀಡಿರುವುದು ಗಮನಿಸಬಹುದು. ಪ್ರಾದೇಶಿಕ ಹಿರಿಯರ, ಬುದ್ಧಿ ಜೀವಿಗಳ, ಸ್ವಾಮೀಗಳ ಅಭಿಪ್ರಾಯಗಳನ್ನಿಟ್ಟುಕೊಂಡು ನಿರ್ದಿಷ್ಟ ಸ್ಥಳದಲ್ಲಿ ಚಿಕ್ಕ ಮತ್ತು ದೊಡ್ಡ ಗಾತ್ರಗಳಲ್ಲಿ ದೇವಾಲಯಗಳು ನಿರ್ಮಾಣಗೊಂಡಿವೆ.

* ಹಿಂದೂ ಧರ್ಮದ ಸಾಂಪ್ರದಾಯಿಕ ದೇವತಾ ಉಡುಗೆ-ತೊಡುಗೆ, ಆಭರಣ, ನೈವೇಧ್ಯ ಮುಂತಾದ ಅಂಶಗಳನ್ನು ಗಮನಿಸಿದಲ್ಲಿ ಕೆಲವು ಕಡೆ ಭಿನ್ನತೆ, ಇನ್ನೂ ಕೆಲವು ಕಡೆ ಅದೇ ರೀತಿಯ ಆಚರಣೆಗಳು ಕಂಡುಬರುವವು. ಇವೆಲ್ಲವೂ ಮುಂದಿನ ಅಧ್ಯಯನಕಾರರಿಗೆ ತೌಲನಿಕವಾಗಿಯೂ ಅಧ್ಯಯನ ಮಾಡಲು ತುಂಬಾ ಅನುಕೂಲವಾಗುವಂತೆ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

* ಸ್ಥಳೀಯವಾಗಿ ದೊರೆಯುವ ಕಲ್ಲು, ಮರ, ಲೋಹ ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಬಳಸಿಕೊಂಡು ಅತ್ಯಂತ ನೈಜ, ಕಲಾತ್ಮಕ ಮತ್ತು ಸುಂದರವಾಗಿ ಇಲ್ಲಿನ ದೇವತಾ ಮೂರ್ತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಅಲ್ಲದೇ ಒಬ್ಬನೇ ಕಲಾವಿದ ಕಲ್ಲು, ಮರ, ಲೋಹ ಈ ಮೂರು ಮಾಧ್ಯಮದಲ್ಲಿಯೂ ಕೃಷಿಗೈದಿರುವುದು, ಅಲ್ಲದೇ ಅವುಗಳ ಪ್ರದರ್ಶನ, ಮಾರಾಟ ಮುಂತಾದ ವಿಷಯಗಳ ಕುರಿತು ಸ್ವತಃ ಕಲಾವಿದರೊಂದಿಗೆಯೇ ಸಂದರ್ಶನ ಮೂಲಕ ಹಲವು ಅಂಶಗಳನ್ನು ಕಂಡುಕೊಳ್ಳಲಾಗಿದೆ.

* ಈ ವಿಷಯದ ಕುರಿತು ಇನ್ನೂ ಆಳವಾಗಿ ಅಧ್ಯಯನ ಮಾಡುವ ಕೆಲಸವಾಗಬೇಕಾಗಿದೆ. ಏಕೆಂದರೆ ಕಲೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಇಲ್ಲಿನ ಗ್ರಾಮೀಣ ಜನರ ಕಲಾಭಿಮಾನದೊಂದಿಗೆ ಅದರ ರುಚಿಯು ಯಾವುದೇ ಶಿಷ್ಟದಿಂದ ಬಂದುದಲ್ಲ, ತಮಗೆ ಅವಶ್ಯವಿರುವ ಮೂರ್ತಿಗಳನ್ನು ಒಂದು ನಿರ್ಜೀವ ವಸ್ತುವಿನಲ್ಲಿ ರೂಪಿಸಿಕೊಂಡು ಮುಂದೆ ಭಕ್ತಿಯ ರೂಪದಲ್ಲಿ ಅದಕ್ಕೆ ಜೀವ ತುಂಬಿಸುವ ಈ ಕಾರ್ಯವು ಅತ್ಯಂತ ಪವಿತ್ರ ಮತ್ತು ಮಹತ್ವಪೂರ್ಣವಾದುದೆಂದು ಹೇಳಬಹುದು.

ಒಟ್ಟಾರೆ ಮನುಷ್ಯನ ಭಾವನೆಯೇ ಎಲ್ಲದಕ್ಕೂ ಕಾರಣ ಎಂಬುದು ಇಲ್ಲಿ ಮುಖ್ಯವಾಗಿ ಕಂಡುಬರುವ ಅಂಶವಾಗಿದೆ. ಅದರೊಂದಿಗೆ ತನ್ನ ಕಲಾಜ್ಞಾನವನ್ನು ಉಪಯೋಗಿಸಿಕೊಂಡು ಸುಂದರವಾಗಿ ಮೂರ್ತಿಗಳನ್ನು ರಚಿಸಿ, ಅದನ್ನು ದಿನನಿತ್ಯ ಪೂಜೆ, ವಾರ್ಷಿಕ ಮಹೋತ್ಸವ, ಅದರದೇ ಆದ ಆಚಾರ, ಸಂಸ್ಕೃತಿ, ಜಾತ್ರೆ, ಉತ್ಸವ ಹೀಗೆ ವೈವಿಧ್ಯಮಯ ಜೀವನವನ್ನು ಮನುಷ್ಯ ಅನುಭವಿಸುತ್ತ ಬಂದಿರುವುದನ್ನು ಗುರುತಿಸಬಹುದು. ಜೊತೆಗೆ ಹಿಂದಿನಿಂದಲೂ ಕಲೆಯನ್ನು ತನ್ನೊಂದಿಗೆಯೇ ರೂಢಿಸಿಕೊಂಡು ಅದರಲ್ಲಿಯೂ ಆನಂದವನ್ನು ಪಡೆದುಕೊಳ್ಳುತ್ತಿರುವುದು, ಬೆಳೆಸುತ್ತಿರುವುದು ವಿಶೇಷವಾಗಿದೆ. ಹೀಗೆ ಸಾಂಸ್ಕೃತಿಕ, ಐತಿಹಾಸಿಕ, ಕಲಾತ್ಮಕ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ಗ್ರಾಮದೇವತೆಗಳ ಸಂಕ್ಷಿಪ್ತ ಸೂಚಿ

೩. ಮಾಹಿತಿ ನೀಡಿದ ವಕ್ತೃಗಳು

೪. ಪತ್ರಿಕಾ ವರದಿಗಳು

ಅನುಬಂಧ : ೧

ಪರಾಮರ್ಶನ ಗ್ರಂಥಗಳು

೦೧. **ಹೈದ್ರಾಬಾದ ಕರ್ನಾಟಕದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ,** — **ಡಾ. ಚೆನ್ನಣ್ಣ ವಾಲಿಕಾರ**
ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ
ಗುಲ್ಬರ್ಗಾ ವಿ.ವಿ ಕಲಬುರಗಿ ೧೯೯೮.

೦೨. **ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು** — **ಡಾ. ಚೆನ್ನಣ್ಣ ವಾಲಿಕಾರ**
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
೧೯೮೯

೦೩. **ಸಗರನಾಡಿನ ಸಂಸ್ಕೃತಿ ಸಮೀಕ್ಷೆ** — **ಡಾ. ಅಬ್ದಲ್ ಕರೀಮ್**
ಸಂಶೋಧನಾ ಗ್ರಂಥ, ಹನಿ ಪ್ರಕಾಶನ, — **ರಾ.ಗಂ. ಕನ್ಯಾ ಕೋಳೂರು**
ರಾಜ್ ಮಂಜಿಲ್, ಮನೆ ನಂ.೧೦-೮೭/೧೨೩,
ಲಕ್ಷ್ಮೀನಗರ, ಶಹಾಪೂರ, ಯಾದಗಿರಿ ಜಿಲ್ಲೆ.

೦೪. **ಕರ್ನಾಟಕದ ಪ್ರಸಿದ್ಧ ದೇವಾಲಯಗಳು** — **ವಿ.ವಿ. ಶಂಕರನಾರಾಯಣರಾವ್**
ವಾಸನ್ ಪಬ್ಲಿಕೇಶನ್, ವಾಸನ್ ಟವರ್ಸ್,
ಡಾ. ಸಿ.ಟಿ.ಎಂ. ರಾಯನ್ ರಸ್ತೆ, (ಗೂಡ್ಸ್ ರಸ್ತೆ,)
ಬೆಂಗಳೂರು.

೦೫. ಚಿತ್ರದುರ್ಗ ಜಿಲ್ಲೆಯ ಗ್ರಾಮದೇವತೆಯ ಒಂದು ಜಾನಪದೀಯ ಅಧ್ಯಯನ — ಶ್ರೀ ಡಿ. ಮುರಳೀಧರ
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೦೬. ಸುರಪುರ ಚಿತ್ರಕಲೆ — ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ
ಸರಚಂದ್ರ ಪ್ರಕಾಶನ, ಚಿತ್ತಾಪೂರ
೨೦೦೯

೦೭. ಹೈದ್ರಾಬಾದ–ಕರ್ನಾಟಕದ ಸಾಂಸ್ಕೃತಿಕ ವಿಶ್ವಕೋಶ ಜಾನಪದ ಸಂಪುಟ — ಪ್ರಸಂ.ಡಾ.ಪಿ.ಕೆ. ಖಂಡೋಬಾ
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ. ೨೦೧೨

೦೮. ಹೈದ್ರಾಬಾದ–ಕರ್ನಾಟಕದ ಸಾಂಸ್ಕೃತಿಕ ವಿಶ್ವಕೋಶ ಲಲಿತಕಲೆಗಳ ಸಂಪುಟ — ಪ್ರಸಂ.ಡಾ.ಪಿ.ಕೆ. ಖಂಡೋಬಾ, ಡಾ.ಎಸ್.ಸಿ. ಪಾಟೀಲ
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ. ೨೦೧೨

೦೯. ಹೈದ್ರಾಬಾದ ಕರ್ನಾಟಕದ ಚಿತ್ರಕಲೆ — ಬಸವರಾಜ ಕಲೆಗಾರ
ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ,
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರ್ಗಿ, ೨೦೧೬

ಅನುಬಂಧ : ೨

ಗ್ರಾಮದೇವತೆಗಳ ಸಂಕ್ಷಿಪ್ತ ಸೂಚಿ

೧. ಎಲ್ಲಮ್ಮ, ಸಿಂಗನಹಳ್ಳಿ, ದೊಡ್ಡಸಗರ, ಹಾಲಗೇರಿ

೦೧. ಲೋಕದೇವತೆ	: ಸ್ಥಳೀಯ ದೇವತೆ, ಎರಡೂ
೦೨. ಪೂಜಾರಿ	: ಹೂಗಾರ, ಮಾತಂಗಿಯರು
೦೩. ಆರಾಧಕರು	: ಸರ್ವರು, ಊರಿನೆಲ್ಲಾ ಜನರು
೦೪. ಎಲ್ಲಮ್ಮನ ಅರ್ಥ	: ಯಕ್ಕಣಿ+ ಅಮ್ಮ-ಎಕ್ಕಲ್ಲಮ್ಮ-ಎಲ್ಲಮ್ಮ
೦೫. ಎಲ್ಲಮ್ಮನ ಮನೆತನ	: ರಾಜ ಮನೆತನ
೦೬. ಆಹಾರ	: ಸಸ್ಯಾಹಾರ, ಮಾಂಸಾಹಾರ
೦೭. ಆಭರಣ ಅಲಂಕಾರ	: ಕವಡೆಸರ, ಮೂಗುತಿ, ಹಸಿರುಬಳೆ, ಅರಿಸಿಣ (ಭಂಡಾರ) ತಾಳಿ, ಹೂ
೦೮. ಜಾತ್ರೆ ಉತ್ಸವಗಳ ಕಾಲ	: ಬೇಸಿಗೆಕಾಲ, ಚಳಿಗಾಲ
೦೯. ಹರಕೆ	: ಮಕ್ಕಳ ಬೇಡುವುದು, ನೌಕರಿ ಬೇಡುವುದು, ಶ್ರೀ ಸಂಪತ್ತು ಬೇಡುವುದು

೧೦. ಕುಣಿತ : ಜೋಗತಿ ಕುಣಿತ

೧೧. ಹಾಡು : ದ್ವಿಪದಿ, ತ್ರಿಪದಿ, ಚೌಪದಿ,

೧೨. ವಾದ್ಯ : ಚೌಡಕಿ.

೧೩. ಜನಪದ ಕಥೆ : ರೇಣುಕಾ ರಾಜನ ಹೆಂಡತಿ

೧೪. ಪಾರಾಣಿಕ : ಪಾರ್ವತಿ ಅಂಶದವಳು

೧೫. ಐತಿಹಾಸಿಕ : ಓರಂಗಲ್ಲಿನ ಪ್ರತಾಪರುದ್ರ ದೇವನಲ್ಲಿಗೆ ಬಂದದ್ದು

೧೬. ಆಧುನಕ : ಇಲ್ಲ

೧೭. ಸಂಕೇತಗಳು : ಅರಿಶಿಣ (ಭಂಡಾರ), ಫಲೋತ್ಪತ್ತಿ

೧೮. ಬಲಿ : ಕುರಿಬಲಿ ಇದೆ

೧೯. ಮುದ್ರೆ : ಹಣಚಿ ಬಟ್ಟ ಹಾಕಿಸಿಕೊಳ್ಳುವರು.

೨೦. ವಸ್ತ್ರ ವಡವೆ : ಬಿಳಿ ಪತ್ತಿಲ, ಬಿಳಿಕುಬುಸ, ಕೆಂಪುಕುಬಸ ಹಸಿರು ಕುಬುಸ

೨೧. ದೀವಟಿಗೆ : ಇದೆ

೨೨. ತೇರು : ಇದೆ, ಪಲ್ಲಕ್ಕಿ ಕೆಲವು ಕಡೆಗೆ ಇದೆ (ಸಿಂಗನಹಳ್ಳಿ)

೨೩. ಸೇವೆ : ದೀಡನ್ಮಸ್ಕಾರ ಹಾಕುವುದು ಪ್ರತಿ ಹೆಜ್ಜೆಗೊಂದರಂತೆ ಅಥವಾ ಸೂರ್ಯ ನಮಸ್ಕಾರ ಹಾಕುವರು.

೨೪. ದೀಪದ ಕಂಭ : ಕೆಲವು ಕಡೆಗೆ ಇದೆ

೨೫. ಬೇರೆ ಹೆಸರು : ಊರ ಎಲ್ಲಮ್ಮ ಸೀಮೆಎಲ್ಲಮ್ಮ ಹುಲಗಮ್ಮ, ಮಾಪುರ ತಾಯಿ, ಗುತ್ತೆವ್ವ ಹೀಗೆ ಹಲವಾರ ಹೆಸರುಗಳು.

೨೬. ಕರ್ತವ್ಯ : ಫಲ ಸಂತಾನದ ದೇವತೆ

೨೭. ಗುಡಿ : ಕಲ್ಲಿನದು

೨೮.	ಪಾದುಕೆಗಳು	: ಇವೆ ಗುಡಿ ಮುಂದೆ
೨೯.	ಹೊಳೆ ಕೆರೆ ಬಾವಿ	: ಕೆಲವು ಕಡೆ ಇವೆ
೩೦.	ಮೂರ್ತಿ	: ಕಟ್ಟಿಗೆಯಿಂದ ಕೆಲವು ಕಡೆ, ಬೆಳ್ಳಿ ಬಂಗಾರದು
೩೧.	ಮೂರ್ತಿಗೆ ಬಣ್ಣ	: ಕೆಲವು ಕಡೆ ಪೇಂಟ ಮಾಡಿದ್ದು ಜಾಜದಿಂದ, ಬಣ್ಣದಿಂದ ಮಾಡಿದ್ದು.
೩೨.	ಗುಡಿ ಅಲಂಕಾರ	: ಸುಣ್ಣ ಬಣ್ಣದಿಂದ, ಜಿರೋ ಲೈಟಿನಂದ ಎಸೇಯನ್ ಪೆಂಟ್ ಮತ್ತು ಮಿಶ್ರ ಮಾಧ್ಯಮಿ ಬಣ್ಣದಿಂದ.
೩೩.	ದೇವಿವಾರ	: ಶುಕ್ರವಾರ ಸಂಪತ್ತಿನ ವಾರ
೩೪.	ಗುಡಿಯ ಸ್ಥಳ	: ಊರ ಹೊರಗಡೆ ಅಡವಿಯಲ್ಲಿ
೩೫.	ನ್ಯಾಯ ಸ್ಥಾನ	: ಇಲ್ಲ.
೩೬.	ವೈದ್ಯ ಸ್ಥಾನ	: ಇಲ್ಲ
೩೭.	ಮನರಂಜನೆ ಸ್ಥಾನ	: ಅಲ್ಲ
೩೮.	ಆಯುಧ	: ತ್ರಿಶೂಲ, ಭರ್ಚಿ
೩೯.	ವಾಹನ	: ಹುಲಿ
೪೦.	ಸೌಮ್ಯ	: ಹೌದು
೪೧.	ಉಗ್ರದೇವಿಯೇ	: ಅಲ್ಲ
೪೨.	ಸ್ವರೂಪ	: ಹುತ್ತ
೪೩.	ಉಡಿಗೆ	: ಬೇವಿನುಡಿಗೆ, ಲಕ್ಕಿ ಉಡಿಗೆ, ಗಂಧದುಡಿಗೆ ಕೆಂಪು ಸೀರಿ, ಕೆಂಪು ಕುಬಸ
೪೪.	ಪೂಜಾರಿ	: ವಂಶಸ್ಥರು, ಕೆಲವುಕಡೆ ಅನುವಂಶದವರು
೪೫.	ಭಕ್ತರಲ್ಲಿ ಮತಾಂತರ	: ಇಲ್ಲ
೪೬.	ಶಿಷ್ಟರ ದೇವತೆಯೆ.?	: ಹೌದು.
೪೭.	ಕಾಲ	: ೧೪ನೇಯ ಶತಮಾನ
೪೮.	ಪರಿಶಿಷ್ಟರ ದೇವತೆ?	: ಹೌದು ಮತ್ತು ಸಾಮಾನ್ಯರ

೨. ದ್ಯಾವಮ್ಮ ದೇವಿ

೦೧. ಲೋಕ ದೇವತೆ : ಅಲ್ಲ, ಸ್ಥಳೀಯ ದೇವತೆ ಹೌದು

೦೨. ಪೂಜಾರಿ : ಬಡಿಗೇರು, ಕೆಲವು ಕಡೆ ಪಂಚಳದವರು

೦೩. ಆರಾಧಕರು : ಸರ್ವರು, ಊರಿನೆಲ್ಲಾ ಜನರು

೦೪. ದ್ಯಾವಮ್ಮನ ಅರ್ಥ : ದೈವದ ಅಮ್ಮ> ದೈವಮ್ಮ; ದ್ಯಾವಮ್ಮ

೦೫. ದ್ಯಾವಮ್ಮನ ಮನೆತನ : ಮಾಲೀಗೌಡರದು

೦೬. ಆಹಾರ : ಸಸ್ಯಹಾರ, ಮಾಂಸಾಹಾರ

೦೭. ಆಭರಣ ಅಲಂಕಾರ: ಅರಿಸಿಣ, ಡಾಬ, ಮೂಗುತಿ ಹಸಿರು ಬಳೆ

೦೮. ಜಾತ್ರೆ ಉತ್ಸವಗಳ ಕಾಲ : ಬೇಸಿಗೆಕಾಲ, ಚಳಿಗಾಲ

೦೯. ಹರಕೆ : ಮಳೆ, ಬೆಳೆ, ಬರಲು ದನ, ಕರು–ಮರಿ ಹೆಚ್ಚಲು, ಶ್ರೀಸಂಪತ್ತು ಆರೋಗ್ಯ ಸಂಪತ್ತು ನೌಕರಿ, ವ್ಯಾಪರ ಮಕ್ಕಳ ಸಂಪತ್ತು ಸಿಗಲೆಂದು

೧೦. ಕುಣಿತ : ಪೂಜಾರಿ ಕುಣಿತ

೧೧. ಹಾಡು : ದ್ವಿಪದಿ, ತ್ರಿಪದಿ, ಚೌಪದಿ

೧೨. ವಾದ್ಯ : ಹಲಗೆ, ಡೊಳ್ಳು, ಬಾಜಿ

೧೩. ಜನಪದ ಕಥೆ : ಸಪ್ತ ಮಾತೃಕೆಯರಲ್ಲಿ ಹಿರಿಯಕ್ಕ

೧೪. ಪೌರಾಣಿಕ : ದೊಡ್ಡ ದೇವತೆ

೧೫. ಐತಿಹಾಸಿಕ : ಇಲ್ಲ

೧೬. ಆಧುನಕ : ಇಲ್ಲ

೧೭. ಸಂಕೇತಗಳು : ಅರಿಶಿಣ, ಸುಖ ಸಮೃದ್ಧಿಯ

೧೮. ಬಲಿ : ಕುರಿ, ಕೋಣಬಲಿ

೧೯.	ಮುದ್ರೆ	: ಹಣಚೆ ಬಟ್ಟ ಹಾಕಿಸಿಕೊಳ್ಳುವುದು ಕೈಗೆ ಹಣೆಗೆ
೨೦.	ವಸ್ತ್ರ ವಡವೆ	: ಬಿಳಿಪತ್ತಲ, ಬಿಳಿ, ಕುಬಸ, ಡಾಬ, ಬೆಳ್ಳಿ, ತಾಳಿ, ಮೂಗುತಿ.
೨೧.	ದೀವಟಿಗೆ	: ಇದೆ, ಲೈಟ ಜಿರೋ ಬಲ್ಪ
೨೨.	ಥೇರು ಪಲ್ಲಕ್ಕಿ	: ಕೆಲವು ಕಡೆಗೆ ಇವೆ
೨೩.	ಸೇವೆ	: ಉರುಳು ಸೇವೆ
೨೪.	ದೀಪದ ಕಂಭ	: ಕೆಲವು ಕಡೆಗೆ ಇದೆ
೨೫.	ಬೇರೆ ಹೆಸರು & ಪ್ರಕಾರ	: ಊರ ದ್ಯಾವಮ್ಮ ಮನೆದ್ಯಾವಮ್ಮ, ಕೇರಿ ದ್ಯಾವಮ್ಮ
೨೬.	ಕರ್ತವ್ಯ	: ಮಳೆಬೆಳೆ ತರುವುದು
೨೭.	ಗುಡಿ	: ಕಲ್ಲಿನದು
೨೮.	ಮೂರ್ತಿ	: ಕಟ್ಟಿಗೆಯದು
೨೯.	ಪಾದುಕೆಗಳು	: ಇಲ್ಲ ಗುಡಿಮುಂದೆ
೩೦.	ಹೊಳೆಕರೆ ಬಾವಿ	: ಕೆಲವು ಕಡೆ ಇವೆ.
೩೧.	ಮೂರ್ತಿಗಳಿಗೆ ಬಣ್ಣದಿಂದ ಅಲಂಕಾರ	: ಏಷಿಯನ್ ಪೆಂಟ ಇತರೆ ಮಿಶ್ರ ಬಣ್ಣದಿಂದ
೩೨.	ಇನಾಮಿ ಹೊಲ	: ಸ್ಥಳೀಯ ದೇವತೆಗಿರುವುದು.
೩೩.	ಗುಡಿಯ ಅಲಂಕಾರ	: ಸುಣ್ಣ ಬಣ್ಣದಿಂದ & ಲೈಟ್ ಬಣ್ಣಬಣ್ಣದ ಲೈಟಗಳು
೩೪.	ದೇವಿವಾರ	: ಶುಕ್ರವಾರ, ಸಂಪತ್ತಿನವಾರ
೩೫.	ಗುಡಿಯ ಸ್ಥಳ	: ಊರ ಒಳಗೆ
೩೬.	ನ್ಯಾಯ ಸ್ಥಾನ	: ಹೌದು, ತೊಯ್ದು ಬಟ್ಟೆಯ ಮೇಲೆ
೩೭.	ವೈದ್ಯ ಸ್ಥಾನ	: ಕಿವಿಯ ಔಷದ ಹಿಂಡುವುದು & ಆಧರ ಅಚ್ಚುವುದು.

೩೮. ಮನರಂಜನಸ್ಥಾನ	: ಹೌದು ಬಯಲಾಟಗಳು ಹಾಡುತ್ತಾರೆ, ದೇವಿ ಆಟ
೩೯. ಆಯುಧಗಳು	: ಚಂದ್ರಾಯಧ, ತ್ರಿಶೂಲ, ಭರ್ಚಿ
೪೦. ವಾಹನ	: ಸಿಂಹ
೪೧. ಸೌಮ್ಯ	: ಹೌದು
೪೨. ಉಗ್ರ	: ಅಲ್ಲ
೪೩. ಸ್ವರೂಪ	: ಕೆಂಪು ಸೀರೆ.
೪೪. ಪೂಜೆ	: ಮೂರ್ತಿಗೆ ಪೂಜೆಮಾಡುತ್ತಾರೆ.
೪೫. ಉಡಿಗೆ	: ಕೆಂಪು ಸೀರೆ, ಕೆಂಪು ಕುಬಸ ಕೆಂಪು ಬಳೆ
೪೬. ಪೂಜಾರಿ	: ಅನುವಂಶಿಕನ ಹೌದು, ವಂಶದವರು ಇದ್ದಾರೆ.
೪೭. ಭಕ್ತರಲ್ಲ ಮತಾಂತ	: ಇಲ್ಲ
೪೮. ಅಲೆಮಾರಿ ದೇವತೆ?	: ಅಲ್ಲ
೪೯. ಶಿಷ್ಟರ ದೇವತೆ	: ಹೌದು
೫೦. ಪರಿಶಿಷ್ಟರ ದೇವತೆ	: ಹೌದು ಸಾಮಾನ್ಯ ಜನರ ದೇವತೆ
೫೧. ಕಾಲ	: ಮಾನವರದು

೩. ಮರೆಮ್ಮ ದೇವಿ

೦೧. ಲೋಕ ದೇವತೆ	: ಸ್ಥಳೀಯ ದೇವತೆ, ಎರಡೂ ಹೌದು
೦೨. ಪೂಜಾರಿ	: ಹೊಲೆಯರು, ಮಾದಿಗರು, ಕೆಲವು ಕಡೆಗೆ ತಳವಾರ
೦೩. ಆರಾಧಕರ	: ಸರ್ವರು, ಊರಿನೆಲ್ಲಾ ಜನರ
೦೪. ಮರಗಮ್ಮನ ಅರ್ಥ	: ಮರ + ಅಮ್ಮ > ಮರಗಮ್ಮ > ಮರಣದಮ್ಮ > ಮರಗಮ್ಮ ಮರೆಮ್ಮ

೦೫. ಮರೆಮ್ಮನ ಮನೆತನ	: ಕುಲಕರ್ಣಿ
೦೬. ಆಹಾರ	: ಕೇವಲ ಮಾಂಸಹಾರ
೦೭. ಆಭರಣ ಅಲಂಕಾರ	: ಹಸಿರು ಬಳೆ, ಅರಿಸಿಣ ಡಾಬ, ಮೂಗುತಿ
೦೮ ಜಾತ್ರೆ ಉತ್ಸವಗಳ ಕಾಲ	: ಬಿತ್ತುವಾಗ, ರಾಶಿ ಮಾಡುವಾಗ
೦೯. ಹರಕೆ	: ರೋಗ ರುಜಿನ ನೀವಾರಣೆಗಾಗಿ
೧೦. ಕುಣಿತ	: ಮರಗಮ್ಮ ಕುಣಿತ
೧೧. ಹಾಡು	: ದ್ವಿಪದಿ, ತ್ರಿಪದಿ, ಚೌಪದಿ
೧೨. ವಾದ್ಯ	: ಹಲಗೆ, ಡೊಳ್ಳು, ಬಾಜಿ
೧೩. ಜನಪದ ಕಥೆ	: ಸಪ್ತ ಮಾತೃಕೆಯಲ್ಲಿ ಎರಡನೆಯವಳು
೧೪. ಪೌರಾಣಿಕ	: ಬ್ರಾಹ್ಮಣರ ಕನ್ಯೆಗೆ ಹೊಲೆಯರವನ್ನು ಲಗ್ನವಾದ ಕಥೆ
೧೫. ಐತಿಹಾಸಿಕ	: ಇಲ್ಲ
೧೬. ಆಧುನಕ	: ಇಲ್ಲ
೧೭. ಸಂಕೇತಗಳು	: ಎಣ್ಣೆ ಜಿಗುಟತನ
೧೮. ಬಲಿ	: ಕುರಿ ಮತ್ತು ಕೋಣ
೧೯. ಮುದ್ರೆ	: ಹಣಚೆ ಬಟ್ಟ, ಕೈಗೆ, ಮೈಗೆ ಹಣೆಗೆ
೨೦. ವಸ್ತ್ರ ವಡವೆ	: ಹಸಿರು ಸೀರೆ, ಹಸಿರು ಕುಬಸ ಹಸಿರು ಬಳೆ
೨೧. ದೀವಟಿಗೆ ಬಣ್ಣ	: ಇದೆ ರಾತ್ರಿಹೊತ್ತಿನಲ್ಲಿ ಮತ್ತು ಲೈಟಿನಲ್ಲಿ ಬೆಳಕು ಬಣ್ಣದ
೨೨. ಥೇರು	: ಪಲ್ಲಕ್ಕಿ ಇದೆ, ಥೆರು ಇಲ್ಲ.
೨೩. ಸೇವೆ	: ಉರುಳು ಸೇವೆ
೨೪. ದೀಪ ಕಂಭ	: ಕೆಲವು ಕಡೆ ಇದೆ ಕೆಲವು ಕಡೆ ಇಲ್ಲ.

೨೫. ಪ್ರಕಾರ	:	ಗಾಳಿ ಮರೆಮ್ಮ ಸೀಮೆ ಮರೆಮ್ಮ ಊರ ಮರಗಮ್ಮ
೨೬. ಕರ್ತವ್ಯ	:	ಎಲ್ಲಾ ಜನರ ಆರೋಗ್ಯ ಕಾಪಾಡುವುದು
೨೭. ಗುಡಿ	:	ಕಲ್ಲಿನದು
೨೮. ಮೂರ್ತಿ	:	ಕಟ್ಟಿಗೆಯದು
೨೯. ಪಾದುಕೆಗಳು	:	ಇಲ್ಲ
೩೦. ಹೊಳೆ, ಕೆರೆ ಬಾವಿ	:	ಕೆಲವು ಕಡೆ ಇದೆ ಕೆಲವು ಕಡೆಗೆ ಇಲ್ಲ.
೩೧. ಮೂರ್ತಿಗೆ ಬಣ್ಣದ ವಿಧಾನ	:	ಜಾಜ, ಬಣ್ಣ ಏಷಿಯನ್ ಪೆಂಟ್, ವಿವಿಧ ಬಣ್ಣಗಳ ಮಿಶ್ರಣ
೩೨. ಇನಾಮಿ ಭೂಮಿ	:	ಸಾರ್ವಜನಿಕ ಸ್ಥಳ, ಭಕ್ತರ ಕಾಣಿಕೆ ಸ್ಥಳ
೩೩. ಗುಡಿಯ ಅಲಂಕಾರ	:	ಸುಣ್ಣ ಬಣ್ಣದಿಂದ
೩೪. ದೇವಿವಾರ	:	ಮಂಗಳವಾರ, ಜಡ್ಡು ಜಾಪತ್ತು ನವಾರಿಸುವವಾರ
೩೫. ಗುಡಿಯ ಸ್ಥಳ	:	ಊರ ಒಳಗೆ, ಊರ ಹೊರಗೆ ಅಡವಿಯಲ್ಲಿ
೩೬. ನ್ಯಾಯ ಸ್ಥಾನ	:	ಹೌದು ಉಟ್ಟಬಟ್ಟೆಯ ಮೇಲೆ
೩೭. ಮನರಂಜನ ಸ್ಥಾನ	:	ಹೌದು ಬಯಲಾಟಗಳು
೩೮. ಆಯುಧಗಳು	:	ಚಂದ್ರಯುಧ, ತ್ರಿಶೂಲ, ಭರ್ಚಿ
೩೯. ವಾಹನ	:	ಸಿಂಹ
೪೦. ಸೌಮ್ಯ	:	ಅಲ್ಲ
೪೧. ಉಗ್ರ	:	ಹೌದು
೪೨. ಪೂಜೆ	:	ಮೂರ್ತಿ ಪೂಜೆ ಮಾಡುವರು
೪೩. ಉಡಿಗೆ	:	ಹಸಿರು ಸೀರೆ, ಹಸಿರು ಕುಬುಸ, ಹಸಿರು ಬಳೆ
೪೪. ಪೂಜಾರಿ	:	ಅನುವಂಶಿಕರು, ಹೌದು

೪೫. ಭಕ್ತರಲ್ಲಿ ಮತಾಂತರ : ಇಲ್ಲ

೪೬. ಅಲೆಮಾರಿ ದೇವತೆಯೆ? : ಹೌದು

೪೭. ಪರಿಶಿಷ್ಟರ ದೇವತೆಯೆ? : ಹೌದು

೪. ಕಾಳಮ್ಮದೇವಿ

೦೧. ಲೋಕ ದೇವತೆ : ಸ್ಥಳೀಯ ದೇವತೆ, ಎರಡೂ

೦೨. ಪೂಜಾರಿ : ಪಂಚಾಳದವರು

೦೩. ಆರಾಧ್ಯಕರು : ಪಂಚಾಳದವರು

೦೪ ಕಾಳಮ್ಮನ ಅರ್ಥ : ಕಾಳ+ಅಮ್ಮ>ಕಾಳಮ್ಮ>ಕಾಳಿನ ಅಮ್ಮ ಕತ್ತಿಲೆಯಅಮ್ಮ

೦೫. ಕಾಳಮ್ಮನ ಮನೆತನ : ಬಡೆಗೇರರ ಮನೆತನ

೦೬. ಆಹಾರ : ಸಸ್ಯಹಾರ

೦೭. ಆಭರಣ : ಕರಿ ಸೀರಿ ಕರಿ ಕುಬಸ, ಕರಿ ಬಳೆ, ಮೂಗಿತಿ

೦೮. ಜಾತ್ರೆ ಉತ್ಸವಗಳ ಕಾಲ : ಬೇಸಿಗೆ ಕಾಲ, ಚಳಿಗಾಲ

೦೯. ಹರಕೆ : ಕಷ್ಟದಿಂದ ಪಾರುಮಾಡುವಳು

೧೦. ಹಾಡು : ದ್ವಿಪದಿ, ತ್ರಿಪದಿ, ಚೌಪದಿ

೧೧. ಕುಣಿತ : ಕಾಳಿ ಕುಣಿತ

೧೨. ವಾದ್ಯ : ಡೊಳ್ಳು, ಮದ್ದಳೆ, ಜಾಗಟ, ತಾಳ

೧೩. ಜನಪದ ಕಥೆ : ಪಾರ್ವತಿ ಅಂಶದವಳು

೧೪. ಪೌರಾಣಿಕ : ದಕ್ಷಬ್ರಹ್ಮನ ಯಾಗದಲ್ಲಿ ಸುಟ್ಟು ಕಪ್ಪಾದಗಳು

೧೫. ಐತಿಹಾಸಿಕ : ಇಲ್ಲ

೧೬. ಆಧುನಕ : ಇಲ್ಲ

೧೭. ಸಂಕೇತಗಳು	: ಚಂದ್ರ ಸಮೃದ್ಧಿಯ ಸಂಕೇತ ಕಪ್ಪು ಸಂಕೇತ
೧೮. ಬಲಿ	: ಇಲ್ಲ
೧೯. ಮುದ್ರೆ	: ಇಲ್ಲ
೨೦. ವಸ್ತ್ರ ವಡವೆ	: ಕರಿ ಸೀರೆ, ಕರಿ ಕುಬುಸ, ಕರಿ ಬಳೆ, ಡಾಬ
೨೧. ದೀವಟಿಗೆ	: ಇಲ್ಲ
೨೨. ಥೆರು	: ಇಲ್ಲ
೨೩. ಪಲ್ಲಕ್ಕಿ	: ಇದೆ
೨೪. ದೀಪದ ಕಂಭ	: ಇದೆ
೨೫. ಸೇವೆ	: ಉರುಳು ಸೇವೆ, ಬೆಂಕಿ ಹಾಯುವುದು
೨೬. ಬೇರೆ ಹೆಸರು & ಪ್ರಕಾರ	: ಬನ್ನ ಮಹಾಕಾಳಿ
೨೭. ಕರ್ತವ್ಯ	: ಆರಾಧಿಸುವವರಿಗೆ ಕಾಪಾಡುವಳು
೨೮. ಗುಡಿ	: ಕಲ್ಲಿನದು
೨೯. ಮೂರ್ತಿ	: ಕಲ್ಲು ಮತ್ತು ಕಟ್ಟಿಗೆ
೩೦. ಗುಡಿಯ ಮುಂದೆ ಪಾದುಕೆಗಳು	: ಇಲ್ಲ
೩೧. ಹೊಳೆ, ಕೆರೆ, ಬಾವಿ	: ಕೆಲವು ಕಡೆ ಇದೆ, ಕೆಲವು ಕಡೆ ಇಲ್ಲ.
೩೨. ಮೂರ್ತಿ ಬಣ್ಣ	: ಕರಿಬಣ್ಣದ ಮೂರ್ತಿ
೩೩. ಇನಾಮಿ ಸ್ಥಳ	: ಇದೆ
೩೪. ಗುಡಿಯ ಅಲಂಕಾರ	: ಸುಣ್ಣ, ಬಣ್ಣದಿಂದ ಅಲಾಂಕಾರ
೩೫. ಗುಡಿಯ ಸ್ಥಳ	: ಊರಿನ ಒಳಗೆ

೩೬. ದೇಟಿವಾರ : ಶುಕ್ರವಾರ ಸುಖ ಸಮೃದ್ಧಿತರುವ

೩೭. ನ್ಯಾಯ ಸ್ಥಾನ : ಇದೆ

೩೮. ವೈದ್ಯ ಸ್ಥಾನ : ಇದೆ

೩೯. ಮನರಂಜನ ಸ್ಥಾನ : ಇಲ್ಲ

೪೦. ಆಯುಧಗಳು : ಖಡ್ಗ, ಭರ್ಚಿ, ಕೊಡಲಿ ತ್ರಿಶೂಲ

೪೧. ವಾಹನ : ಸಿಂಹ

೪೨. ಸೌಮ್ಯ : ಇಲ್ಲ

೪೩. ಉಗ್ರದೇವಿ : ಹೌದು

೪೪. ಸ್ವರೂಪ : ಎಂಬಲಗಡಗಿ ಬನ್ನಗಿಡ

೪೫. ಪೂಜೆ : ಮೂರ್ತಿ ಪೂಜೆ ಮಾಡುವರು

೪೬. ಉಡಿಗೆ : ಕರಿ ಸೀರಿ, ಕರಿ ಕುಬಸ

೪೭. ಪೂಜಾರಿ : ಅನುವಂಶಿಕನೆ ಮತ್ತು ವಂಶತ್ಥರು ಹೌದು

೪೮. ಭಕ್ತರಲ್ಲಿ ಮುಂತಾತರವಿದೆ : ಹೌದು

೪೯. ಅಲೆಮಾರಿ ದೇವತೆಯಾ : ಅಲ್ಲ

೫೦. ಶಿಷ್ಟರ ದೇವತೆ.? : ಹೌದು

೫೧. ಪರಿಶಿಷ್ಟರ ದೇವತೆ : ಅಲ್ಲ

೫೨. ಕಾಲ : ಮಾನವರದು ಗ್ರಾಮ

೫. ಭಾಗಮ್ಮ

೦೧. ಲೋಕ ದೇವತೆ	: ಹೌದು
೦೨. ಪೂಜಾರಿ	: ಹೂಗಾರ
೦೩. ಆರಾಧಕರು	: ಸರ್ವರು ಊರಿನೆಲ್ಲಾ ಜನ
೦೪. ಭಾಗಮ್ಮನ ಅರ್ಥ	: ಭಾಗ್ಯದ + ಅಮ್ಮ> ಭಾಗಮ್ಮ ಲಕ್ಷ್ಮೀ
೦೫. ಭಾಗಮ್ಮನ ಮನೆತನ	: ವಿಜಯನಗರ
೦೬. ಆಹಾರ	: ಸಸ್ಯಹಾರ
೦೭. ಆಭರಣ ಅಲಂಕಾರ	: ಕೆಂಪು ಸೀರೆ, ಕೆಂಪುಕುಬಸ ಕೆಂಪು ಬಳಿ
೦೮. ಜಾತ್ರೆ ಉತ್ಸವಗಳ ಕಾಲ	: ದೀಪವಾಳಿಯಿಂದ ಯುಗಾದಿತನಕ
೦೯. ಹರಕೆ	: ಬೇಡಿದನ್ನು ಈಡೇರಿಸುವಳು
೧೦. ಕುಣಿತ	: ಭಾಗಮ್ಮನ ಕುಣಿತ, ಪುರವಂತರ ಕುಣಿತ
೧೧. ಹಾಡು	: ದ್ವಿಪದಿ, ತ್ರಿಪದಿ, ಚೌಪದಿ
೧೨. ವ್ಯಾದ	: ಹಲಗೆ, ಡೊಳ್ಳು, ಡೋಲು, ಮುದ್ದಳೆ, ಜಾಂಗಟೆ ಕೈತಾಳ
೧೩. ಜನಪದ ಕಥೆ	: ಅತ್ತಿಮನ ಸೊಸೆ ನೀರು ತುಂಬಲು ಬಂದು ಹೊಳೆಗೆ ಬಿದ್ದಳು
೧೪. ಪೌರಾಣಿಕ	: ವಿಷ್ಣುವಿನ ಹೆಂಡತಿ ಲಕ್ಷ್ಮಿ
೧೫. ಐತಿಹಾಸಿಕ	: ವಿಜಯನಗರದ ಲಕ್ಷ್ಮೀ
೧೬. ಆಧುನಕ	: ಗೌಡರ ಕನಸಿನಲ್ಲಿ ಬಂದು ದೇವರಾದವಳು
೧೭. ಸಂಕೇತಗಳು	: ಬಯಸಿದ್ದು ಈಡೇರುವುದು ಈಡೇರಿದಾಗ ಸಿಡಿ ಆಡುವುದು
೧೮. ಬಲಿ	: ಸಿಡಿ ಆಡುವುದು (ಈಗ ಇರುವುದಿಲ್ಲ)

೧೯.	ಮುದ್ರೆ	: ಇಲ್ಲ
೨೦.	ದೀವಟಗೆ	: ಇಲ್ಲ
೨೧.	ವಸ್ತ್ರ ವಡವೆ	: ಕೆಂಪು ಸೀರೆ, ಕೆಂಪು ಕುಬಸ, ಚಂದ್ರ
೨೨.	ಥೇರು	: ಇಲ್ಲ
೨೩.	ಪಲ್ಲಕ್ಕಿ	: ಇದೆ
೨೪.	ಸೇವೆ	: ಸಿಡಿ, ಆಡುವುದಿಲ್ಲ.
೨೫.	ದೀಪದ ಕಂಭ	: ಇದೆ
೨೬.	ಬೇರೆ ಹೆಸರು & ಪ್ರಕಾರ	: ಭಾಗಮ್ಮ, ಭಾಗ್ಯವಂತೆ
೨೭.	ಕರ್ತವ್ಯ	: ಬಯಕೆ ಈಡೇರಿಸುವಳು
೨೮.	ಗುಡಿ	: ಕಲ್ಲಿನದು
೨೯.	ಮೂರ್ತಿ	: ಕಟ್ಟಿಗೆದು
೩೦.	ಪಾದುಕೆಗಳು	: ಇಲ್ಲ
೩೧.	ಹೊಳೆ (ನದಿ) ಕೆರೆ, ಬಾವಿ	: ಇದೆ
೩೨.	ಬಣ್ಣಗಾರಿಕೆ	: ಕೆಂಪುಬಣ್ಣದ ಮೂರ್ತಿ
೩೩.	ಇನಾಮಿ ಹೊಲ	: ಇಲ್ಲ
೩೪.	ಗುಡಿಯ ಅಲಂಕಾರ	: ಸುಣ್ಣ, ಬಣ್ಣದಿಂದ
೩೫.	ದೇವಿವಾರ	: ಶುಕ್ರವಾರ
೩೬.	ಗುಡಿಯ ಸ್ಥಳ	: ಊರ ಹೊರಗಡೆ
೩೭.	ನ್ಯಾಯ ಸ್ಥಾನ	: ಹೌದು
೩೮.	ವೈದ್ಯಸ್ಥಾನ	: ಹೌದು
೩೯.	ಮನರಂಜನೆಯ ಸ್ಥಾನ	: ಇಲ್ಲ

೪೦. ಆಯುಧಗಳು : ಇಲ್ಲ

೪೧. ವಾಹನ : ಇಲ್ಲ

೪೨. ಸೌಮ್ಯ : ಹೌದು

೪೩. ಉಗ್ರ : ಅಲ್ಲ

೪೪. ಸ್ವರೂಪ : ಕಂಭ

೪೫. ಪೂಜೆ : ಕಂಭಕ್ಕೆ

೪೬. ಉಡಿಗೆ : ಕೆಂಪುಸೀರೆ, ಕೆಂಪು ಕುಬುಸ, ಕೆಂಪು ಬಳೆ ಕೆಂಪು ಮಣಿ

೪೭. ಪೂಜಾರಿ ಅನುವಂಶಿಕನೆ? : ಹೌದು

೪೮. ಭಕ್ತರಲ್ಲಿ ಮತಾಂತರವಿದೆ? : ಇಲ್ಲ

೪೯. ಅಲೆಮಾರಿ ದೇವತೆ : ಅಲ್ಲ

೫೦. ಶಿಷ್ಟರ ದೇವತೆ? : ಹೌದು

೫೧. ಪರಿಶಿಷ್ಟರ ದೇವತೆ? : ಹೌದು

೫೨. ಕಾಲ : ಕ್ರಿ.ಶ.೧೬ನೇ ಶತಮಾನ

೬. ದುರಗಮ್ಮ

೦೧. ಲೋಕದೇವತೆ : ಅಲ್ಲ ಸ್ಥಳಿಯ ದೇವತೆ

೦೨. ಪೂಜಾರಿ :

೦೩. ಆರಾಧಕರು : ಸರ್ವರು, ಊರಿನೆಲ್ಲಾ ಜನರು

೦೪. ದುರಗಮ್ಮನ ಅರ್ಥ : ದುರ್ಗ = ಅಮ್ಮ > ದುರ್ಗಮ್ಮ> ಕೋಟಿದೈವ> ಕಷ್ಟದ ದೇವತೆ

೦೫. ದುರಗಮ್ಮನ ಮನೆತನ : ಅರಸು ಮನೆತನ

೦೬. ಆಹಾರ : ಕೇವಲ ಮಾಂಸಾಹಾರ

೦೭. ಆಭರಣ ಅಲಂಕಾರ: ಕೆಂಪು ಬಳೆ, ಅರಿಸಿಣ ಮೂಗುತಿ, ಕೆಂಪು ಮಣಿಸರ

೦೮. ಜಾತ್ರೆ, ಉತ್ಸವಗಳ ಕಾಲ : ಬೇಸಿಗೆಕಾಲ, ಚಳಿಗಾಲ

೦೯. ಹರಕೆ : ತಪ್ಪು ನಿವಾರಣೆ ಮಾಡುವ ದೇವತೆ

೧೦. ಕುಣಿತ : ದುರಗಮ್ಮನ ಕುಣಿತ

೧೧. ಹಾಡು : ದ್ವಿಪದ, ತ್ರಿಪದಿ, ಚೌಪದಿ

೧೨. ವಾದ್ಯ : ಹಲಗೆ, ಡೊಳ್ಳು, ಬಾಜಿ

೧೩. ಜನಪದ ಕಥೆ : ಸಪ್ತಮಾತೃಕೆಯರಲ್ಲಿ ಮೂರನೆಯವಳು

೧೪. ಆಧುನಕ : ಇಲ್ಲ

೧೫. ಪೌರಾಣಿಕ : ರಾಕ್ಷಸರ ಸಂಹಾರಕ್ಕಾಗಿ ಬಂದ ದೇವಿ

೧೬. ಐತಿಹಾಸಿಕ : ರಾಜರು ಕೋಟೆ ನಿರ್ಮಿಸಿದಾಗ

೧೭. ಸಂಕೇತಗಳು : ಭಂಡಾರ

೧೮. ಬಲಿ : ಕುರಿ, ಕೋಣ

೧೯. ಮುದ್ರೆ : ಹಣಚೆ ಬಟ್ಟು ಕೈಗೆ, ಮೈಗೆ, ಹಣೆಗೆ

೨೦. ವಸ್ತ್ರವಡವೆ : ಕೆಂಪುಸೀರಿ, ಕೆಂಪು ಕುಬುಸ, ಕೆಂಪುಬಳೆ

೨೧. ದೀವಟಿಗೆ : ಇದೆ ರಾತ್ರಿಯಲ್ಲಿ ಮತ್ತು ವಿದ್ಯುತ್ತ ಲೈಟಿನ ಬೆಳಕು.

೨೨. ತೇರು : ಇಲ್ಲ ಪಲ್ಲಕ್ಕಿ ಇದೆ.

೨೩. ಸೇವೆ	: ಉರುಳು ಸೇವೆ
೨೪. ದೀಪದ ಕಂಭ	: ಇಲ್ಲ
೨೫. ಬೇರೆ ಹೆಸರು & ಪ್ರಕಾರ	: ಊರದುರಗಮ್ಮ ಕ್ವಾಟಿದುರಗಮ್ಮ
೨೬. ಗುಡಿ	: ಕಲ್ಲಿನದು
೨೭. ಮೂರ್ತಿ	: ಕಟ್ಟಿಗೆಯದು
೨೮. ಕರ್ತವ್ಯ	: ಸಿರಿ ಸಂಪತ್ತು ಹೆಚ್ಚಿಸುವಳು ರಕ್ಷಿಸುವಳು
೨೯. ಪಾದುಕೆಗಳು	: ಇಲ್ಲ
೩೦. ಹೊಳೆ (ನದಿ) ಕೆರೆ, ಬಾವಿ	: ಇಲ್ಲ
೩೧. ಮೂರ್ತಿಗೆ ಬಣ್ಣ	: ಇದೆ ಏಷಿಯನ್ ಪೆಂಟ್ ಮತ್ತು ವಿಶ್ರಣ ಬಣ್ಣ
೩೨. ಇನಾಮಿ ಹೊಲ	: ಇಲ್ಲ
೩೩. ಗುಡಿ ಅಲಂಕಾರ	: ಸುಣ್ಣಬಣ್ಣದಿಂದ
೩೪. ದೇವಿವಾರ	: ಶುಕ್ರವಾರ, ಸಂಪತ್ತಿನವಾರ
೩೫. ಗುಡಿಯ ಸ್ಥಳ	: ಊರ ಒಳಗೆ, ಹೊರಗೆ
೩೬. ನ್ಯಾಯ ಸ್ಥಾನ	: ಹೌದು
೩೭. ವೈದ್ಯ ಸ್ಥಾನ	: ಹೌದು, ಆದರ ಹಚ್ಚುವುದು ಆದರ ಕುಡಿಸುವುದು.
೩೮. ಮನರಂಜನ ಸ್ಥಾನ	: ಹೌದು, ಬಯಲಾಟಗಳು
೩೯. ಆಯುಧಗಳು	: ಚಂದ್ರಾಯುಧಗಳು, ತ್ರಿಶೂಲ, ಭರ್ಚಿ ಖಡ್ಗ
೪೦. ವಾಹನ	: ಸಿಂಹ

೪೧. ಸೌಮ್ಯ : ಇಲ್ಲ

೪೨. ಉಗ್ರ : ಹೌದು

೪೩. ಸ್ವರುಪ : ಕೊಟೆ, ಕೊತ್ತಲ, ಗವಿ

೪೪. ಪೂಜೆ : ಮೂರ್ತಿಗೆ ಪೂಜೆ ಮಾಡುವರು

೪೫. ಉಡಿಗೆ : ಕೆಂಪು ಸೀರಿ, ಕೆಂಪು ಕುಬಸ,

೪೬. ಪೂಜಾರಿ ಅನುವಂಶಕನೆ : ಹೌದು

೪೭. ಭಕ್ತರು ಮತಾಂತರ : ಇಲ್ಲ

೪೮. ಅಲೆಮಾರಿದೇವತೆ : ಹೌದು

೪೯. ಶಿಷ್ಟರ ದೇವತೆ : ಅಲ್ಲ

೫೦. ಪರಿಶಿಷ್ಟರ ದೇವತೆ : ಹೌದು

೫೧. ಕಾಲ : ಕ್ರಿ.ಶ. ೪ನೇಯ ಶತಮಾನ

ಅನುಬಂಧ - ೩

ಮಾಹಿತಿ ನೀಡಿದ ವಕ್ತೃಗಳು

ಶ್ರೀ ಲಕ್ಕಮ್ಮ ದೇವಿಯ ಮೂರ್ತಿಯನ್ನು ಶ್ರೀ ಪ್ರಭು ತಂದೆ ದೇವಿಂದ್ರಪ್ಪ ನಂದಿಹಳ್ಳಿ, ಯಲಗೋಡ ತಾ॥ ಜೇವರ್ಗಿ ಇವರ ಅಮೃತ ಅಸ್ತದಿಂದ ಇವರ ಕೈಚಳಕದಿಂದ ಉಳಿ: ಸುತ್ತಿಗೆ ಎಟ್ಟಿನಂದ ಶಿಲ್ಪಿಯ ಮನಸ್ಸು ಏಕಾಗ್ರತೆಯಿಂದ ಜನರು ಮೆಚ್ಚುವಂತೆ ಈ ದೇವಿಯ ಮೂರ್ತಿಯನ್ನು ಕಟ್ಟಿಗೆಯಲ್ಲಿ ಕೇತ್ತನೆ ಮಾಡಿದ್ದಾನೆ, ಶ್ರೀ ಪ್ರಭ ಅವರ ಕೈಯಲ್ಲಿ ಹಲವಾರು ದೇವತೆಗಳನ್ನು ಕೇತ್ತನೆ ಮಾಡಿದ್ದಾರೆ. ಹೇಳಿ ಕೇಳಿ ಪ್ರಭು ಎಂತಹ ಹೆಸರು ಪ್ರಭು ಅಂದರೆ ಸಾಕ್ಷತ ಪರಮೇಶ್ವರ ಹೆಸರು ಹೊಂದಿದ್ದ ಪ್ರಭು ಹೆಸರಿಗೆ ತಕ್ಕಂತೆ ದೇವತೆಯ ಮೂರ್ತಿಯನ್ನು ರಚಿಸಿದ್ದಾರೆ ಇಡೀ ಊರಿನ ಸುತ್ತ ಮುತ್ತಲೂ ಗ್ರಾಮದ ಮತ್ತು ತಾಲೂಕು ಜಿಲ್ಲೆಯ ಜನರು ಮೆಚ್ಚುವಂತೆ ಈ ಮೂರ್ತಿಯನ್ನು ಕೇತ್ತನೆ ಮಾಡಿದ್ದಾರೆ ಇವರು ರಥ ಶಿಲ್ಪಿಗಳು ಮತ್ತು ಪಲ್ಲಕ್ಕಿ ಶಿಲ್ಪಿಗಳು ಕುದರೆ ಕೇತ್ತನೆ ಮಾಡುವ ಶಿಲ್ಪಿಗಳು ಎಲ್ಲವನ್ನು ಸೈಯನ್ನುವ ಶ್ರೀ ಪ್ರಭು ಶಿಲ್ಪಿಗಳು ಸದಾ ಲವಲವಿಕೆಯಿಂದ ಇರುತ್ತಾರೆ. ಕೆಲಸದಲ್ಲಿ ಪ್ರಮಾಣಿಕತನ ಕೊಟ್ಟ ಮಾತಿನಂತೆ ನಡೆಯುವರು ಸದ್ಯ ಶಹಾಪೂರು ತಾಲೂಕಿನಲ್ಲಿ ರಥ ಶಿಲ್ಪಿಗಳು ಎಂಬ ನಾಮ ಫಲಕದ ಹೆಸರಿನಲ್ಲಿ ಗುಲಬರ್ಗಾ ಮತ್ತು ಬೆಂಗಳೂರು ಮುಖ್ಯರಸ್ತೆಯ ಪಕ್ಕದಲ್ಲಿ ವರ್ಕಶಾಪ ನಡೆಸುತ್ತಿದ್ದಾರೆ.

ಅವರ ಕೈಯಲ್ಲಿ ನಾಲ್ಕು ಜನ ಕೆಲಸಗಾರರು ಸಮಯವಿಲ್ಲದಷ್ಟು ಕೆಲಸಗಳು ಅವರಿಗೆ ಕೂಡಿಕೊಂಡು ಬರುತ್ತವೆ ಶ್ರೀ ಪ್ರಭ ಶಿಲ್ಪಗಳು ಕಾಷ್ಠ ಶಿಲ್ಪಗಳು ಕೇತ್ತನೆ ಕೆಲಸವು ಸೂಕ್ಷ್ಮಯ ಡಿಸೈನಂಗ, ಆಕಾರ ಆಳತೆ ಪ್ರಮಾಣ ಹೊಂದಾಣಿಕೆ ಒಂದುಕೊಂಡು ಹೊಲುವಂತೆ ನಕ್ಷಾ ಚಿತ್ರಗಳು (ಡಿಸೈನಂಗ್) ಪಡಸಾಲಿ ಕೆಲಸ ಗಡಿಗೆ ಕುಡಿಸುವುದು ಇದು ಕಟಿಗೆಯಲ್ಲಿಯೇ ಇರುತ್ತದೆ ಈ

ಗುಡಿಯ ಸುತ್ತಾ ಮಾವಿನ ಆಕಾರ ಗೋಲಾಕರದ ಕಾಯಿ ಹಳ್ಳಿ ಗೌಡರ ಮನೆತನಕ ಒಪ್ಪುವಂತೆ ಪಡಸಾಲೆ ಮಾಡಿದ್ದಾರೆ ಹಾಗು ತೋಟ್ಟಿಲ್ಲ ಮತ್ತು ರಥ ಹಾಗೂ ಶ್ರೀದ್ಯಾವಮ್ಮದೇವಿ ಬಂಡಿಯ ಮೂರ್ತಿಗಳು ಈ ಕೆಳಗಿನಂತಿವೆ.

೧. ಆಳಂದ ತಾಲೂಕಿನ ಖಜುರಿ ಗ್ರಾಮದ ಶ್ರೀ ವೆಂಕಟೇಶ್ವರ ಮುರ್ತಿ ಕಟ್ಟಿಗೆಯಲ್ಲಿ ಮಾಡಿದ್ದಾರೆ.

೨. ಸಿಂದಗಿ ತಾಲುಕಿನ ಬಿಜ್ಜಲಬಾವಿ ಗ್ರಾಮದಲ್ಲಿ ೩೦ಫಿಟ್ ಎತ್ತರ ಕಟ್ಟಿಯಲ್ಲಿ ಜೋಡಣೆ ಮಾಡಿದ್ದಾರೆ.

೩. ಸುರುಪೂರು ತಾಲೂಕಿನ ತಳವರಗೇರಿ ಗ್ರಾಮದಲ್ಲಿ ದೇವಿ ಮೂರ್ತಿ ಮಾಡಿದ್ದಾರೆ.

೪. ಮುದ್ದೇಬಿಹಾಳ ತಾಲುಕಿನ ಮೈಲಾಪೂರ ಗ್ರಾಮದಲ್ಲಿ ಶ್ರೀ ದ್ಯಾವಮ್ಮದೇವಿ ಮೂರ್ತಿ ಮಾಡಿದ್ದಾರೆ ೫ ಅಡಿ ಎತ್ತರ ಕಟ್ಟಿಗೆಯಲ್ಲಿ

೫. ಮುದ್ದೇಬಿಹಾಳ ತಾಲೂಕಿನ ಕಣ್ಣಕಲ್ಲ (ಕರೆಕಲ್ಲ) ಗ್ರಾಮದಲ್ಲಿ ಶ್ರೀ ದ್ಯಾವಮ್ಮದೇವಿ ಮಾರ್ತಿಯನ್ನು ಕಟ್ಟಿಯಲ್ಲಿ ೫ ಅಡಿ ಎತ್ತರ ನಿರ್ಮಿಸಿದ್ದಾರೆ

೬. ಸುರುಪೂರು ತಾಲೂಕಿನ ಯತ್ಕಾಪೂರು ಗ್ರಾಮದಲ್ಲಿ ಶ್ರೀ ಲಕ್ಕಮ್ಮದೇವಿ ಮೂರ್ತಿಯನ್ನು ಮಾಡಿದ್ದಾರೆ ೩ಅಡಿ ಎತ್ತರದಲ್ಲಿ

೭. ಜೇವರ್ಗಿ ತಾಲುಕಿನ ನೀರಡಗಿ ಗ್ರಾಮದಲ್ಲಿ ೫ ಅಡಿ ಎತ್ತರ ಶ್ರೀ ಲಕ್ಕಮ್ಮದೇವಿ ಮೂರ್ತಿಯನ್ನು ರಚಿಸಿದ್ದಾರೆ.

೮. ಬಾಗೇವಾಡಿ ತಾಲೂಕಿನ ಕಣಕಲ್ಲ ಗ್ರಾಮದಲ್ಲಿ ೩ ಅಡಿ ಎತ್ತರ ಶ್ರೀ ಲಕ್ಕಮ್ಮ ದೇವಿ ಮೂರ್ತಿಯನ್ನು ಹೀಗೆ ಹೇಳುತ್ತಾ ಸಾಗಿದರೆ ಮತ್ತು ಬರೆಯುತ್ತಾ ಇದ್ದರೆ ಸಮಯವೇ ಸಾಲುತ್ತಿಲ್ಲ ಲೆಕ್ಕಕ್ಕೆ ಸಿಗದಷ್ಟು ಶಿಲ್ಪಗಳು ಕೇತ್ತನೆ ಮಾಡಿದ್ದಾರೆ ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡಮಿಯಿಂದ ಗೌರವ ಪುರಸ್ಕಾರ ಸಿಗಬೇಕೆನ್ನುವುದು ನನ್ನ ಆಸೆ ಮುಂದಿನ ದಿನಗಳಲ್ಲಿ ಇವರಿಗೆ ಪ್ರಶಸ್ತಿ ಸಿಕ್ಕೆ ಸಿಗುತ್ತಾದೆಂದು ನಾನು ನಂಬಿದ್ದೇನೆ.

ಮಾಹಿತಿ ನೀಡಿದವರು

ಹೆಸರು : ಶ್ರೀ ಬಸಣ್ಣಗೌಡ ತಂದೆ ರಾಮರೆಡ್ಡಿ

ವಯಸ್ಸು : ೭೦ ವರ್ಷ – ಊರಿನ ಹಿರಿಯರ ದೇವಿ ಬಗ್ಗೆ ಮಾಹಿತಿ ಕೊಟ್ಟವರು.

ಶ್ರೀ ಮರೆಮ್ಮ ದೇವಿ ಮೂರ್ತಿ ಮಾಡಿರುವ ಶಿಲ್ಪಿಯ ವಿವರ:–

ಹೆಸರು : ಶ್ರೀ ಕಾಳಪ್ಪ ಬಡಿಗೇರ ಪಂಚಾಳದವರು ಸಾ॥ ಗೋಗಿ (ಕೆ) ತಾ॥ ಶಹಾಪೂರ ಜಿ॥ ಯಾದಗಿರ.

ಉದ್ಯೋಗ : ಬಡಿಗೇತನ ದೇವಿ ಮೂರ್ತಿ ಮಾಡುವುದು ತಲಬಾಗಿಲು ಚಾಕಟ್ಟು, ಅಣೆಪಟ್ಟಿ, ತೋಳ ಪಟ್ಟಿ ಡಿಜನಂಗ್ ನವಿಲು, ಗಿಳಿ, ಆನೆ, ಹೂ, ಚಕ್ರ, ಎಲೆ, ಕಾಯಿ ಹೀಗೆ ಕಟ್ಟಿಗೆಯಲ್ಲಿ ಕೆತ್ತನೆ ಮಾಡುತ್ತಾರೆ ಮತ್ತು ವಿಶೇಷವಾಗಿ ಗ್ರಾಮದೇವತೆಯನ್ನು ಕೆತ್ತನೆ ಮಾಡುತ್ತಾರೆ ಗ್ರಾಮ ದೇವತೆಯಾದ ಶ್ರೀ ಮರೆಮ್ಮ ದೇವಿ ಗೋಗಿ, ಪಾಲಕಮ್ಮದೇವಿ ಗೋಗಿ ಹಲವಾರು ದೇವತೆಗಳ ಮೂರ್ತಿಯನ್ನು ಕೆತ್ತನೆ ಮಾಡಿ ಪ್ರಸಿದ್ಧಿಹೊಂದಿದ ಶಿಲ್ಪಗಳಾಗಿದ್ದಾರೆ.

ಶ್ರೀ ಮರೆಮ್ಮ ದೇವಿ ಮಾಹಿತಿ ನೀಡಿದವರ ವಿವರ

ಹೆಸರು : ಶ್ರೀಮತಿ ಭೀಮವ್ವ ಗಂಡ ಬಸಪ್ಪ ಅಚಿಕಡಿ ಸಾ॥ ಗೋಗಿ (ಕೆ) ತಾ॥ ಶಹಾಪೂರ ಜಿ॥ ಯಾದಗಿರ

ಉದ್ಯೋಗ : ಒಕ್ಕಲುತನ, ಮನೆಕೆಲಸ

ವಯಸ್ಸು : ೬೫

ಭಾಷೆ : ಕನ್ನಡ

ಧರ್ಮ : ಹಿಂದೂ ಧರ್ಮ

ವಿದ್ಯಾಭ್ಯಾಸ : ಇಲ್ಲ

ಗೋಗಿಯ ಗದ್ದೆನ ಎಲ್ಲಮ್ಮ ದೇವಿ ವಿವರ ನೀಡಿದವರು

ಹೆಸರು : ವಿರೇಂದ್ರ ತಂದೆ ಅಯ್ಯಣ್ಣ ವಿಶ್ವಕರ್ಮ ಸಾ॥ ನಗನೂರು ತಾ॥ ಸುರುಪೂರು, ಮು॥ ಗೋಗಿ (ಪೇಠ) ಜಿ॥ ಯಾದಗಿರ

ಜನನ ವಯಸ್ಸು : ೨೩.೦೩.೧೯೭೧ – ೪೬

ವಿದ್ಯಾಭ್ಯಾಸ : ೯ನೇ

ಮಾತೃಬಾಷೆ : ಕನ್ನಡ

ಉದ್ಯೋಗ : ಪತ್ತಾರ ಕೆಲಸ

ಶ್ರೀ ವಿರೇಂದ್ರ ಎ. ವಿಶ್ವಕರ್ಮ ಚಿಕ್ಕವಯಸ್ಸಿನಲ್ಲೇ ಕೆಲಸ ಮಾಡುತ ಕಲೆಯ ಕಡೆ ಆಸಕ್ತಿ ಹೊಂದಿದರು ಅವರ ಚಿಕ್ಕಪ್ಪ ಕ್ಯಾತ ಕಾಷ್ಠ ಶಿಲ್ಪಿಗಳು ಅವರ ಕೈಚಳಕದ ಕಲೆಗೆ ಮಾರಹೋಗಿ ಚಿಕ್ಕಪ್ಪನ ಜೋತಿ ಕೆಲಸ ಮಾಡಿ ಕಲೆ ಕರಗತವಾಗಿದೆ.

ಸುಮಾರು ೧೫ ವರ್ಷಗಳ ಕಾಲ ಅವರ ಚಿಕ್ಕಪ್ಪನಾದ ಶ್ರೀ ಶರಣಪ್ಪ ಶಿಲ್ಪಿಗಳು ಜೊತೆ ಪೂರ್ಣ ಕಲೆ ಕಲಿತು ಮುಂದೆ ಮದುವೆಯಾದ ಮೇಲೆ ಹೆಂಡತಿ ಸ್ವಗ್ರಾಮವಾದ ಗೋಗಿ ಪೇಠಗ್ರಾಮಕ್ಕೆ ಬಂದು ಮೊದಲಿಗೆ ಕೇವಲ ೩೦೦ ರೂಪಾಯಲ್ಲಿ ಸ್ವಂತ ಕೆಲಸ ಮಾಡಲು ಪ್ರಾರಂಭಿಸಿದ್ದೆನೆಂದು ಹೇಳಿದ್ದಾರೆ ಈ ಶಿಲ್ಪಿಯ ಅತ್ಯಂತ ಸೂಕ್ಷ್ಮವಾಧ ಕಲೆಯನ್ನು ಕೆತ್ತನೆ ಮಾಡಿದ್ದಾರೆ.

ತಲಬಾಗಿಲು ತೋಳು (ಪಟ್ಟಿ) ಚೌಕಟ್ಟು) ಹಣೆ ಪಟ್ಟಿ ಕುದುರೆ ತೋಟಿಲು, ಬಾಗಿಲುಗೆ ಅಲಮಾರು ತರದ ದೇವರ ಮೂರ್ತಿಗಳನ್ನು ಕಟ್ಟಿಗೆಯಲ್ಲಿ ಕೇತ್ತಿನೆ ಮಾಡಿದ್ದಾರೆ. ಗೋಗಿ (ಪೇಠಗ್ರಾಮದಲ್ಲಿ) ದೊಡ್ಡ ದೊಡ್ಡ ಮನೆತನದವರ ಮನೆಗಳಿಗೆ ಕುದುರೆ ತಲಬಾಗಿಲು ಮಾಡಿದ್ದಾರೆ ಹಾಗೆಯೆ ಸಗರನಾಡಿನ ಗ್ರಾಮ ದೇವತೆಯಾದ ಗೋಗಿ (ಕೆ) ಮತ್ತು ಗೋಗಿ (ಪೇಠ) ಗ್ರಾಮದ ಮರೆಮ್ಮ ದೇವಿ ಮೂರ್ತಿ ಮಾಡಿದ್ದಾರೆ. ೨೫ ವರ್ಷ ಇರುವಾಗಲೆ ದೇವಿ ಮೂರ್ತಿ ಮಾಡಲು ಪಾರಂಭಿಸಿದ್ದಾರೆ.ಇವರು ಕಟ್ಟಿಗೆಯಲ್ಲಿ ಕೆತ್ತನೆ ಮಾಡಿದ ಮೂರ್ತಿಗಳ ವಿವರ.

೧. ಮರೆಮ್ಮ ದೇವಿ

೨. ಪಾರ್ವತಿ ದೇವಿ ಪರಮೇಶ್ವರ

೩. ಗಣೇಶ ಗಂಗಾದೇವಿ

೪. ಬಸವೇಶ್ವರ

೫. ನಂದಿ

೬. ಗೌರಿ ಮಾಡಿ

೭. ವಿರಭದ್ರೇಶ್ವರ ಹಿಗೇ ಹಲವಾರು ದೇವರ ಮೂರ್ತಿಯನ್ನು ಈ ಶಿಲ್ಪಕಲಾವಿದ ತನ್ನ ಕೈ ಚಳಕದಿಮದ ಜನರು ಮೆಚ್ಚು ವಂತೆ ಶಿಲ್ಪ ಕಲಾ ಕೃತಿಗಳನ್ನು ರಚಿಸುತ್ತಾರೆ.

ಇವರು ಮಾಡಿರುವ ಶಿಲ್ಪ ಕಲಾಕೃತಿಯ ದೇವಿ ಮೂರ್ತಿ ಈ ಕೆಳಗಿನ ಗ್ರಾಮಗಳಲ್ಲಿ ನೋಡಬಹುದು.

೧. ಸಿಂಗನಹಳ್ಳಿ ಗ್ರಾಮದಲ್ಲಿ

೨. ಬೆಂಡಗೊಂಬಳಿ

೩. ಮೂದನೂರು :– ಸುರುಪುರು ತಾಲೂಕ ಬಂಡಿಯನ್ನು ರಚಿಸಿತ್ತಾನೆ.

೪. ಆಲೂರು:– ಜೇವರ್ಗಿ ತಾಲೂಕ

೫. ಕೆಂಬಾವಿ:– ಸುರಪುರು ತಾಲೂಕ

೬. ಸೇಡಂ

ಹೀಗೆ ಹಲವಾರು ಗ್ರಾಮಗಳಲ್ಲಿ ಈ ಶಿಲ್ಪಕಲಾವಿದರು ವಿವಿಧ ಗ್ರಾಮ ದೇವತೆಯನ್ನು ಕಟ್ಟಿಯಲ್ಲಿ ಕೆತ್ತನೆ ಮಾಡಿದ್ದಾನೆ.

ಅನುಬಂಧ - ೪

ಪತ್ರಿಕಾ ವರದಿಗಳು

ವಿಜಯ ಕರ್ನಾಟಕ
.vijaykarnataka ಶುಕ್ರವಾರ, 22 ಸೆಪ್ಟೆಂಬರ್ 2017, ಕಲಬುರಗಿ
ವಾಣ್ಯ ಯಾದಗಿರಿ

ಸಂಭ್ರಮದಿಂದ ಪಲ್ಲಕ್ಕಿ ಮಹೋತ್ಸವ


ಶಹಾಪುರ ತಾಲೂಕಿನ ನಾಯ್ಕಲ್ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಪಲ್ಲಕ್ಕಿ ಮಹೋತ್ಸವ ಅಪಾರ ಭಕ್ತ ಸಮೂಹ ನಡುವೆ ನಡೆಯಿತು.

■ ವಿಕ ಸುದ್ದಿಲೋಕ ಯಾದಗಿರಿ

ಶಹಾಪುರ ತಾಲೂಕಿನ ನಾಯ್ಕಲ್ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನದ ಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ನಡೆಯಿತು.

ಮಹಾಲಯ ಅಮವಾಸ್ಯೆ ನಿಮಿತ್ತ ನಡೆದ ಪಲ್ಲಕ್ಕಿ ಮಹೋತ್ಸವ ಅಪಾರ ಭಕ್ತ ಸಮೂಹವೇ ಹರಿದು ಬಂದಿತ್ತು. ಹುಲಿಗೆಮ್ಮ ದೇವಸ್ಥಾನದಿಂದ ಪಲ್ಲಕ್ಕಿಯೊಂದಿಗೆ ಡೊಳ್ಳು, ಬಾಜಾ ಭಜಂತ್ರಿ, ವಾದ್ಯ ಮೇಳಗಳೊಂದಿಗೆ ಅಪಾರ ಭಕ್ತ ಸಮೂಹ ಸಂಜೆ ಸಮೀಪದ ಭೀಮಾ ನದಿಗೆ ತೆರಳಲಾಯಿತು.

ಗಂಗಾ ಸ್ನಾನ, ಪೂಜೆ ಪುನಸ್ಕಾರ, ಧಾರ್ಮಿಕ ಕಾರ್ಯಕ್ರಮಗಳು, ಮಹಿಳೆಯರಿಂದ ಚೌಡಕಿ ಪದಗಳು ಸೇರಿದಂತೆ ಇನ್ನಿತರ ಕಾರ್ಯಕ್ರಮಗಳು ನಡೆಯಿತು.

ಇದಾದ ಮೇಲೆ ಭೀಮಾ ನದಿಯಿಂದ ಪಲ್ಲಕ್ಕಿಯು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಭವ್ಯ ಅದ್ದೂರಿ ಮರವಣಿಗೆಯ ಮೂಲಕ ರಾತ್ರಿ ಹುಲಿಗೆಮ್ಮ ದೇವಸ್ಥಾನಕ್ಕೆ ತಲುಪಿತು. ನಂತರ ಹುಲಿಗೆಮ್ಮ ದೇವಸ್ಥಾನದಲ್ಲಿ ರಾತ್ರಿಯಿಡಿ ಧಾರ್ಮಿಕ ವಿಶೇಷ ಕಾರ್ಯಕ್ರಮಗಳು ನಡೆದವು.

ಪಲ್ಲಕ್ಕಿ ಮಹೋತ್ಸವದಲ್ಲಿ ಹುಲಿಗೆಮ್ಮ ದೇವಸ್ಥಾನದ ಅರ್ಚಕ ನಾಗಪ್ಪ ಪೂಜಾರಿ, ಫಾಳೆಪ್ಪ ಪೂಜಾರಿ, ಶಿವರಾಯ ನಾಟೇಕಾರ್, ರಾಮಣ್ಣ ತುಮಕೂರ, ಶರಣಪ್ಪ ನಾಟೇಕಾರ್, ರಡ್ಡೆಪ್ಪ ಮಸಾಲೆ, ಪ್ರಕಾಶ ಪೂಜಾರಿ, ಸಿದ್ರಾಮ ಭಂಡಾರಿ, ದೇವಪ್ಪ ಗಾಣಧಾಳ, ನಾಗಪ್ಪ, ಸಾಯಬಣ್ಣ ದೇವಪ್ಪ ಪೂಜಾರಿ, ರಾಮಲಿಂಗಪ್ಪ, ಮಲ್ಲಪ್ಪ, ಸಾಬಣ್ಣ ದೇವಪ್ಪ ಸಾಬಣ್ಣಾ ಮರೆಪ್ಪ ಸೇರಿದಂತೆ ಇನ್ನಿತರರಿದ್ದರು.


ನಿಮ್ಮ ಪುಟ
ಯಾದಗಿರಿ ಜಿಲ್ಲೆಯಲ್ಲಿ 30 ಸಾವಿರ ಶೌಚಾಲಯ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ಜಿಪಂ ಸಿಇಒ ತಿಳಿಸಿದರು.
ಇತ್ತೀಚೆಗೆ ನಡೆದ ಹೋಬಳಿ ಮಟ್ಟದ ಕ್ರೀಡಾಕೂಟದ ಸರಕಾರಿ ಬಾಲಕಿಯರ ಪ್ರೌಢ ಶಾಲೆಯ ವಿದ್ಯಾರ್ಥಿ ವೀರಾಗ್ರಣಿ ಪ್ರಶಸ್ತಿ ಪಡೆದರು.
ಮುದ್ದುಕಂದ
ನಿಖಿಲ ಕಾಂಬಳೆ
ಅಧಿಕಾರಿಗಳಿಂದ ಅರ್ಜಿ
ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಪ್ರದರ್ಶನ
ಸಗರನಾಡಿನ ಶೈಲಿಯ ಸಿಂಹ ಆಯ್ಕೆ
-ಮಲ್ಲಿಕಾರ್ಜುನ ಚಿಕನಹಳ್ಳಿ, ಯಾದಗಿರಿ

mobilevk vijaykarnataka vijaykarnatakaepaper apps.vijaykarnataka

ನಮ್ಮ ಯಾದಗಿರಿ

ಲಾಟರಿ ಮೂಲಕ ನಡೆದ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಅವೈಜ್ಞಾನಿಕ ಎಂದು ರೈತರು ಮಾದನಹಿಪ್ಪರಗಾದಲ್ಲಿ ಪ್ರತಿಭಟನೆ


ಸರಕಾರಗಳ ಅಸ್ಪಷ್ಟ ನೀತಿ ... ಎಂದು ಕರ್ನಾಟಕ ಪ...


ಚಿತ್ರಗಳ ಅಂದ ಬಣ್ಣಿಸಲು ಪದಗಳಿಲ್ಲ....!


ಗಿರೀಶ ಶಾಬಾದಿ/ಅಮರೇಶ ಹಿರೇಮಠ
ಸುರಪುರ

'ಚಿತ್ರಗಳ ಅಂದ ಬಣ್ಣಿಸಲು ಪದಗಳೇ ಇಲ್ಲ...!

ಸಂದರ್ಭ:












ರೇಖೆ, ಬಣ್ಣದ ಮೋಡಿ

ಶರಣರ ಅನುಭಾವ ಮಂಟಪ

02 ರಾಜ್ಯ STATE

ಕರ್ನಾಟಕ

ಬೋಧಿವೃಕ್ಷ ಕಾರ್ನರ್



ಬನಶಂಕರಮ್ಮನಿಗೆ ಸೀರೆ ಅಲಂಕಾರ


ದಸರಾ ದೀಪಾವಳಿ ಆಚರಿಸುವುದಿಲ್ಲ, ಹೊಸ ಬಟ್ಟೆ ಹಾಕುವುದಿಲ್ಲ, ಅಡುಗೆಗೆ ಎಣ್ಣೆಯನ್ನೂ ಬಳಸುವುದಿಲ್ಲ

ಈ ಊರಲ್ಲಿ ಮೂರು ತಿಂಗಳು ಹಬ್ಬವೇ ಇಲ್ಲ!

▪ ದೇವಯ್ಯ ಗುತ್ತೇದಾರ್
ಕಲಬುರಗಿ

ನವರಾತ್ರಿ-ದೀಪಾವಳಿ ಹಬ್ಬ ಬಂದರೆ ಸಾಕು ಮನೆಯಲ್ಲಿ ಸಿಹಿ ತಿಂಡಿಗಳನ್ನು ತಯಾರಿಸಿ ಸಂಭ್ರಮಿಸುವುದು ಸಹಜ. ಆದರೆ ಕಲಬುರಗಿ ಜಿಲ್ಲೆಯ ಈ ಗ್ರಾಮದಲ್ಲಿ ಮಾತ್ರ ಶ್ರಾವಣ ಮಾಸದಿಂದ ಮೂರು ತಿಂಗಳವರೆಗೆ ಯಾವ ಹಬ್ಬವನ್ನೂ ಆಚರಿಸುವದಿಲ್ಲ. ಅಷ್ಟೆ ಏಕೆ, ಮನೆಯಲ್ಲಿ ಒಗ್ಗರಣೆ ಸೇರಿದಂತೆ ಎಣ್ಣೆಯ ಯಾವ ಪದಾರ್ಥಗಳನ್ನೂ ತಯಾರಿಸುವುದಿಲ್ಲ.

ಹೌದು, ಕಲಬುರಗಿ ತಾಲೂಕಿನ ಬಸನಾಳ ಗ್ರಾಮದಲ್ಲಿ ಇಂಥ ವಿಶಿಷ್ಟ ಆಚರಣೆ ಜಾರಿಯಲ್ಲಿದೆ. ಶ್ರಾವಣ ಮಾಸದ ನಂತರ ಬರುವ ನಾಗಪಂಚಮಿ, ದಸರಾ, ದೀಪಾವಳಿ ಸೇರಿದಂತೆ ಯಾವುದೇ ಹಬ್ಬಗಳನ್ನು ಗ್ರಾಮಸ್ಥರು ಆಚರಿಸುವುದಿಲ್ಲ. ಈ ಹಬ್ಬದ ದಿನಗಳಲ್ಲಿ ಮಾಡುವ ಹೋಳಿಗೆ, ಹಪ್ಪಳ, ಸಂಡಿಗೆ, ಬಜ್ಜಿ ಸೇರಿದಂತೆ ಯಾವುದೇ ಎಣ್ಣೆಯ ಪದಾರ್ಥಗಳನ್ನು ಮನೆಯಲ್ಲಿ ಮಾಡುವುದಿಲ್ಲ. ಒಗ್ಗರಣೆ ಸಹ ಹಾಕದೆ ಕೇವಲ ಎಣ್ಣೆರಹಿತ ಆಹಾರ ಮಾತ್ರ ತಯಾರಿಸಲಾಗುತ್ತದೆ.



ಬಸನಾಳದಲ್ಲಿರುವ ದ್ಯಾವಮ್ಮ ದೇವಸ್ಥಾನ.

ಕಾರಣ ಏನು?: ಗ್ರಾಮದೇವತೆ ದ್ಯಾವಮ್ಮನ ಗುಡಿಯಲ್ಲಿನ ದೀಪದ ಮಹಿಮೆ ಇದು. ಶ್ರಾವಣ ಮಾಸದ ಮೊದಲ ದಿನವೇ ಗುಡಿಯಲ್ಲಿ ಎಣ್ಣೆ ದೀಪ ಹಚ್ಚಲಾಗುತ್ತದೆ. ಮೂರು ತಿಂಗಳವರೆಗೂ ಈ ದೀಪವನ್ನು ಉರಿಸಲಾಗುತ್ತದೆ. ಈ ಅವಧಿಯಲ್ಲಿ ಇದೇ ಕಾರಣಕ್ಕಾಗಿಯೇ ಎಲ್ಲ ಎಣ್ಣೆ ಪದಾರ್ಥಗಳೂ ನಿಷಿದ್ಧ. ಒಂದು ವೇಳೆ ಗ್ರಾಮದಲ್ಲಿ ಎಣ್ಣೆ ಪದಾರ್ಥ ಮಾಡಿದರೆ ಅಥವಾ ಹಬ್ಬಗಳನ್ನು ಆಚರಿಸಿದರೆ ದೇವಿಯ ಗುಡಿಯಲ್ಲಿನ ನಂದಾದೀಪ ಆರಿ ಗ್ರಾಮಕ್ಕೆ ಕೆಡುಕಾಗುತ್ತದೆ ಎನ್ನುವ ನಂಬಿಕೆ ಗ್ರಾಮಸ್ಥರದು.

ಗ್ರಾಮದ ಮನೆಗಳಲ್ಲಿ ಮಾತ್ರವಲ್ಲ, ಊರಿನ ಎಲ್ಲ ಹೋಟೆಲ್‌ಗಳಲ್ಲಿಯೂ ಅಡುಗೆ ಪದಾರ್ಥದಲ್ಲಿ ಎಣ್ಣೆ ಬಳಸುವುದಿಲ್ಲ. ಶ್ರಾವಣ ಮಾಸದಿಂದ ಮೂರು ತಿಂಗಳ ಕಾಲ ಜನರು ಯಾವುದೇ ಶುಭ ಕಾರ್ಯಗಳನ್ನೂ ಮಾಡುವುದಿಲ್ಲ. ಈ ಪದ್ಧತಿ ಉಲ್ಲಂಘಿಸಿ ಎಣ್ಣೆ ಪದಾರ್ಥ ಮಾಡಿದ್ದ ಕೆಲವರಿಗೆ ಕೆಡುಕಾಗಿದೆ ಎನ್ನುತ್ತಾರೆ ಊರಿನ ಜನ.



ನೂರಾರು ವರ್ಷಗಳಿಂದ ಗ್ರಾಮ ದಲ್ಲಿ ಈ ಪದ್ಧತಿ ನಡೆದುಕೊಂಡು ಬಂದಿದೆ. ಹಿಂದೊಮ್ಮೆ ಕೆಲವರು ಇದನ್ನು ಉಲ್ಲಂಘಿಸಿ ಎಣ್ಣೆ ಪದಾರ್ಥ ಮಾಡುವ ಸಾಹಸಕ್ಕೆ ಕೈ ಹಾಕಿ ಆಪತ್ತಿಗೆ ಸಿಲುಕಿದ್ದರಂತೆ. ಗ್ರಾಮದಲ್ಲಿ ಯಾರೂ ದ್ಯಾವಮ್ಮ ದೇವಿಯ ಪದ್ಧತಿಯನ್ನು ಮೀರುವುದಿಲ್ಲ.

- ಶರಣಮ್ಮ, ಹಿರಿಯಜ್ಜಿ, ಬಸನಾಳ



ಶ್ರಾವಣ ಮಾಸದಿಂದ 3 ತಿಂಗಳು ದ್ಯಾವಮ್ಮ ದೇವಿಗೆ ದೀಪ ಹಾಕುತ್ತೇವೆ. ಈ ಅವಧಿಯಲ್ಲಿ ಹಳ್ಳಿಯಲ್ಲಿ ಅಡುಗೆ ಎಣ್ಣೆ ಬಳಸುವುದಿಲ್ಲ. ಹಗಲು- ರಾತ್ರಿ ದೀಪ ಉರಿಸಲಾಗುತ್ತದೆ. ದೀಪ ಇಳಿದ ಬಳಿಕವೇ ಮುಂದಿನ ಶುಭ ಕೆಲಸ ಮಾಡುತ್ತೇವೆ.

-ಶರಣಬಸಪ್ಪ, ಗ್ರಾಮದ ಯುವಕ

ಗುರುವಾರ 27 ಜುಲೈ 2017 mobilevk

11 ನಮ್ಮ ಯಾದಗಿರಿ

ವಿಜಯ ಕರ್ನಾಟಕ

ಗೆದ್ದಲಮರಿ : ಶ್ರೀ ದುರ್ಗಾದೇವಿ ದೇಗುಲ ಉದ್ಘಾಟನೆ



ಕೊಡೇಕಲ್ ಸಮೀಪದ ಗೆದ್ದಲಮರಿ ಗ್ರಾಮದಲ್ಲಿ ಜರುಗಿದ ಶ್ರೀ ದುರ್ಗಾದೇವಿ ದೇವಸ್ಥಾನ ಉದ್ಘಾಟನೆ ಪ್ರಯುಕ್ತ ಮೂರ್ತಿಯ ಮೆರವಣಿಗೆಯು ಸಡಗರ ಸಂಭ್ರಮದಿಂದ ಜರುಗಿತು.

ವಿಕ ಸುದ್ದಿಲೋಕ ಕೊಡೇಕಲ್

ನಲ್ಲಿನ ಸಮೀಪದ ಗೆದ್ದಲಮರಿ ಗ್ರಾಮದಲ್ಲಿ ಶ್ರೀ ದುರ್ಗಾದೇವಿ ಮಂದಿರ ಉದ್ಘಾಟನೆ ಹಾಗೂ ಜಾತ್ರಾ ಮಹೋತ್ಸವದ ನಿಮಿತ್ತ ಪುರದ ಗುರು-ಹಿರಿಯರ ನೇತೃತ್ವದಲ್ಲಿ ಮೂರ್ತಿಯ ಮೆರವಣಿಗೆಯು ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು.

ಶ್ರೀ ದುರ್ಗಾದೇವಿಯ ದೇವಸ್ಥಾನದ ಪ್ರಧಾನ ಅರ್ಚಕರ ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ಸಕಲ ವಾದ್ಯ ಮೇಳದೊಂದಿಗೆ ಊರು ಹೊರಗಿನ ಜುಮಾಲಪುರ ಕ್ರಾಸ್‌ನಲ್ಲಿ ಆಗಮಿಸಿದ ನೂತನ ಶ್ರೀ ದುರ್ಗಾದೇವಿ ಮೂರ್ತಿಗೆ ಭಕ್ತರು ಟ್ರ್ಯಾಕ್ಟರ್ ಮೂಲಕ ವಿಶೇಷವಾಗಿ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಲಾಯಿತು.

ನಂತರ ಬಹು ವಿಶೇಷವಾಗಿ ಡೊಳ್ಳು, ಹಲಗೆ, ಬಾಜಾ ಭಜಂತ್ರಿಯ ಜೋರಾದ ಸದ್ದಿನೊಂದಿಗೆ ಮೆರವಣಿಗೆಯಲ್ಲಿ ಸಾಗಿದ ಮೂರ್ತಿಯು ಗ್ರಾಮದ ನಾನಾ ಬೀದಿಯಲ್ಲಿ ಸಂಚರಿಸಿದ್ದು ಭಕ್ತಿಯ ದ್ಯೋತಕವಾಗಿತ್ತು. ಪೂರ್ಣ ಕುಂಭ ಹಾಗೂ ಕಳಸವನ್ನು ತಲೆಯ ಮೇಲೆ ಹೊತ್ತು ಹೆಜ್ಜೆ ಹಾಕಿದ ಗ್ರಾಮದ ಸುಮಂಗಲಿಯರು ಹಾಗೂ ಮಕ್ಕಳು ಮೆರವಣಿಗೆಗೆ ವಿಶೇಷ ಮೆರಗು ನೀಡಿದರು. ತರುವಾಯ ನಾನಾ ಬಗೆಯ ಹೂಗಳು ಹಾಗೂ ವರ್ಣಗಳ ವಸ್ತ್ರಗಳಿಂದ ದೇವರನ್ನು ಹಾಗೂ ಪಲ್ಲಕ್ಕಿಗಳನ್ನು ಅಲಂಕರಿಸಿ ಗ್ರಾಮದ ಹಿರಿಯರು ಹಣ್ಣು, ಸಿಹಿ ಖಾದ್ಯಗಳು ವಿವಿಧ ಪೂಜಾ ಸಾಮಗ್ರಿಗಳನ್ನು ಹೊತ್ತು ದೇವಸ್ಥಾನಕ್ಕೆ ಆಗಮಿಸಿ ನೈವೇದ್ಯವನ್ನು ಸಮರ್ಪಿಸಿದ ತರುವಾಯ ಶ್ರೀ ದುರ್ಗಾದೇವಿಗೆ ಕಾಯಿ ಕರ್ಪೂರಗಳನ್ನು ಸಮರ್ಪಿಸಿದರು.

ನೂತನ ಮಂದಿರ ಉದ್ಘಾಟನೆ : ಗ್ರಾಮ ಸೇರಿ ಸುತ್ತಲಿನ ಗುರು-ಹಿರಿಯರ ಸಮ್ಮುಖದಲ್ಲಿ ಶ್ರೀ ದುರ್ಗಾದೇವಿ ನೂತನ ಮಂದಿರ ಉದ್ಘಾಟನೆಗೊಂಡಿತು. ಸಂಪ್ರದಾಯ ಪದ್ಧತಿಯಂತೆ ದೇಗುಲದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.

ಈ ಸಂದರ್ಭದಲ್ಲಿ ಅರ್ಚಕ ಬಲಭೀಮಪ್ಪ ಶೀಲವಂತ ಪೂಜಾರಿ, ಅಮಯ್ಯ ಮಠ, ಮಲ್ಲನಗೌಡ, ರಾಮನಗೌಡ, ಅಮರಣ್ಣ ಅಂಗಡಿ, ಶಿವರಾಜ ಹೊಕ್ರಾಣಿ, ಶಿವಿ ಪತ್ತಾರ, ಮಲ್ಲನಗೌಡ, ಚಟ್ಟೆಪ್ಪ, ಜ್ಯೋತೆಪ್ಪ ಬಿರಾದಾರ, ತಿರುಪತಿ ಧಳಪತಿ, ನಿಂಗಣ್ಣ ಪೂಜಾರಿ ಸೇರಿದಂತೆ ಗ್ರಾಮದ ಹಿರಿಯರು, ಯುವಕರು, ಮಹಿಳೆಯರು, ಮಕ್ಕಳು ಉಪಸ್ಥಿತರಿದ್ದು ಪ್ರಸಾದ ಸೇವಿಸಿ ಪುನೀತರಾದರು.

ಶ್ರಾವಣ ನಿಮಿತ್ತ ಚೌಡಯ್ಯ ಮೂರ್ತಿಗೆ ವಿಶೇಷ ಪೂಜೆ

ವಿಕ ಸುದ್ದಿಲೋಕ ಯಾದಗಿರಿ

ಶ್ರಾವಣ ಮಾಸದ ನಿಮಿತ್ತ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುವ ಅಭಿಯಾನಕ್ಕೆ ತಾಲೂಕಿನ ಅರಕೇರಾ (ಬಿ) ಗ್ರಾಮದಿಂದ ಚಾಲನೆ ನೀಡಲಾಯಿತು.

ಜಿಲ್ಲಾ ಟೋಕರಿ ಕೋಲಿ ಕಬ್ಬಲಿಗ ಸಮಾಜದಿಂದ ಆಯೋಜಿಸಿದ್ದ ವಿಶೇಷ ಪೂಜೆ ಸಲ್ಲಿಸುವ ಅಭಿಯಾನವನ್ನು ಸಮಾಜದ ಜಿಲ್ಲಾಧ್ಯಕ್ಷ ಉಮೇಶ ಮುದ್ನಾಳ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 12 ಮಾಸಗಳಲ್ಲಿ ಶ್ರಾವಣಕ್ಕೆ ಅತಿ ಮಹತ್ವವಿದೆ. ರೈತರಿಗೆ ಶ್ರಾವಣ ಮಾಸವು ವಿಶೇಷ ಹರುಷ ತರುತ್ತದೆ. ಜನರು ಈ ತಿಂಗಳಲ್ಲಿ ಪೂಜೆ, ಪ್ರಾರ್ಥನೆ, ಭಕ್ತಿ ಭಜನೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇದೊಂದು ಉತ್ತಮ ಬೆಳವಣಿಗೆ ಎಂದರು.

ವೈಚಾರಿಕ ಕ್ರಾಂತಿಕಾರಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ನೂತನ ಮೂರ್ತಿ ಸ್ಥಾಪನೆ ಮತ್ತು ಈ ಹಿಂದೆ ಸ್ಥಾಪನೆ ಮಾಡಿದ ಮೂರ್ತಿಗಳಿಗೆ ಹಾಗೂ ನಾಮಫಲಕದ ಭಾವಚಿತ್ರಗಳಿಗೆ ವಿಶೇಷ ಪೂಜಾ ಕಾರ್ಯಕ್ರಮ ಮಾಡಲಾಗುತ್ತಿದೆ.

ಇದರಿಂದಾಗಿ ಅವರ ಆದರ್ಶ ತಿಳಿದುಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು.



ಶ್ರಾವಣ ಮಾಸದ ನ ನಿಮಿತ್ತ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುವ ಅಭಿಯಾನಕ್ಕೆ ಯಾದಗಿರಿ ತಾಲೂಕಿನ ಅರಕೇರಾ (ಬಿ) ಗ್ರಾಮದಿಂದ ಚಾಲನೆ ನೀಡಲಾಯಿತು.

ಎಸ್.ಪಿ. ಕಟ್ಟಿಮನಿ, ಮಲ್ಲಪ್ಪ ಬಡಿಗೇರ, ಮಹೇಶ, ಶಿವರಡ್ಡಿ, ಮಲ್ಲಪ್ಪ, ದೇವಪ್ಪ, ಹಣಮಂತ ಮೂಲಿಮನಿ, ನಾಗಪ್ಪ ದೇವಪ್ಪ, ಲಿಂಗಪ್ಪ, ರವಿಚಂದ, ಮಲ್ಲಿಕಾರ್ಜುನ, ಹಣಮಂತ ನಾಸ್ತಿ, ಸಿದ್ದು, ಸಿದ್ದಪ್ಪ, ಮರೆಪ್ಪ, ಸಂತೋಷ, ದೇವಿಂದಪ್ಪ, ಶರಣಪ್ಪ ನ್ಯಾಟಿ, ಮಲ್ಲಪ್ಪ, ಗುಂಜಲಪ್ಪ, ಅಶೋಕ, ಆಶಪ್ಪ, ಶಿವರಾಜ ಸೇರಿದಂತೆ ಇನ್ನಿತರರಿದ್ದರು.

ಬುಧವಾರ,10 ಮೇ 2017, ಕಲಬುರಗಿ www.mobilevk

ವಿಜಯ ಕರ್ನಾಟಕ

ಶ್ರೀ ಗಾಳಿ ಮರಗಮ್ಮ ದೇವಿ ಜಾತ್ರಾ ಮಹೋತ್ಸವ

ವಿಕ ಸುದ್ದಿಲೋಕ ಕೆಂಭಾವಿ

ಕೆಂಭಾವಿ ಸಾಯಿನಗರ ಕ್ಯಾಂಪ್ ಹತ್ತಿರವಿರುವ ಶ್ರೀ ಗಾಳಿ ಮರಗಮ್ಮ ದೇವಿಯ 10 ನೇ ವರ್ಷದ ಜಾತ್ರಾ ಮಹೋತ್ಸವ ಮಂಗಳವಾರ ಅದ್ದೂರಿಯಾಗಿ ಆರಂಭವಾಯಿತು.

ಆಗಿ ಹುಣ್ಣಿಮೆಯ ಮುಂಚಿನ ದಿನ ಆರಂಭವಾಗುವ ಜಾತ್ರಾ ಮಹೋತ್ಸವದಲ್ಲಿ ಭಕ್ತರು ಶ್ರೀ ಗಾಳಿ ಮರಗಮ್ಮ ದೇವಿಯ ಮೂರ್ತಿಗೆ ಪಾನಕ ಹಾಗೂ ಅರಿಶಿನ ಮಿಶ್ರಿತ ನೀರಿನಿಂದ ಅಭಿಷೇಕ ಮಾಡಿದರು. ದೇವಿಯ ಮೂರ್ತಿಗೆ ಅಭಿಷೇಕ ಮಾಡುವದರಿಂದ ಮಳೆ, ಬೆಳೆ ಚೆನ್ನಾಗಿ ಬರುತ್ತದೆ, ಜನರಿಗೆ ಎಲ್ಲ ರೀತಿಯಿಂದಲೂ ಸುಖ, ಶಾಂತಿ ನೆಮ್ಮದಿ ದೊರಕುತ್ತದೆ ಎಂಬುದು ಇಲ್ಲಿಯ ಜನರ ಪ್ರತೀತಿ.



ಶ್ರೀ ಗಾಳಿ ಮರಗಮ್ಮ ದೇವಿಯ ಮೂರ್ತಿಗೆ ಪಾನಕ ಹಾಗೂ ಅರಿಶಿನ ಮಿಶ್ರಿತ ನೀರಿನಿಂದ ಅಭಿಷೇಕ ಮಾಡುತ್ತಿರುವುದು.

ಹುಣ್ಣಿಮೆ ದಿನದಂದು ಜಾತ್ರಾ ಮಹೋತ್ಸವದ ಅಂಗವಾಗಿ ಭಕ್ತಾದಿಗಳು ಅನ್ನ ಸಂತರ್ಪಣೆ ಮಾಡುತ್ತಾರೆ. ಕೆಂಭಾವಿ, ಸಾಯಿನಗರ, ಲಕ್ಷ್ಮೀ ನಗರ, ಮುದನೂರ, ಅಗ್ನಿ, ಅಗತೀರ್ಥ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಈ ದೇವಿಗೆ ಭಕ್ತಿ ಪೂರ್ವಕವಾಗಿ ನಡೆದುಕೊಳ್ಳುವರು ಎಂದು ಸಾಯಿನಗರದ ಕೃಷ್ಣ ಬೋವಣ್ಣ ಹೇಳಿದರು.

ಪುರಸಭೆ ಸದಸ್ಯೆ ಜಿ.ವರಲಕ್ಷ್ಮೀ, ಡಿ.ಶ್ರೀನಿವಾಸ, ಜಿ.ಸತ್ಯನಾರಾಯಣ, ವೆಂಕಟೇಶ್ವರ್ರು, ನಾಗೇಶ, ರಾಮಕೃಷ್ಣ, ಜಿ.ಅಮ್ಮಿರಾಜು ಸೇರಿದಂತೆ ಅನೇಕ ಮಹಿಳೆಯರು, ಮಕ್ಕಳು ಜಾತ್ರಾ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ

mobilevk vijaykarnataka vijaykarnatakaepaper

ಆಳಂದ ತಾಲೂಕಿನ ಮುನ್ನಹಳ್ಳಿ ಗ್ರಾಮದ ಅಮೃತರೆಡ್ಡಿ ಮನೆಯ ಬ್ಯಾರಲ್ ನೀರಿನಲ್ಲಿ ನಾಗರ ಹಾವು ಪ್ರತ್ಯಕ್ಷ


ಧರಂಸಿಂಗ್ ಅಂತ್ಯಕ್ರಿಯೆ ಜು.28ರಂದು ಹುಟ್ಟೂರು ಜೇವರ್ಗಿ ತಾಲೂಕಿನ ನೆಲೋಗಿಯಲ್ಲಿ ಸಂಜೆ 4 ಗಂಟೆಗೆ ರಜಪುತ ಸಮಾಜದ ವಿಧಿ ವಿಧಾನಗಳ ಮೂಲಕ ಜರುಗಲಿದೆ



ಜಿಲ್ಲೆಯಲ್ಲಿ ನಾಗರಪಂಚಮಿ ಸಂಭ್ರಮ











ದೇವರಗಡ್ಡಿ ಗದ್ದೆಮ್ಮ ದೇವಿಗೆ ಭವ್ಯ ಸ್ವಾಗತ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI >> KALABURAGI

2 ಮಂಗಳವಾರ 21 ಫೆಬ್ರವರಿ 2017 21 FEBRUARY 2017

ಯಾದಗಿರಿ ಲೋಕಲ್ ಎಕ್ಸ್‌ಪ್ರೆಸ್

ಕೋಳಿಹಾಳದಲ್ಲಿ ಗ್ರಾಮದೇವತೆ ಜಾತ್ರೆ

ಹುಣಸಗಿ: ಕೋಳಿಹಾಳದಲ್ಲಿ ಮಂಗಳವಾರ ಗ್ರಾಮ ದೇವತೆ ಜಾತ್ರೋತ್ಸವ ನಡೆಯಲಿದ್ದು, ಗ್ರಾಮದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಕಮಿಟಿ ತಿಳಿಸಿದೆ. 21ರಂದು ಬಾಗಲಕೋಟೆಯ ನಾಟ್ಯ ಸಂಘದಿಂದ ಧರ್ಮ ಉಳಿಯಿತು ಕರ್ಮ ಅಳಿಯಿತು (ಅರ್ಥಾತ್ ಸಿಂಗಿಗಿಲ್ಲ ತೊಟ್ಟಿಲು ಭಾಗ್ಯ) ಎಂಬ ನಾಟಕ ಪ್ರದರ್ಶನಗೊಳ್ಳಲಿದೆ. ಶ್ರೀ ಶಂಕ್ರಯ್ಯ ಹುಲಿಗಬಾಳ, ಶ್ರೀ ಮುತ್ತು ಮಠಪತಿ ಸಾನ್ನಿಧ್ಯ ವಹಿಸಲಿದ್ದಾರೆ. ಬಂಡೆಪ್ಪನಹಳ್ಳಿಯ ಶ್ರೀ ಸಣ್ಣಕ್ಕೆಪ್ಪಮುತ್ಯಾ ಕಾರ್ಯಕ್ರಮ ಉದ್ಘಾಟಿಸುವರು. ಜಿಪಂ [illegible] ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಮಂಗಳವಾರ, 21 ಮಾರ್ಚ್ 2017, ಕಲಬುರಗಿ

IV | ನಿಮ್ಮ ಪುಟ

ಕಕ್ಕೇರಾದಲ್ಲಿ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ಧರ್ಮಸಭೆ

ಎರಡನೇ ಶಿರಸಿಯಾಗಲಿದೆ ಹಿರೇಹಳ್ಳ ಮಾರಿಕಾಂಬಾ ಕ್ಷೇತ್ರ

ವಿಕ ಸುದ್ದಿಲೋಕ ಕಕ್ಕೇರಾ

ಹಿರೇಹಳ್ಳದ ಮರಗಮ್ಮ ಅಮ್ಮ ಸಾಕ್ಷಾತ್ ಶಿರಸಿ ಮಾರಿಕಾಂಬೆಯ ಅವತಾರ ವಾಗಿದ್ದು, ಹಿರೇಹಳ್ಳ ಕ್ಷೇತ್ರವು ರಾಜ್ಯದ ಎರಡನೇ ಶಿರಸಿಯಾಗಲಿದೆ ಎಂದು ಮುದನೂರಿನ ಕಂಠಿಮಠದ ಬಾಲತಪಸ್ವಿ ಪೂಜ್ಯ ಮಲ್ಲಿಕಾರ್ಜುನ ದೇವರು ಹೇಳಿದರು.ಪಟ್ಟಣದ ಹಿರೇಹಳ್ಳ ಬಡಾವಣೆಯಲ್ಲಿ ಮರಗಮ್ಮ ದೇವಿಯ ನೂತನ ಮಂದಿರದಲ್ಲಿ ದೇವಿಯ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ನಡೆದ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿ, ಮುಂದಿನ ದಿನಗಳಲ್ಲಿ ಈ ಕ್ಷೇತ್ರ ವ್ಯಾಪಕವಾಗಿ ಬೆಳೆಯಲಿದೆ ಎಂದರು.


ಇಲ್ಲಿನ ದೇವಿಯಲ್ಲಿ ಮಹಾನ್ ಚೇತನವಾದ ಶಕ್ತಿ ಅಡಗಿದೆ. ಮುಂದಿನ ದಿನಗಳಲಿ ರಾಜ್ಯದಲ್ಲಿ ಹೆಸರುವಾಸಿಯಾಗಲಿದೆ. ಈ ಕ್ಷೇತ್ರದಲ್ಲಿ ಇನ್ನು ಮುಂದೆ ಹೊರನಾಡು ಅನ್ನಪೂರ್ಣೆಯಂತೆ ಅನ್ನದಾಸೋಹ ಕಾರ್ಯ ಜರುಗಲಿದೆ. ಕೇಳಿದ್ದನ್ನು ಕರುಣಿಸುವ ಜಗನ್ಮಾತೆ ಈ ಮರಗಮ್ಮ ದೇವಿಯ ಕ್ಷೇತ್ರವಾಗುತ್ತದೆ ಎಂದರು.

ದೇವಸ್ಥಾನ ಲೋಕಾರ್ಪಣೆ ಸಮಾರಂಭದ ಧರ್ಮಸಭೆಯಲ್ಲಿ ಸುಕ್ಷೇತ್ರ ವೀರಪಟ್ಟದ ಅಡವಿಲಿಂಗ ಮಹಾರಾಜರು, ಬೃಹನ್ಮಠ ನಾವದಗಿಯ ರಾಜೇಂದ್ರ ಒಡೆಯರ, ಗೊಲಪಲ್ಲಿ ವಾಲ್ಮೀಕಿ ಶಾಖಾ ಮಠದ ವರದಾನೇಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದ್ದರು.

ಸುಮಾರು ವರ್ಷಗಳಿಂದ ನಿರ್ಮಾಣ ಕಾರ್ಯದಲ್ಲಿ ಅವಿರತ ಶ್ರಮವಹಿಸಿ ಹಿರೇಹಳ್ಳದ ಮರಗಮ್ಮ ದೇವಿಯ ಭವ್ಯವಾದ ಮಂದಿರ ನಿರ್ಮಾಣ ಮತ್ತು ನೂತನ ಕಾಷ್ಟಶಿಲ್ಪದ ವಿಗ್ರಹ ಕೆತ್ತನೆ ಮಾಡಿದ ಶಿಕ್ಷಕ ಮಂಜುನಾಥ ಮತ್ತು ದೇವಸ್ಥಾನ ಸಮಿತಿಯ ಅಧ್ಯಕ್ಷ ದೇವಿಂದ್ರಪ್ಪ ದೊರೆ ಅವರನ್ನು ಮತ್ತು ದೇವಸ್ಥಾನ ನಿರ್ಮಾಣದ ಕಲಾವಿದರನ್ನು ಸನ್ಮಾನಿಸಲಾಯಿತು.

ಯುವ ಮುಖಂಡರಾದ ಹಣಮಂತ್ರಾಯಗೌಡ ಜಹಾಗೀರದಾರ, ಶಾಸಕರ ಪುತ್ರ ರಾಜಾ ಸಂತೋಷ ನಾಯಕ, ಸೋಮನಿಂಗಪ್ಪ ದೇಸಾಯಿ, ದೊಡ್ಡಸೋಮಣ್ಣ ಸಾಹುಕಾರ, ದಶರಥ ದೊರೆ, ಪುರಸಭೆ ಸದಸ್ಯರಾದ ದಶರಥ ಅರೇಶಂಕರ ಸೇರಿದಂತೆ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

ಶಿಕ್ಷಕ ಮಂಜುನಾಥ ಅಸ್ಕಿ ಪ್ರಾಸ್ತಾವಿಕ ಮಾತನಾಡಿದರು. ಮಹಾಲಕ್ಷ್ಮೀ ದೊರೆ ಪ್ರಾರ್ಥಿಸಿದರು. ಬಸಯ್ಯ ಸ್ವಾಮಿ ನಿರೂಪಿಸಿದರು. ವೆಂಕಟೇಶ ದೊರೆ ವಂದಿಸಿದರು.



ಕಕ್ಕೇರಾ ಪಟ್ಟಣದ ಹಿರೇಹಳ್ಳ ಬಡಾವಣೆಯ ಮರಗಮ್ಮ ದೇವಿಯ ಮಂದಿರ ಲೋಕಾರ್ಪಣೆ ಹಾಗೂ ಮೂರ್ತಿ ಪ್ರತಿಷ್ಠಾಪನೆ ನಿಮಿತ್ತ ನಡೆದ ಧರ್ಮಸಭೆಯಲ್ಲಿ ಮುದನೂರಿನ ಕಂಠಿಮಠದ ಬಾಲತಪಸ್ವಿ ಮಲ್ಲಿಕಾರ್ಜುನ ದೇವರು ಆಶೀರ್ವಚನ ನೀಡಿದರು.

ಶುಕ್ರವಾರ, 18 ಆಗಸ್ಟ್ 2017, ಕಲಬುರಗಿ moblievk

ನಮ್ಮ ಯಾದಗಿರಿ

ವಿಜಯ ಕರ್ನಾಟಕ

‘ಸಗರ ನಾಡು, ಶ್ರೇಷ್ಠರ ಬೀಡು’

■ ವಿಕ ಸುದ್ದಿಲೋಕ ಕೆಂಭಾವಿ

ಅನೇಕ ದಾಸರು, ಸಂತರು, ಶರಣರು ಆಳಿಹೋದ ಈ ಸಗರನಾಡು ನಾಡಿಗೆ ತನ್ನದ ಆದ ಮಹತ್ವ ಕೊಡುಗೆ ನೀಡಿದ್ದು ಸಾಹಿತ್ಯ, ಸಂಗೀತ, ಕಲೆ ಮುಂತಾದ ಹಲವು ಕ್ಷೇತ್ರದಲ್ಲಿ ಈ ಭಾಗದ ಅನೇಕರು ಶ್ರಮಿಸಿದ್ದಾರೆ ಎಂದು ಮುದನೂರ ಗ್ರಾಮದ ವೇದವಿದ್ವಾನ ನರಸಿಂಹಾಚಾರ್ಯ ಜೋಶಿ ಹೇಳಿದರು.

ದಿ. ಸುರೇಂದ್ರರಾವ ಕುಲಕರ್ಣಿ ಅವರ ಪ್ರಥಮ ಪುಣ್ಯಸ್ಮರಣೆ ನಿಮಿತ್ತ ಪಟ್ಟಣದಲ್ಲಿ ಹಮ್ಮಿಕೊಂಡಿದ್ದವಿಶೇಷಕಾರ್ಯಕ್ರಮದಲ್ಲಿ ಮಾತನಾಡಿದರು. ಕೆಂಭಾವಿ ಭೋಗಣ್ಣ, ಮುದನೂರ ದಾಸೀಮಯ್ಯ, ಕೂಡಲಗಿ ಬಾಬಾ ಮಹಾರಾಜ, ಹೆಗ್ಗನದೊಡ್ಡಿಯ ಧರ್ಮರ ಮಠ ಹೀಗೆ ಹಲವು ಸಂತರು, ಶರಣರು, ಮಠಮಾನ್ಯಗಳು ಈ ಭಾಗದಲ್ಲಿ ಪ್ರಾಚೀನ ಕಾಲದಿಂದಲೂ ಧರ್ಮವನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿದ್ದು, ಭೀಮದಾಸರೆಂದೆ ಪ್ರಸಿದ್ಧಿ ಪಡೆದು ದಾಸಸಾಹಿತ್ಯದಲ್ಲಿ ಎಲೆಮರೆ ಕಾಯಿಯಂತೆ ಜೀವನ ನಡೆಸಿ ಹಲವು ವಿಶಿಷ್ಟ ಪುಸ್ತಕಗಳನ್ನು ಹೊರತರುವ ಮೂಲಕ ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ತಮ್ಮದೆ ಕೊಡುಗೆ ನೀಡಿದ ಸುರೇಂದ್ರರಾವ ಅವರ ಜೀವನ ಕ್ರಮ ಅನುಸರಿಸಿ ಅವರು ಹಾಕಿಕೊಟ್ಟ ಮಾರ್ಗದ 'ಲ್ಲಿ ನಾವು ನಡೆಯಬೇಕು ಎಂದು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಮಾಜಿ ಸದಸ್ಯ ಬಸವರಾಜ ಭಂಟನೂರ, ಕಠಿಣ ಶಬ್ದಗಳ ಜೋಡಣೆಯಿಂದ ದಾಸ ಸಾಹಿತ್ಯದ ಪ್ರಕಾರಗಳನ್ನು ರಚಿಸುತ್ತಿದ್ದ ಭೀಮ ದಾಸರು ಈ ಭಾಗ ಕಂಡ ಅತ್ಯಂತ ಶ್ರೇಷ್ಠ ಅಧ್ಯಾತ್ಮ ದಾಸರೆಂದು ಬಣ್ಣಿಸಿದರು. ಪತ್ರಕರ್ತ ಪ್ರಹ್ಲಾದಾಚಾರ್ಯ ಪು ರೋಹಿತ ದಾಸರ ಜೀವನ ಶೈಲಿ ಕುರಿತು ಮಾತನಾಡಿದರು. ನಂತರ ಬಸವರಾಜ ಭಂಟನೂರ, ಕಾಳಪ್ಪ ವಿಶ್ವಕರ್ಮ, ಪವನ ಕುಲಕರ್ಣಿ, ಭೀಮಸೇನ ಚನ್ನೂರ ಅವರಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ತಿರುಮಲಾಚಾರ್ಯ ಜೋಶಿ, ಸರ್ವೋತ್ತಮಾಚಾರ್ಯ ಜೋಶಿ, ಜಯಾ ಚಾರ್ಯ ಪುರೋಹಿತ, ಮೋಹನ ರಾವ ಕುಲಕರ್ಣಿ, ನರಸಿಂಹರಾವ ಕುಲಕರ್ಣಿ,ಪುರಸಭೆ ಸದಸ್ಯ ರಾಘವೇಂದ್ರ ದೇಶಪಾಂಡೆ, ಮಧ್ವರಾವ ನಾಡಿಗೇರ, ರಂಗನಾಥ ಕುಲಕರ್ಣಿ, ಕೃಷ್ಣಾಜಿ ಕುಲ ಕರ್ಣಿ, ಪಾಂಡುರಂಗರಾವ ಹತ್ತಿಕುಣಿ, ಹಳ್ಳೇರಾವ ಚನ್ನೂರ,ಶ್ರೀ ನಿವಾಸ ಚನ್ನೂರ, ಸೇರಿದಂತೆ ಹಲವರು ಇದ್ದರು. ಶೇಷಗಿ ರಿರಾವ ಕುಲಕರ್ಣಿ ಸ್ವಾಗತಿಸಿದರು, ಹಳ್ಳೇರಾವ ಕುಲಕರ್ಣಿ ವಂದಿಸಿದರು.

ಶುಕ್ರವಾರ, 18 ಆಗಸ್ಟ್ 2017, ಕಲಬುರಗಿ mobilevk

ನಮ್ಮ ಯಾದಗಿರಿ

ಹಿರೋಡೆ ದೇವರಿಗೆ ಅಷ್ಟವಿಧಾರ್ಚನೆಯ ಪೂಜೆ

▪ ವಿಕ ಸುದ್ದಿಲೋಕ ಕೊಡೇಕಲ್



ಕೊಡೇಕಲ್ ಪಟ್ಟಣದ ಅಷ್ಟಿವಿಹಾರದ ಜಮೀನಿನಲ್ಲಿರುವ ದೇಗುಲದಲ್ಲಿ ಶ್ರಾವಣ ಮಾಸದ ನಿಮಿತ್ತ ಹಿರೋಡೆ ದೇವರಿಗೆ ಅಷ್ಟವಿಧಾರ್ಚನೆಯ ವಿಶೇಷ ಪೂಜೆ ನಡೆಯಿತು. ವಿ.ಎಸ್.ಹಾವೇರಿ, ಮಾನಪ್ಪ ಅಡ್ಡಿ, ಎಸ್.ಬಿ.ಅಡ್ಡಿ ಸೇರಿ ಮಕ್ಕಳು ಪಾಲ್ಗೊಂಡಿದ್ದರು.

ಕರ್ನಾಟಕ

ಕೊಡೇಕಲ್: ಸಂಭ್ರಮದ ತಾಯಮ್ಮ ದೇವತೆಯ ಪಲ್ಲಕ್ಕಿ ಉತ್ಸವ

▪ ವಿಕ ಸುದ್ದಿಲೋಕ ಕೊಡೇಕಲ್



ಕೊಡೇಕಲ್ ಪಟ್ಟಣದ ರಾಜನಕೊಳೂರು ರಸ್ತೆಯಲ್ಲಿನ ಮುಖ್ಯ ಕಾಲುವೆಯ ಹತ್ತಿರ ನಿರ್ಮಾಣಗೊಂಡಿರುವ ಏಳು ಮಕ್ಕಳ ತಾಯಿ (ತಾಯಮ್ಮ) ಮಂದಿರದಲ್ಲಿ ಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು.

18 ಅಗಸ್ಟ್ 2017, ಕಲಬುರಗಿ moblievk


ನಮ್ಮ ಯಾದಗಿರಿ

ಕರ್ನಾಟಕ

ಗುಡ್ಡಗಾಡು ದೇವತೆಯ ಸಂಭ್ರಮದ ಉತ್ಸವ

ವಿಕ ಸುದ್ದಿಲೋಕ ಕೊಡೇಕಲ್

ಸಮೀಪದ ಗುಡ್ಡಗಾಡು ಪ್ರದೇಶವಾದ ಹುಲಿಕೇರಿ ಗ್ರಾಮದ ಆರಾಧ್ಯ ದೇವತೆಯಾದ ಚಂದ್ರಮ್ಮ ದೇವಿಯ ಜಾತ್ರೆಯು ಶುಕ್ರವಾರ ಅಪಾರ ಭಕ್ತರ ಸಮ್ಮುಖದಲ್ಲಿ ಸಡಗರ ಸಂಭ್ರಮದಿಂದ ನೆರವೇರಿತು.



ಕೊಡೇಕಲ್ ಸಮೀಪದ ಗುಡ್ಡಗಾಡು ಹುಲಿಕೇರಿ ಗ್ರಾಮದಲ್ಲಿ ಶುಕ್ರವಾರ ದೀಪಾವಳಿ ಪಾಡ್ಯದಂದು ಚಂದ್ರಮ್ಮ ದೇವಿಯ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಿತು.

ದೀಪಾವಳಿ ಪಾಡ್ಯದ ದಿನದಂದು ದೇವಿಯ ಗಂಗಾಸ್ನಾನ ಕೈಂಕರ್ಯದಲ್ಲಿ ಭಕ್ತಾದಿಗಳು ಪಾಲ್ಗೊಂಡು ಅಮ್ಮಾಪುರ(ಎಸ್.ಕೆ) ಹತ್ತಿರ ಹರಿಯುವ ಕೃಷ್ಣಾನದಿಯ ತೀರದಲ್ಲಿ ದೇವಿಯ ಉಡಿತುಂಬುವ ಹಾಗೂ ವಿಶೇಷವಾದ ಮಂಗಳಾರತಿಯ ಕಾರ್ಯವೂ ವೈಭವದಿಂದ ಜರುಗಿತು.

ಹುಲಿಕೇರಿ, ಹಣಮಸಾಗರ, ರಾಯನಪಾಳ, ಅಮ್ಮಾಪುರ (ಎಸ್.ಕೆ) ರಾಯನಗೋಳ, ಕೋಟೆಗುಡ್ಡ, ನಾರಾಯಣಪುರ, ಜೋಗುಂಡಬಾವಿ, ಮಾರನಾಳ, ಕೊಡೇಕಲ್, ತೀರ್ಥ, ಬೂದಿಹಾಳ, ರಾಜನಕೋಳೂರು ಮತ್ತಿತರ ಗ್ರಾಮದ ಸುಮಂಗಲಿಯರು ಪೂರ್ಣ ಕುಂಭ ಕಳಸದೊಂದಿಗೆ ದೇವಿಯ ಮೆರವಣಿಗೆಯಲ್ಲಿ ಸಾಗಿದ್ದು ವಿಶೇಷ ಗಮನ ಸೆಳೆಯಿತು. ಬೆಳಗಿನ ಜಾವ ದೇಗುಲದಲ್ಲಿ ಪವಡಿಸಿದ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಭಕ್ತರು ಉಡಿತುಂಬಿ ಭಕ್ತಿಯನ್ನು ಸಮರ್ಪಿಸುವ ಜತೆಗೆ ಹರಕೆ ಹೊತ್ತ ಭಕ್ತರು ದೀರ್ಘದಂಡ ನಮಸ್ಕಾರ ಹಾಕಿ ಹರಕೆ ತೀರಿಸಿದರು. ಇಡೀ ಗ್ರಾಮದ ಪ್ರತಿ ಮನೆ ಮನೆಯಲ್ಲೂ ಸಿಹಿ ಅಡುಗೆ ತಯಾರಿಸಿ ದೇವಿಯ ಜಾತ್ರೆಯಲ್ಲಿ ತನು ಮನದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಕೊಡೇಕಲ್ ಅರಸು ಮನೆತನದ ರಾಜಾ ಜೀತೇಂದ್ರನಾಯಕ ಜಹಾಗೀರದಾರ, ರಾಜಾ ವೆಂಕಟಪ್ಪನಾಯಕ ಜಹಾಗೀರದಾರ, ಹಣಮಂತನಾಯಕ (ಬಬ್ಲುಗೌಡ), ರಂಗನಾಥ ದೊರೆ, ದೇವಿಯ ಅರ್ಚಕರಾದ ಬಸವರಾಜ ಮಾದರ, ಬಸಪ್ಪ ತಳಗೇರಿ, ಬಸಣ್ಣ ಭಂಗಿ, ದೇವು ಗೋಪಾಳಿ, ಕನಕು ಜಿರಾಳ, ಪ್ರಕಾಶ ಮಾಲಿ ಪಾಟೀಲ್, ವೀರಣ್ಣ ದೊರಿ, ಮುದುಕಪ್ಪ ಸುಣಕಲ್, ಚಂದ್ರಪ್ಪ ಮಾಳನೂರ, ಸಂಜೀವಪ್ಪಗೌಡ, ಬಸವರಾಜ ಕಡಿಮನಿ, ಮುತ್ತು ಹರಿಜನ, ಮಾಳಪ್ಪ ಪೂಜಾರಿ, ಹಣಮಂತ ಕಡಿಮನಿ ಪಾಲ್ಗೊಂಡಿದ್ದರು. ನಂತರ ಅನ್ನಸಂತರ್ಪಣೆ ಜರುಗಿತು.

ಭಾನುವಾರ,15 ಜನವರಿ 2017, ಕಲಬುರಗಿ

IV ನಿಮ್ಮ ಪುಟ

ವಿಜಯ ಕರ್ನಾಟಕ VK

ಸಾಕ್ಷಿಯಾದ ರಾಜ್ಯ-ಹೊರ ರಾಜ್ಯದ ಭಕ್ತರು

ಗಡೇ ದುರ್ಗಮ್ಮ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ

ವಿಕ ಸುದ್ದಿಲೋಕ ಸುರಪುರ

ಎತ್ತ ಕಣ್ಣಾಯಿಸಿದರೂ ಜನವೋ ಜನ. ದೇವಿ ಪುರಾಣದ ಸಂಭ್ರಮದಲ್ಲಿ ಮಿಂದೆದ್ದ ಭಕ್ತರು. ಲಕ್ಷ ದೀಪೋತ್ಸವದಿಂದ ಕಂಗೊಳಿಸಿದ ಐತಿಹಾಸಿಕ ಗಡೇ ದುರ್ಗಮ್ಮ ದೇವಸ್ಥಾನ. ನೆಚ್ಚಿನ ದೇಗುಲಕ್ಕೆ ರಾಜ್ಯ, ಹೊರ ರಾಜ್ಯಗಳಿಂದ ಹರಿದು ಬಂದು ಭಕ್ತ ಸಾಗರ... ಕಂಡು ಬಂದ ರಮಣೀಯ ದೃಶ್ಯಗಳು.

ಹೌದು. ನಗರದ ಕುಂಬಾರಗೇರಾ ಹತ್ತಿರದ ಗಡೇ ದುರ್ಗಮ್ಮ ದೇವಸ್ಥಾನದಲ್ಲಿ ರಾತ್ರಿ ಲಕ್ಷ ದೀಪೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ನೆರವೇರಿತು. ನಾನಾ ಕಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಜ್ಯೋತಿ ಪ್ರಜ್ವಲಿಸಿ ಧನ್ಯತಾಭಾವ ಮೆರೆದು ಬೃಹತ್ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಲಕ್ಷ ದೀಪೋತ್ಸವದ ಬೆಳಕಿನಲ್ಲಿ ದೇವಸ್ಥಾನ ಮತ್ತು ಸುತ್ತಮುತ್ತಲಿನ ಪ್ರದೇಶ ಫಳ ಫಳನೆ ಹೊಳೆಯಿತು.

ಸಹಸ್ರಾರು ಮಂದಿ ಮಹಿಳೆಯರು ದೇವಸ್ಥಾನಕ್ಕೆ ಆಗಮಿಸಿ ದೀಪ ಬೆಳಗಿಸಿದರು. ದೇವಸ್ಥಾನದ ಆವರಣದಲ್ಲಿ ಬೆಳಗಿಸಿದ್ದ ದೀಪಗಳ ಸಾಲುಗಳು ಗಮನ ಸೆಳೆದವು. ಸಂಜೆ 6 ಗಂಟೆಗೆ ಆರಂಭಗೊಂಡ ದೀಪೋತ್ಸವ ತಡರಾತ್ರಿವರೆಗೂ ನೆರವೇರಿತು. ಇಡೀ ರಾತ್ರಿ ದೇವಸ್ಥಾನ ಲಕ್ಷ ದೀಪೋತ್ಸವದಿಂದ ಕಂಗೊಳಿಸಿತು. ನಿರೀಕ್ಷೆಗೂ ಮೀರಿ ಭಕ್ತರು ಪಾಲ್ಗೊಂಡಿದ್ದರು. ಲಕ್ಷ ದೀಪೋತ್ಸವ ದೇಗುಲದಲ್ಲಿ ಕಾಲಿಡಲು ಆಗದಷ್ಟು ಭಕ್ತರ ದಂಡು ಕಿಕ್ಕಿರಿದು ತುಂಬಿತ್ತು. ಬೆಳಗ್ಗೆಯಿಂದ ಸಂಜೆಯ ತನಕ ಸಾಲುಗಟ್ಟಿ ನಿಂತ ಭಕ್ತರು ತಮ್ಮ ನೆಚ್ಚಿನ ದೇವರ ದರ್ಶನ ಪಡೆದರು.



ಸುರಪುರದ ಗಡೇ ದುರ್ಗಮ್ಮ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮ ಸಡಗರದಿಂದ ನೆರವೇರಿತು.

ಭಾರತ ಭಕ್ತಿ ಪ್ರಧಾನ ದೇಶ

ಕೊಪ್ಪಳದ ಟಣಕನಕಲ್ ವಿರೇಶ್ವರ ಮಠದ ಶರಣಬಸವ ಸ್ವಾಮೀಜಿ ಆಶೀರ್ವಚನ ನೀಡಿ, ನಾಡಿನಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ತಳಹದಿಯ ಮೇಲೆ ಜನಿಸಿ, ಆಧುನಿಕ ದಿನಗಳಲ್ಲಿ ಕಠಿಣ ಸವಾಲುಗಳ ಮಧ್ಯೆ ಕರ್ತವ್ಯ ನಿಷ್ಠೆ ಮೂಲಕ ಸಮಾಜವನ್ನು ಪೋಷಿಸುತ್ತಿರುವ ಅನೇಕ ಧಾರ್ಮಿಕ ಶ್ರದ್ಧಾ ಕೇಂದ್ರಗಳಿಂದ ಸುಸಂಸ್ಕೃತ ಸಮಾಜ ನಿರ್ಮಾಣ ಸಾಧ್ಯವಾಗಿದೆ ಎಂದರು. ಭಕ್ತಿಯ ಮನಸ್ಸನ್ನು ಯಾರು ಯಾವುತ್ತು ಕೆಡವಲು ಸಾಧ್ಯವಿಲ್ಲ.ಮನಸ್ಸೇ ಮಂದಿರವಾಗಿದೆ. ಧಾರ್ಮಿಕ ಸಂಸ್ಕಾರಗಳು ಮನಸ್ಸಿನಲ್ಲಿ ಭಕ್ತಿಯನ್ನು ಶಾಶ್ವತಗೊಳಿಸುತ್ತವೆ. ಭಾರತ ಭಕ್ತಿ ಪ್ರಧಾನ ದೇಶ. ಇಲ್ಲಿಯ ಧಾರ್ಮಿಕ ಕ್ರಿಯಾದಿಗಳು ಮನಸ್ಸಿಗೆ ನೆಮ್ಮದಿ ನೀಡುತ್ತವೆ. ಪ್ರಕೃತಿ ಹಾಗೂ ದೇವರನ್ನು ಸಮನಾಗಿ ಕಂಡ ನಾಡು ಇದಾಗಿದೆ. ಧರ್ಮ ಸಂಸ್ಕಾರಗಳನ್ನು ಅಳವಡಿಸಿಕೊಂಡು ಎಲ್ಲರೂ ಒಂದಾಗಿ ಬದುಕಲು ದೇವಸ್ಥಾನಗಳು ಸಹಕಾರಿಯಾಗಿವೆ.

ಭಾರತ ಇಡೀ ಜಗತ್ತಿಗೆ ಜಗದ್ಗುರುವಾಗಿ ಗೌರವಕ್ಕೆ ಪಾತ್ರವಾಗಿರುವುದೇ ಇಲ್ಲಿನ ಧರ್ಮ ಶ್ರದ್ಧೆ ಹಾಗೂ ಸಂಸ್ಕಾರಗಳಿಂದಾಗಿ ಎಂದು ತಿಳಿಸಿದರು. ನಿಷ್ಠಿ ಕಡ್ಲೆಪ್ಪನ ವಿರಕ್ತಮಠದ ಪ್ರಭುಲಿಂಗ ಸ್ವಾಮೀಜಿ, ದೇವಸ್ಥಾನದ ಅರ್ಚಕ ಭಕ್ತಪ್ಪ ಪೂಜಾರಿ ಸೇರಿದಂತೆ ಅನೇಕ ಗಣ್ಯರು, ಭಕ್ತರು ಇದ್ದರು.

ಕರ್ನಾಟಕ

ಮಲ್ಲಯ್ಯನಿಗೆ ಏಳು ಕೋಟಿಗೆ..



ಯಾದಗಿರಿ ಜಿಲ್ಲೆಯ ಮೈಲಾಪುರದಲ್ಲಿ ಐತಿಹಾಸಿಕ ಮೈಲಾರಲಿಂಗೇಶ್ವರ ಜಾತ್ರೆ ನಿಮಿತ್ತ ದೇವಸ್ಥಾನದ ವಗ್ಗಯ್ಯ ಸರಪಳಿ ಹರಿಯುತ್ತಿರುವುದು.

ಮೊದಲ ಪುಟದಿಂದ

ಈ ವೇಳೆ ಬೆಟ್ಟದ ಕೆಳಗಡೆ ದೇವಸ್ಥಾನದ ವಗ್ಗಯ್ಯ ಅವರು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸರಪಳಿ ಹರಿದರು.

ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಭಕ್ತರು ಭಂಡಾರದಲ್ಲಿ ಮಿಂದೆದ್ದರು. ಭಕ್ತಿಯು ಪರಾಕಾಷ್ಠೆ ಮುಗಿಲು ಮುಟ್ಟಿತು.


ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕ ರಾಜ್ಯದ ನಾನಾ ಜಿಲ್ಲೆಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು.

ಸರಪಳಿ ಹರಿದ ಒಗ್ಗಯ್ಯಗಳು

ಮಲ್ಲಯ್ಯನ ಮೂರ್ತಿಗೆ ಮತ್ತು ಆತನ ಕುದುರೆಗೆ ಹಾಗೂ ಗಂಗಿಮಾಳಮ್ಮ ಮೂರ್ತಿಗೆ ಎಳ್ಳು ಬೆಲ್ಲಾ ಹಚ್ಚಿ ಹೊನ್ನಕೆರೆಯಲ್ಲಿ ಗಂಗಾಸ್ನಾನ ಮಾಡಿಸಲಾಯಿತು.

ಪಲ್ಲಕ್ಕಿ ಮರಳಿ ದೇವಸ್ಥಾನ ಮೆಟ್ಟಿಲು ಹತ್ತಿರ ಬರುತ್ತಿದ್ದಂತೆ ಮುಖ್ಯದ್ವಾರದ ಹಾಲಗಂಬಕ್ಕೆ ಕಟ್ಟಿರುವ ಕಬ್ಬಿಣದ ಸರಪಳಿ ವಗ್ಗಯ್ಯ ಹರಿದರು. ಗುಹಾಂತರ ದೇವಾಲಯಕ್ಕೆ ಪಲ್ಲಕ್ಕಿ ತೆಗೆದುಕೊಂಡು ಹೋಗಿ ಮೂಲ ಸ್ಥಳದಲ್ಲಿ ಮಲ್ಲಯ್ಯನ ಮೂರ್ತಿ ಮತ್ತೇ ಪ್ರತಿಷ್ಠಾಪನೆ ಮಾಡಲಾಯಿತು.

ದೇವರಗಡ್ಡಿ ಗದ್ದೆಮ್ಮ ದೇವಿಯ ರಥೋತ್ಸವ



ಕೊಡೇಕಲ್ ಸಮೀಪದ ದೇವರಗಡ್ಡಿ ಗ್ರಾಮದ ಆರಾಧ್ಯ ದೇವತೆ ಶ್ರೀಗದ್ದೆಮ್ಮ ದೇವಿಯ ಜಾತ್ರೆಯ ನಿಮಿತ್ತ ಅಪಾರ ಭಕ್ತ ಸ್ತೋಮದ ಮಧ್ಯೆ ವೈಭವದ ರಥೋತ್ಸವ ಜರುಗಿತು.

■ **ವಿಕ ಸುದ್ದಿಲೋಕ** ಕೊಡೇಕಲ್

ಸಮೀಪದ ದೇವರಗಡ್ಡಿ ಗ್ರಾಮದಲ್ಲಿ ಬನದ ಹುಣ್ಣಿಮೆಯ ನಿಮಿತ್ತ ಆರಾಧ್ಯ ದೇವತೆ ಶ್ರೀಗದ್ದೆಮ್ಮ ದೇವಿಯ ರಥೋತ್ಸವ ಅಪಾರ ಭಕ್ತರ ಮಧ್ಯೆ ವೈಭವದಿಂದ ಜರುಗಿತು.

ದೇವರಗಡ್ಡಿ ಸೇರಿದಂತೆ ಸುತ್ತಲಿನ ಗ್ರಾಮಗಳ ಭಕ್ತಾಧಿಗಳು ಭಯ ಭಕ್ತಿಯಿಂದ ದೇಗುಲದ ಆವರಣದಲ್ಲಿ ದೀಪ ಹಚ್ಚಿ ವೀಳ್ಯದೆಲೆಯಿಂದ ದೇವಿಯನ್ನು ಅಲಂಕರಿಸಿ, ವಿಶೇಷ ಪೂಜೆಯನ್ನು ನೆರವೇರಿಸಿ ಅಹೋರಾತ್ರಿ ಜಾಗರಣದ ಮಧ್ಯೆ ಭಕ್ತಿಯ ಪ್ರತೀಕ ಭಜನೆ ಜರುಗಿದವು.

ಗಮನ ಸೆಳೆದ ಅಕ್ಕಿ ಪಾಯಸ :

ಉಪ್ಪಾರ ಸಮುದಾಯದವರು ಮುಟ್ಟುಒಲೆಯಿಂದನ್ನು ಹೂಡಿ ಅಗ್ನಿಯಲ್ಲಿ ಗಡಿಗೆ ಇಟ್ಟು ಮೀಸಲು ನೀರಿನಲ್ಲಿ ಅಕ್ಕಿ ಸುರಿದು ಪಂಚ ಪಕ್ವಾನ್ನಗಳಾದ ಹಾಲು, ತುಪ್ಪ, ಕಲ್ಲುಸಕ್ಕರೆ, ಲಿಂಬೆ ಮತ್ತು ಅರಿಷಿಣವನ್ನು ಬೇಯುತ್ತಿರುವ ಅನ್ನದಲ್ಲಿ ಹುಟ್ಟಿನ ಸಹಾಯವಿಲ್ಲದೆ ದೇವಿಯನ್ನು ಸ್ಮರಿಸುತ್ತಾ ಬರಿಗೈಯಿಂದಲೆ ಅನ್ನ ಬೆಂದಿರುವ ಸಂಗತಿ ಪರೀಕ್ಷಿಸಿದ ಸಂಗತಿ ಬಹು ವಿಸ್ಮಯವಾಗಿತ್ತು. ಅನ್ನವನ್ನು ಬರಿಗೈಯಿಂದಲೇ ಹೊರ ತೆಗೆದು ಬೆಳ್ಳಿ ತಟ್ಟೆಗೆ ಹಾಕಿ ನೈವೇದ್ಯವನ್ನು ದೇವಿಗೆ ಅರ್ಪಿಸಿದ ಅರ್ಚಕರು ಅನ್ನವು ಹೇಗೆ ಬೆಂದಿದೆ ಎಂಬುದರ ಆಧಾರದ ಮೇಲೆ ಭೂಮಾತೆಯ ಮಡಿಲಲ್ಲಿ ವರ್ಷ ಪೂರ್ತಿ ಹುಲುಸಾಗಿ ಬೆಳೆಯುವ ಇಳುವರಿಯ ಬಗ್ಗೆ ಭವಿಷ್ಯವನ್ನು ಕಂಡುಕೊಂಡರು.

ಅಮ್ಮನ ಅದ್ದೂರಿ ರಥೋತ್ಸವ : ನಾನಾ ಬಗೆಯ ಹೂಗಳು, ಬಣ್ಣದಸಿಸಾನೆ, ಪತಾಕೆಗಳು ಹಾಗೂ ಕಳಸದಿಂದ ಅಲಂಕೃತಗೊಂಡ ಆರಾಧ್ಯ ದೇವತೆಯ ರಥವನ್ನು ಉತ್ತರಾಭಿಮುಖವಾಗಿ ಎಳೆಯಲ್ಪಟ್ಟಿತು. ದೇವಿಯ ಭಾವ ಚಿತ್ರವನ್ನು ಹೊತ್ತ ರಥಯಾತ್ರೆಯಲ್ಲಿ ನೆರೆದಿದ್ದ ಭಕ್ತರು ಉತ್ತತ್ತಿ, ಬಾಳೆ ಹಣ್ಣು, ಚೆಂಡು, ಬತ್ತಾಸು ಹಾಗೂ ಕಲ್ಲು ಸಕ್ಕರೆಯನ್ನು ಎಸೆದು ಉಧೋ..ಉಧೋ ತಾಯಿ ಎಂದು ಜೈಕಾರ ಹಾಕಿ ದೇವತೆಯನ್ನು ಸ್ಮರಿಸಿ ಎಳೆದು ಭಕ್ತರು ಪುನೀತರಾದರು.

ಗ್ರಾಮದೇವತೆಗಳು

